ಪುರಂದರೋಪನಿಷತ್

ಬನ್ನಂಜೆ ಗೋವಿಂದಾಚಾರ್ಯ



ಪ್ರಕಟನ ಶಾಖೆ:

ತಿರುಮಲ - ತಿರುಪತಿ ದೇವಸ್ಥಾನಗಳು, ತಿರುಪತಿ.

Purandaropanishat – Bananje Govindacharya.
(in Kannada)


T. T. D. Religious Publications Series No. 204

First Edition 1984

Copies : 3,000

Published by :
G. Kumaraswamy Reddy, I.A.S.,
Executive Officer,
Tirumala Tirupati Devasthanams, Tirupati.

Printed at :
Tirumala Tirupati Devasthanams Press, Tirupati.



ಶ್ರೀನಿವಾಸ ನೀನೆ ಪಾಲಿಸೊ – ಶ್ರಿತಜನಪಾಲ
ಗಾನಲೋಲ ಶ್ರೀಮುಕುಂದನೆ.

ಪ್ರಕಾಶಕರ ಮಾತು

ಕಡು ಕರುಣಾಮಯನಾದ ಶ್ರೀಹರಿಯು ಜೀವಿಗಳು ಧರ್ಮಮಾರ್ಗದಿಂದ ಚ್ಯುತರಾಗದಂತೆ ನಿರಂತರ ರಕ್ಷಿಸಲು ಭೂವೈಕುಂಠವೆನಿಸಿದ ವೆಂಕಟಾದ್ರಿಯಲ್ಲಿ ನೆಲಸಿರುವನು. ಈ ಸ್ವಾಮಿಯ ಸೇವೆಗಾಗಿಯೂ, ಸನಾತನ ಧರ್ಮದ ಪ್ರಚಾರಕ್ಕಾಗಿಯೂ ಅನೇಕ ಮಹಿತಾತ್ಮರು ವಿವಿಧ ಪ್ರಾಂತಗಳಲ್ಲಿ ಜನಿಸಿದರು.

ಕರ್ನಾಟಕ ಹರಿದಾಸರೆಲ್ಲರು ತಮ್ಮ ವಾಗ್ಗಂಗೆಯಿಂದ ಶ್ರೀನಿವಾಸನ ಪಾದಗಳನ್ನು ಮನ ಮುಟ್ಟಿ ತೊಳೆದಿರುವರು. ಶ್ರೀನಿವಾಸನ ಕರುಣಾಕಟಾಕ್ಷದಿಂದ ಹೊರಹೊಮ್ಮಿದ ಇವರ ಸಾಹಿತ್ಯ ಮೀಸಲಳಿಯದ ನಿತ್ಯನೂತನ ಸಜೀವ ವಿಶ್ವಸಾಹಿತ್ಯ. ಶ್ರುತಿ – ಸ್ಮೃತಿ – ಪುರಾಣರಹಸ್ಯಗಳನ್ನು ಹರಿದಾಸರು ಸರಳ ಕನ್ನಡ ಭಾಷೆಯಲ್ಲಿ ಸಮಾಜಕ್ಕೆ ತಿಳಿಯ ಹೇಳಿರುವರು.

ಪ್ರಕೃತ ಪುರಂದರದಾಸರ ಏಳು ಹಾಡುಗಳನ್ನು ಬನ್ನಂಜೆ ಗೋವಿಂದಾಚಾರ್ಯರ ವಿಶದವ್ಯಾಖ್ಯಾನ ದೊಟ್ಟಿಗೆ ಪ್ರಕಟಿಸುತ್ತಿದ್ದೇವೆ. ದಾಸರ ಕೃತಿಗಳಲ್ಲಡಕವಾದ ವೇದಾಂತದ ವಿಶ್ವರೂಪವನ್ನು ಸಹೃದಯರು ಈ ಹೊತ್ತಿಗೆಯಲ್ಲಿ ಕಾಣಬಹುದು. ಉತ್ತಮವಾದ ವ್ಯಾಖ್ಯಾನವನ್ನು ಬರೆದುಕೊಟ್ಟ, ಖ್ಯಾತ ಲೇಖಕರಾದ ಶ್ರೀ ಬನ್ನಂಜೆ ಗೋವಿಂದಾಚಾರ್ಯರಿಗೆ ನನ್ನ ಧನ್ಯವಾದಗಳು. ಸಹೃದಯರಾದ ದಾಸ ಸಾಹಿತ್ಯಾಭಿಮಾನಿಗಳು ಉತ್ತಮ ಸಲಹೆ ಸೂಚನೆಗಳನ್ನು ನೀಡಬೇಕಾಗಿ ಕೋರುತ್ತೇವೆ.

ಜಿ. ಕುಮಾರಸ್ವಾಮಿ ರೆಡ್ಡಿ, ಐ. ಎ. ಎಸ್.
ಕಾರ್ಯನಿರ್ವಹಣಾಧಿಕಾರಿ
ತಿ. ತಿ. ದೇವಸ್ಥಾನಗಳು, ತಿರುಪತಿ

ಮುನ್ನುಡಿ

" ಪುರಂದರೋಪನಿಷತ್ ": ಇದು ಕರ್ನಾಟಕಾಂಧ್ರರಮಾರಮಣನೆನಿಸಿದ ಶ್ರೀ ಕೃಷ್ಣದೇವರಾಯನ ಗುರುಗಳಾದ ಶ್ರೀ ವ್ಯಾಸರಾಜರು ವಿದ್ವನ್ಮಂಡಲ ಮಧ್ಯದಲ್ಲಿ ಪುರಂದರದಾಸರ ಕೃತಿಗಳಿಗೆ ನೀಡಿದ ಬಿರುದು. ಈ ಬಿರುದು ಅಂದಿನ ಸಮಾಜದಲ್ಲಿ ಪುರಂದರದಾಸರ ಸಾಹಿತ್ಯಕ್ಕಿದ್ದ ಸ್ಥಾನಮಾನಗಳಿಗೆ ಕೈಗನ್ನಡಿಯಾಗಿದೆ. ದಾಸರ ಕೃತಿಗಳು ಕೇವಲ ಭಕ್ತಿಭಾವದಿಂದ ಹಾಡಿದ ಗೀತೆಗಳು ಮಾತ್ರವಲ್ಲ, ಶ್ರುತಿ–ಸ್ಮೃತಿ–ಪುರಾಣರಹಸ್ಯ ಪ್ರತಿಪಾದಕಗಳು.

ವೇದಗಳು, ಭಗವಂತನ ಅನಂತಾನಂತ ಮಹಿಮೆಯನ್ನೂ, ಈ ಚರಾಚರಾತ್ಮಕವಾದ ವಿಶ್ವದ ಸೃಷ್ಟಿ–ಸ್ಥಿತಿ–ಲಯಗಳ ಕ್ರಮವನ್ನೂ, ಭಗವಂತನ ಸನ್ನಿಧಿಯನ್ನು ಸೇರಲು ಅನುಸರಿಸಬೇಕಾದ ಮಾರ್ಗವನ್ನೂ, ಮಾನವನು ಸಮಾಜದಲ್ಲಿ ಸುಜೀವಿ ಎನಿಸಿಕೊಳ್ಳಲು ಮಾಡಬೇಕಾದ ಸತ್ಕಾರ್ಯಗಳ ವಿಧಾನವನ್ನೂ ಸಾರಿಹೇಳುವುವು. ಕಾಲಾಂತರದಲ್ಲಿ ಇಂಥಾ ವೇದಗಳ ನಿಜಾರ್ಥವು ಕಾರಣಾಂತರಗಳಿಂದ ತಿಳಿಯದೇ ಆಗಲು, ತದರ್ಥ ಪ್ರತಿಪಾದಕಗಳಾಗಿ, ಬ್ರಹ್ಮಸೂತ್ರಗಳೂ ಸ್ಮೃತಿಗಳೂ, ಪುರಾಣಗಳೂ ಹೊರಟವು. ಇವುಗಳ ಅರ್ಥವೂ ಸಹ ಜಟಿಲವಾದಾಗ, ತ್ರಿಮತಾಚಾರ್ಯರ ಗ್ರಂಥಗಳು, ಅವುಗಳಿಗೆ ಸಂಬಂಧಿಸಿದ ವ್ಯಾಖ್ಯಾನಗ್ರಂಥಗಳೂ ಹೊರಟವು. ಪರದೇಶೀಯರ ಆಡಳಿತಾದಿಗಳಿಂದ ಕೊನೆಗೆ, ಭಾರತೀಯರ ವೇದಾಂತ–ಧರ್ಮ–ಸಂಸ್ಕೃತಿಗಳನ್ನು ಹೊತ್ತುನಿಂತ ಸಂಸ್ಕೃತಭಾಷೆಯೇ ಜನ ಸಾಮಾನ್ಯರಿಂದ ದೂರಾಯಿತು. ಇದರಿಂದಾಗಿ ಅನಾದಿಯಿಂದ ಬಂದ ವೇದವೇದಾಂತಗಳಲ್ಲಡಕವಾದ ತತ್ತ್ವಜ್ಞಾನವು ಮರೆಯಾಯಿತು.

ಇಂಥಾ ಸಂಕಷ್ಟ ಪರಿಸ್ಥಿತಿಯಲ್ಲಿ

"ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥"

ಎಂಬ ಗೀತಾಚಾರ್ಯನ ನುಡಿಯಂತೆ, ಅನೇಕ ಸತ್ಪುರುಷರು ಅವತರಿಸಿ, ಕನ್ನಡ, ತೆಲುಗು, ತಮಿಳ್, ಹಿಂದಿ ಮುಂತಾದ ತಮ್ಮ ತಮ್ಮ ಪ್ರಾಂತೀಯ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದರು. ಮರೆಯಾದ ವೇದಾಂತ ರಹಸ್ಯಗಳನ್ನು ಪುನಃ ಬೆಳಕಿಗೆ ತಂದರು. ಈ ಮಹತ್ಕಾರ್ಯವನ್ನು ಅತ್ಯಂತವ್ಯಾಪ್ತವಾಗಿಯೂ, ಆಳವಾಗಿಯೂ, ಪೂರ್ಣವಾಗಿಯೂ ಮಾಡಿದವರೆಂದರೆ ಕರ್ನಾಟಕ ಹರಿದಾಸರು.

ತಂತ್ರಶಾಸ್ತ್ರಗಳು ಭಾರತೀಯರ ಸಂಪತ್ತು. ಅನೇಕ ಸಾತ್ವಿಕ ತಂತ್ರಗ್ರಂಥಗಳಲ್ಲಿ ಚಕ್ರಾಬ್ಜ ಮಂಡಲವನ್ನು ಕುರಿತು ಹೇಳಲಾಗಿದೆ. ಕಾಲನಾಮಕ ಪರಮಾತ್ಮನ ವಿಶ್ವರೂಪ ದರ್ಶನ ಈ ಚಕ್ರಾಬ್ಜ ಮಂಡಲದಲ್ಲಡಗಿದೆ. ಇಂಥಾ ಮಂಡಲದಮೇಲೆ ಭಗವನ್ಮೂರ್ತಿಯನ್ನಿಟ್ಟು ಅರ್ಚಿಸುವುದು ಅನಾದಿಯಿಂದ ಬಂದ ಸಂಪ್ರದಾಯ. ಕೇವಲ ಪಂಡಿತವರ್ಗಕ್ಕೆಮಾತ್ರ ಮೀಸಲಾದ ಈ ವಿಷಯವನ್ನು, ಹರಿದಾಸರು ತಿಳಿಗನ್ನಡದಲ್ಲಿ ಹಾಡಿ ಲೋಕಕ್ಕೆ ಮಹೋಪಕಾರ ಮಾಡಿದ್ದಾರೆ.

ಪುರಾಣಗಳಲ್ಲಿ ಅಲ್ಲಲ್ಲಿ ಹೇಳಲ್ಪಟ್ಟ ಸೃಷ್ಟಿಯ ಕ್ರಮವನ್ನೂ, ದೇಹದ ರಚನಾ ಕ್ರಮವನ್ನೂ, ಇವೆರಡರ ಹಿನ್ನಲೆಯಲ್ಲಿ ಅಡಗಿದ ಆಧ್ಯಾತ್ಮಿಕ ತತ್ತ್ವದ ರಹಸ್ಯಗಳನ್ನೂ ಕೂಲಂಕಷವಾಗಿ ಚರ್ಚಿಸಿ ಲೋಕಕ್ಕೆ ನೀಡಿದವರು ಕೇವಲ ಹರಿದಾಸರು ಮಾತ್ರವೇ ಎಂದಲ್ಲಿ ತಪ್ಪಾಗಲಾರದು. ಕಾರಣ ಹರಿದಾಸರ ವಾಙ್ಮಯವೆಲ್ಲವೂ "ದಾಸೋಪನಿಷತ್" ಎಂಬ ಬಿರುದಿಗೆ ಅರ್ಹವಾಗಿದೆ.

ದಾಸರ ಪ್ರತಿಕೃತಿಯ ಯಾವುದೋ ಒಂದು ಶಬ್ದದಲ್ಲೋ ಅಥವಾ ವಾಕ್ಯದಲ್ಲೋ ವೇದಾಂತ ರಹಸ್ಯವು ಅಡಗಿ ನಿಂತಿರುತ್ತದೆ. ಪುರಾಣೋಪನಿಷತ್ತುಗಳಲ್ಲಿ ಸಂಶಯಾತ್ಮಕವಾಗಿ ನಿಂತ ಅನೇಕ ವಿಷಯಗಳಿಗೆ ಹರಿದಾಸರು ಬಹುಸುಂದರವಾಗಿ ಉತ್ತರವನ್ನು ನೀಡಿರುವರು.

ಶ್ರೀ ಪುರಂದರ ದಾಸರು ಶ್ರೀನಿವಾಸನನ್ನು ವರ್ಣಿಸುತ್ತಾ, ಒಂದು ಸುಳಾದಿಯ ಅಟ್ಟತಾಳದಲ್ಲಿ

'ಮಿಡುಕುವ ಅಜಾಮಿಳನ ಪಾಶಪರಿಹರಿಸಿ'

ಎಂದು ಹಾಡಿರುವರು.

ಇಲ್ಲಿ ದಾಸಾರ್ಯರು 'ಮಿಡುಕುವ' ಎಂಬ ಶಬ್ದಪ್ರಯೋಗದಿಂದ, ಅಜಾಮಿಳನ ಚರಿತ್ರೆಯ ಹಿನ್ನಲೆಯಲ್ಲಿ ಅಡಕವಾದ ವೇದಾಂತ ರಹಸ್ಯವನ್ನು ಬಹುಮಾರ್ಮಿಕವಾಗಿ ತಿಳಿಯ ಹೇಳಿರುವರು.

"ಪತಿತಃ ಸ್ಖಲಿತೋಭಗ್ನಃ ಸಂದಷ್ಟಸ್ತಪ್ತ ಆಹತಃ
ಹರಿರಿತ್ಯವಶೇನಾಹ ಪುಮಾನ್ನಾರ್ಹತಿಯಾತನಾಂ ॥"

(ಭಾಗವತ 6, 3, 15)

ಎಂಬ ವಚನದಂತೆ ಭಗವಂತನ ನಾಮಕ್ಕಿರುವ ಮಹಿಮೆ ಅಗಾಧವಾದುದು. ನಾರಾಯಣನ ನಾಮ ಸಂಕೀರ್ತನೆಯಿಂದ ಸಕಲ ಪಾಪಗಳು ಪರಿಹೃತವಾಗುವವು.

ಆದರೆ ಅನುಸಂಧಾನವಿಲ್ಲದೆ, ಪಶ್ಚಾತ್ತಾಪವಿಲ್ಲದೆ, ಭಕ್ತಿಯಿಲ್ಲದೆ ನುಡಿದ ನಾಮದಿಂದ ಪ್ರಯೋಜನವು ಸಿದ್ಧಿಸಲಾರದು. ಮಾಡಿದ ಪಾಪಗಳನ್ನು ನೆನೆದು ಪಶ್ಚಾತ್ತಾಪ ಪಡಬೇಕು. ತನ್ನ ಅಸ್ವಾತಂತ್ರ್ಯವನ್ನೂ, ಶ್ರೀಹರಿಯ ಸರ್ವತಂತ್ರ ಸ್ವಾತಂತ್ರ್ಯವನ್ನೂ ಚಿಂತಿಸಬೇಕು. ಕಡುಕರುಣಾಮಯನಾದ ಆ ಪ್ರಭುವಿನ ಪಾದಾರವಿಂದಗಳಲ್ಲಿ ಮಾಡಿದ ಸರ್ವಪಾಪಗಳನ್ನೂ ಅರ್ಪಿಸಿ, ಕಣ್ಣೀರಿಡಬೇಕು. ಭಗವಂತನ ನಾಮಕ್ಕಿರುವ ಸಾಮರ್ಥ್ಯವನ್ನೂ, ಅದಕ್ಕಿರುವ ಸುವಿಶಾಲವಾದ ಅರ್ಥವನ್ನೂ ಧ್ಯಾನಿಸಬೇಕು. ಕೊನೆಗೆ ಭಕ್ತಿಯಿಂದ ಗಟ್ಟಿಯಾಗಿ ನಾಮಸಂಕೀರ್ತನೆಯನ್ನು ಮಾಡಬೇಕು. ಇಷ್ಟೆಲ್ಲಾ ನಡೆದಾಗ, ಶ್ರೀಹರಿಯು ಜೀವನ ಸಕಲ ಪಾಪಗಳನ್ನು ಪರಿಹರಿಸಿ ಕರಾವಲಂಬನೆಯನ್ನಿತ್ತು ಉದ್ಧರಿಸುವನು.

ಅಜಾಮಿಳನು ಆದಿಯಲ್ಲಿ ಉತ್ತಮ ಸಂಸ್ಕಾರಗಳುಳ್ಳವನು. ಸದಾಚಾರ ಸಂಪನ್ನನಾಗಿ ನಿತ್ಯಾಗ್ನಿಹೋತ್ರಿ ಎನಿಸಿಕೊಂಡ ಪೂತಾತ್ಮನು. ಈ ಅಜಾಮಿಳನ ವ್ಯಕ್ತಿತ್ವವನ್ನು ವೇದವ್ಯಾಸರು ಭಾಗವತದಲ್ಲಿ ಯಮದೂತರ ಬಾಯಿಯಿಂದಲೇ ಹೇಳಿಸುವರು.

"ಅಯಂ ಚ ಶ್ರುತಸಂಪನ್ನಃ ಶೀಲವೃತ್ತಗುಣಾಲಯಃ।
ಧೃತವ್ರತೋ ಮೃದುರ್ದಾಂತಃ ಸತ್ಯವಾನ್ ಮಂತ್ರವಿಚ್ಛುಚಿಃ
ಗುರ್ವಗ್ನ್ಯತಿಥಿವೃದ್ಧಾನಾಂ ಶುಶ್ರೂಷುಃ ನಿರಹಂಕೃತಃ।
ಸರ್ವಭೂತ ಸುಹೃತ್ಸಾಧುಃ ಮಿತವಾಕ್ ಅನುಸೂಯಕಃ॥"

ಇಂಥಾ ಅಜಾಮಿಳನು ದುರ್ದೈವದಿಂದ ವೇಶ್ಯಾಲೋಲುಪನಾಗಿ ಪತಿತನಾಗುವನು. ಕೊನೆಗೊಂದುದಿನ ಅಜಾಮಿಳನಿಗೆ ಮರಣವು ಅಸನ್ನವಾಗುವುದು. ಮರಣ ಶಯ್ಯೆಯಲ್ಲಿರುವ ಅವನಿಗೆ ಯಮದೂತರು ಕಾಣಿಸುವರು. ಭಯದಿಂದ ಅವನು ತನ್ನ ಚಿಕ್ಕಮಗನಾದ ನಾರಾಯಣನನ್ನು ಕೂಗುವನು. ಅಂತ್ಯ ಕಾಲದಲ್ಲಿ ನಾರಾಯಣ ಸ್ಮರಣೆ ಮಾಡಿದುದಕ್ಕಾಗಿ, ವಿಷ್ಣು ದೂತರು ಬಂದು, ಅವನನ್ನು ಕಾಲಪಾಶದಿಂದ ಬಿಡಿಸುವರು. ಇದು ಭಾಗವತದ ಆರನೇ ಸ್ಕಂಧದ ಪ್ರಾರಂಭದಲ್ಲಿ ಬರುವ ಕಥೆ.

ಕೇವಲ ಮಗನ ವ್ಯಾಮೋಹದಲ್ಲಿ ನುಡಿದ ನಾರಾಯಣನಾಮವು ಅಜಾಮಿಳನ ಸಕಲ ಪಾಪಗಳನ್ನು ಕಳೆಯಿತೇ ಹೇಗೆ ? ಎಂಬುದು ಇಲ್ಲಿ ವಿಚಾರಣೀಯವಾದ ಅಂಶ. ಭಕ್ತಿಯ ಸಂಬಂಧವಿಲ್ಲದೆ ಕೇವಲ ನಾಮ ಸಂಕೀರ್ತನೆಯಿಂದಲೇ ಸಕಲ ಪಾಪಗಳು ತೊಳೆದು ಹೋಗುವುದೇ ಸಿದ್ಧವಾದಲ್ಲಿ, ಭಕ್ತಿಯು ವ್ಯರ್ಥ

ಮುದ್ರಿಸಲು ಆದೇಶನೀಡಿದ ತಿ. ತಿ. ದೇ. ಪ್ರೆಸ್ ಮೇನೇಜರ್ ಯಂ. ವಿಜಯ ಕುಮಾರ್ ರೆಡ್ಡಿಯವರಿಗೂ, ಮುದ್ರಿಸಿಕೊಟ್ಟ ಅವರ ಸಿಬ್ಬಂದಿ ವರ್ಗಕ್ಕೂ ನನ್ನ ಬಿಚ್ಚುಮನಸ್ಸಿನ ಧನ್ಯವಾದಗಳು. ಕರಡು ಪ್ರತಿಗಳನ್ನು ತಿದ್ದುವುದರಲ್ಲಿ ತಮ್ಮ ಪೂರ್ಣ ಸಹಕಾರವನ್ನು ನೀಡಿದ ಕನ್ನಡ ಸಬ್ ಎಡಿಟರ್ ಬಿ. ಯಸ್. ಶ್ರೀನಿವಾಸನ್ ಯಂ.ಎ., ಇವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

"ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ ॥"

ಕೆ: ಅಪ್ಪಣ್ಣಾಚಾರ್ಯ
ಸ್ಪೆಷಲ್ ಆಫೀಸರ್
ದಾಸಸಾಹಿತ್ಯ ಪ್ರಾಜೆಕ್ಟ್
ತಿ. ತಿ. ದೇವಸ್ಥಾನಗಳು, ತಿರುಪತಿ.

ಪುರಂದರೋಪನಿಷತ್

ಭಗವಂತನಿಗೆ ಸುಪ್ರಭಾತ

ಏಳಯ್ಯ ಬೆಳಗಾಯಿ ತು || ಪಲ್ಲವಿ ||

ಏಳು ನಾರಾಯಣಏಳು ಲಕ್ಷ್ಮೀರಮಣ
ಏಳು ಶ್ರೀಗಿರಿಯೊಡೆಯ ವೆಂಕಟೇಶಾ || ಅನುಪಲ್ಲವಿ ||

ದಾಸರೆಲ್ಲರು ಬಂದು ಧೂಳಿದರ್ಶನಗೊಂಡು
ಲೇಸಾಗಿ ತಾಳ – ದಂಡಿಗೆಯ ಪಿಡಿದು ।
ಕೇಶವನೆ, ನಿಮ್ಮ ಸಿರಿನಾಮವನೆ ಸ್ಮರಿಸುತಲಿ
ವಾಸುದೇವನೆ, ಉದಯದಲಿ ಪಾಡುತಿಹರು || ೧ ||

ಕಾಸಿದ್ದ ಹಾಲುಗಳ ಕಾವಡಿಯು ತುಂಬಿಟ್ಟು
ಲೇಸಾಗಿ ಕೆನೆ – ಮೊಸರು ಬೆಣ್ಣೆಯನೆ ಮೆದ್ದು ।
ಶೇಷಶಯನನೆ, ಏಳು ಸಮುದ್ರ ಮಥನವ ಮಾಡು
ದೇಶ ಕೆಂಪಾಯಿತೇಳಯ್ಯ ಹರಿಯೆ || ೨ ||

ಅರಳು ಮಲ್ಲಿಗೆ ಜಾಜಿ ಪರಿಮಳದ ಪುಷ್ಪಗಳ
ಸುರರು ತಂದಿಹರಯ್ಯ ಸುಜನರೊಡೆಯ ।
ಅರವಿಂದಲೋಚನನೆ, ಕೋಳಿ ಕೂಗಿತು ಕೇಳು
ಪುರಂದರವಿಠಲನೇ ಬೆಳಗಾಯಿತು || ೩ ||

ಭಗವಂತನಿಗೆ ಬೆಳಗಾಗುವುದೆಂದುಂಟೆ ? ಕತ್ತಲಾದರೆ ತಾನೆ ಬೆಳಗಾಗುವುದು? ಆವನಿಗೋ ನಿತ್ಯ ಬೆಳಕು. ದಿನಕ್ಕೊಮ್ಮೆ ಬೆಳಗಲ್ಲ. ರಾತ್ರಿಯೇ ಇಲ್ಲದವನಿಗೆ ಬೆಳಗಾಗುವುದು ಹೇಗೆ ? ಇರುಳಲ್ಲಿ ಮಲಗದವನು ಬೆಳಗಾಯಿತೆಂದು ಏಳುವುದು ಹೇಗೆ?

ಆದರೂ ನಾವು ಬೆಳಗ್ಗೆ ಎದ್ದು ಭಗವಂತನಿಗೆ ಸುಪ್ರಭಾತ ಹೇಳುತ್ತೇವೆ. ಮಂಗಲಗೀತೆಗಳನ್ನು ಹಾಡಿ ಭಗವಂತನನ್ನು ಎಚ್ಚರಿಸುತ್ತೇವೆ – ವಂದಿಮಾಗಧರು ಮಹಾರಾಜನನ್ನು ಎಚ್ಚರಿಸುವಂತೆ :

ಉತ್ತಿಷ್ಠೋತ್ತಿಷ್ಠ ಗೋವಿಂದ
ಉತ್ತಿಷ್ಠ ಗರುಡಧ್ವಜ ।
ಉತ್ತಿಷ್ಠ ಕಮಲಾಕಾಂತ
ತ್ರೈಲೋಕ್ಯಂ ಮಂಗಲಂ ಕುರು ॥

(ಎದ್ದೇಳು ಎದ್ದೇಳು ಓವೋ ಗೋವಿಂದ
ನಿದ್ದೆಯಿಂದೆದ್ದೇಳು ಗರುಡಗಮನ
ಸಿದ್ಧೆ ಸಾಕಿನ್ನೇಳು ಓವೋ ರಮೆಯರಸ
ಮೂರು ಲೋಕಗಳಲ್ಲು ಮಂಗಳವ ಹರಿಸು)

ಇದು ಹಿಂದಿನಿಂದ ನಡೆದುಕೊಂಡು ಬಂದ ರೂಢಿ. ಪ್ರತಿದಿನವೂ ರಾತ್ರಿ ಭಗವಂತನ ಮೂರ್ತಿಯನ್ನು ತೊಟ್ಟಿಲಲ್ಲಿಟ್ಟು ಜೋಗುಳ ಹಾಡಿ ಮಲಗಿಸುತ್ತಾರೆ; ಬೆಳಗುಜಾವದಲ್ಲಿ 'ಏಳಯ್ಯ ಬೆಳಗಾಯಿತು' ಎಂದು ಎಬ್ಬಿಸುತ್ತಾರೆ– ನಮ್ಮ ಅಕ್ಕರೆಯ ಪುಟ್ಟಮಗುವನ್ನು ತಟ್ಟಿ ಮಲಗಿಸಿದಂತೆ; ತಟ್ಟಿ ಎಬ್ಬಿಸಿದಂತೆ. ಇದು ಭಕ್ತರ ಭಕ್ತಿ ಪಂಥದ ಕಡಲಲ್ಲಿ ಮೂಡಿಬಂದ ಒಂದು ವಾತ್ಸಲ್ಯದ ತರಂಗ.

ಭಕ್ತಿಯದೇ ಒಂದು ಮಗ್ಗಲು, ವಾತ್ಸಲ್ಯ; ಇನ್ನೊಂದು ಮಗ್ಗಲು, ಶೃಂಗಾರ. ಭಕ್ತನ ಪಾಲಿಗೆ ಎಲ್ಲ ರಸಗಳಿಗೂ ಭಗವಂತನಲ್ಲಿ ಸಮನ್ವಯ. ಕೆಲವರದು ಶುದ್ಧ ಭಕ್ತಿಯಾದರೆ ಕೆಲವರದು ವಾತ್ಸಲ್ಯ ಭಕ್ತಿ – ದೇವಕೀ ವಸುದೇವರಂತೆ; ಕೆಲವರದು ಶೃಂಗಾರ ಭಕ್ತಿ – ಗೋಪಿಯರಂತೆ, ಮೀರಾಬಾಯಿಯಂತೆ.

ಸತಿ–ಪತಿಯರ ಸರಸದ ಚೆಲ್ಲಾಟ, ಮಕ್ಕಳ ಜತೆಗಿನ ಮುದ್ದಾಟ, ಮೋಕೆಯ ತುಂಟಾಟ, ತಂಟೆಯ ಮಕ್ಕಳನ್ನು ಗದರುವ ಹುಸಿಕೋಪದ ಮಾಟ– ಹೀಗೆ ಭಕ್ತರ ಎಲ್ಲ ಸ್ಥಾಯಿಭಾವಗಳಿಗು ಭಗವಂತನೆ ನೆಲೆ. ಅವನೆ ತಾಯಿ. ಅವನೆ ತಂದೆ. ಅವನೆ ಗಂಡ. ಅವನೆ ಮಗು: "ತ್ವಮೇವ ಮಾತಾ ಚ ಪಿತಾ ತ್ವಮೇವ".

ಅದು ಇದು ಎಂದೇನು? ಭಗವಂತನನ್ನುಳಿದು ಅವರಿಗೆ ಇನ್ನೇನೂ ಬೇಕಿಲ್ಲ. ಭಗವಂತನೆ ಅವರ ಸರ್ವಸ್ವ: "ತ್ವಮೇವ ಸರ್ವಂ ಮಮ ದೇವದೇವ".

ಅಲ್ಲವೆ ಮತ್ತೆ? ನಂಬಿದವರ ಹೃದಯದ ತೊಟ್ಟಿಲಲ್ಲಿ ಭಗವಂತ ಸದಾ ಇದ್ದಾನೆ. ಬೆಳಗಾಯಿತು ಎಂದಾಗ ಅವನನ್ನು ಎಬ್ಬಿಸಬೇಡವೆ? ಇದು ಅವನ ಎಚ್ಚರ ಅಲ್ಲ; ನಮ್ಮ ಒಳಬಗೆಯ ಎಚ್ಚರ. ಭಗವಂತನ ಬಗೆಗೆ ನಾವು ಸದಾ ಎಚ್ಚರಾಗಿರಬೇಕು ಎನ್ನುವ ಎಚ್ಚರ. ಇಂಥ ಎಚ್ಚರ ಮೂಡಿದಾಗ ಸದಾ ಬೆಳಗು. ಸದಾ ಬೆಳಕು. ಅಲ್ಲಿ ಇರುಳಿಲ್ಲ. ಅಲ್ಲಿ ಕತ್ತಲಿನ ಕಾವಳವಿಲ್ಲ.

ಅನುಭಾವಿಗಳು ಭಗವಂತನನ್ನು ಬಗೆಬಗೆಯಿಂದ ಬೇಡುವುದುಂಟು: "ಈ ಭಕ್ತನನ್ನು ಮರೆಯಬೇಡ" ಎನ್ನುತ್ತಾರೆ; "ನನ್ನತ್ತ ಕಣ್ತೆರೆದು ನೋಡು" ಎನ್ನುತ್ತಾರೆ. ಹೀಗೆ ವ್ಯವಹಾರದ ನುಡಿಗಟ್ಟುಗಳಿಂದಲೆ ಭಗವಂತನ ಜತೆ ಸಂಭಾಷಣೆ ನಡೆಸುತ್ತಾರೆ. ಉಪನಿಷತ್ತುಗಳಲ್ಲು ಇಂಥ ಮಾತು ಬರುತ್ತದೆ ;

"ಓಂ ಕ್ರತೋ ಸ್ಮರ ಕೃತಂ ಸ್ಮರ" (ಯಾಜ್ಞೀಯ ಮಂತ್ರೋಪನಿಷತ್) "ಓ ಜ್ಞಾನ ರೂಪಿಯಾದ ಭಗವಂತನೆ, ನಿನಗೆ ನನ್ನ ನೆನಪಿರಲಿ ; ನಾನು ಮಾಡಿದ ನಿನ್ನ ಆರಾಧನೆಯ ನೆನಪಿರಲಿ" ಎನ್ನುತ್ತಾನೆ ವೇದದ ಋಷಿ. ನಾವು ಮಾತ್ರ ಭಗವಂತನನ್ನು ನೆನೆದರೆ ಸಾಲದು; ಅವನೂ ನಮ್ಮನ್ನು ನೆನೆಯಬೇಕಾಗುತ್ತದೆ. ನಾವು ಮಾತ್ರ ಅವನನ್ನು ಕಾಣಬಯಸಿದರೆ ಸಾಲದು; ಅವನೂ ನಮ್ಮತ್ತ ಕಣ್ಣುತೆರೆಯಬೇಕಾಗುತ್ತದೆ.

ಆದರೂ ಇದು ಎಂಥ ವಿಚಿತ್ರ ! ಮರೆಯದವನು ನೆನಪಿಸಿಕೊಳ್ಳುವುದೆಂದರೇನು? ಕಣ್ಣು ಮುಚ್ಚದವನು ಕಣ್ಣು ತೆರೆಯುವುದೆಂದರೇನು ? ಇದು ಭಕ್ತರ ಭಾವುಕಮನದ ಕಾವ್ಯಮಯ ಲೌಕಿಕ ಅಭಿವ್ಯಕ್ತಿ. ಇದರ ಹಿಂದೆ ಅಲೌಕಿಕವಾದ ಧ್ವನಿಯಿದೆ. ಈ ಧ್ವನಿಯನ್ನು ಭಗವಂತ ಓದುತ್ತಾನೆ ; ಭಕ್ತರು ಓದಬಲ್ಲರು.

'ಕ್ರತೋ ಸ್ಮರ' – 'ನಿನಗೆ ನನ್ನ ನೆನಪಿರಲಿ' ಎಂಬ ಆರ್ಷವಾಣಿಯಲ್ಲಿ ಇರುವ ಧ್ವನಿ ಇದು: 'ನಿನ್ನ ಅನುಗ್ರಹ ನಿರಂತರ ನನ್ನ ಮೇಲಿರಲಿ'. ನೀನು ಉದ್ಧರಿಸ ಬಯಸಿದ ಭಕ್ತರ ಪಂಕ್ತಿಯಲ್ಲಿ ದಯವಿಟ್ಟು ನನ್ನ ಹೆಸರನ್ನೂ ಸೇರಿಸಿಬಿಡು'. ಎಂಥ ಸುಂದರವಾದ ಉದ್ಗಾರ – ಅಲ್ಲವೆ ?

ಪೂಜಾಕಾಲದ ಒಂದು ಪ್ರಾರ್ಥನೆಯ ಮಂತ್ರ ಹೀಗಿದೆ :

ಆಯುತಾಭ್ಯಾಂ ವಿಶಾಲಾಭ್ಯಾಂ
ಶೀತಲಾಭ್ಯಾಂ ಕೃಪಾನಿಧೇ ।
(ಕರುಣಾರಸಪೂರ್ಣಾಭ್ಯಾಂ)
ಲೋಚನಾಭ್ಯಾಂ ವಿಲೋಕಯ ॥

(ಕರುಣೆಯ ರಸಧಾರೆ ತುಂಬಿ ತಂಪಾದ
ಹರವಾದ ಆ ನಿನ್ನ ಅರಳು ಕಣ್ಣುಗಳಿಂದ
ನೋಡು ನನ್ನೆಡೆಗೆ ಓ ಕಾರುಣ್ಯದ ಕಡಲೆ)

ಸದಾ ಸರ್ವಸಾಕ್ಷಿಯಾದ, ವಿಶ್ವತಶ್ಚಕ್ಷುವಾದ ಭಗವಂತ ನಮ್ಮನ್ನು ಕಾಣುವಂತೆ ಬೇರೊಂದು ಮನವಿ ಸಲ್ಲಿಸಬೇಕೆ ? ಇದರ ಅರ್ಥ ಸ್ಪಷ್ಟ: "ನಿನ್ನ ಅನುಗ್ರಹ ದೃಷ್ಟಿ ನನ್ನೆಡೆಗೆ ಹರಿಯಲಿ. ಈ ನಗಣ್ಯ ಭಕ್ತನನ್ನೂ ಉದ್ಧರಿಸುವ ಕೃಪೆ ಮಾಡು".

ಒಟ್ಟಿನಲ್ಲಿ ಭಗವಂತನ ಅನುಗ್ರಹದ ಕಾತರತೆಯಿಂದ ಮೂಡುವ ನಾನಾಬಗೆಯ ಅನುಭಾವ ಕಾವ್ಯದ ಉದ್ಗಾರಗಳಿವು. ಭಗವಂತನಿಗೆ ಭಕ್ತರು ಬಯಸುವ ಸುಪ್ರಭಾತವೂ ಇದೇ ಬಗೆಯದು. ನಿನಗೆ ಬೆಳಗಾಯಿತು ಎಂದಲ್ಲ; ನೀನು ನಿದ್ದೆಯಿಂದೇಳು ಏನ್ನುವುದೂ ಇಲ್ಲಿ ಮುಖ್ಯವಲ್ಲ. ನಿನ್ನ ಅನುಗ್ರಹದಿಂದ ಇಂದಿನ ಪ್ರಭಾತ ನಮಗೆ ಸುಪ್ರಭಾತವಾಗಲಿ. ಇಂದಿನ ದಿನ ಸುದಿನವಾಗಲಿ. ದಿನದಿನವೂ ಸುಪ್ರಭಾತವಾಗಿ ನಿರಂತರ ಸುದಿನವಾಗಲಿ. ಮತ್ತೆಂದೂ ಕತ್ತಲು ನಮ್ಮ ಬಳಿ ಸುಳಿಯದಿರಲಿ. ಅಂಥ ಅಂತರಂಗದ ಬೆಳಕಿನ ಬೆಳಗು, ಆತ್ಮಸಾಕ್ಷಾತ್ಕಾರದ ಸುಪ್ರಭಾತ ನಮ್ಮದಾಗಲಿ.

ಇದು ಸುಪ್ರಭಾತದ ಪ್ರಾರ್ಥನೆಯ ಹಿನ್ನಲೆಯಲ್ಲಿರುವ ಭಾವ. ಈ ಹಿನ್ನಲೆ ತಿಳಿದಾಗ ಇದು ಅನುಭಾವದ ಹಾಡು. ಇಲ್ಲದಿದ್ದಾಗ ಬರಿಯ ಪಾಡು; ಬರಿಯ ಮಾತಿನ ಮಲ್ಲತನ.

ವೇದ ಮಂತ್ರಗಳು ಇಂಥ ಸುಪ್ರಭಾತವನ್ನು, ಸುದಿನವನ್ನು ಪ್ರಾರ್ಥಿಸಿದ್ದುಂಟು:

> ಪೋಕ್ಷಂ ರಯೀಣಾಮರಿಷ್ಟಂ ತನೂನಾಂ
> ಸ್ವಾದ್ಮಾನಂ ವಾಚಃ ಸುದಿನತ್ವಮಹ್ನಾಮ್" (ಋ.2.21.6)
>
> (ಹಿರಿಹಿಗ್ಗಲಿ ಆಧ್ಯಾತ್ಮದ ಸಿರಿ, ದಣಿಯದಿರಲಿ ಮೈಮನ
> ಮಾತಾಗಲಿ ಜೇನಿನ ಝರಿ, ದಿನದಿನಗಳು ಸುದಿನ)

ಇನ್ನೊಂದು ಮಂತ್ರ ಈ ಅಧ್ಯಾತ್ಮದ ಬೆಳಗಿನ ರಹಸ್ಯವನ್ನು ಇನ್ನಷ್ಟು ಬೆಳಕಿಗೆ ತರುತ್ತದೆ:

> ಆ ತೇನ ಯಾತಂ ಮನಸೋ ಜವೀಯಸಾ
> ರಥಂ ಯಂ ವಾಮೃಭವಶ್ಚಕ್ರುರಶ್ವಿನಾ ।
> ಯಸ್ಯ ಯೋಗೇ ದುಹಿತಾ ಜಾಯತೇ ದಿವ
> ಉಭೇ ಅಹನೀ ಸುದಿನೇ ವಿವಸ್ವತಃ ॥

ಕಕ್ಷೀವಂತನ ಮಗಳು 'ಘೋಷಾ' ಎಂಬ ಋಷಿಕನ್ಯೆ ಕಂಡ ಈ ಮಂತ್ರದ ಅನುಭಾವ ಬಹಳ ದೊಡ್ಡದು. ಇದರ ಭಾವ ಹೀಗಿದೆ: "ದೇವತೆಗಳು ನಿರ್ಮಿಸಿ ನನಗಿತ್ತ ನನ್ನ ಈ ದೇಹ ಭಗವಂತನದೆ ರಥ. ಓ ಪ್ರಾಣದೇವನೆ, ಓ ನಾರಾಯಣನೆ. ಬನ್ನಿ ಈ ರಥದಲ್ಲಿ ನೆಲಸ ಬನ್ನಿ. ಇದರ ಸವಾರರು ನೀವೆ ಹೊರತು ನಾನಲ್ಲ. ಮನಸ್ಸಿಗಿಂತಲೂ ವೇಗವಾಗಿ ಇದು ನಿಮ್ಮನ್ನು ಕರೆದು ತರಬಲ್ಲುದು". ಮನಸ್ಸು, ಮಾತು, ಕೃತಿ ಎಂಬ ಈ ರಥದ ತ್ರಿಕರಣಗಳು ಒಮ್ಮುಖವಾಗಿ ಮುಪ್ಪುರಿಗೊಂಡು

ಮೇಲವಿಸಿದಾಗ ಒಳಗಿನ ಸೂರ್ಯ ಉದಿಸಿಬರುತ್ತಾನೆ. ಆಗ ಅಪರೋಕ್ಷ ಜ್ಞಾನದ ಅರುಣೋದಯವಾಗುತ್ತದೆ. ಮುಗಿಲ ಮಗಳು ಉಷಾದೇವಿಯ ಹೊಂಬೆಳಕು ಹರಿದು ಒಳಬಗೆಯಲ್ಲಿ ಸುಪ್ರಭಾತವಾಗುತ್ತದೆ. ಜೀವನ್ಮುಕ್ತಿಯ, ಮುಕ್ತಿಯ ಸುದಿನಗಳು ಮುಂದೆ ಕಾದಿವೆ. ಮುಂದೆಲ್ಲ ಬರಿಯ ಬೆಳಕೆ. ಬರಿಯ ಹಗಲೆ. ಇದು ಕೊನೆಯ ಸೂರ್ಯೋದಯ ; ಜ್ಞಾನಮಯ ಸೂರ್ಯೋದಯ. ಇನ್ನು ಇಲ್ಲಿ ಸೂರ್ಯ ಮೂಡುವುದಿಲ್ಲ. ಏಕೆಂದರೆ ಇನ್ನು ಇಲ್ಲಿ ಸೂರ್ಯ ಕಂತುವುದಿಲ್ಲ ;

"ನವೈ ತತ್ರ ನಿಮ್ಲೋಚನೋದಿಯಾಯ ಕದಾಚನ"

ಇಂಥ ಸುಪ್ರಭಾತದ ಹಾಡನ್ನು ವೇದಕಾಲದಿಂದ ಋಷಿಗಳು ಹಾಡುತ್ತ ಬಂದರು. ಇದೇ ವೈದಿಕ ಪರಂಪರೆಯ ಜಾಡಿನಲ್ಲಿ ಸಾಗಿ ಕನ್ನಡದಲ್ಲಿ 'ಉಪನಿಷತ್ತು'ಗಳನ್ನು ಕಂಡ ದಾರ್ಶನಿಕರಾದ ಪುರಂದರದಾಸರೂ ಇಂಥದೇ ಒಂದು ಅಂತರಂಗದ ಸುಪ್ರಭಾತ ವನ್ನು ಒಂದು ಬೆಳಗಿನ ಜಾವದಲ್ಲಿ ಶ್ರೀನಿವಾಸನ ಮುಂದೆ ನಿಂತು ಹಾಡಿದರು :

ಏಳಯ್ಯ ಬೆಳಗಾಯಿತು !
ಏಳು ನಾರಾಯಣ ಏಳು ಲಕ್ಷ್ಮೀರಮಣ
ಏಳು ಶ್ರೀಗಿರಿಯೊಡೆಯ ವೆಂಕಟೇಶ ||

ಹೊರಗಣ್ಣು ಮಾತ್ರ ತೆರೆದವರಿಗೆ ತಿರುಪತಿಯ ಬೆಟ್ಟದ ನೆತ್ತಿಯ ಮೇಲೆ ಒಂದು ಮುಂಜಾವದ ಬೆಳಕು ಹರಿಯಿತು. ಪುರಂದರದಾಸರಿಗೋ ಒಳಗಣ್ಣೂ ತೆರೆದಿತ್ತು. ಅದರಿಂದ ಅವರಿಗೆ ಒಳಗೂ ಹೊರಗೂ ಬೆಳಗಾಯಿತು. ಅವರು ತನ್ನ ಅಂತರ್ಯಾ ಮಿಯಾದ ಬಿಂಬಮೂರ್ತಿಯನ್ನು ಕರೆದು ಮಾತನಾಡಿಸಿದರು; 'ಏಳಯ್ಯ ಬೆಳಗಾಯಿತು'.

ಅಂತರಂಗದ ಒಳಗೆ ಬೆಳಗಾಯಿತು. ಅದರಿಂದ ಏಳಯ್ಯ, ಎದ್ದು ಹೃದಯ ಗುಹೆಯಿಂದ ಹೊರಬಂದು ನಿನ್ನ ಬಿಂಬ ರೂಪದ ಸಾಕ್ಷಾತ್ಕಾರವನ್ನು ಕರುಣಿಸಯ್ಯ.

ದಾಸರು ತನ್ನ ಅಯ್ಯನನ್ನು ನಲ್ಮೆಯ ಹೆಸರಿನಿಂದ ಕರೆಯುತ್ತಾರೆ; 'ಏಳು ನಾರಾಯಣ, ಏಳು ಲಕ್ಷ್ಮೀರಮಣ'.

ಓಂಕಾರದ ಎಂಟು ಅಕ್ಷರಗಳಿಂದ ರೂಪುಗೊಂಡ ಅಷ್ಟಾಕ್ಷರದ ಮೂಲ ಮಂತ್ರ ದಲ್ಲಿ ಬಂದ ಹೆಸರು – ನಾರಾಯಣ. ಮೂಲ ರೂಪದ ಹೆಸರು – ನಾರಾಯಣ. ಪಂಚಕೋಶಗಳ ಕೋಟೆಯೊಳಗಿರುವ ಜೀವನ ಕೊನೆಯ ಕೋಟೆಯಾದ ಆನಂದ ಮಯ ಕೋಶದಲ್ಲಿರುವ ರೂಪ ನಾರಾಯಣ. ಆನಂದದ ಭೋಗದಲ್ಲಿ ತುಂಬಿರುವ ರೂಪ ನಾರಾಯಣ. ಓ ಆನಂದಮಯನೆ, ಏಳಯ್ಯಾ, ನಿನ್ನ ಭಕ್ತನಿಗು ಆನಂದದ ಪ್ರಪಂಚವನ್ನು ತೆರೆದು ತೋರಯ್ಯ.

ವಿಶ್ವಸೃಷ್ಟಿಯ ಮುನ್ನ ಪ್ರಳಯಜಲಧಿಯಲ್ಲಿ ಮಲಗಿದ್ದವನು, ಏನೂ ಇಲ್ಲದ ಕತ್ತಲಲ್ಲಿ (ತಮ ಆಸೀತ್) ತಾನೇ ತಾನಾಗಿ ಒಬ್ಬನೇ ಇದ್ದವನು ನಾರಾಯಣ. (ನಾರ + ಅಯನ = ನೀರಲ್ಲಿ ನೆಲೆಸಿದವನು.)

ನಾರಾಯಣಾಖ್ಯಃ ಪರಮಃ

ಶೇತೇ ಲಕ್ಷ್ಮ್ಯಾನ್ವಿತೋ ಲಯೇ । (ಭಾಗ. ತಾತ್ಪರ್ಯ 11–6–16)

"ಪರತತ್ವವಾದ ನಾರಾಯಣ ಪ್ರಳಯ ಜಲಧಿಯಲ್ಲಿ ಪವಡಿಸಿರುತ್ತಾನೆ – ತನ್ನವ ಳಾದ ಲಕ್ಷ್ಮಿಯ ಜತೆಗೆ" – ಎನ್ನುತ್ತದೆ ಈ ಪ್ರಮಾಣ ವಚನ. ಅದಕ್ಕೆಂದೆ ಮುಂದಿನ ಮಾತು : "ಏಳು ಲಕ್ಷ್ಮೀರಮಣ".

ಲಕ್ಷ್ಮೀರಮಣ ಎಂದರೆ ಶ್ರೀನಿವಾಸ. ಪದ್ಮಾವತಿಯ ರೂಪದಿಂದ ಬಂದ ಲಕ್ಷ್ಮಿಯನ್ನು ವರಿಸಲೆಂದೇ ಇಲ್ಲಿಗಿಳಿದು ಬಂದ.

ನರರ ಸಮುದಾಯವೆ ನಾರ. ಅವರ ಹೃದಯ ಸಮುದ್ರದಲ್ಲಿ ನೆಲಸಿದವನು ನಾರಾಯಣ.

ಪ್ರಳಯ ಕಾಲದ ಕತ್ತಲಲ್ಲಿ ಪ್ರಳಯಜಲಧಿಯಲ್ಲಿ ಮಲಗಿದವನೆ, ಸೃಷ್ಟಿಕಾಲ ದಲ್ಲಿ ಜೀವನ ಹೃದಯಸಮುದ್ರದಲ್ಲಿ ಗುಹೆಯಾಳದ ಕತ್ತಲಲ್ಲಿ ಅಡಗಿದವನೆ, ಏಳು, ಕತ್ತಲು ಕಳೆದು ಬೆಳಗಾಯಿತು. ಈ ಭಕ್ತನ ಸ್ವರೂಪೋದ್ಧಾರಕ್ಕಾಗಿ ಎದ್ದು ಬಾ ; ಗಜೇಂದ್ರನಿಗಾಗಿ ಎದ್ದು ಬಂದಂತೆ; ದ್ರೌಪದಿಗಾಗಿ ಎದ್ದು ಬಂದಂತೆ. ಧ್ರುವನಿಗಾಗಿ, ಪ್ರಹ್ಲಾದನಿಗಾಗಿ ಬಂದಂತೆ. 'ನಾರಾಯಣ' ಎಂದು ಕರೆದಾಗ ಎಲ್ಲ ಪಾಪವನ್ನು ಮರೆತು ಅಜಾಮಿಳನ ಬಳಿ ಬಂದಂತೆ.

ಹೀಗೆ ಒಳಗಿದ್ದ ಭಗವಂತನನ್ನು ತನ್ನೆದುರು ನಿಂತ ಮೂರ್ತಿಯಲ್ಲು ಕಂಡ ದಾಸರು ಮುಂದಿನ ಸಾಲನ್ನು ಹಾಡಿದರು :

ಏಳು ಶ್ರೀಗಿರಿಯೊಡೆಯ ವೆಂಕಟೇಶ

ಶ್ರೀಗಿರಿ ಅಂದರೆ ತಿರುಮಲೆ. ತಿರುಮಲೆಯೊಡೆಯನಾಗಿ ಶ್ರೀನಿವಾಸನಾಗಿ ಈ ಬೆಟ್ಟದ ಮೇಲೆ ನಿಂತ ಕರುಣಾಳು ನೀನೇ ಅಲ್ಲವೆ ? ಈ ಬೆಟ್ಟದ್ದೆ ಇನ್ನೊಂದು ಹೆಸರು ವೇಂಕಟ ಗಿರಿ. ಅದಕೆಂದೆ ನೀನು ವೇಂಕಟೇಶ. ನಿನ್ನಿಂದ ಈ ಬೆಟ್ಟಕ್ಕೆ ಹೆಸರು ; ಬೆಟ್ಟದಿಂದ ನಿನಗೂ ಹೆಸರು. ಬೆಟ್ಟವನ್ನು ವೇಂಗಡ, ವೆಂಗಳ, ವೇಂಕಟ ಎಂದೆಲ್ಲ ಕರೆದರು. ಅದರಿಂದ ನೀನೂ ವೆಂಕಟನಾದೆ ; ವೆಂಗಳನಾದೆ. ನೀನು ಶ್ರೀಪತಿ – ತಿರುಪತಿ. ಅದರಿಂದ ಬೆಟ್ಟವೂ ತಿರುಪತಿಯಾಯಿತು. ಬೆಟ್ಟದ ಇನ್ನೊಂದು ಹೆಸರು ತಿರುಮಲೆ ಎಂದೂ ನೀನೂ ತಿರುಮಲೇಶನಾದಿ ; ತಿರುಮಲೆಯಪ್ಪನಾದಿ ; ತಿಮ್ಮಪ್ಪನಾದಿ. ನೀನು ಇಲ್ಲಿ ಬಂದು ನೆಲೆಸಿದೆ ಎಂದೆ ಈ ಬೆಟ್ಟದ ಔನ್ನತ್ಯಕ್ಕೆ ಒಂದು ಬೆಲೆ ಬಂತು ; ಹೊಸ ಅರ್ಥ ಬಂತು.

ಇದು ಲೌಕಿಕದ ಮುಖವಾಯಿತು- ಅಧ್ಯಾತ್ಮದ ಮುಖದಲ್ಲು ಭಗವಂತ ಶ್ರೀಗಿರಿಯೊಡೆಯ ಹೌದು ; ವೆಂಕಟೇಸನೂ ಹೌದು. ಅಧ್ಯಾತ್ಮದ ಯೋಗಸಾಧನೆಯಿಂದ ಔನ್ನತ್ಯಕ್ಕೇರಿ ಶ್ರೀಮಂತವಾದ ಭಕ್ತನ ಹೃದಯ ಪೀಠವೇ ಶ್ರೀಗಿರಿ. ಅದರ ಒಡೆಯ ಭಗವಂತ.

ಶ್ರೀ ಅಂದರೆ ಪಂಚೇಂದ್ರಿಯಗಳು- ಕಣ್ಣು, ಕಿವಿ, ಮೂಗು, ಬಾಯಿ ಮತ್ತು ಮನಸ್ಸು :

" ತಾ ಏತಾಃ ಶೀರ್ಷನ್ ಶ್ರಿಯಃ ಶ್ರಿತಾಶ್ಚಕ್ಷುಃ ಶ್ರೋತ್ರಂ
ಮನೋ ವಾಕ್ ಪ್ರಾಣಃ" (ಐತರೇಯ 1–6–4)

ಭಗವಂತನ ಕ್ಷೇತ್ರಗಳನ್ನು, ಪ್ರತೀಕಗಳನ್ನು ಕಾಣುವ ಕಣ್ಣು ಒಂದು ಸಂಪತ್ತು. ಭಗವಂತನ ಮಹಿಮೆಯನ್ನು ಕೇಳುವ ಕಿವಿಯೊಂದು ಸಂಪತ್ತು. ಭಗವಂತನಿಗೆ ಅರ್ಪಿಸಿದ ಸುಗಂಧವನ್ನು ಮೂಸುವ ಮೂಗೊಂದು ಸಂಪತ್ತು. ಭಗವಂತನ ಗುಣವನ್ನು ಹಾಡುವ ಬಾಯೊಂದು ಸಂಪತ್ತು. ಭಗವಂತನ ಮಹಿಮೆಯನ್ನೆ ನಿರಂತರ ಚಿಂತಿಸುವ ಮನಸ್ಸೂ ಒಂದು ಸಂಪತ್ತು. ಈ ಐದು ಸಂಪತ್ತುಗಳು ನಮ್ಮ ದೇಹದಲ್ಲಿ ಶಿರೋಭಾಗದಲ್ಲಿ ಇವೆ. ಆದರಿಂದ ಈ ಶ್ರೀಮಂತಿಕೆಯನ್ನು ಹೊತ್ತ ಗಿರಿ ಎಂದರೆ ನಮ್ಮ ದೇಹದ ತುದಿಯ ಭಾಗಃ ಶಿರಸ್ಸು ; ಅಲ್ಲಿ ಸಹಸ್ರಾರ ಚಕ್ರದಲ್ಲಿ ಪವಡಿಸಿದ ನಾರಾಯಣನೆ ಶ್ರೀಗಿರಿಯೊಡೆಯ.

" ಪಂಚೇಂದ್ರಿಯಗಳಿಂದ ಶ್ರೀಮಂತವಾದ ಈ ಗಿರಿಯ ನೆತ್ತಿಯಲ್ಲಿ ಪವಡಿಸಿದ ನಾರಾಯಣನೆ, ಈ ಸಾತ್ವಿಕ ಇಂದ್ರಿಯಗಳೆಂಬ ಲಕ್ಷ್ಮಿಯ, ಸಂಪತ್ತಿನ ರಮಣನೆ, ಸಹಸ್ರಾರದ ಕೊನೆಯ ಚಕ್ರದಲ್ಲಿ ನನ್ನನ್ನು ಜಾಗೃತಗೊಳಿಸು. ಅದಕ್ಕಾಗಿ ಎದ್ದೇಳು. ನೀನು ಎದ್ದು ನನ್ನನ್ನು ಎಬ್ಬಿಸಿದೆ ಎಂದರೆ ನಾನು ಎಚ್ಚರಾಗಬಲ್ಲೆ- ಇಲ್ಲವೆಂದರೆ ನನ್ನ ಅಜ್ಞಾನದ ನಿದ್ರೆಗೆ ಪಾರವೇ ಇಲ್ಲ.

ಆದಕ್ಕಾಗಿ ನೀನು ವೇಂಕಟೇಶನಾಗಿ ಬರಬೇಕು. ವಕಾರ ಜ್ಞಾನ ಶಕ್ತಿಯ ವಾಚಕ. ಇಕಾರ ಇಚ್ಛಾಶಕ್ತಿಯ ವಾಚಕ. ಕಟ ಎನ್ನುವ ವೈದಿಕ ಧಾತುವಿನ ಅರ್ಥ ಪ್ರಕಟವಾಗುವುದು ಅಥವಾ ಸುರಿಸುವುದು. ನನ್ನಲ್ಲಿ ಜ್ಞಾನಶಕ್ತಿ, ಇಚ್ಛಾಶಕ್ತಿಗಳ ಪೂರವನ್ನೆ ಹರಿಸಿ, ನನ್ನೊಳಗೆ ಸುಪ್ತವಾದ ಶಕ್ತಿಯನ್ನು ಪ್ರಕಟಗೊಳಿಸಿ ನನ್ನನ್ನು ಉದ್ಧರಿಸುವ ಸ್ವಾಮಿಯಾಗಿ ನೀನು ಬರಬೇಕು. ನನ್ನ ವಾಂಛಿತ ಇಷ್ಟಾರ್ಥಗಳನ್ನು ಈಡೇರಿಸುವ ಈಶನಾಗಿ, ವೇಂಕಟೇಶನಾಗಿ ಬರಬೇಕು " ಹೀಗೆ ಕನ್ನಡದ ವೇಂಕಟೇಶ ಸಂಸ್ಕೃತದ ವೇಂಕಟೇಶನಾದ.

ಹೀಗೆ ಒಳಗೂ ಹೊರಗೂ ಭಗವಂತನ ರೂಪವನ್ನು ಏಕರೂಪತೆಯಿಂದ ತನ್ಮಯರಾಗಿ ಕಂಡ ದಾಸರು ಈ ಮಾತುಗಳಿಂದ ಸುಂದರವಾದ ಸುಪ್ರಭಾತವನ್ನು ಹಾಡಿದರು.

ಈ ಪಲ್ಲವಿ – ಅನುಪಲ್ಲವಿಗಳಲ್ಲಿ ಧ್ವನಿತವಾದ ಆಧ್ಯಾತ್ಮದ ಅನುಸಂಧಾನ ಮುಂದಿನ ಸೊಲ್ಲುಗಳಲ್ಲಿ ಸ್ಫುಟಗೊಂಡ ಬಗೆಯನ್ನು ಮುಂದೆ ನೋಡೋಣ:

ದಾಸರೆಲ್ಲರು ಬಂದು ಧೂಳಿದರ್ಶನಗೊಂಡು
ಲೇಸಾಗಿ ತಾಳ – ದಂಡಿಗೆಯ ಪಿಡಿದು |
ಕೇಶವನೆ, ನಿಮ್ಮ ಸಿರಿನಾಮವನೆ ಸ್ಮರಿಸುತಲಿ
ವಾಸುದೇವನೇ, ಉದಯದಲಿ ಹಾಡುತಿಹರು ||

ಶ್ರೀ ನಾರಾಯಣ ವಿಶ್ವಕ್ಕೆಲ್ಲ ಸ್ವಾಮಿ, ನಮ್ಮ ಸ್ವಾಮಿ, ನಮ್ಮ ಅಂತರ್ಯಾಮಿ ಎಂದು ಅರಿತವರೆಲ್ಲ ಹರಿದಾಸರು: "ಮಮ ಸ್ವಾಮೀ ಹರಿರ್ನಿತ್ಯಂ ಸ್ವತಂತ್ರಃ ಪೂರ್ಣಷಡ್ಗುಣಃ".

ಅವರು ಮುಂಜಾನೆ ಎದ್ದು ಸಲ್ಲಿಸುವ ಪ್ರಾರ್ಥನೆಯೆಲ್ಲ ಇಷ್ಟೆ:

ಸ್ವಾಮಿನ್ ದಾಸೋಽಸ್ಮಿ ತೇ ನಿತ್ಯಂ
ಪ್ರಿಯಂ ತೇ ಕರವಾಣ್ಯಹಮ್ |
ಅಪ್ರಿಯೋ ಭವತೋ ನಾಥ
ಮಾಗಾನ್ಮೇ ಮನ ಆದಿಕಮ್ ||

(ಓ ಒಡೆಯನೆ, ಎಂದೆಂದಿಗು ನಾನು ನಿನ್ನ ಸೇವಕ
ನಿನಗೆ ಮೆಚ್ಚಾಗುವಂತಿರಲೆನ್ನ ಕಾಯಕ |
ನನ್ನ ಮೈ - ಮಾತು - ಮನ ನೀ ಮೆಚ್ಚದ ದಾರಿಯಲಿ
ಓ ಹರಿಯೆ ಎಂದಿಗೂ ಹರಿಯದಿರಲಿ)

ಇಂಥ ಭಕ್ತರು, ಇಂಥ ದಾಸರು ಭಗವಂತನ ಬಳಿಗೆ ಬಂದಿದ್ದಾರೆ. ಭಕ್ತ – ಭಗವಂತರ ನಡುವೆ ಇರುವ ಅಂತರವೆ ಕತ್ತಲು. ಆ ಅಂತರ ಕಳೆದು ಬಳಸಾರುವುದೆ ಬೆಳಕು.

ದೂರಾದ್ ದೂರತರಂ ಯತ್ತು
ತದೇವಾಂತಿಕಮಂತಿಕಾತ್ |
(ಕತ್ತಲಲ್ಲಿ ನಡೆದವರಿಗೆ ದೂರಕಿಂತ ದೂರ ಅವನು
ಬೆಳಕಿನಲ್ಲಿ ನಿಂತವರಿಗೆ ಹತ್ತಿರಕಿಂತಲು ಹತ್ತಿರನು)
ತದ್ ದೂರೇ ತದ್ವಂತಿಕೇ |
(ಅದು ಅದೋ ಬಲುದೂರು
ಅದುವೆ ಇದೊ ಬಲುಹತ್ತಿರ)

ಹೀಗಿದೆ ಇಲ್ಲಿ ಸ್ವಾರಸ್ಯ : ಬೆಳಗಾಯಿತು ಎಂದು ದಾಸರು ಬಂದರು ; ಅಷ್ಟೆ ಅಲ್ಲ, ದಾಸರು ಬಂದರು ಎಂದು ಬೆಳಗಾಯಿತು. ಏಕೆಂದರೆ ಭಗವಂತನ ಸಾಮಿಪ್ಯವೇ ನಿಜವಾದ ಬೆಳಕು.

ಭಗವಂತನಿಂದ ದೂರವಾಗಿ ಬದುಕುವವರು ಹಗಲಲ್ಲು ಕತ್ತಲಿನಲ್ಲಿರುತ್ತಾರೆ ; ಭಗವಂತನ ಬಳಿಯಿರುವವರು ಕತ್ತಲಲ್ಲು ಬೆಳಕಿನಲ್ಲಿರುತ್ತಾರೆ : "ಯಾನಿಶಾ ಸರ್ವ ಭೂತಾನಾಂ ತಸ್ಯಾಂ ಜಾಗರ್ತಿ ಸಂಯಮಿ" (ಭಗ. ಗೀ.)

ದಾಸರೆಲ್ಲರು ಬಂದದ್ದಾಯಿತು. ಮುಂದಿನ ಕೆಲಸ : "ಧೂಳಿ ದರ್ಶನ ಗೊಂಡು".

ಇಲ್ಲಿ ಧೂಳೀದರ್ಶನ ಎನ್ನುವುದು ತುಂಬ ಮಹತ್ವದ ಒಂದು ಸಾಂಕೇತಿಕ ಪದ. ವಿಶ್ವದರ್ಶನವನ್ನೆ ಕೊಡುವಂಥ ಪದ.

ಮೇಲು ನೋಟಕ್ಕೆ ಇದೊಂದು ಸಹಜವಾದ ಅಭಿವ್ಯಕ್ತಿ. ಕ್ಷೇತ್ರಕ್ಕೆ ಬಂದವರೆ, ಮೈಯ ಧೂಳು ಮಾಸುವ ಮುನ್ನ, ತೊಳೆವ ಮುನ್ನ ಭಗವಂತನನ್ನು ಕಾಣುವ ಆತುರ ದರ್ಶನ.

"ತ್ರುಟಿರ್ಯುಗಾಯತೇ ತ್ವಾಮಪಶ್ಯತಾಮ್" (ನಿನ್ನನ್ನು ಕಾಣದಿಹ ಚಣ ವೊಂದು ಯುಗದಂತೆ) ಎಂದ ವೃಂದಾವನದ ಗೋಪಿಕೆಯರಂತೆ 'ಎಂದು ಭಗವಂತ ನನ್ನು ಕಂಡೇನು' ಎಂಬ ಆತುರದಿಂದ ತುದಿಗಾಲಲ್ಲಿ ನಿಂತ ಭಕ್ತನ ದರ್ಶನಕಾತರತೆ ಈ 'ಧೂಳಿದರ್ಶನ' ಎಂಬ ಪದದಲ್ಲಿದೆ.

ಈ ಪದದ ಒಳಹರವು, ಆಳ ಇನ್ನೂ ಹೆಚ್ಚಿನದು. ಅಧ್ಯಾತ್ಮದ ಹಿನ್ನೆಲೆಯಲ್ಲಿ ಇದಕ್ಕೆ ತುಂಬ ರಹಸ್ಯವಾದ ಔಪನಿಷದಿಕವಾದ ಅರ್ಥವೊಂದಿದೆ : ನಾನು ನಿನ್ನ ಚರಣದಾಸ. ನನಗೆ ಕಾಣುವುದೆಲ್ಲ ನಿನ್ನ ಚರಣಧೂಳಿ ಮಾತ್ರ.

ರಾಮಾಯಣದ ಒಂದು ಪ್ರಸಂಗವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ರಾವಣ ಸೀತೆಯನ್ನು ಕದ್ದು ಆಕಾಶಕ್ಕೆ ನೆಗೆದು ಲಂಕೆಗೆ ಒಯ್ದಾಗ ಆಕೆ ಕೆಳಕ್ಕೆಸೆದ ಆಭರಣ ಗಳನ್ನು ಸುಗ್ರೀವ ಶ್ರೀರಾಮನಿಗೆ ತಂದು ತೋರಿಸಿದ. ಅದೇ ತೋಳುಬಂದಿ, ಅದೇ ಕಿವಿಯೋಲೆ, ಅದೇ ಕಾಲ್ಗೆಜ್ಜೆ. ರಾಮ ಅದನ್ನು ಲಕ್ಷ್ಮಣನಿಗೂ ತೋರಿಸಿ, "ಇವು ನಿನ್ನ ಅತ್ತಿಗೆಯ ಆಭರಣಗಳಲ್ಲವೆ ?" ಎಂದ. ಆಗ ಲಕ್ಷ್ಮಣ ಹೇಳಿದ :

ನಾಹಂ ಜಾನಾಮಿ ಕೇಯೂರೇ
ನಾಹಂ ಜಾನಾಮಿ ಕುಂಡಲೇ ।
ನೂಪುರೇ ತ್ವಭಿಜಾನಾಮಿ
ನಿತ್ಯಂ ಪಾದಾಭಿವಂದನಾತ್ ॥

"ಈ ತೋಳುಬಂದಿ, ಈ ಕಿವಿಯೋಲೆ ಅತ್ತಿಗೆಯದು ಹೌದೋ ಅಲ್ಲವೋ ನನಗೆ ಗೊತ್ತಿಲ್ಲ. ಈ ಕಾಲ್ಗೆಜ್ಜೆಗಳು ಮಾತ್ರ ಅತ್ತಿಗೆಯವು ಎಂದು ಬಲ್ಲೆ. ನಾನು ದಿನವೂ ಅತ್ತಿಗೆಯ ಕಾಲಿಗೆರಗುತ್ತಿದ್ದಾಗ ಇವನ್ನು ಕಂಡದ್ದುಂಟು. ಅದರಿಂದ ಗುರುತಿಸಬಲ್ಲೆ".

ಇದು ಭಕ್ತನ ದಾಸ್ಯಭಾವದ ಒಂದು ಸುಂದರವಾದ ಕಾವ್ಯಮಯ ಚಿತ್ರಣ. ಭಕ್ತನೂ ಇದೇ ಮಾತನ್ನಾಡುತ್ತಾನೆ. ಭಗವಂತನ ಚರಣಕ್ಕೆರಗುವ ಮೈ ಇದು. ಅವನ ಚರಣಧೂಳಿಯನ್ನು ಮಾತ್ರ ಈ ಕಣ್ಣು ಕಂಡುಬಲ್ಲುದು.

ದೊಡ್ಡವರ ಮುಂದೆ ತಲೆಯೆತ್ತಿ, ಅವರ ಮುಖಕ್ಕೆ ಮುಖ ಕೊಟ್ಟು, ಕಣ್ಣಿನಲ್ಲಿ ಕಣ್ಣು ನೆಟ್ಟು ಮಾತನಾಡುವುದು ತರವಲ್ಲ. ಅದು ಸೌಜನ್ಯದ ಲಕ್ಷಣವಲ್ಲ. ಅವರ ಮುಂದೆ ಬಗ್ಗಿ ನಿಂತು ನಡೆದುಕೊಳ್ಳುತ್ತೇವೆ. ಆಗ ನಮಗಾಗುವುದು ಅವರ ಪಾದರಜೋದರ್ಶನ.

ಇದೆಲ್ಲ ಸರಿ. ಭಗವಂತನ ಪಾದಧೂಳಿ ಎಂದರೇನು? ಭಗವಂತನ ಪಾದ ಕ್ಕಂಟುವ ಧೂಳು ಯಾವುದದು? ನಾವು ನಡೆದಾಡುವಾಗ ನಮ್ಮ ಕಾಲಿನಲ್ಲಿ ಧೂಳಡರುವುದು ಸಹಜ. ಹಾಗೆಯೇ ಸರ್ವವ್ಯಾಪಿಯಾದ ಭಗವಂತನ ಕಾಲಿಗೂ ಧೂಳು ಮುಸುಕುತ್ತದೆಯೆ?

ಮೇಲುನೋಟಕ್ಕೆ ಹೀಗೆ ಅನ್ನಿಸಬಹುದು: ಪಾದಧೂಳಿ ಎನ್ನುವುದಕ್ಕೆ ಯಾವ ವಿಶೇಷ ಅರ್ಥವೂ ಇಲ್ಲ. ಇದು ಕೇವಲ ಅಲಂಕಾರಿಕವಾದ ನುಡಿಕಟ್ಟು— ಎಂದು. ಆದರೆ ಇದು ತುಂಬ ಸ್ಥೂಲವಾದ ಮಾತಾಯಿತು. ಇಷ್ಟೇ ಆದರೆ ಪುರಂದರದಾಸರ ಈ ಹಾಡು ಒಂದು ಕಾವ್ಯದ ತುಣುಕಷ್ಟೆ ಆಗಬಹುದು. ಹೊರತು ಅನುಭಾವಿಯೊಬ್ಬನ ಅನುಭಾವದ ಉದ್ಗಾರ ಆಗಲಾರದು. ಇದೊಂದು ಬರಿಯ ಕೀರ್ತನೆ ಆದೀತು ಹೊರತು ಪುರಂದರೋಪನಿಷತ್ತು ಆಗಲಾರದು.

ಹಾಗಾದರೆ, ಭಗವಂತನ ಪಾದಧೂಳಿಯ ದರ್ಶನ ಬಯಸುವ ಅನುಭಾವಿಯ ಅನುಭಾವ ಎಂಥದು? ಇದನ್ನು ನಾವು ಅರಿಯಬೇಕಾದರೆ ವೇದಕಾಲದ ಋಷಿಗಳ ಉದ್ಗಾರವನ್ನು ಗಮನಿಸಬೇಕು:

ಇದಂ ವಿಷ್ಣುರ್ವಿಚಕ್ರಮೇ
ತ್ರೇಧಾ ನಿದಧೇ ಪದಮ್ ।
ಸಮೂಳಮಸ್ಯ ಪಾಂಸುರೇ ॥ (ಋ.1.22.17)

(ಶ್ರೀ ವಿಷ್ಣುವು ಮೂರು ಹೆಜ್ಜೆಗಳನ್ನಿಟ್ಟು
ಇಟ್ಟು ಇದನ್ನೆಲ್ಲ ವ್ಯಾಪಿಸಿದ
ಇಡಿಯ ಬ್ರಹ್ಮಾಂಡ ಅವನ ಪಾದಧೂಳಿಯಲ್ಲಿ ಅಡಗಿದೆ)

ಮೂರು ಹೆಜ್ಜೆಗಳನ್ನಿಟ್ಟ: ಮೂರು ಲೋಕಗಳನ್ನು ವ್ಯಾಪಿಸಿ ಸರ್ವಗತನಾದ. ಮೂರು ಹೆಜ್ಜೆಗಳನ್ನಿಟ್ಟ: ಮೂರು ಕಾಲಗಳನ್ನು ವ್ಯಾಪಿಸಿ ನಿತ್ಯತತ್ವವಾದ. ಮೂರು ಹೆಜ್ಜೆಗಳನ್ನಿಟ್ಟ: ಮೂರು ವೇದಗಳನ್ನು ವ್ಯಾಪಿಸಿ ಸರ್ವವೇದ ಪ್ರತಿಪಾದ್ಯನಾದ.

ಹೀಗೆ ಭಗವಂತನ ಭಾವಚಿತ್ರವನ್ನು ನೀಡುವ ಈ ವೇದಮಂತ್ರ ಮೊದಲ ಬಾರಿಗೆ ಭಗವಂತನ ಧೂಳಡಗಿದ (ಪಾಂಸುರ = ಪಾಂಸುಲ) ಪಾದವನ್ನು ಉಲ್ಲೇಖಿಸುತ್ತದೆ. ಇವೇ ಅನಂತರದ ಅನುಭಾವಿಗಳಿಗೆಲ್ಲ ಮೂಲಸ್ಫೂರ್ತಿಯಾಯಿತು.

ಈ ಪಾಂಸು (ಧೂಳಿ) ಯಾವುದು? ಈ ಮಂತ್ರದ್ರಷ್ಟಾರನಾದ ಋಷಿ ಯಾವ ಪಾಂಸುವನ್ನು ಭಗವಂತನ ಕಾಲಲ್ಲಿ ಕಂಡ?

ಈ ಅಖಿಲಾಂಡ ಕೋಟಿ ಬ್ರಹ್ಮಾಂಡವೇ ಭಗವಂತನ ಪಾದದಲ್ಲಿ ನೆಲಸಿದ ಒಂದು ಪಾಂಸು; ಒಂದು ಧೂಳೀಕಣ. ಈ ಮಹತ್ತಾದ ಬ್ರಹ್ಮಾಂಡ, ಲಕ್ಷೋಪಲಕ್ಷ ಜ್ಯೋತಿರ್ವರ್ಷಗಳ ದೂರದ ಅಂತರದಲ್ಲಿ ಹೆಣೆದುಕೊಂಡಿರುವ ಈ ಅಪಾರ ವಿಶ್ವಗೋಲ ಕೂಡ ಅವನ ಮುಂದೆ ಒಂದು ಧೂಳಿನ ಕಣವಾಯಿತು. ಏಕೆಂದರೆ ಅವನು ಮಹತೋ ಮಹಿಯಾನ್. ಅವನ ಮುಂದೆ ಮಹತ್ತರವಾದ ಈ ವಿಶ್ವವಿಸ್ತಾರವೂ ಒಂದು ಅಣುಕಣ ಕೂಡ ಅಲ್ಲ.

ಹೀಗೆ ವಿಶ್ವದ ಕುಬ್ಜತೆಯ ದರ್ಶನ ಮತ್ತು ಇದಕ್ಕೆಲ್ಲ ಆಸರೆಯಾದ ಭಗವಂತನ ಮಹತೋ ಮಹೀಯವಾದ ಭೂಮರೂಪದ ದರ್ಶನವೆ ನಿಜವಾದ ಧೂಳಿದರ್ಶನ.

ಈ ಮಾತನ್ನು ಆಚಾರ್ಯಮಧ್ವರು ತನ್ನ ಋಗ್‌ಭಾಷ್ಯದಲ್ಲಿ ತುಂಬ ಹೃದಯಂಗಮವಾಗಿ ನಿರೂಪಿಸಿದ್ದಾರೆ:

> ರಮಂತಿ ಪಾಂಸವೋ ಯತ್ರ
> ಪಾಂಸುರಂ ಪದಮೀರಿತಮ್ ।
> ಸಮೂಢಂ ತತ್ರ ವಿಶ್ವಂ ಹಿ
> ಪಾಂಸುವಜ್ಜಗತೀಪತೇಃ ॥

(ಈ ಚರಾಚರಾತ್ಮಕ ವಿಶ್ವವೆಲ್ಲ ಪಾಂಸುಕಣದಂತೆ ಆ ವಿಶ್ವನಾಯಕನಾದ ಭಗವಂತನ ಪಾದವನ್ನು ಆಶ್ರಯಿಸಿಕೊಂಡಿದೆ ಆ ವಿಶ್ವಕ್ಕೆ ಇದೊಂದು ಸಂತಸದ, ಹೆಮ್ಮೆಯ ಸಂಗತಿ ಏಕೆಂದರೆ ಭಗವಂತನ ಪಾದದ ಕೃಪಾಚ್ಛತ್ರದ ಅಡಿಯಲಿ ಪಾಂಸುಗಳು ರಮಿಸುತ್ತವೆ ವಿರಮಿಸುತ್ತವೆ.)

ಹೀಗೆ 'ಧೂಳಿದರ್ಶನ'ದಲ್ಲಿ ಇಡಿಯ ಬ್ರಹ್ಮಾಂಡವನ್ನು ಒಳಗೊಳ್ಳುವ ಅರ್ಥದ ಬ್ರಹ್ಮಾಂಡವೆ ಅಡಗಿದೆ.

ನಾವು ಅವನ ಪಾದಧೂಳಿ ಎಂಬ ಎಚ್ಚರ ಮೂಡಿದಾಗ ಈ ದಾಸತ್ವದ ದೀಕ್ಷೆ ದೃಢವಾಗುತ್ತದೆ. ಅದಕ್ಕಾಗಿ ದಾಸರು ನುಡಿದರು: "ದಾಸರೆಲ್ಲರು ಬಂದು ಧೂಳಿ ದರ್ಶನಗೊಂಡು".

ದಾಸರೆಂದರೆ ಬರಿಯ ಕೀರ್ತನಕಾರರಾದ ಮಂದಿಯಷ್ಟೆ ಅಲ್ಲ. ಬ್ರಹ್ಮಾದಿ ಸಕಲದೇವತೆಗಳೂ ಈ "ದಾಸವರ್ಗ"ದಲ್ಲಿ ಸೇರಿದರು. ಅದಕ್ಕೆಂದೆ 'ದಾಸರೆಲ್ಲರು' ಎಂದರು. ಬ್ರಹ್ಮಾದಿಗಳು ಕೂಡ ಭಗವಂತನ ಚರಣಧೂಳಿಯ ದರ್ಶನಕೊಂಡು ಧನ್ಯರಾದ ಮಹಾದಾಸರು. ಈ ಮಹಾಮಹಿಮರು ಕೂಡ ಅವನ ದಾಸರೆಂದೆ ಅವನಿಗೆ ಮಹಿದಾಸ ಎಂದು ಹೆಸರು:

ಯತಪಾದಪಂಕಜರಜಃ ಶಿರಸಾ ಬಿಭರ್ತಿ
ಶ್ರೀರಬ್ಜಜಶ್ಚ ಗಿರಿಶಃ ಸಹ ಲೋಕಪಾಲೈಃ ।

(ಲಕ್ಷ್ಮೀದೇವಿ, ಬ್ರಹ್ಮ, ರುದ್ರ, ಲೋಕಪಾಲಕರಾದ ಇಂದ್ರಾದಿಗಳು ಇವರೆಲ್ಲ ಭಗವಂತನ ಪಾದಪದ್ಮದ ರಜಸ್ಸನ್ನು ತಲೆಯಲ್ಲಿ ಹೊತ್ತು ನಿಂತರು.)

ತ್ರಿವಿಕ್ರಮಪಂಡಿತರು ಧೂಳಿಯ ಕಲ್ಪನೆಗೆ ಹೊಸ ತಿರುವು ನೀಡಿ ಇದನ್ನೆ ಹಾಡಿದರು ತನ್ನ ವಿಷ್ಣುಸ್ತುತಿಯಲ್ಲಿ:

ವಿಷ್ಣೋರಸ್ಮಾನ್ ಪದಾಬ್ಜೇ ಕೃತನಿವಸತಯಃ
ಪಾಂಸವಃ ಪಾವಯಂತು
ಶ್ರೀಮಂತಃ ಶ್ರೀಕಬರ್ಯಾಂ ಕುಸುಮಸುನಿಚಯೇ
ಪೂರಯಂತಃ ಪರಾಗಾನ್ ।
ಲಾಲಾಟ್ಯಾಂ ಲೇಖಿಕಾಯಾಮಜನಿಪವನಯೋ-
ರಕ್ಷತಾನ್ ನಿಕ್ಷಿಪಂತಃ
ಪಾನಃಪುನ್ಯೇನ ಶುದ್ಧಿಂ ಹರಶಿರಸಿ ಧೃತಾಂ
ಜಾಹ್ನವೀಂ ಜೋಷಯಂತಃ ॥

(ಶ್ರೀ ವಿಷ್ಣುವಿನ ಪಾದಪದ್ಮದಲ್ಲಿ ನೆಲಸಿರುವ ಪಾಂಸುಗಳು ನಮ್ಮನ್ನು ಪಾವನಗೊಳಿಸಲಿ. ಆ ಚೆಲುಗೊಂಡ ಪಾಂಸುಗಳೆ ತಾಯಿ ಲಕ್ಷ್ಮೀದೇವಿ ಮುಡಿದ ಹೂಗೊಂಚಲಿನಲ್ಲಿ ಪರಾಗವನ್ನು ತುಂಬುತ್ತವೆ. ಬ್ರಹ್ಮ–ವಾಯುಗಳ ಹಣೆಯ ಗೆರೆಯಲ್ಲಿ ಅವು ಅಕ್ಷತೆಯಂತೆ ಶೋಭಿಸುತ್ತವೆ. ಹರನು ಶಿರದಲ್ಲಿ ಹೊತ್ತ ಗಂಗೆಯಲ್ಲಿ ಬೆರತ ಈ ಪಾಂಸುಗಳು ಗಂಗಾಜಲವನ್ನು ಇನ್ನಷ್ಟು ಪವಿತ್ರಗೊಳಿಸುತ್ತವೆ).

ಅನುಭಾವದ ಜತೆಗೆ ಅಲಂಕಾರಿಕತೆಯೂ ಮೇಳೈಸಿದ ಈ ಪಾದಧೂಳಿಯ ಕಲ್ಪನೆಯ ಬಗೆಗೆ ಪುರಾಣಗಳು ಹೊಸ ಬಗೆಯ ಬೆಳಕನ್ನು ನೀಡುತ್ತವೆ :

ಯತ್ಪಾದಪಂಕಜಪರಾಗವಿಲಾಸಭಕ್ತ್ಯಾ
ಕರ್ಮಾಶಯಂ ಗ್ರಥಿತಮುದ್ಗ್ರಥಯಂತಿ ಸಂತಃ ||

(ಭಾಗ 4.21.42.)

(ಅವನ ಪಾದ ಒಂದು ತಾವರೆ ಹೂವು. ಪಾದದ ಧೂಳಿಯೆ ಹೂವಿನ ಪರಾಗ. ಈ ಪಾದಧೂಳಿಯನ್ನು ಭಕ್ತಿಯಿಂದ ನಂಬಿದ ಸಜ್ಜನರು ತಮ್ಮನ್ನು ಬಿಗಿದಿಟ್ಟ ಕರ್ಮದ ಬಂಧನದಿಂದ ಕಳಚಿಕೊಳ್ಳುತ್ತಾರೆ.)

ನ ನಾಕಪೃಷ್ಠಂ ನಚ ಸಾರ್ವಭೌಮಂ
ನ ಪಾರಮೇಷ್ಠ್ಯಂ ನ ರಸಾಧಿಪತ್ಯಮ್ ।
ನ ಯೋಗಸಿದ್ಧೀರಪುನರ್ಭವಂ ವಾ
ವಾಂಛಂತಿ ಯತ್ಪಾದರಜಃ ಪ್ರಪನ್ನಾಃ ||

(ಭಾಗ. 10.15.37.)

(ಭಗವಂತನ ಪಾದಧೂಳಿಯನ್ನು ಆಶ್ರಯಿಸಿದವರು ಅರ್ಥಾತ್ ಅವನ ಪಾದ ದಡಿಯಲ್ಲಿ ಆಸರೆ ಪಡೆದವರು – ಸ್ವರ್ಗವನ್ನು ಬಯಸುವುದಿಲ್ಲ ; ಚಕ್ರವರ್ತಿ ಪದ ವನ್ನು ಬಯಸುವುದಿಲ್ಲ. ಅವರಿಗೆ ಭೂಮಂಡಲದ ಒಡೆತನವೂ ಬೇಡ ; ಬ್ರಹ್ಮಪದವಿಯೆ ದೊರಕಿದರೂ ಬೇಡ. ಅಣಿಮಾದಿಯೋಗ ಸಿದ್ಧಿಗಳೂ ಬೇಡ. ಪುನರ್ಜನ್ಮವೆ ಇಲ್ಲದ ಮೋಕ್ಷವನ್ನು ಕೂಡ ಅವರು ಬಯಸರು. ಈ ಪಾದಧೂಳಿಯ ಆಸರೆಯ ಆನಂದದ ಮುಂದೆ ಇವೆಲ್ಲವೂ ಸಣ್ಣ ವಸ್ತುಗಳು.)

ಶಿಲೆಯಾದ ಅಹಲ್ಯೆಗೆ ಪುನರ್ಜನ್ಮ ನೀಡಿದ ಈ ಧೂಳಿಯ ದರ್ಶನವೊಂದಿದ್ದರೆ ಸಾಲದೆ ? ಬಾಳಿನಲ್ಲಿ ಅದಕ್ಕಿಂತ ಮಿಗಿಲಾದ ಭಾಗ್ಯವೇನುಂಟು ಎಂದು ಕೇಳುತ್ತಾರೆ ದಾಸರು : ಧೂಳಿದರ್ಶನಕೊಂಡು.

ತುಂಬ ಸ್ವಾರಸ್ಯವಾದ ಇನ್ನೊಂದು ಮಾತನ್ನು ಇಲ್ಲಿ ಹೇಳಬೇಕು. ಶ್ರೀಕೃಷ್ಣ ಪ್ರಿಯ ಶಿಷ್ಯನಾದ ಉದ್ಧವನಿಗೆ ಅರುಹಿದ ರಹಸ್ಯ ಇದು :

ನಿರಪೇಕ್ಷಂ ಮುನಿಂ ಶಾಂತಂ
ನಿರ್ವೈರಂ ಪ್ರಿಯದರ್ಶನಮ್ ।
ಅನುವ್ರಜಾಮ್ಯಹಂ ನಿತ್ಯಂ
ಪೂಯೇಯೇತ್ಯಂಘ್ರಿರೇಣುಭಿಃ ||

(ಭಾಗ: 11. 14. 16.)

(ಏನನ್ನೂ ಬಯಸದ, ಯಾರನ್ನೂ ದ್ವೇಷಿಸದ, ಎಲ್ಲರಿಗೂ ಪ್ರಿಯನಾದ ಶಾಂತಸ್ವಭಾವದ ಮುನಿಯ ಬೆನ್ನ ಹಿಂದೆಯೆ ನಾನು ಸದಾ ಸಂಚರಿಸುತ್ತಿರುತ್ತೇನೆ ನನ್ನ ಪಾದಸ್ಪರ್ಶದಿಂದ ಪಾವನವಾದ ಈ ನೆಲದ ಧೂಳಿ ಗಾಳಿಗೆ ಹಾರಿ ಅವನ ಮೈಗೆ ತಾಗಿ ಅವನು ಪವಿತ್ರನಾಗಲಿ ಎಂದು ನನ್ನ ಬಯಕೆ.)

ಶ್ರೀಕೃಷ್ಣನೆ ಸ್ವತಃ ನುಡಿದ ಈ ಮಾತಿನಲ್ಲಿ ಧೂಳಿಯ ಬಗೆಗೆ ಹೊಸತೊಂದು ಆವಿಷ್ಕಾರ ಕಾಣುತ್ತೇವೆ. ಹೀಗೆ ಎಲ್ಲ ಬಗೆಯ ಆಧ್ಯಾತ್ಮಿಕ ಅನುಸಂಧಾನಗಳನ್ನೂ ಬಗೆಯಾಳದಲ್ಲಿ ತುಂಬಿಕೊಂಡು ಪುರಂದರದಾಸರು ಹಾಡಿದರು: "ದಾಸರೆಲ್ಲರು ಬಂದು ಧೂಳಿದರ್ಶನಕೊಂಡು".

ಎರಡನೆಯ ಸಾಲು ಭಗವಂತನಿಗೆ ತನ್ನನ್ನು ಅರ್ಪಿಸಿಕೊಳ್ಳುವ ದೈಹಿಕ ಸಿದ್ಧತೆಯನ್ನು ಹೇಳುತ್ತದೆ: "ಲೇಸಾಗಿ ತಾಳ ದಂಡಿಗೆಯ ಪಿಡಿದು".

ದಾಸತ್ವದ ಸಂಕೇತವಾಗಿ, ಹರಿನಾಮ ಕೀರ್ತನದ ಅಂಗವಾಗಿ, ಗಾನದ ಪರಿಕರವಾಗಿ ಕೈಯಲ್ಲಿ ತಾಳ, ಬಗಲಲ್ಲಿ ದಂಡಿಗೆ (ವೀಣೆ ಅಥವಾ ತಂಬೂರಿ) ತಾಳವಾದ್ಯ ಮತ್ತು ತತವಾದ್ಯ.

ಇದು ಮೇಲು ನೋಟದ ಅರ್ಥ. ಆದರೆ ಉಪನಿಷತ್ತಿನ ಹಿನ್ನಲೆಯಲ್ಲಿ ಈ ಮಾತಿಗೆ ಒಂದು ಅಪೂರ್ವವಾದ ಅರ್ಥವುಂಟು.

ಈ ದೇಹವೆ ಒಂದು ದಂಡಿಗೆ; ಒಂದು ದೈವೀವೀಣೆ. ದೇವರು ನಿರ್ಮಿಸಿದ ವೀಣೆ; ದೇವರ ಗುಣಗಾನಕ್ಕೆ ಮೀಸಲಾದ ವೀಣೆ. ಈ ವೀಣೆಗೆ ಕೈಯ ತಳವೆ ತಾಳವಾದ್ಯ.

ಸಾಮವೇದದಲ್ಲಿ ತಳವಕಾರ ಎಂಬ ಒಂದು ಶಾಖೆ ಉಂಟು. ಇವರು ಹಾಡುವಾಗ ಕೈಯ ತಳವನ್ನೆ ತಾಳವಾದ್ಯವಾಗಿ ಬಳಸುತ್ತಿದ್ದರು ಎಂದೆ ತಳವಾದ್ಯಕಾರರು ಎಂದು ಹೆಸರಾದರು. ತಳವಾದ್ಯಕಾರರೆ ತಳವಕಾರರಾದರು.

ಹೀಗೆ ಕೈತಟ್ಟಿನ ತಾಳ ತಟ್ಟಿ ದೇಹವೆಂಬ ದಂಡಿಗೆಯನ್ನು ನುಡಿಸಬೇಕು. ಇದರ ಬಗೆಗೆ ಐತರೇಯೋಪನಿಷತ್ತು ಹೀಗೆ ವಿವರಣೆಯನ್ನು ನೀಡುತ್ತದೆ:

> ಅಥ ಖಲ್ವಿಯಂ ದೈವೀವೀಣಾ ಭವತಿ
> ತದನುಕೃತಿರಸೌ ಮಾನುಷೀ ವೀಣಾ ಭವತಿ ।
> ಯಥಾಽಸ್ಯಾಃ ಶಿರ ಏವಮಮುಷ್ಯಾಃ ಶಿರಃ ।
> ಯಥಾಽಸ್ಯಾ ಉದರಮೇವಮಮುಷ್ಯಾ ಅಂಭಣಮ್ ।
> ಯಥಾಽಸ್ಯೈ ಜಿಹ್ವಾ–ಏವಮಮುಷ್ಯೈ ವಾದನಮ್ ।

ಯಥಾಽಸ್ಯಾಸ್ತಂತ್ರ್ಯಃ ಏವಮಮುಷ್ಯಾ ಅಂಗುಲಯಃ।
ಯಥಾಽಸ್ಯಾಃ ಸ್ವರಾ ಏವಮಮುಷ್ಯಾಃ ಸ್ವರಾಃ।

(ಐತ. 2. 8. 6.)

(ಈ ದೇಹವೊಂದು ದೈವೀವೀಣೆ. ದೇವರು ನಿರ್ಮಿಸಿದ ವೀಣೆ. ಮನುಷ್ಯರು ನಿರ್ಮಿಸಿದ ಮರದ ವೀಣೆ ಇದರದೇ ಅನುಕರಣೆ. ಈ ವೀಣೆಗೆ ತಲೆಯಿದ್ದಂತೆ ಅದಕ್ಕೆ ಮರದ ಬುರುಡೆ ಇದೆ. ಇದಕ್ಕೆ ಹೊಟ್ಟೆಯಿದ್ದಂತೆ ಅದಕ್ಕೆ ಕೆಳಗಿನ ಸೋರೆಬುರುಡೆ ಇದೆ. ಇದಕ್ಕೆ ನುಡಿಸುವ ನಾಲಿಗೆಯಿದ್ದರೆ ಅದಕ್ಕೆ ನುಡಿಸುವ ಬೆರಳಾಟ (ವಾದನ ದಂಡ). ಇದಕ್ಕೆ ಬೆರಳಿದ್ದಂತೆ ಅದಕ್ಕೆ ತಂತಿಗಳು. ಇದು ಸಪ್ತಸ್ವರಗಳನ್ನು ನುಡಿಸುವಂತೆ ಅದೂ ಸಪ್ತಸ್ವರಗಳನ್ನು ನುಡಿಸುತ್ತದೆ.)

ಹೀಗೆ ವೈದಿಕವಾದ ದೈವೀವಾದ್ಯಗಳನ್ನು – ಕೈಯೆಂಬ ತಾಳ, ಮೈಯೆಂಬ ವೀಣೆಯನ್ನು ಹಿಡಿದು ನಿಂತಿದ್ದಾರೆ ದಾಸರು. ಈ ತಾಳ ಭಗವಂತನಿಗಾಗಿ ತಟ್ಟಬೇಕು; ಈ ವೀಣೆ ಭಗವಂತನ ಗುಣವನ್ನು ಹಾಡಬೇಕು. ಅದೂ ಲೇಸಾಗಿ; ಲಯಬದ್ಧವಾಗಿ; ಶ್ರುತಿಬದ್ಧವಾಗಿ; ಗುರೂಪದೇಶಕ್ಕೆ ಅನುಗುಣವಾಗಿ ; ಶ್ರುತಿಪುರಾಣಗಳಿಗೆ ಸಮ್ಮತವಾಗಿ.

ಈ ದೇಹ ಭಗವಂತ ಕರುಣಿಸಿದ ವೀಣೆಯೆಂದೆ ಇದನ್ನು ಲೇಸಾಗಿ ಹಿಡಿದುಕೊಂಡಿದ್ದಾರೆ. ಒಪ್ಪವಾಗಿ, ಚೆನ್ನಾಗಿ ರಕ್ಷಿಸಿಕೊಂಡಿದ್ದಾರೆ. ಇಲ್ಲವಾದರೆ ವಿರಕ್ತರಾದ ಸಾಧು ಸಂತರಿಗೆ ಈ ದೇಹದ ಮಮತೆಯಾದರೂ ಏಕೆ ಬೇಕು ? ಇದು ದೇವರ ವೀಣೆ; ಇದರಿಂದ ದೇವರ ಗುಣಗಾನ ಮಾಡಬೇಕು; ಅದಕ್ಕೆಂದೆ ದೇವರು ಇದನ್ನು ನಮಗೆ ನೀಡಿದ್ದಾನೆ ಎನ್ನುವುದಕ್ಕಾಗಿ ಅವರು ದೇಹವನ್ನು ಪ್ರೀತಿಸುತ್ತಾರೆ: "ಶರೀರಮಾದ್ಯಂ ಖಲು ಧರ್ಮಸಾಧನಮ್".

ಹೀಗೆ ಕಾಯ ಭಗವಂತನ ಪಾದಧೂಳಿಯಿಂದ ಶುದ್ಧವಾಗಿದೆ; ವೀಣೆಯಂತೆ ಭಗವಂತನನ್ನು ಹಾಡಲು ಸಿದ್ಧವಾಗಿದೆ. ಮುಂದಿನ ಮಾತು ಮನಸ್ಸಿನ ಶುದ್ಧಿಗೆ, ಮನಸ್ಸಿನ ಸಿದ್ಧತೆಗೆ ಸಂಬಂಧಪಟ್ಟದ್ದು: "ಕೇಶವನೆ ನಿಮ್ಮ ಸಿರಿನಾಮವನು ಸ್ಮರಿಸುತಲಿ".

ಇಲ್ಲಿ ಕೇಶವನೆ ಎಂಬ ಒಂದು ಸಂಬೋಧನೆ ಉಪಲಕ್ಷಣವಾಗಿ ಬಂದು ಅವನ ಅನಂತರೂಪಗಳ ಅನಂತ ನಾಮಗಳನ್ನು ಉದ್ದೇಶಿಸುತ್ತದೆ. ಅದಕ್ಕೆಂದೆ, ಅನಂತ ರೂಪಗಳ ವಿವಕ್ಷೆಯಿಂದ 'ನಿಮ್ಮ' ಎಂಬ ಬಹುವಚನ ಸಾರ್ಥಕವಾಗಿ ಬಂದಿದೆ.

ಭಗವಂತನ ಅನಂತ ಸಿರಿನಾಮಗಳ ಸ್ಮರಣೆಯಿಂದ ಮನಸ್ಸು ಸದಾ ಅವನಲ್ಲಿ ನೆಲಸಿರಲಿ. ಅದರಿಂದ ಅಂತರಂಗ ಪಾವನವಾಗಲಿ.

ಭೌತಿಕವಾದ ಎಲ್ಲ ಸಂಪತ್ತನ್ನು ತೊರೆದು, ರತ್ನಪಡಿಯನ್ನು ಕಸದ ಬುಟ್ಟಿಗೆ ಚೆಲ್ಲಿ ಹರಿನಾಮದ ಸಿರಿಯನ್ನು ಗಳಿಸಿದ ದಾಸರು ಅದನ್ನು 'ಸಿರಿನಾಮ' ಎಂದು ಕರೆದದ್ದು ತುಂಬ ಸಾರ್ಥಕ; ಸಾಕೂತ. ಸಾಧಕನಿಗೆ ನಾಮಸ್ಮರಣೆಗಿಂತ ಮಿಗಿಲಾದ ಭಾಗ್ಯ – ಸಂಪತ್ತು ಬೇರೇನಿದೆ ?

ಅದಕ್ಕೆಂದೆ ಅವರು ಬೆರೆಡೆ ಹೀಗೆಂದು ಹಾಡಿದ್ದುಂಟು :

ನೀನ್ಯಾಕೋ ನಿನ್ನ ಹಂಗ್ಯಾಕೊ
ನಿನ್ನ ನಾಮದ ಬಲವೊಂದಿದ್ದರೆ ಸಾಕು ।

ಅವರಿಗೆ ಈಗ ರತ್ನಪಡಿ ವ್ಯಾಪಾರದ ಬದಲು ನಾಮದ ವ್ಯಾಪಾರ :

ಶ್ರೀಲೋಲನ ಕಥೆ ದಿವ್ಯನಾಮಂಗಳ
ಶೀಲಮನದಿ ಬರೆದು ಹರಿಗೆ ಒಪ್ಪಿಸುವಂಥ
ವ್ಯಾಪಾರ ನಮಗಾಯಿತು

ಅದೇ ಅವರ ಮುತ್ತು – ರತ್ನ ಎಲ್ಲ :

ಮುತ್ತು ಕೊಳ್ಳಿರೋ ಜನರು
ಮುತ್ತು ಕೊಳ್ಳಿರೋ
ಪೊಡವಿಗೆಲ್ಲ ಪುರಂದರ ವಿಠಲ
ಒಡೆಯನೆಂಬ ದಿವ್ಯಮುತ್ತು

ಹರಿಯ ನಾಮಗಳೆ ನಿಜವಾದ ಸಿರಿ. ಅವುಗಳಿಂದ ವಾಚ್ಯನಾದ ಅವನೇ ನಿಜವಾದ ಸಿರಿಯ ವಾಸ – ಶ್ರೀನಿವಾಸ.

"ಕೇಶವನೆ, ನಿಮ್ಮ ನಾಮವನು ಸ್ಮರಿಸುತಲಿ" ಎನ್ನುವ ಸೊಲ್ಲನ್ನು ಹಾಡುವಾಗ ಪ್ರಾಯಃದಾಸರ ಮನದಲ್ಲಿ "ಕಲೌ ಸಂಕೀರ್ತ್ಯ ಕೇಶವಮ್" ಎಂಬ ಪುರಾಣವಚನ ಸುಳಿದಿರಬೇಕು. ಅದಕ್ಕೆಂದೆ ಅವರು ಕೇಶವನೆ; ಎಂದೆ ಸಂಬೋಧಿಸಿರಬೇಕು.

ಇಷ್ಟೆ ಅಲ್ಲ; ದಾಸರು ಪ್ರಾತಃಕಾಲದಲ್ಲಿ ಭಗವಂತನನ್ನು ಹಾಡುತ್ತಿದ್ದಾರೆ. ಪ್ರಾತಃಕಾಲದಲ್ಲಿ ಸ್ಮರಿಸಬೇಕಾದ ಭಗವಂತನ ರೂಪ 'ಕೇಶವ' ಎಂದು ಶಾಸ್ತ್ರಕಾರರು ಹೇಳುತ್ತಾರೆ:

ಪ್ರಾತಃಕಾಲೇ ಕೇಶವಂತು
ಗೋವಿಂದಂ ಸಂಗಮೇ ತಥಾ ।
ಮಧ್ಯಾಹ್ನಾಧಿಪತಿಂ ವಿಷ್ಣುಂ
ಮಧುಘ್ನಮಪರಾಹ್ಣಕೇ ।

ಸಾಯಂಕಾಲೇ ನೃಸಿಂಹಂತು
ಹೃಷೀಕೇಶಂ ಪ್ರದೋಷಕೇ ||

(ಪ್ರಭಾತದಲ್ಲಿ ಕೇಶವ, ಪೂರ್ವಾಹ್ಣದಲ್ಲಿ ಗೋವಿಂದ, ಮಧ್ಯಾಹ್ನದ ಒಡೆಯ ವಿಷ್ಣು, ಅಪರಾಹ್ಣದಲ್ಲಿ ಮಧುಸೂಧನ, ಸಂಜೆ ನರಸಿಂಹ, ರಾತ್ರಿಯಲ್ಲಿ ಹೃಷೀಕೇಶ.)
ಭಾಗವತದಲ್ಲೂ ಈ ಮಾತು ಬಂದಿದೆ:

ಮಾಂ ಕೇಶವೋ ಗದಯಾ ಪ್ರಾತರವ್ಯಾತ್
ಗೋವಿಂದ ಆಂಸಗವಮಾತ್ತವೇಣುಃ ||

(ಭಾಗ. 6. 8. 20.)

ಹೀಗೆ ಯಾವ ಹೊತ್ತಿನಲ್ಲಿ ಯಾವ ರೂಪವನ್ನು ಸ್ಮರಿಸಬೇಕು ಎನ್ನುವ ಶಾಸ್ತ್ರ ಸಂಪ್ರದಾಯವನ್ನು ನಮಗೆ ತಿಳಿಹೇಳುವ ಕಾರುಣಿಕನಂತೆ, ಮಾರ್ಗದರ್ಶಕನಂತೆ ದಾಸರು 'ಕೇಶವನೆ' ಎಂದು ಸಂಬೋಧೀಯ ಸೊಲ್ಲನ್ನು ಮುಂದುವರಿಸುತ್ತಾರೆ.

ಕೇಶಿಯನ್ನು ಕೊಂದವ ಕೇಶವ; ಸುಂದರವಾದ ಕೇಶ ಉಳ್ಳವ ಕೇಶವ; ಬ್ರಹ್ಮ – ರುದ್ರರನ್ನೂ (ಕ = ಬ್ರಹ್ಮ; ಈಶ = ರುದ್ರ) ಸೃಷ್ಟಿ – ಸಂಹಾರಗಳ ಕರ್ತವ್ಯಕ್ಕೆ ಹಚ್ಚಿ ನಿಯಂತ್ರಿಸುವವ ಕೇಶವ. ಹಿಂದೆ, ಬ್ರಹ್ಮಾದಿಗಳೂ ಧೂಳಿದರ್ಶನ ಭಾಗ್ಯಕ್ಕಾಗಿ ಕಾದು ನಿಂತ ದಾಸರು ಎಂಬ ಮಾತು ಬಂದಿದೆ. ಅದಕ್ಕೆ ಪೂರಕವಾಗಿಯೂ ಇಲ್ಲಿ ಕೇಶವ ಎಂಬ ಪದ ಬಂದಿದೆ.

ಇವನು ಬ್ರಹ್ಮಾದಿಗಳಿಗು ನಿಯಾಮಕನೆಂದೆ ಕೇಶವ ಎನ್ನಿಸಿದ್ದಾನೆ. ಎಂದ ಮೇಲೆ ಈ ಸ್ವಾಮಿಯ ಸೇವೆಗಾಗಿ ಆ ದಾಸರು ಬಂದಿರುವುದು ಸಹಜವೆ ತಾನೆ ?

ಕೇಶ ಎಂದರೆ ಕಿರಣವೂ ಹೌದು. ಸೂರ್ಯನಲ್ಲಿದ್ದು ಕಿರಣಗಳ ಮೂಲಕ ಬೆಳಕು ಚೆಲ್ಲುವ ಸೂರ್ಯನಾರಾಯಣನೆ ಕೇಶವ. ಹೀಗೆ ಎಲ್ಲ ಬಗೆಯಿಂದಲು ಔಚಿತ್ಯಪೂರ್ಣವಾದ ಕೇಶವನಾಮದಿಂದಲೆ ದಾಸರು ನಾಮಸ್ಮರಣೆಯನ್ನು ಆರಂಭಿಸುತ್ತಾರೆ; "ಕೇಶವನೆ, ನಿಮ್ಮ ಸಿರಿನಾಮವನು ಸ್ಮರಿಸುತಲಿ".

ಹೀಗೆ ಅಂತರಂಗ – ಬಹಿರಂಗ ಶುದ್ಧಿಯಾದಾಗ ಮಾತು ಹರಟೆಯಲ್ಲಿ ರುಚಿ ಕಾಣುವುದಿಲ್ಲ. ಭಗವಂತನ ಗುಣಗಳನ್ನೆ ಅದು ಹಾಡಬಯಸುತ್ತದೆ. ಹೀಗೆ ಸಾಧಕ ಕಾಯ – ಮನಸ್ಸು – ವಾಕ್ಕುಗಳೆಂಬ ತ್ರಿಕರಣಗಳ ಮೂಲಕ ತನ್ನನ್ನು ಭಗವಂತನಿಗೆ ಅರ್ಪಿಸಿಕೊಳ್ಳುತ್ತಾನೆ: "ವಾಸುದೇವನೆ, ಉದಯದಲಿ ಪಾಡುತಿಹರು"

ರಾತ್ರಿಯೆ ಅಜ್ಞಾನ. ಹಗಲೆಂದರೆ ಜ್ಞಾನಸೂರ್ಯ. ಉದಯವೆಂದರೆ ಜ್ಞಾನೋದಯ. ಇಂಥ "ಉದಯದಲಿ ಪಾಡುತಿಹರು". ಜ್ಞಾನೋದಯವಾದಾಗ

ಮಾತೆಲ್ಲ ಭಗವಂತನ ಸ್ತೋತ್ರವಾಗುತ್ತದೆ; ಹಾಡಿದ್ದೆಲ್ಲ ಭಗವಂತನ ಹಾಡಾಗುತ್ತದೆ: "ಸ್ತುತಿಸ್ತು ವಾಗಿಂದ್ರಿಯವೃತ್ತಿರಸ್ತು".

"ವಾಸುದೇವನೆ" ಎಂಬ ಸಂಬೋಧನೆಯಲ್ಲು ಒಂದು ವಿಶಿಷ್ಟ ಉದ್ದೇಶವಿದೆ; ಅಪರೋಕ್ಷ ಜ್ಞಾನದ ಉದಯವಾಗಿದೆ. ಮುಕ್ತಿಯನ್ನು ಕರುಣಿಸುವ ವಾಸುದೇವ ನಾಮಕವಾದ ವಿಶಿಷ್ಟರೂಪದ ಸ್ಮರಣೆ ಇಂಥ ಸ್ಥಿತಿಯಲ್ಲಿ ವಿಹಿತವಾಗಿದೆ:

ತತೋऽನಿರುದ್ಧಂ ದೇವೇಶಂ
ಪ್ರದ್ಯುಮ್ನಂ ಚ ತತಃ ಪರಮ್ ।
ತತಃ ಸಂಕರ್ಷಣಂ ದೇವಂ
ವಾಸುದೇವಂ ಪರಾತ್ ಪರಮ್ ॥

ವಾಸುದೇವಾತ್ ಪರಂ ನಾಸ್ತಿ
ಇತಿ ವೇದಾಂತ ನಿಶ್ಚಯಃ ।
ವಾಸುದೇವಂ ಪ್ರವಿಷ್ಟಾನಾಂ
ಪುನರಾವರ್ತನಂ ಕುತಃ ॥

(ಕೃಷ್ಣಾಮೃತ ಮಹಾರ್ಣವ)

(ಸಂಸಾರದಶೆಯ ಜಾಗ್ರತ್ – ಸ್ವಪ್ನ – ಸುಷುಪ್ತಿ ಮತ್ತು ಸೃಷ್ಟಿ – ಸ್ಥಿತಿ – ಸಂಹಾರಗಳೆಂಬ ಮೂರು ಅವಸ್ಥೆಗಳನ್ನು ನಿಯಂತ್ರಿಸುವ ಭಗವಂತನ ಮೂರು ರೂಪಗಳು ಕ್ರಮವಾಗಿ ಅನಿರುದ; ಪ್ರದ್ಯುಮ್ನ ಮತ್ತು ಸಂಕರ್ಷಣ. ಕೊನೆಯದಾದ ತುರೀಯ ರೂಪ ಮೋಕ್ಷಪ್ರದವಾದ ವಾಸುದೇವರೂಪ. ಕ್ರಮವಾಗಿ ಮೊದಲ ಮೂರು ರೂಪಗಳನ್ನು ಉಪಾಸನೆಯಿಂದ ಸಾಕ್ಷಾತ್‌ಕರಿಸಿ ಕೊನೆಯದಾಗಿ ವಾಸುದೇವನನ್ನು ಸೇರುತ್ತಾನೆ. ಇದು ಉಪಾಸನೆಯಲ್ಲಿ ನಿಲುಕುವ ಕೊನೆಯ ರೂಪ. ಇದರಾಚೆಗೆ ಬೇರೆ ಉಪಾಸನೆಯಿಲ್ಲ. ಇದನ್ನು ಪಡೆದವರಿಗೆ ಮತ್ತೆ ಸಂಸಾರಕ್ಕೆ ಮರಳುವ ಭಯವೂ ಇಲ್ಲ.)

ಈ ಪ್ರಮಾಣವಚನದ ಹಿನ್ನೆಲೆಯಲ್ಲಿ ಗಮನಿಸಿದಾಗ, ಅಪರೋಕ್ಷಜ್ಞಾನದ ಉದಯದಲ್ಲಿ, ಮೋಕ್ಷದ ದಾರಿಯಲ್ಲಿ ನಿಂತ ಭಕ್ತ, 'ವಾಸುದೇವನನ್ನು ಪಾಡಿರುವುದು' ಎಂಥ ಔಚಿತ್ಯಪೂರ್ಣ ಎನ್ನುವುದು ವೇದ್ಯವಾಗುತ್ತದೆ.

'ವಾಸು' ಅಂದರೆ ತನ್ನನ್ನು ಮುಚ್ಚಿಕೊಂಡವನು (ವಸ ಆಚ್ಛಾದನೇ) 'ದೇವ' ಎಂದರೆ ಬೆಳಕಿನಲ್ಲಿ ಬೆಳಕಾಗಿ ಬಿಚ್ಚಿಕೊಂಡವನು (ದಿವು ದ್ಯುತೌ). ಹೀಗೆ ಸಂಸಾರದಲ್ಲಿ ತನ್ನನ್ನು ಮುಚ್ಚಿಕೊಂಡು ಅಗೋಚರವಾಗಿ ಅಪರೋಕ್ಷ ಜ್ಞಾನಿಗೆ ಬೆಳಕಾಗಿ ಬಂದು ಕಾಣಿಸಿಕೊಳ್ಳುವವನು ವಾಸುದೇವ.

ಶುದ್ಧವಾದ ಸತ್ತ್ವಗುಣಕ್ಕೆ 'ವಸುದೇವ' ಎನ್ನುತ್ತಾರೆ: "ಸತ್ತ್ವಂ ವಿಶುದ್ಧಂ ವಸುದೇವಸಂಜ್ಞಿತವಮ್". ಸತ್ತ್ವಪ್ರಚುರವಾದ ಮನಸ್ಸಿನಲ್ಲಿ ಗೋಚರವಾದ ರೂಪ ವಾಸುದೇವ.

ಇಲ್ಲಿ ಇನ್ನೂ ಒಂದು ರಹಸ್ಯ ಅಡಗಿದಂತಿದೆ; ಕೇಶವಾದಿ ರೂಪಗಳು ಹನ್ನೆರಡು; ಇದೇ ದ್ವಾದಶ ವ್ಯೂಹ. (ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ ಮತ್ತು ದಾಮೋದರ.) ವಾಸುದೇವಾದಿ ನಾಲ್ಕು ರೂಪಗಳು. ಇದೇ ಚತುರ್ವ್ಯೂಹ. (ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ) ಈ ಎರಡು ವ್ಯೂಹಗಳನ್ನು ಮನದಲ್ಲಿಟ್ಟು ದಾಸರು ಒಮ್ಮೆ ಕೇಶವ ಎಂದು ಕರೆದರು; ಇನ್ನೊಮ್ಮೆ ವಾಸುದೇವ ಎಂದು ಕರೆದರು. ವ್ಯೂಹದ ಮೊದಲನೆಯ ಹೆಸರು ಇಡಿಯ ವ್ಯೂಹವನ್ನೆ ಲಕ್ಷಿಸುತ್ತದೆ.

ಹೀಗೆ, ನಡುವಿನಲ್ಲಿ ಲಕ್ಷ್ಮೀರಮಣನಾದ ನಾರಾಯಣ. ಸುತ್ತ ವೃತ್ತಾಕಾರವಾಗಿ ಈ ಎರಡು ವ್ಯೂಹಗಳ ಒಟ್ಟು ಹದಿನಾರು ರೂಪಗಳು. ಇದೊಂದು ಉಪಾಸನೆಯ ಪದ್ಧತಿ. ಭಾಗವತದಲ್ಲಿ ಈ ಮಾತು ಬಂದಿದೆ ;

ಆತ್ಮತುಲ್ಯೈಃ ಷೋಡಶಭಿಃ
ವಿನಾ ಶ್ರೀವತ್ಸಕೌಸ್ತುಭೌ ।
ಪರ್ಯುಪಾಸಿತಮುನ್ನಿದ್ರ-
ಶಾರದಾಂಬುರುಹೇಕ್ಷಣಮ್ ॥

(ಭಾಗ 6. 9 29)

(ಶ್ರೀವತ್ಸ ಎಂದರೆ ಶ್ರೀತತ್ವ – ಪ್ರಕೃತಿ. ಕೌಸುಭ ಎಂದರೆ ಅದರ ಅಭಿಮಾನಿಯಾದ ಬ್ರಹ್ಮ – ಪುರುಷ. ಹೀಗೆ ಪ್ರಕೃತಿ ಪುರುಷರಿಂದ ಕ್ಷರಾಕ್ಷರಗಳಿಂದ ಅತೀತವಾಗಿ, ತನಗೆ ತಾನು ಮಾತ್ರವೆ ಸಾಟಿಯಾಗಿರುವ ಹದಿನಾರು ರೂಪಗಳಿಂದ ಸುತ್ತುವರಿದ, ತಾವರೆಗಣ್ಣಿನ ಚೆಲುವನಾದ ಭಗವಂತ ಆತ್ಮಕ್ರೀಡನಾಗಿ ವಿಹರಿಸುತ್ತಾನೆ.)

ಇದನ್ನು ವೈಷ್ಣವ ತಂತ್ರಸಾರ ಹೀಗೆ ವಿವರಿಸುತ್ತದೆ :

ಅಪುಂಪ್ರಕೃತ್ಯಧೀನತ್ವಾತ್
ವಾಸುದೇವಾದಿಕಾ ಹರೇಃ ।
ತುಲ್ಯಾಸ್ತು ಕೇಶವಾದ್ಯಾಶ್ಚ
ನಚ ಭಿನ್ನಾಃ ಕಥಂಚನ ॥

ಆತ್ಮೈವ ಸಪ್ತದಶಧಾ
ಸ್ವಯಂ ಭೂತ್ವಾ ಜನಾರ್ದನಃ |
ಮಧ್ಯಸ್ಥಾವೃತಿರೂಪೇಣ
ಕ್ರೀಡತೇ ಪುರುಷೋತ್ತಮಃ ||

(ಮಧ್ಯದಲ್ಲಿ ನಾರಾಯಣ, ಸುತ್ತ ಕೇಶವಾದಿ ಮತ್ತು ವಾಸುದೇವಾದಿ ಹದಿನಾರು ರೂಪಗಳು. ಹೀಗೆ ಒಬ್ಬನೆ ಆದ ಭಗವಂತ ತನ್ನದೇ ಹದಿನೇಳು ರೂಪ ಗಳನ್ನು ತೊಟ್ಟು ಕ್ರೀಡಿಸುತ್ತಾನೆ. ಇದೊಂದು ಬಗೆಯ ಭಗವಂತನ ಲೀಲೆ. ಈ ರೂಪಗಳಲ್ಲಿ ಯಾವ ಭೇದವೂ ಇಲ್ಲ; ಯಾವ ತಾರತಮ್ಯವೂ ಇಲ್ಲ. ಎಲ್ಲವೂ ಪ್ರಕೃತಿ – ಪುರುಷರಿಂದ ಅತೀತವಾಗಿ ನಿಂತ ಪರತತ್ವಗಳು.)

ಸೊಲ್ಲಿನ ಪ್ರಾರಂಭದಲ್ಲಿ 'ನಾರಾಯಣ' ಎಂದು ಕರೆದ ದಾಸರು ಅನಂತರ 'ಕೇಶವನೆ' ಎಂದು, 'ವಾಸುದೇವನೆ' ಎಂದು ವ್ಯೂಹದ ಮೊದಲ ರೂಪಗಳನ್ನು ಉಲ್ಲೇಖ ಮಾಡಿ ಈ ಹದಿನೇಳು ರೂಪಗಳ ಉಪಾಸನೆಯ ರಹಸ್ಯವನ್ನು ನಿಗೂಢ ವಾಗಿಯೆ ನಮಗೆ ಸೂಚಿಸುವಂತಿದೆ.

ಹೀಗೆ ತ್ರಿಕರಣ ಶುದ್ಧಿಯ ಅನಂತರದ ಹಂತ ಮುಂದಿನ ಸೊಲ್ಲಿನಲ್ಲಿ ಬಂದಿದೆ:

ಕಾಸಿದ್ದ ಹಾಲುಗಳ ಕಾವಡಿಯ ತುಂಬಿಟ್ಟು
ಲೇಸಾಗಿ ಕೆನೆಮೊಸರು ಬೆಣ್ಣೆಯನೆ ಮೆದ್ದು |
ಶೇಷಶಯನನೆ, ಏಳು ಸಮುದ್ರಮಥನವ ಮಾಡು
ದೇಶ ಕೆಂಪಾಯಿತೇಳಯ್ಯ ಹರಿಯೆ ||

ಬದುಕಿನ ಹಂತದಲ್ಲಿ ಪಕ್ವಗೊಂಡ ಜೀವನಾನುಭವವೇ ಕಾಸಿದ್ದ ಹಾಲು. ಅದನ್ನು ತುಂಬಿದ್ದು ದೇಹವೆಂಬ ಕಾವಡಿಯಲ್ಲಿ. ಹಿಂದಿನ ಪದ್ಯದಲ್ಲಿ ಯಾವುದು ದಂಡಿಗೆಯಾಯಿತೋ ಅದೇ ಇಲ್ಲಿ ಕಾವಡಿಯಾಯಿತು. ಬಿದಿರುಕೋಲಿನ ಅಡ್ಡೆಗೆ ಹಾಲಿನ ಪಾತ್ರೆಗಳನ್ನು ಬಿಗಿದು ತಿರುಮಲೆಯ ಏರಿಗೆ ಏರುವುದು ಸಹಜವಾದ ಕ್ರಿಯೆ. ಹಾಗೆಯೇ ಜೀವನಾನುಭವದ ಬಿಸಿಹಾಲನ್ನು ಭಗವದನುಭವದ ಎತ್ತರಕ್ಕೆ ಈ ದೇಹ ವೆಂಬ ಕಾವಡಿಯ ಮೂಲಕವೇ ಸಾಗಿಸುವುದು ಅಧ್ಯಾತ್ಮದ ಕ್ರಿಯೆ. ಒಳಹೊರಗಿನ ಈ ಎರಡೂ ಕ್ರಿಯೆಗಳನ್ನು ಈ ಸಾಲು ಜೊತೆಜೊತೆಯಾಗಿಯೇ ಹೇಳುತ್ತದೆ.

ಇಲ್ಲಿ 'ತುಂಬಿಟ್ಟು' ಎನ್ನುವುದು ಒಂದು ದೃಷ್ಟಿಯಿಂದ ಕ್ರಿಯಾಪದದ ಅನ್ವಯ ವಿಲ್ಲದೆ ಅರ್ಥವಿರಾಮದಂತೆ ಅಪೂರ್ಣವಾಗಿ ಬಂದಿದೆ. 'ಕಾಯುತಿಹರು' ಎಂದು ಹಿಂದಿನ ಪದ್ಯದ ಜತೆಗೆ ಏಕಾನ್ವಯದಿಂದಲೋ ಇದನ್ನು ಕೂಡಿಸಿಕೊಳ್ಳ ಬೇಕಾಗುತ್ತದೆ.

ಇದಕ್ಕೆ ಕಾರಣ: ಈ ಬಾಹ್ಯ ಅರ್ಥದಲ್ಲಿ ದಾಸರಿಗೆ ಅಷ್ಟೊಂದು ಭರವಿಲ್ಲ. ಇದರ ಆಧ್ಯಾತ್ಮದ ಮುಖದಲ್ಲೆ ಅವರ ಆಸಕ್ತಿ ಕೇಂದ್ರಿತ. ಆ ಅರ್ಥದಲ್ಲಿ ಇಲ್ಲಿ ಅನ್ವಯ ಹೆಚ್ಚು ಸ್ವರಸ. ಅನುಭವದ ಹಾಲಿನಿಂದ ತಂಬಿರದ ಖಾಲಿ ಕಾವಡಿಯನ್ನು ಹೊತ್ತು ತಂದಿದ್ದೇನೆ. ಅವರಲ್ಲಿ ಪಕ್ವಾನುಭವದ ಬಿಸಿ ಹಾಲನ್ನು ತುಂಬು. ತುಂಬಿಟ್ಟು ಹೆಪ್ಪುಹಾಕಿ ಕೆನೆ ಮೊಸರು ಮಾಡು. ಮತ್ತೆ ಆ ಕೆನೆಮೊಸರನ್ನು ಕಡೆದು ಬೆಣ್ಣೆ ತೆಗೆ. ತೆಗೆದ ಆ ಬೆಣ್ಣೆಯನ್ನು ನೀನೇ ಮೆದ್ದು ಎದ್ದೇಳು. ಇದು ಇಲ್ಲಿಯ ಒಟ್ಟು ಭಾವ.

ಹೆಪ್ಪು ಹಾಕಿದಾಗ ಮೂಡುವ ಕೆನೆ ಮೊಸರೆ ಅಧ್ಯಾತ್ಮದ ಅನುಭವ. ಅದನ್ನು ಕಡೆದಾಗ ಮೂಡುವ ಬೆಣ್ಣೆಯೆ ಸುದೃಢ ಸ್ನೇಹ ರೂಪವಾದ ಭಕ್ತಿ – ವಿಜ್ಞಾನಗಳ ಸಮನ್ವಯ. ಈ ಮಾತು ಉಪನಿಷತ್ತಿನಲ್ಲು ಬಂದಿದೆ.

ಘೃತಮಿವ ಪಯಸಿ ನಿಗೂಢಂ
ಭೂತೇ ಭೂತೇ ಚ ವಸತಿ ವಿಜ್ಞಾನಮ್ ।
ಸತತಂ ಮಂಥಯಿತವ್ಯಂ
ಮನಸಾ ಮಂಥಾನಭೂತೇನ ॥

(ಬ್ರಹ್ಮಬಿಂದೂಪನಿಷತ್)

(ಪ್ರತಿಯೊಬ್ಬ ಸಾಧುಜೀವನಲ್ಲಿಯೂ ವಿಜ್ಞಾನದ ಸೆಲೆ ಹುದುಗಿದೆ – ಹಾಲಿನಲ್ಲಿ ಬೆಣ್ಣೆ ಹುದುಗಿರುವಂತೆ. ಮನಸ್ಸೆಂಬ ಕಡೆಗೋಲಿನಿಂದ ನಿರಂತರ ಕಡೆದು ಅದನ್ನು ಹೊರತೆಗೆಯಬೇಕು.)

ಹೀಗೆ ಉಪನಿಷತ್ತಿನ ಬೆಣ್ಣೆಯ ಸಂಕೇತದ ಒಂದು ಅಪೂರ್ವ ವಿವರಣೆ ಈ ಎರಡು ಸಾಲುಗಳಲ್ಲಿ ಬಂದಿದೆ. ಅದಕೆಂದೆ ಅಲ್ಲವೆ ದಾಸರ ಹಾಡುಗಳನ್ನು "ಪುರಂದರೋಪನಿಷತ್ತು" ಎನ್ನುವುದು.

ಹಾಲನ್ನು ಸಂಗ್ರಹಿಸಿ ತುಂಬಿಡುವುದು, ಹೆಪ್ಪುಹಾಕಿ ಕೆನೆ ಮೊಸರು ಮಾಡುವುದು, ಮೊಸರು ಕಡೆದು ಬೆಣ್ಣೆ ತೆಗೆಯುವುದು–ಈ ಎಲ್ಲ ಕ್ರಿಯೆ ನಮ್ಮೊಳಗೆಯೆ ನಿರಂತರ ನಡೆಯಬೇಕಾದ್ದು. ಆದರೆ ನಾವಾಗಿಯೇ ಇದನ್ನೆಲ್ಲ ಮಾಡಲಾರೆವು. ನಮಗೆ ಆ ಶಕ್ತಿಯೂ ಇಲ್ಲ:

ನ ಋತೇ ತ್ವತ ಕ್ರಿಯತೇ ಕಿಂಚನಾರೇ

(ಋ. 10. 112. 9.)

(ದೂರದ ಕೆಲಸಗಳನ್ನಾಗಲಿ, ನನ್ನ ಬಳಿಯ – ನನ್ನದೇ ಆದ ಅಂತರಂಗದ ಕೆಲಸಗಳನ್ನೆ ಆಗಲಿ ನೀನಿಲ್ಲದೆ ನಾನಾಗಿಯೇ ಮಾಡಲಾರೆ.)

ವೇದದ ಋಷಿ ತೋಡಿಕೊಂಡ ಈ ಅಳಲು ದಾಸರ ಅಳಲೂ ಹೌದು. ಅದಕ್ಕಾಗಿಯೇ ಅವರು ಅವನನ್ನೇ ಪ್ರಾರ್ಥಿಸುತ್ತಾರೆ :

"ಈ ಕಾವಡಿಗೆ ಜೀವನಾನುಭವದ ಹಾಲು ತುಂಬು
ನಾನೇ ಮಾಡಿದೆ ಎಂಬ ಅಹಂಕಾರದ ಹುಳಿಮದ್ಯ ತುಂಬಬೇಡ
ತುಂಬಿದ ಹಾಲೂ ಹುಳಿತು ಕೆಡದಂತೆ ನೀನೇ ಹೆಪ್ಪುಹಾಕು
ನೀನೇ ತೆಗೆದ ಆ ಬೆಣ್ಣೆ ನಿನಗೇ ಮಾಸಲು"

"ಅಷ್ಟರಿಂದ ನನ್ನ ಒಳಬಗೆಯ ಭಕ್ತಿ ಜ್ಞಾನಗಳ ಬೆಣ್ಣೆಯನ್ನು ಲೇಸಾಗಿ ಮೆದ್ದು ಏಳು. ಈ ಮೆಲ್ಲುವಿಕೆ ಕೂಡ ಒತ್ತಡಕ್ಕಾಗಿ ಅಲ್ಲ; ಅನಾಸ್ಥೆಯಿಂದ ಅಲ್ಲ; ಲೇಸಾಗಿ, ಚೆನ್ನಾಗಿ, ಹೊಟ್ಟೆತುಂಬ ಪ್ರೀತಿಯಿಂದ ಮೆಲ್ಲಬೇಕು" ಈ ಭಕ್ತಿಯ ಬೆಣ್ಣೆಯನ್ನು ಭಗವಂತ ಪ್ರೀತಿಯಿಂದ ಸ್ವೀಕರಿಸಿ ತೃಪ್ತನಾಗದೆ ಇದ್ದರೆ ಸಾಧಕನ ಗತಿಯೇನು ?

ಒಟ್ಟು ತಾತ್ಪರ್ಯ ಇಷ್ಟು: ಪ್ರೀತಿ ಏಕಮುಖವಾಗಿರಬಾರದು. ಭಕ್ತ ಭಗವಂತನನ್ನು ಪ್ರೀತಿಸಿದರೆ ಮಾತ್ರವೇ ಸಾಲದು. ಭಗವಂತನೂ ಭಕ್ತನನ್ನು ಪ್ರೀತಿಸಬೇಕು. ಇಲ್ಲವಾದರೆ– "ನೀನೊಲಿಯದಿದ್ದರೆ ನಾನೊಲಿದು ಫಲವೇನು ?"

ಯಮೇವೈಷ ವೃಣುತೇ ತೇನ ಲಭ್ಯಃ ।

(ಅಥರ್ವಣ : 3. 2. 3. ಕಠ: 1. 2. 22.)

(ಯಾರ ಬಗೆಗೆ ಅವನು ಪ್ರೀತಿಯಿಂದ ಒಲಿಯುತ್ತಾನೊ ಅಂಥವರಿಗೆ ಮಾತ್ರ ಅವನು ಲಭ್ಯನಾಗುತ್ತಾನೆ.)

ಛಲ × ಹಂಬಲ

ಆದರಿಂದ ನಾನು ಒಲಿಸಿಬಿಡುವೆನೆಂಬ ಛಲವಿಲ್ಲ. ನೀನೊಲಿಯಬೇಕೆಂಬ ಹಂಬಲ ಮಾತ್ರ ನನ್ನದು. ಒಲಿಯುವುದು, ಒಲಿದು ಉದ್ಧರಿಸುವುದು ನಿನ್ನ ಪಾಲಿನ ಕೆಲಸ.

ಅದಕ್ಕಾಗಿ –

"ಶೇಷಶಯನನೆ ಏಳು"

ಹಾಲುಗಡಲಲ್ಲಿ ಹಾವಿನ ಮೇಲೆ ಮಲಗಿದವನಿಗೆ ಕಾವಡಿಯಲ್ಲಿ ಹಾಲು ತುಂಬಿಟ್ಟು ತಂದವರು ನಾವು. ಸೂರ್ಯನ ಮುಂದೆ ಹಣತೆಯ ದೀಪ ಹಿಡಿದವರು. ಉಕ್ಕಿ ಹರಿವ ಕೆರೆಗೆ ಕೆರೆಯ ನೀರಿಂದಲೆ ಬೊಗಸೆ ತುಂಬಿ ಅರ್ಘ್ಯ ಚೆಲ್ಲುವವರು :

"ಕೆರೆಯ ನೀರನು ಕೆರೆಗೆ ಚೆಲ್ಲಿ"

ಏಕೆ ಏಳಬೇಕು ? ಎದ್ದು ಏನು ಮಾಡಬೇಕು ?

"ಸಮುದ್ರ ಮಥನವ ಮಾಡು"

ಇಡಿಯ ಪದ್ಯದಲ್ಲಿ ವಾಚ್ಯಾರ್ಥಕ್ಕಿಂತ ಆಚೆಗೆ, ಅಧ್ಯಾತ್ಮದ ಆಳಕ್ಕೆ ನಮ್ಮನ್ನು ಕೊಂಡೊಯ್ಯಬಲ್ಲ ಮಾತಿನ ಕೊಂಡಿ ಇಲ್ಲಿದೆ. ಇದು ಇಡಿಯ ಸುಪ್ರಭಾತದ ಮರ್ಮಸ್ಥಾನ. ಅಂತರಂಗದ ಅರ್ಥದ ಕೀಲಿಕೈ.

ಎಂದೋ ನಡೆದ ಸಮುದ್ರಮಥನವನ್ನು ಈ ಬೆಳಗಿನ ಜಾವದಲ್ಲಿ ಪುನಃ ಏಕೆ ಮಾಡಬೇಕು ? ಆಗಿ ಮುಗಿದು ಹೋದ ಕೆಲಸಕ್ಕಾಗಿ ಶ್ರೀನಿವಾಸ ಏಕೆ ಏಳಬೇಕು ?

ಇಡಿಯ ಪದ್ಯವನ್ನು ಅಧ್ಯಾತ್ಮದ ಹಿನ್ನೆಲೆಯಲ್ಲಿ ನೋಡದೆ ಇದ್ದರೆ ಸರಿಯಾದ ಅರ್ಥ ಹೊರಡುವುದಿಲ್ಲ. ಈಗ – ಅಧ್ಯಾತ್ಮದ ಸಮುದ್ರಮಥನ ಇಲ್ಲಿ ಬಂದಿದೆ ಎಂದಾಗ ಒಂದು ಅಪೂರ್ವ ಅರ್ಥ ಬಂತು. ಹಿಂದಿನ ಮಾತುಗಳೆಲ್ಲ ಅದಕ್ಕೆ ಪೂರಕವಾಗಿ ಬಂದಿವೆ. ಹಿಂದಿನ ಸಾಲಿನಲ್ಲಿ ಮೊಸರು ಕಡೆದು ಬೆಣ್ಣೆ ತೆಗೆವ ಮಾತು ಬಂದಿದೆ. ಅದೇ ಇಲ್ಲಿ ಸಮುದ್ರಮಥನವಾಯಿತು.

"ಜೀವನಾನುಭವದ ಹಾಲು ತುಂಬಿದ ಈ ಹೃದಯವೆ ಕ್ಷೀರ ಸಮುದ್ರ. ಅಲ್ಲಿ ನೀನು ನೆಲಸಿರುವೆ. ಅದರಿಂದ ನೀನು ಕ್ಷೀರಸಮುದ್ರಶಾಯಿ; ಪಾಲಕಡಲಲ್ಲಿ ಪವಡಿಸಿದ ಹರಿ. ಮೂಲಾಧಾರದಿಂದ ಸಹಸ್ರಾರದ ತನಕ ಹಬ್ಬಿರುವ ಸುಷುಮ್ನಾ ನಾಡಿಯೆ ಸಾವಿರ ಹೆಡೆಯ ಶೇಷ. ಅಲ್ಲಿ ನೀನು ನೆಲಸಿರುವೆ. ಅದರಿಂದ ನೀನು ಶೇಷಶಯನ. ಈ ಹೃದಯ ಸಮುದ್ರದ ಮಥನ ನಿತ್ಯ ನಿರಂತರ ನಡೆಯಬೇಕು. ವಿಷವೆಲ್ಲ ತೊಲಗಿ ಅಮೃತ ಮೂಡಿ ಬರುವತನಕ ನಡೆಯುತ್ತಿರಬೇಕು. ಅದು ನಿನ್ನಿಂದಲೇ ನಡೆಯಬೇಕು. ಇದು ಪ್ರತಿಯೊಬ್ಬ ಭಕ್ತನ ಅನುದಿನದ ಬಯಕೆ."– ಅದರಿಂದ ದಿನಬೆಳಗಾದರೆ ದಾಸರು ಪ್ರಾರ್ಥಿಸುತ್ತಾರೆ:

"ಸಮುದ್ರಮಥನವ ಮಾಡು"

ಇಲ್ಲಿಗೇ ಮುಗಿಯಲಿಲ್ಲ. ಅಧ್ಯಾತ್ಮದ ಅರ್ಥ ಅಗೆದಷ್ಟೂ ಆಳವಾಗುತ್ತದೆ. ನಮ್ಮ ದೇಹದೊಳಗೇ ಏಳು ಸಮುದ್ರಗಳಿವೆ. ಅದರಲ್ಲಿ ಭಗವಂತ ಶೇಷಶಾಯಿಯಾಗಿದ್ದಾನೆ. ಒಂದೊಂದು ಸಮುದ್ರವೂ ಮಥನವಾಗಬೇಕು. ಅದಕ್ಕಾಗಿ ದಾಸರು ಹಾಡುತ್ತಾರೆ:

"ಶೇಷಶಯನನೆ ಏಳು–ಸಮುದ್ರ(ಗಳ)ಮಥನವ ಮಾಡು"

ನೀನು ಕುಂಡಲಿನಿಯಲ್ಲಿ ಯೋಗ ನಿದ್ರೆಯಲ್ಲಿ ಮಲಗಿರುವೆ. ಕುಂಡಲಿನಿಯನ್ನು ಜಾಗೃತಗೊಳಿಸು. ಯೋಗನಿದ್ರೆಯಿಂದ ಎದ್ದೇಳು. ನನ್ನನ್ನು ಎಬ್ಬಿಸು. ನನ್ನೊಳಗಿರುವ ಅಧ್ಯಾತ್ಮದ ಅಭಿವ್ಯಕ್ತಿಕೇಂದ್ರಗಳಾದ ಏಳು ನಾಡೀಚಕ್ರಗಳನ್ನು, ಅಧ್ಯಾತ್ಮದ ಕಡಲುಗಳನ್ನು – ಮಥನ ಮಾಡಿ ಜಾಗೃತಗೊಳಿಸು. ಮೂಲಾಧಾರ

ದಿಂದ ಸಹಸ್ರಾರದ ತನಕ ಏಳು ನಾಡೀ ಚಕ್ರದ ಕೇಂದ್ರಗಳಲ್ಲು ನಿನ್ನ ದರ್ಶನದ ದಿವ್ಯಾನುಭೂತಿ ನನ್ನದಾಗಲಿ.

ದೇಹದೊಳಗಿನ ಈ ಏಳು ಕಡಲುಗಳು ಯಾವುವು ?

ಯೋಗಶಾಸ್ತ್ರ ಬಲ್ಲವರು ಈ ಜಾಗೃತಿ ಕೇಂದ್ರಗಳನ್ನು ಹೀಗೆ ಹೆಸರಿಸುತ್ತಾರೆ: ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ ಚಕ್ರ, ಆಜ್ಞಾ ಚಕ್ರ ಮತ್ತು ಸಹಸ್ರಾರ.

ನಮ್ಮ ದೇಹದಲ್ಲಿ ಗ್ರಂಥಿಗಳು ಈ ನಾಡೀಚಕ್ರಗಳನ್ನು ಪ್ರತಿನಿಧಿಸುವ ಭೌತಿಕ ಕೇಂದ್ರಗಳು. ಗ್ರಂಥಿಗಳನ್ನು ವೈದ್ಯ ವಿಜ್ಞಾನಿಗಳು ಗುರುತಿಸಿದರೆ ಅದರ ಹಿಂದಿರುವ ಆಧ್ಯಾತ್ಮ ಕೇಂದ್ರಗಳನ್ನು ಅಧ್ಯಾತ್ಮ ವಿಜ್ಞಾನಿಗಳು ಗುರುತಿಸುತ್ತಾರೆ. ಅವುಗಳ ಕ್ರಮ ಹೀಗಿದೆ :

ಮೂಲಾಧಾರ	:	Gonad
ಸ್ವಾಧಿಷ್ಠಾನ	:	Cells of laying
ಮಣಿಪೂರ	:	Adrenals
ಅನಾಹತ	:	Thymus
ವಿಶುದ್ಧಿ	:	Thyroid and Para thyroid
ಆಜ್ಞಾ	:	Pineal
ಸಹಸ್ರಾರ	:	Pituitory

ಇವೇ ಏಳು ಕಡಲುಗಳು. ಇವುಗಳ ಮಥನದಿಂದ ಇಲ್ಲಿ ಭಗವಂತನ ಅಭಿವ್ಯಕ್ತಿಯಾಗಬೇಕು.

ಇನ್ನು ಇವುಗಳ ನೆಲೆಯನ್ನು ಗಮನಿಸೋಣ : ಬೆನ್ನು ಹುರಿಯ ಕೆಳಗಡೆ – ಜನನೇಂದ್ರಿಯದ ಮೂಲದಲ್ಲಿರುವ ಮೊದಲ ನಾಡೀಚಕ್ರ ಮೂಲಾಧಾರ. ಇದೇ ಕುಂಡಲಿನಿ ; ಕುಂಡಲ ಸುತ್ತಿ ಮಲಗಿದ್ದ ಹಾವು. ಇದು ಹೀಗೆ ಕೆಳಕ್ಕೆ ಮುಖ ಮಾಡಿ, ಮೈಮುದುಡಿ ಮಲಗಿದ್ದಾಗ ಮನುಷ್ಯ ಪ್ರಾಪಂಚಿಕ ವೈಷಯಿಕ ಭೋಗಗಳಲ್ಲಿ ಆಸಕ್ತಿ ತಳೆಯುತ್ತಾನೆ. ಅದು ತಲೆಯೆತ್ತಿ ಹೆಡೆಬಿಚ್ಚಿ ನಿಂತಾಗ ಅದರ ಗತಿ ಊರ್ಧ್ವ ಮುಖವಾಗುತ್ತದೆ. ಆಗ ಮನುಷ್ಯ ವಿಷಯಾಸಕ್ತಿಯನ್ನು ಕಳೆದುಕೊಂಡು ಅಧ್ಯಾತ್ಮ ದತ್ತ ಒಲಿಯುತ್ತಾನೆ. ಸಾಧನೆಯ ಎತ್ತರಕ್ಕೆ ಏರುತ್ತಾನೆ. ಮನುಷ್ಯನ ಪ್ರವೃತ್ತಿಯನ್ನು ನಿಯಂತ್ರಿಸುವ ಮೂಲಕೇಂದ್ರ ಈ ಮೂಲಾಧಾರ. ಅಧ್ಯಾತ್ಮದ ಯೋಗ ಶಕ್ತಿಯನ್ನು ಉತ್ಪಾದಿಸುವ 'ಜನರೇಟರ್' ಇದು. ಅಧ್ಯಾತ್ಮದ ಕೀಲಿಕೈ.

ಈ ಮೂಲಾಧಾರದ ಉಪ್ಪು ನೀರಿನ ಕಡಲಿನಾಚೆಗೆ, ನಾಭಿಯಿಂದ ಕೆಳಗಡೆ, ಕೆಳಹೊಟ್ಟೆಯ ಸ್ತರದಲ್ಲಿ ಸ್ವಾಧಿಷ್ಠಾನಚಕ್ರವಿದೆ. ಇದೇ ಎರಡನೆಯ ಕಡಲು: ಕಬ್ಬಿನ ರಸದ ಕಡಲು.

ಮೂಲಾಧಾರವನ್ನು ಕಡೆದು ಜಾಗ್ರತಗೊಳಿಸಿ ಮೇಲಕ್ಕೆ ಬಂದ ಸಾಧಕ ಉಪ್ಪುನೀರನ್ನು ಸ್ವಚ್ಛಗೊಳಿಸಿ ಸಿಹಿನೀರಾಗಿ ಮಾರ್ಪಡಿಸಿದ. ಕಬ್ಬಿನ ರಸವಾಗಿಸಿದ. ಇದು ಎರಡನೆಯ ಹಂತ.

ಅದರ ಮುಂದೆ, ನಾಭಿಯ ಸ್ತರದಲ್ಲಿರುವ ನಾಡೀಚಕ್ರ ಮಣಿಪೂರ. ಇದೇ ಒಳಗಿನ ಮೂರನೆಯ ಕಡಲು. ಸುರಾರಸದ ಕಡಲು. ಇದು ಕರ್ಮಗ್ರಂಥಿಗಳನ್ನು ಜಾಗೃತಿಗೊಳಿಸುವ ಕೇಂದ್ರ. ಕರ್ಮದ ಅಮಲುಬರಿಸುವ ಕೇಂದ್ರ. ಅದಕೆಂದೆ ಇದು ಸುರಾಸಮುದ್ರ. ವೈದ್ಯಶಾಸ್ತ್ರದಲ್ಲಿ ಎಡ್ರಿನಲ್ ಗ್ರಂಥಿಗೆ ಇರುವ ಮಹತ್ವವೇ ಆಧ್ಯಾತ್ಮದಲ್ಲಿ ಈ ಮಣಿಪೂರಕ್ಕೆ ಇದೆ.

ಅದರಾಚೆಗೆ ಹೃದಯ ಕೋಶದಲ್ಲಿರುವ ನಾಡೀಚಕ್ರ ಅನಾಹತ. ಇದೇ ನಾಲ್ಕನೆಯ ಕಡಲು. ತುಪ್ಪದ ಕಡಲು. ಹೃದಯವನ್ನು ಕಡೆದು ಬೆಣ್ಣೆ ತೆಗೆಯುವ ಮಾತು ಈ ಮೊದಲೆ ಬಂದಿದೆ. ಇದು ಭಕ್ತಿಯ ಬೆಣ್ಣೆ. ಸ್ನೇಹದ ತುಪ್ಪ. ಮಡುಗಟ್ಟಿದ ಈ ತುಪ್ಪ ಕರಗಿ ಹರಿಯಬೇಕು.

ಅದರಾಚೆಗೆ ಕಂಠದ ಸ್ತರದಲ್ಲಿ ವಿಶುದ್ಧಿ ಚಕ್ರ. ಇದನ್ನೆ ಇಂದ್ರಯೋನಿ ಎಂದೂ ಕರೆಯುತ್ತಾರೆ. ಇದು ಐದನೆಯ ಕಡಲು. ಮೊಸರಿನ ಕಡಲು. ತುಪ್ಪದ ಮೂಲಕ್ಕೆ ಹೋದಾಗ ಮೊಸರು ದೊರಕುವಂತೆ ತುಪ್ಪದ ಕಡಲಿನಾಚೆಗೆ ಮೊಸರಿನ ಕಡಲು. ಅನಾಹತ ಚಕ್ರದ ಮೇಲೆ ವಿಶುದ್ಧಿ ಚಕ್ರ.

ಮೊಸರಿನ ಮೂಲಕ್ಕೆ ಹೋದಾಗ ಇರುವುದು ಹಾಲು. ಇದೇ ಭ್ರೂ ಮಧ್ಯದ ಆಜ್ಞಾಚಕ್ರ. ಒಳಗಿನ ಆರನೆಯ ಕಡಲು: ಹಾಲುಗಡಲಲ್ಲಿ ನೆಲಸಿದ ಭಗವಂತನ ಬೆಳಕಿನ ಸಾಕ್ಷಾತ್ಕಾರ ಈ ಭ್ರೂಮಧ್ಯದ ಆಜ್ಞಾಚಕ್ರದಲ್ಲಿ.

ಇದೇ ಮೂರನೆಯ ಕಣ್ಣು: ಒಳಗಣ್ಣು. ಈ ಚಕ್ರದ ಜಾಗೃತಿಯಲ್ಲಿ ಭೂತ ಭವಿಷ್ಯತ್ತುಗಳ ಪೂರ್ಣ ಅರಿವು. ತಾನು ಸಾಧನೆಯಲ್ಲಿ ಮುಂದೆ ಸಾಗಬೇಕಾದ ದಾರಿ ಯಾವುದು ಎಂಬ ಆಜ್ಞೆ ದೊರಕುವುದೂ ಈ ಕೇಂದ್ರದಲ್ಲಿ. ಅದಕೆಂದೆ ಇದು ಆಜ್ಞಾಚಕ್ರ.

ಇದರ ಭೌತಿಕ ಕೇಂದ್ರವಾದ ಪೈನೀಯಲ್ ಗ್ರಂಥಿಯಲ್ಲಿಯೂ ಭೂತ-ಭವಿಷ್ಯತ್ತುಗಳ ರಹಸ್ಯ ಅಡಗಿದೆ. ಅದರಿಂದಲೆ ಹೊರಗಣ್ಣಿನ ವರ್ತಮಾನದಲ್ಲಿ ಮಾತ್ರವೇ ಸೀಮಿತವಾದ ಪಾಶ್ಚಾತ್ಯ ವೈದ್ಯ ವಿಜ್ಞಾನ ಪೈನೀಯಲ್ ಗ್ರಂಥಿಯ

ಚಟುವಟಿಕೆಯೇನು, ಉದ್ದೇಶವೇನು ಎನ್ನುವುದನ್ನು ಗುರುತಿಸುವಲ್ಲಿ ಇನ್ನೂ ಯಶಸ್ವಿಯಾಗಿಲ್ಲ.

ಅದರಾಚೆಗೆ ನೆತ್ತಿಯ ಮೇಲೆ ಸಹಸ್ರಾರ ಚಕ್ರವಿದೆ. ಇದೇ ಏಳನೆಯ ಕಡಲು : ತಿಳಿನೀರಿನ ಕಡಲು. ಭಗವಂತನನ್ನು ತಿಳಿದು ಬಾಳೆಲ್ಲ, ಬಗೆಯೆಲ್ಲ ತಿಳಿಯಾದ ಸ್ಥಿತಿ ಇದು. ಇನ್ನು ಇಂಥ ಜ್ಞಾನಿಯ ಬಗೆಗಡಲು ಕದಡಿ ರಾಡಿಯಾಗುವ ಸಂಭವವೆ ಇಲ್ಲ.

ಸ್ವಾರಸ್ಯವೆಂದರೆ ತಿರುಪತಿಯ ಬೆಟ್ಟಗಳೂ ಏಳು. ಆರು ಬೆಟ್ಟಗಳನ್ನು ದಾಟಿ ಏಳನೆಯ ಬೆಟ್ಟವನ್ನೇರಿದಾಗಲೆ ಶ್ರೀನಿವಾಸನ ದರ್ಶನ. ಈ ಏಳನೆಯ ಬೆಟ್ಟವೆ ವೇಂಗಡ – ವೇಂಗಳ. ಅಥವಾ ವೇಂಕಟಾಚಲ. ಆಳ್ವಾರರ ವಚನದಂತೆ ಅವನೇ ಬೆಟ್ಟದೊಡೆಯ: ಅವನೇ ಕಡಲಿನೊಡೆಯ; ಅವನೇ ನಮ್ಮ ಒಳ ಬಗೆಯ ಒಡೆಯ ನಲ್ಲವೆ : "ಮನತ್ತುಳ್ಳಾನ್, ವೇಂಗಡತ್ತಾನ್, ಮಾಕಡಲಾನ್"

ಇವು ಸಾಧಕ ಏರಬೇಕಾದ ಏಳು ಮೆಟ್ಟಿಲುಗಳು. ಕೊನೆಯ ಮೆಟ್ಟಿಲನ್ನೇರಿದವ ಮತ್ತೆ ಕೆಳಗಿಳಿಯುವ ಭಯವಿಲ್ಲ. ಇವು ಬರಿಯ ಏರುಮೆಟ್ಟಿಲುಗಳೇ ಹೊರತು ಇಳಿಮೆಟ್ಟಿಲುಗಳಲ್ಲ.

ಕುಂಡಲಿನಿಯಲ್ಲಿ ಮಲಗಿದ್ದ ಶೇಷ ಈಗ ಸಾವಿರ ಹೆಡೆ ಬಿಚ್ಚಿ ಸಹಸ್ರಾರದ ತನಕ ನೆಗೆದು ನಿಂತಿದ್ದಾನೆ. ಅಲ್ಲಿ ಪವಡಿಸಿದ ಶೇಷಶಯನನಾದ ಶ್ರೀನಿವಾಸ ಏಳು ಕಡಲುಗಳನ್ನು ಕಡೆದು ನಮ್ಮ ಭಕ್ತಿರಸದ ಬೆಣ್ಣೆಯಲ್ಲಿ ಮೂಡಿಬರಬೇಕು. ಅದಕೆಂದೆ ದಾಸರು ಹಾಡಿದರು : "ಶೇಷಶಯನನೆ, ಏಳು ಸಮುದ್ರ ಮಥನವ ಮಾಡು".

ಈ ಏಳು ನಾಡೀಚಕ್ರಗಳನ್ನು ಷಟ್‌ಪ್ರಶ್ನೋಪನಿಷತ್ತು ಸೂಚ್ಯವಾಗಿ ಉಲ್ಲೇಖಿಸಿದ್ದುಂಟು :

"ಅಥೇಮೇ ಅನ್ಯ ಉಪರೇ ವಿಚಕ್ಷಣಂ
ಸಪ್ತಚಕ್ರೇ ಷಳರ ಆಹುರರ್ಪಿತಮ್ ।"

(ಕೆಲ ಮಂದಿ ಅಧ್ಯಾತ್ಮ ಉಪಾಸಕರು ಏಳು ನಾಡೀಚಕ್ರಗಳ, ಆರು ಇಂದ್ರಿಯಗಳ ಈ ದೇಹ (ಉಪರ)ದಲ್ಲಿ ಜ್ಞಾನಮಯನಾದ ಭಗವಂತನನ್ನು ಕಾಣುತ್ತಾರೆ.)

ಈ ಏಳು ನಾಡೀಚಕ್ರಗಳಿಗೂ, ಸೂರ್ಯನ ಏಳು ಕುದುರೆಗಳಿಗೂ, ಸೂರ್ಯ ಕಿರಣದ ಏಳು ವರ್ಣಗಳಿಗೂ, ಅಗ್ನಿಯ ಏಳು ಜಿಹ್ವೆ (ಜ್ವಾಲೆ) ಗಳಿಗೂ ಪರಸ್ಪರವಾದ ಅಧ್ಯಾತ್ಮ ಸಂಬಂಧವಿದೆ.

ಈ ಏಳರಲ್ಲೂ ನಾಭಿ ಮತ್ತು ಮೂಲಾಧಾರದ ನಡುವಿನ ಚಕ್ರವನ್ನು ಈ ಎರಡರಲ್ಲೆ ಏಕೀಭವಿಸಿ ಆರೇ ಚಕ್ರಗಳನ್ನು ಶಾಸ್ತ್ರಕಾರರು ಉಲ್ಲೇಖಿಸಿದ್ದೂ ಉಂಟು :

ಮೂಲೇ ಚ ನಾಭೌ ಹೃದಯೇಂದ್ರಿಯೋನಿ -
ಭ್ರೂಮಧ್ಯಮೂರ್ಧದ್ವಿಷಡಂತಕೇಷು |
(ತಂತ್ರಸಾರ ಸಂಗ್ರಹ 4. 15?.)

(ಮೂಲಾಧಾರ, ನಾಭಿ, ಹೃದಯ, ಕಂಠಕಾಲು, ಹುಬ್ಬುಗಳ ನಡುವಿನ ಭಾಗ ಮತ್ತು ನೆತ್ತಿಯಿಂದ 12 ಅಂಗುಲ ಎತ್ತರದ ಪ್ರಭಾವಲಯ ಇವು ಆರು ನಾಡೀಚಕ್ರ ಸ್ಥಾನಗಳು)

ಪುರಂದರದಾಸರೇ ಇದನ್ನು ಒಂದು ಹಾಡಿನಲ್ಲಿ ಹೇಳಿದ್ದುಂಟು :

ಆಧಾರ ಮೊದಲಾದ ಆರು | ಚಕ್ರ
ಶೋಧಿಸಿ ಬಿಡಬೇಕು ಈಷಣ ಮೂರು
ಸಾಧಿಸಿ ಸುಷುಮ್ನಾ ಏರು | ಅಲ್ಲಿ
ಭೇದಿಸಿ ನೀ ಪರಬ್ರಹ್ಮನ ಸೇರು

ಇವೆಲ್ಲ ವಿವಕ್ಷಾಭೇದಗಳು. ಒಂದು ದೃಷ್ಟಿಯಲ್ಲಿ ಇದು ದೇಹದೊಳಗೆ ನೆಲಸಿರುವ ಒಂದೇ ಕಡಲು. ಆದಕ್ಕೆ ಏಳು ಸ್ತರಗಳಲ್ಲಿ ಏಳು ಹೆಸರುಗಳು. ಅದಕೆಂದೆ ದಾಸರು ಏಕವಚನದಲ್ಲೆಂಬಂತೆಯೆ ನುಡಿದರು : ಸಮುದ್ರ ಮಥನವ ಮಾಡು.

ಈ ಮಥನಕ್ರಿಯೆಗೆ ತನ್ನ ಸಾಧಕಜೀವ ಪಕ್ವಗೊಂಡು ಅಣಿಯಾಗಿದೆ ಎನ್ನುವ ಮಾತು ಮುಂದಿನ ಸಾಲಿನಲ್ಲಿ ಬಂದಿದೆ :

ದೇಶ ಕೆಂಪಾಯಿತೇಳಯ್ಯ ಹರಿಯೆ

ಅರುಣೋದಯವಾದಾಗ, ಬ್ರಾಹ್ಮೀಮುಹೂರ್ತದಲ್ಲಿ ಇರುಳಿನ ಕತ್ತಲನ್ನೋಡಿಸಿ ಉಷೆಯ ಕೆಂಪು ದಿಗ್ದೇಶಗಳನ್ನೆಲ್ಲ ತುಂಬುತ್ತದೆ. ಇದು ಭೌತಿಕ ಪ್ರಪಂಚದ ಸಹಜ ಕ್ರಿಯೆ.

ಹೊರಗಿನಂತೆಯೆ, ಒಳಗೊಂದು ದೇಶ ಇದೆ. ಅದು ಭ್ರೂಮಧ್ಯ ದೇಶ. ಆ ದೇಶದಲ್ಲಿಯೆ ಸಾಧನೆಯ ಆದೇಶ(ಆಜ್ಞೆ)ದೊರಕುತ್ತದೆ. ಇನ್ನೇನು ಅಂತರ್ಯಾಮಿಯ ಬಿಂಬೋದಯ ಆಗಬೇಕು. ಉಷೆಯ ಕೆಂಬೆಳಕು ಆಜ್ಞಾಚಕ್ರದಲ್ಲಿ ಕಾಣಿಸುತ್ತದೆ. ಇದೇ ಮೂರನೆಯ ಕಣ್ಣು. ಈ ಎರಡು ಕಣ್ಣುಗಳ ಸೂರ್ಯಚಂದ್ರರ ನಡುವೆ ಆ ಅಗ್ನಿನೇತ್ರ ತೆರೆದುಕೊಂಡಾಗ ಆ ಕೆಂಪು ಕಾಣಿಸಿಕೊಳ್ಳುತ್ತದೆ. ಆಗ ಮೂರು ಕಾಲ ಗಳೂ ತೆರೆದುಕೊಳ್ಳುತ್ತವೆ. ಭೂತ ಭವಿಷ್ಯತ್ತುಗಳ ಕಡೆಗೂ ಬೆಳಕು ಹರಿಯುತ್ತದೆ. ಅಂಥವನಿಗೆ ಭೂತ ಭವಿಷ್ಯತ್ತುಗಳು ವರ್ತಮಾನದಷ್ಟೆ ಸಹಜ ಮತ್ತು ಸ್ಫುಟ.

ಮುಂದೆ, ಸಹಸ್ರಾರದಲ್ಲಿ ಸಹಸ್ರಕಿರಣಗಳೊಡನೆ ಉದಿಸುವ ಆ ದಿವ್ಯ ಸೂರ್ಯನ ದರ್ಶನಕ್ಕಾಗಿ ಭಕ್ತ ಕಾತರನಾಗಿ ಕಾಯುತ್ತಿದ್ದಾನೆ. "ಮೂಡಿಬಾ ಓ ಹರಿಯೆ" ಎಂದು ಪ್ರಾರ್ಥಿಸುತ್ತಿದ್ದಾನೆ:

"ದೇಶ ಕೆಂಪಾಯಿತು ಏಳಯ್ಯ ಹರಿಯೆ"

ಇಲ್ಲಿ 'ಹರಿಯೆ' ಎನ್ನುವ ಸಂಬೋಧನೆ ತುಂಬ ಮಹತ್ವದ್ದು. ಹರಿ ಎಂದರೆ ಸಂಸ್ಕೃತದಲ್ಲಿ ಸೂರ್ಯನೂ ಹೌದು; ನಾರಾಯಣನೂ ಹೌದು.

"ದಿನಮಣಿರ್ಭಾಸ್ವಾನ್ ವಿವಸ್ವಾನ್ ಹರಿಃ"

"ಹರಿಂ ಹೃಷೀಕೇಶಮುದಾಹರಂತಿ"

(ಅಭಿಧಾನ ರತ್ನಮಾಲೆ)

ಹೊರಗಿನ ಕತ್ತಲನ್ನು ಹರಿಸುವುದರಿಂದ ಸೂರ್ಯ ಹರಿ, ಒಳಗಿನ ಕತ್ತಲನ್ನು ಹರಿಸುವುದರಿಂದ ನಾರಾಯಣ ಹರಿ. ಸೂರ್ಯನಲ್ಲಿದ್ದು ಹೊರಗಿನ ಕತ್ತಲನ್ನು, ಸಹಸ್ರಾರದಲ್ಲಿದ್ದು ಒಳಗಿನ ಕತ್ತಲನ್ನು ಹರಿಸುವುದರಿಂದ ಒಳ – ಹೊರಗೆಲ್ಲ ಅವನೆ ನಿಜವಾದ ಹರಿ. ಅದಕ್ಕೆಂದೆ ಅವನನ್ನು ಸೂರ್ಯನಾರಾಯಣ ಎಂದೇ ಕರೆಯುತ್ತಾರೆ.

ಅದರಿಂದ 'ಏಳು ಹರಿಯೆ' ಎಂದರೆ ಗಾಯತ್ರಿ ಪ್ರತಿಪಾದ್ಯನಾದ ನನ್ನ ಒಳಬಗೆಯ ಸೂರ್ಯನೆ, ಉದಿಸಿ ಬಾ' ಎಂದೇ ಅರ್ಥ. ಅಜ್ಞಾನವನ್ನೆಲ್ಲ ತೊಡೆದು ನನ್ನ ಒಳಬಗೆಯನ್ನು ಬೆಳಗುವ ಬೆಳಕಾಗಿ ಬಾ. ನನ್ನ ಸಂಚಿತ ಕರ್ಮಗಳನ್ನೆಲ್ಲ ಪರಿಹರಿಸುವ ಹರಿಯಾಗಿ ಬಾ. ಈ ಉದ್ದೇಶಕ್ಕಾಗಿಯೆ ದಾಸರು ಇಲ್ಲಿ ಶೇಷಶಯನನನ್ನು 'ಹರಿಯೆ' ಎಂದು ಕರೆದರು.

ಹರಿಯ ದರ್ಶನವಾದ ಮೇಲೂ ಪಾಪ ಪರಿಹಾರವಾಗದಿರುವುದುಂಟೆ ?

"ಕ್ಷೀಯಂತೇ ಚಾಸ್ಯ ಕರ್ಮಾಣಿ
ತಸ್ಮಿನ್ ದೃಷ್ಟೆ ಪರಾವರೇ।"

(ಅಥರ್ವಣ: 2. 10)

(ಆ ಪರತತ್ವವನ್ನು ಕಂಡಾಗ ಜ್ಞಾನಿಯ ಕರ್ಮಗಳೆಲ್ಲ ನಾಶವಾಗಿ ಹೋಗುವುವು).

"ಜ್ಞಾನಾಗ್ನಿಃ ಸರ್ವ ಕರ್ಮಾಣಿ
ಭಸ್ಮಸಾತ್ ಕುರುತೇ ತಥಾ।"

(ಜ್ಞಾನದ ಬೆಂಕಿ ಕರ್ಮದ ಕಟ್ಟಿಗೆಯ ರಾಶಿಯನ್ನು ಸಂಪೂರ್ಣವಾಗಿ ಸುಟ್ಟು ಬಿಡುತ್ತದೆ.)

ತನ್ನ ಬಗೆಯಲ್ಲಿ ಮೂಡಿಬಂದ ಭಗವಂತನ ಮಾನಸಪೂಜೆಯ ವಿಧಾನವನ್ನು ದಾಸರು ಮುಂದಿನ ಹಾಡಿನಲ್ಲಿ ನೆನಪಿಸಿಕೊಳ್ಳುತ್ತಾರೆ.

ಅರಳು ಮಲ್ಲಿಗೆ ಜಾಜಿ ಪರಿಮಳದ ಪುಷ್ಪಗಳ
ಸುರರು ತಂದಿಹರಯ್ಯ ಸುಜನರೊಡೆಯ
ಅರವಿಂದಲೋಚನನೆ ಕೋಳಿ ಕೂಗಿತು ಕೇಳು
ಪುರಂದರ ವಿಠಲನೆ ಬೆಳಗಾಯಿತು

"ಅರಳಿ ಗಮಗಮಿಸುವ ಮಲ್ಲಿಗೆ ಜಾಜಿ ಮುಂತಾದ ಕಂಪು ಸೂಸುವ ಹೂವುಗಳನ್ನು ತಂದು ನಿನ್ನ ಪೂಜೆಗೆಂದು ದೇವತೆಗಳು ಕಾದು ನಿಂತಿದ್ದಾರೆ." ತಿರುಪತಿಯ ಬೆಟ್ಟದಲ್ಲಿ ನಿಂತಿದ್ದಾರೊ ಇಲ್ಲವೊ ಗೊತ್ತಿಲ್ಲ. ದಾಸರ ಬಗೆ ಬೆಟ್ಟದಲ್ಲಿ ಮಾತ್ರ ಖಂಡಿತ ಬಂದು ನಿಂತಿದ್ದಾರೆ.

ವಿಷ್ಣುವಿನ ಆರಾಧನೆಗೆ ಸುಗಂಧಯುಕ್ತವಾದ ಬಿಳಿಯ ಹೂವುಗಳು ವಿಶೇಷ ಎಂದು ಶಾಸ್ತ್ರಗಳು ಹೇಳುತ್ತವೆ. ಅದಕ್ಕೆಂದೆ ದಾಸರು ಮಲ್ಲಿಗೆ ಜಾಜಿ ಮುಂತಾದ ಬಿಳಿಯ ಹೂವುಗಳನ್ನೆ ಉಲ್ಲೇಖಿಸಿದ್ದಾರೆ; 'ಪರಿಮಳದ' ವಿಶೇಷಣವನ್ನಿತ್ತಿದ್ದಾರೆ.

ಪಾರಿಜಾತದಲ್ಲಿ ಆಂಜನೇಯನಿದ್ದಾನೆ. ಕಲ್ಹಾರದಲ್ಲಿ ಭೀಮಸೇನನಿದ್ದಾನೆ. ಪುನ್ನಾಗದಲ್ಲಿ ಗರುಡನಿದ್ದಾನೆ. ಬಿಳಿಯ ಹೂವುಗಳಲ್ಲೆಲ್ಲ ಶಂಕರನಿದ್ದಾನೆ:

ಪಾರಿಜಾತಸ್ಯ ಪುಷ್ಪೇಷು
ಆಂಜನೇಯಸ್ತದಾಜ್ಞೇಯಾ ।
ಸೌಗಂಧಿಕೇ ಭೀಮಸೇನಃ
ಶ್ವೇತ ಪುಷ್ಪೇಷು ಶಂಕರಃ ।
ಪುನ್ನಾಗಪುಷ್ಪೇ ಗರುಡಃ............

ಆದರಿಂದ ಬಿಳಿಯ ಪರಿಮಳದ ಪುಷ್ಪಗಳ ಸುರರು ತಂದಿಹರಯ್ಯ. ಅದೂ ಅರಳಿದ ಹೂವುಗಳು. ಏಕೆಂದರೆ ಅರಳಿದಾಗ ಮಾತ್ರವೆ ಹೂವಿನ ಕಂಪು, ಚೆಲುವು ಪೂರ್ಣಪ್ರಮಾಣದಲ್ಲಿ ಅಭಿವ್ಯಕ್ತಗೊಳ್ಳುತ್ತದೆ;

ಆಧ್ಯಾತ್ಮದ ಮಾನಸಪೂಜೆಯಲ್ಲಿ ಏನು ಈ ಹೂವುಗಳೆಂದರೆ? ಇದನ್ನು ಮಹಾಭಾರತದ ಒಂದು ಮಾತು ಸ್ಫುಟಗೊಳಿಸುತ್ತದೆ:

"ಭಾವಾಷ್ಟ ಪುಷ್ಪವಿಧಿನಾ ಹರಿಮರ್ಚಯಾಮಿ"

(ನಮ್ಮ ಬಗೆಯ ಸಾತ್ವಿಕ ಭಾವಗಳೆ ಹೂವುಗಳು. ಇಂಥ ಎಂಟು ಬಗೆಯ ಹೂವುಗಳಿಂದ ಭಗವಂತನನ್ನು ಆರಾಧಿಸಬೇಕು.)

ಹೂವುಗಳಿಗೆ ಸುಮನಸ್ ಎಂದು ಹೆಸರು. ನಮ್ಮ ಮನಸ್ಸೂ ಸುಮನಸ್ ಆದಾಗ ಅದು ಭಗವಂತನ ಆರಾಧನೆಗೆ ಅರ್ಪಿತವಾಗುವ ಹೂವೇ ಆಗುತ್ತದೆ. ಈ ಸೌಮನಸ್ಯವೇ, ಮನದ ಎಂಟು ಬಗೆಯ ಸದ್ಭಾವಗಳೇ ಎಂಟು ಹೂವುಗಳು:

ಅಹಿಂಸಾ ಪ್ರಥಮಂ ಪುಷ್ಪಂ
ಪುಷ್ಪಮಿಂದ್ರಿಯನಿಗ್ರಹಃ ।
ಸರ್ವಭೂತದಯಾ ಪುಷ್ಪಂ
ಕ್ಷಮಾಪುಷ್ಪಂ ವಿಶಿಷ್ಯತೇ ।
ಜ್ಞಾನ ಪುಷ್ಪಂ ತಪಃಪುಷ್ಪಂ
ಧ್ಯಾನಪುಷ್ಪಂ ಚ ಸಪ್ತಮಮ್
ಸತ್ಯಂ ಚೈವಾಷ್ಟಮಂ ಪುಷ್ಪಂ
ಏಭಿಸ್ತುಷ್ಯತಿ ಕೇಶವಃ ॥

ಕಾಯ ವಾಕ್ಕು ಮನಸ್ಸುಗಳಿಂದ ಪರರಿಗೆ ಕೇಡು ಬಗೆಯದಿರುವ ಅಹಿಂಸೆಯೆ ಮೊದಲ ಹೂವು; ಇಂದ್ರಿಯಗಳನ್ನು ಕಟ್ಟಿ ವಿಷಯಗಳತ್ತ ಹರಿಯಗೊಡದ ಇಂದ್ರಿಯ ನಿಗ್ರಹವೆ ಎರಡನೆಯ ಹೂವು ; ಭಗವಂತನ ಸೃಷ್ಟಿಯ ಒಂದು ಸಣ್ಣ ಕೀಟವನ್ನೂ ಅನುಕಂಪೆಯಿಂದ ಕಾಣುವ ಸರ್ವಭೂತದಯೆಯೇ ಮೂರನೆಯ ಹೂವು; ನಮಗೆ ಕೇಡು ಬಗೆದವರ ಮೇಲೂ ಕೇಡು ಬಗೆಯದ ದಿವ್ಯ ಸಹನೆಯೆ ಕ್ಷಮೆಯೆಂಬ ನಾಲ್ಕನೆಯ ಹಿರಿಯ ಹೂವು; ಅಧ್ಯಾತ್ಮದ ಅರಿವೇ ಜ್ಞಾನವೆಂಬ ಐದನೆಯ ಹೂವು; ಮನನವೇ ತಪಸ್ಸೆಂಬ ಆರನೆಯ ಹೂವು; ಭಗವಂತನಲ್ಲಿ ನಿರಂತರ ಮನಸ್ಸನ್ನು ನೆಲೆಗೊಳಿಸುವುದೇ ಧ್ಯಾನವೆಂಬ ಏಳನೇ ಹೂವು; ನಿಜವನ್ನರಿತು ನಿಜವನ್ನೇ ಆಡುವ ನುಡಿದಂತೆ ನಡೆವ, ನಡೆದಂತೆ ನುಡಿವ ದೀಕ್ಷೆಯೆ ಸತ್ಯವೆಂಬ ಎಂಟನೆಯ ಹೂವು. ಇಂಥ ಹೂವುಗಳ ಅರ್ಚನೆಯಿಂದ ಭಗವಂತ ಸಂತುಷ್ಟನಾಗುತ್ತಾನೆ.)

ಇವೇ ಅಧ್ಯಾತ್ಮದ ಮಲ್ಲಿಗೆ, ಮಂದಾರ, ಜಾಜಿ, ಪಾರಿಜಾತ, ನಂದಿಬಟ್ಟಲು, ಪುನ್ನಾಗ, ಕಮಲ, ಕಲ್ಹಾರಗಳು. ಮನಸ್ಸು, ಸತ್ವಪ್ರಚುರವಾದಾಗ ಅರಳುವ ಹೂವು ಗಳು. ಸತ್ವದ ಗುಣ ಪ್ರಕಾಶ – ಬೆಳಕು. ಆದರಿಂದಲೆ ಬಿಳಿಯ ಹೂವುಗಳು. ಹಾಗೆಯೆ ಭಕ್ತಿಯ ಕಂಪು ತುಂಬಿದ ಪರಿಮಳದ ಹೂವುಗಳು. ಇಂಥ ಸದ್‌ಭಾವದ ಬದುಕೇ ಭಗವಂತನಿಗೆ ನಾವು ಮಾಡಬೇಕಾದ ಪುಷ್ಪಾರ್ಚನೆ.

ಇದನ್ನು ಹಿಡಿದು ಬಂದವರು ಸುರರು. ಆಧ್ಯಾತ್ಮದ ಸಾಧನೆಯಲ್ಲಿ ನಮಗೆ ಸಹಕರಿಸಲೆಂದು ನಮ್ಮ ಇಂದ್ರಿಯಗಳಲ್ಲಿದ್ದು ನಮ್ಮನ್ನು ಸತ್‌ಪಥದಲ್ಲಿ ನಡೆಸುತ್ತಿರುವ ತತ್ವಾಭಿಮಾನಿ ದೇವತೆಗಳು ಮತ್ತು ಜೀವಕಲೆಯ ಅಭಿಮಾನಿಯಾದ ಮುಖ್ಯ ಪ್ರಾಣ.

ಇಂದ್ರಿಯಾಭಿಮಾನಿಗಳನ್ನು ಶಾಸ್ತ್ರಗಳು ವಿವಕ್ಷಾಭೇದದಿಂದ ನಾನಾಬಗೆಯಲ್ಲಿ ಬಣ್ಣಿಸಿದ್ದುಂಟು. ಒಂದು ಬಗೆಯನ್ನು ಇಲ್ಲಿ ಇಟ್ಟುಕೊಳ್ಳೋಣ:

"ಸೋಮ ವಿತ್ತಪ ಸೂರ್ಯಾಪ್ಪಃ
ಅಶ್ವ್ಯಗ್ನೀಂದ್ರೇಂದ್ರ ಸೂನವಃ ।
ಯಮೋ ದಕ್ಷಶ್ಚೇಂದ್ರಿಯೇಶಾಃ........"

(ಕಿವಿಯಲ್ಲಿದ್ದು ಶ್ರವಣ ಶಕ್ತಿಯನ್ನು ನೀಡುವವನು ಚಂದ್ರ. ತ್ವಕ್ಕಿನಲ್ಲಿದ್ದು ಸ್ಪರ್ಶಶಕ್ತಿ ನೀಡುವವನು ಕುಬೇರ. ಕಣ್ಣಿನಲ್ಲಿದ್ದು ದರ್ಶನಶಕ್ತಿ ನೀಡುವವನು ಸೂರ್ಯ. ನಾಲಿಗೆಯಲ್ಲಿದ್ದು ರಸಾಸ್ವಾದನ ಶಕ್ತಿ ನೀಡುವವನು ವರುಣ. ಮೂಗಿನಲ್ಲಿದ್ದು ಗಂಧದ ಆಘ್ರಾಣನ ಶಕ್ತಿ ನೀಡುವವರು ಅಶ್ವಿನಿಗಳು (ಇವರು ಐವರು ಐದು ಜ್ಞಾನೇಂದ್ರಿಯಗಳ ಅಭಿಮಾನಿಗಳಾದರೆ ಮುಂದಿನ ಐವರು ಐದು ಕರ್ಮೇಂದ್ರಿಯಗಳ ಅಭಿಮಾನಿ ದೇವತೆಗಳು.) ವಾಕ್ಕಿನಲ್ಲಿದ್ದು ಆಡುವ ಶಕ್ತಿ ನೀಡುವವನು ಅಗ್ನಿ. ಕೈಯಲ್ಲಿದ್ದು ಮಾಡುವ ಶಕ್ತಿ ನೀಡುವವನು ಇಂದ್ರ. ಕಾಲಲ್ಲಿದ್ದು ನಡೆಯುವ ಶಕ್ತಿ ನೀಡುವವನು ಇಂದ್ರಪುತ್ರನಾದ ಜಯಂತ. ಪಾಯುವಿನಲ್ಲಿದ್ದು ವಿಸರ್ಜನ ಶಕ್ತಿ ನೀಡುವವನು ಯಮ. ಜನನೇಂದ್ರಿಯದಲ್ಲಿದ್ದು ಭೋಗದ ಶಕ್ತಿ ನೀಡುವವನು ದಕ್ಷಪ್ರಜಾಪತಿ.)

ಇವು ಹತ್ತು ಬಾಹ್ಯೇಂದ್ರಿಯಗಳು. ಒಳಗೆ ಮನಸ್ಸಿನಲ್ಲಿದ್ದು ನಮಗೆ ಚಿಂತನ ಶಕ್ತಿ ನೀಡುವವರು ರುದ್ರ ದೇವರು; ಗರುಡ ಶೇಷರು ಕೂಡ. ಅವರೆಲ್ಲರೂ ನಮಗಾಗಿ ನಮ್ಮೊಳಗಿದ್ದು ನಮ್ಮ ಇಂದ್ರಿಯ ವ್ಯಾಪಾರಗಳ ಮೂಲಕ ಭಗವಂತನಿಗೆ ಪುಷ್ಪಾರ್ಚನೆ ಮಾಡುತ್ತಿದ್ದಾರೆ. ಇವರೆಲ್ಲರೊಳಗೂ ತುಂಬಿ, ಮುಖ್ಯಶಕ್ತಿಯಾಗಿ, ನಮ್ಮ ಉಸಿರನ್ನು ನಿಯಂತ್ರಿಸುತ್ತ ಜೀವಕಳೆಯ ಅಭಿಮಾನಿಯಾಗಿ ಮುಖ್ಯ ಪ್ರಾಣ–ಬ್ರಹ್ಮದೇವರುಕೂಡ–ಭಗವಂತನಿಗೆ ಸದಾ ಪುಷ್ಪಾರ್ಚನೆ ಮಾಡುತ್ತಿದ್ದಾರೆ.

"ಹೀಗೆ ಸುರರು ನನ್ನೊಳಿದ್ದು ನನಗಾಗಿ ದೇವರಿಗೆ ಹೂವಿನ ಪೂಜೆ ಸಲ್ಲಿಸುತ್ತಿದ್ದಾರೆ; ತನ್ಮೂಲಕ ನನ್ನಿಂದ ಪೂಜೆ ಮಾಡಿಸುತ್ತಿದ್ದಾರೆ". ಅದರಿಂದ:

"ಅರಳು ಮಲ್ಲಿಗೆ ಜಾಜಿ ಪರಿಮಳದ ಪುಷ್ಪಗಳ
ಸುರರು ತಂದಿಹರಯ್ಯ"

"ನಾನು ಮಾಡುತ್ತೇನೆ" ಎನ್ನುವುದು ಅಹಂಕಾರದ ಮಾತಾಯಿತು. "ಸುರರು ನನ್ನಿಂದ ಮಾಡಿಸುತ್ತಿದ್ದಾರೆ" ಎನ್ನುವುದು ಸಾತ್ವಿಕ ಉಪಾಸನೆಯ ರೀತಿ:

ಸರ್ವೇಂದ್ರಿಯಾಭಿಮಾನಿಸ್ಥ-
ಮುಖ್ಯಪ್ರಾಣಸ್ಥವಿಷ್ಣುನಾ ।

ಪ್ರೇರಿತಃ ಶ್ರೀಶತುಷ್ಟ್ಯರ್ಥಂ
ಕರಿಷ್ಯೇ ಕರ್ಮ ಚಾಖಿಲಮ್ ॥

(ಇಂದ್ರಿಯಾಭಿಮಾನಿಗಳ ಒಳಗೆ ಮುಖ್ಯಪ್ರಾಣ ನಿಯಾಮಕನಾಗಿದ್ದಾನೆ. ಅವನೊಳಗೆ ಅವನಿಗೂ ನಿಯಾಮಕನಾಗಿ ನಾರಾಯಣನಿದ್ದಾನೆ. ಅವನ ಪ್ರೇರಣೆಯಿಂದಲೆ, ಅವನು ಪ್ರೀತನಾಗಲಿ ಎಂದೆ, ಅವರೆಲ್ಲ ಪ್ರೇರಿಸಿದಂತೆ ನಾನು ಕರ್ಮಗಳನ್ನು ಮಾಡುತ್ತೇನೆ.)

ಈ ಅನುಸಂಧಾನವನ್ನು ದಾಸರು ಸುಂದರವಾಗಿ ಹೀಗೆ ಹೇಳಿದರು: "ಅರಳು ಮಲ್ಲಿಗೆ ಜಾಜಿ ಪರಿಮಳದ ಪುಷ್ಪಗಳ ಸುರರು ತಂದಿಹರಯ್ಯ ಸುಜನರೊಡೆಯ".

ಇಲ್ಲಿ ಭಗವಂತನನ್ನು ಸುಜನರ ಒಡೆಯ ಎಂದು ಕರೆದಿದ್ದಾರೆ. ವಾಸ್ತವವಾಗಿ ಭಗವಂತನು ಸುಜನರಿಗೂ ಒಡೆಯ; ದುರ್ಜನರಿಗೂ ಒಡೆಯ. ಹೀಗಿದ್ದಾಗ, 'ಸುಜನರೊಡೆಯ' ಎಂದು ಕರೆಯುವುದರಲ್ಲಿ ಒಂದು ವಿಶಿಷ್ಟವಾದ ಉದ್ದೇಶವುಂಟು; ಯಾರ ಮನಸ್ಸು ಸುಮನಸ್ಸೋ ಅವರೆ ಸುಜನರು. ಯಾರ ಬಗೆ ತುಂಬ ಹೊಲಸು ತುಂಬಿದೆಯೋ ಅವರು ದುರ್ಜನರು. ಅವರ ಮನಸ್ಸಿನಲ್ಲಿ ಕೊಳೆ ತುಂಬಿರುವುದರಿಂದಲೆ ಅವರು 'ಸುಮನಸ್ಯ'ರಾಗಲಾರರು. ಅವರ ಭಾವ ಸದ್‌ಭಾವ ಆಗಲಾರದು. ಅದರಿಂದ ಅವರು ಭಾವ ಪುಷ್ಪಗಳಿಂದ ಪೂಜಿಸಲಾರರು. ಒಂದು ವೇಳೆ ಅವರು ದುರ್ಭಾವದಿಂದ ಪೂಜಿಸಿದರೂ ಅಂಥ ಪೂಜೆಯನ್ನು ದೇವರು ಸ್ವೀಕರಿಸುವುದಿಲ್ಲ. ಅದರಿಂದ ಅವನು ಸುಮನಸರ ಒಡೆಯ; ಸುಜನರ ಒಡೆಯ.

ಸೂರ್ಯ ಉದಿಸುತ್ತಾನೆ ; ಹೂವುಗಳು ಅರಳುತ್ತವೆ. ಅದರಿಂದ ಉದಯದಲಿ ಅರಳು ಹೂವುಗಳನ್ನು ಶ್ರೀನಿವಾಸನಿಗೆ ತಂದು ಅರ್ಪಿಸುತ್ತಾರೆ. ಆದರೆ ಇಂಥ ಹೂವುಗಳೂ ಇರುತ್ತವೆ. ಅವು ಬೆಳಗಾದಾಗ ಮುಚ್ಚಿಕೊಳ್ಳುತ್ತವೆ. ಕತ್ತಲಾದಾಗ ಅರಳುತ್ತವೆ. ಮನುಷ್ಯರಲ್ಲು ಹೀಗೆಯೇ: ಭಗವಂತನ ಅರಿವಿನ ಬೆಳಕು ಒಳಗೆ ತುಂಬಿದಾಗ ಕೆಲವರ ಮನಸ್ಸು ಅರಳುತ್ತದೆ. ಕೆಲವರ ಮನಸ್ಸು ಅರಳುವ ಬದಲು ಮುಚ್ಚಿಕೊಳ್ಳುತ್ತದೆ. ಏಕೆಂದರೆ ಬೆಳಕನ್ನು ದ್ವೇಷಿಸುವ ನಿಶಾಚರರು ಇವರು. ಗೂಬೆಯಂತೆ ಕತ್ತಲಲ್ಲಿ ಕಣ್ಣುಬಿಡುವವರು. ಹಗಲಲ್ಲಿ ನಿದ್ರಿಸುವವರು. ಇಂಥವರೇ ದುರ್ಜನರು. ಇವರಿಗೆ ತಮ್ಮೊಳಗೆ ಇರುವ ಒಡೆಯನ ಅರಿವೇ ಇರುವುದಿಲ್ಲ. ಅದರಿಂದ ಭಗವಂತ "ಸುಜನರ ಒಡೆಯ". ಹಿಂದೆ "ಅರಳು" ಎನ್ನುವ ವಿಶೇಷಣವೂ ಈ ಅರ್ಥ ಧ್ವನಿಗೆ ಪೋಷಕವಾಗಿಯೆ ಬಂದಿದೆ.

"ನಾನಂತು ಇಂಥ ಮನಃಶುದ್ಧಿಯಿಂದ ನಿನಗೆ ಸದ್ಭಾವದ ಅರಳು ಪುಷ್ಪಾಂಜಲಿಯನ್ನು ಅರ್ಪಿಸುತ್ತಿದ್ದೇನೆ. ಅದರಿಂದ ನೀನು ಒಡೆಯನಾಗಿ ನಿಂತು ಈ ದಾಸನನ್ನು ಉದ್ಧರಿಸಬೇಕು."

ಮೊದಲ ಪದ್ಯದಲ್ಲಿ ಬಂದ ದಾಸರೇ ಇಲ್ಲಿ ಸುಜನರು. ದಾಸನಾಗದೆ ಸುಜನ ಆಗಲಾರ. ಸುಜನನಲ್ಲದವ ದಾಸನೂ ಆಗಲಾರ.

ಬಗೆಯಲ್ಲಿ ಮೂಡಿಬಂದ ಭಗವಂತನ ರೂಪವನ್ನು ಭಾವ ಪುಷ್ಪಾಂಜಲಿಯಿಂದ ಅರ್ಪಿಸಿದ ದಾಸರು ಪಾದಾದಿಕೇಶಾಂತದರ್ಶನದ ಬಯಕೆಯಿಂದ, ಭಕ್ತಿಯ ಸಲುಗೆಯಿಂದ ಮೆಲ್ಲನೆ ತಲೆಯೆತ್ತಿ ಕಣ್ಣೆತ್ತಿ ದಿಟ್ಟಿಸುತ್ತಾರೆ. ಭಕ್ತನ ಮೇಲಣ ಮಮತೆಯಿಂದ ಅರಳಿನಿಂತ ಭಗವಂತನ ತಾವರೆಗಣ್ಣು ಅವರಿಗೆ ಅಭಯರಕ್ಷೆಯಾಗಿ ಗೋಚರವಾಗುತ್ತದೆ. ಆಗ ದಾಸರು ಹೀಗೆ ಹಾಡುತ್ತಾರೆ :

ಅರವಿಂದಲೋಚನನೆ, ಕೋಳಿ ಕೂಗಿತು ಕೇಳು
ಪುರಂದರವಿಠಲನೇ ಬೆಳಗಾಯಿತು

ಭಗವಂತ ಅರವಿಂದಲೋಚನ: ತಾವರೆಗಣ್ಣಿನ ಚೆಲುವ. ಈ ಮಾತು ಉಪನಿಷತ್ತುಗಳಲ್ಲೂ ಬಂದಿದೆ:

"ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣೀ"
(ಛಂದೋಗ : 1.6-7.)

(ನೀರಿನಲ್ಲಿ ಬೇರುಬಿಟ್ಟ ಹಸಿ ತಾವರೆಯೆಸಳಿನಂತೆ ಅವನ ಕಣ್ಣುಗಳು ರಸಸ್ಯಂದಿಯಾಗಿ ಸುಂದರವಾಗಿವೆ.)

ಆದಕೆಂದೆ ಪುರಂದರದಾಸರೂ ಭಗವಂತನನ್ನು 'ಅರವಿಂದಲೋಚನನೆ' ಎಂದರು.

"ಅರವಿಂದ ರಾತ್ರಿಯ ಹೊತ್ತು ಮೊಗ್ಗಾಗಿ ಮುಚ್ಚಿಕೊಂಡು ಸೂರ್ಯೋದಯವಾದಾಗ ಅರಳಿಕೊಳ್ಳುತ್ತದೆ. ನೀನೂ ಅರವಿಂದಲೋಚನ ಎಂದ ಮೇಲೆ ಸೂರ್ಯೋದಯವಾದಾಗ ನಿನ್ನ ಕಣ್ಣು ಅರಳುವುದು ಸಹಜವಲ್ಲವೆ?" ಭಕ್ತರ ಬಗೆಯೊಳಗೂ ಜ್ಞಾನಸೂರ್ಯನ ಉದಯವಾಗುತ್ತದೆ. ಒಲಿದು ನಿಂತ ಭಗವಂತನ ಕಣ್ದಾವರೆ ಅರಳುತ್ತಿದೆ. ಹೀಗೆ ಅರವಿಂದಲೋಚನ ಎನ್ನುವುದು ಭಗವಂತನ ದೃಷ್ಟಿಯಲ್ಲಿ ತುಂಬಿದ ಕೃಪಾರಸ ಪೂರವನ್ನೂ, ಅನುಗ್ರಹೋನ್ಮುಖತೆಯನ್ನೂ ಸೂಚಿಸುವ ಪದ. ಜತೆಗೆ ಭಕ್ತನ ಪ್ರಾರ್ಥನೆಯ ಕಾತರತೆಯೂ ಆದರಲ್ಲಡಗಿದೆ. ಒಳಬಗೆಯ ಸೂರ್ಯ ಮೂಡಿ ಬರುತ್ತಿದ್ದಾನೆ. ತೆರೆ ನಿನ್ನ ಕರುಣೆಯ ಕಣ್ದಾವರೆಯನ್ನು ......

ಇನ್ನೂ ಬೆಳಗಿನ ಜಾವದ ಹಾಲುನಿದ್ದೆಯಲ್ಲಿ ಕಣ್ಣು ತೆರೆಯದೆ ಹಾಯಾಗಿ ಮಲಗಿದವನಿಗೆ ಬೆಳಕು ಹರಿಯತೊಡಗಿದ್ದು ಹೇಗೆ ತಿಳಿಯಬೇಕು? ಕಣ್ಣು ತೆರೆದರೆ ತಾನೆ ಬೆಳಕು ಕಾಣುವುದು. ಅವನು ಈ ಹಾಲುನಿದ್ದೆಯ ಸವಿಯಿಂದ ತಪ್ಪಿಸಿಕೊಳ್ಳಲಾಗದೆ 'ಊಂ ಇನ್ನೂ ಕತ್ತಲು' ... ಎನ್ನುತ್ತ ಆಚೆಯ ಮಗ್ಗುಲಿಗೆ ಹೊರಳುತ್ತಾನೆ. ಇಂಥವನಿಗೆ ಬೆಳಕು ಕಾಣಿಸುವುದು ಸಾಧ್ಯವಿಲ್ಲ. ಬೆಳಕಾದ್ದನ್ನು ಕೇಳಿಸಬೇಕು. ಮುಂಜಾ

ವದಲ್ಲಿ ಏಳಲಾಗದೆ ಚಂಡಿಹಿಡಿಯುವ ಮುದ್ದು ಮಕ್ಕಳನ್ನು ವಾತ್ಸಲ್ಯದ ಮಾತು ಗಳಿಂದ ಮಮತಾ ಮಯಿ ತಾಯಿ ತಟ್ಟಿ ಎಬ್ಬಿಸುವಂತೆ ದಾಸರೂ ತನ್ನ ಹೃದಯ ತೊಟ್ಟಿಲಲ್ಲಿ ಮಲಗಿದ ಅಪ್ರಾಕೃತ ಶಿಶು ಪ್ರಾಜ್ಞರೂಪೀ ಭಗವಂತನನ್ನು ಏಳುವಂತೆ ರಮಿಸುತ್ತಾರೆ: "ಕೋಳಿ ಕೂಗಿತು ಕೇಳು".

ಹೊರಗಿನ ಅರ್ಥ ಸ್ಪಷ್ಟ: ಬೆಳಗಾಯಿತು ಎಂದು ಕೋಳಿಗೂ ತಿಳಿದಿದೆ. ಮನುಷ್ಯನಿಗೆ ತಿಳಿಯೋದು ಬೇಡವೆ ? ಮನುಷ್ಯ ಎದ್ದು ತನ್ನ ಕರ್ತವ್ಯದಲ್ಲಿ ತೊಡ ಗೋದು ಬೇಡವೆ ? ಅವನು ಎದ್ದಾಗ ತನ್ನ ದೇವರನ್ನೂ ಕೂಗಿ ಎಬ್ಬಿಸಿದ: "ಕೋಳಿ ಕೂಗಿತು ಕೇಳು."

ಇದು ಸಾಮಾನ್ಯವಾದ ಮುಖ. ಹೊರಗಿನ ಮಾತು. ಒಳಗೆ ಬೆಳಗಾದಾಗ ಒಳಗೂ ಕೋಳಿ ಕೂಗುತ್ತದೆ. ಒಳಬಗೆಯಲ್ಲಿ, ಹೃದಯದಲ್ಲಿ ಭಗವಂತ ನೆಲಸಿದ್ದಾನೆ. ಪ್ರಾಜ್ಞರೂಪದಿಂದ ಜೀವನಿಗೆ ನಿದ್ರೆ ಬರಿಸಿ ಪವಡಿಸಿದ್ದಾನೆ. ಅಲ್ಲಿ ಜ್ಞಾನೋದಯದ ಬೆಳಕು ಹರಿಯ ತೊಡಗಿದೆ. ಭ್ರೂಮಧ್ಯದ ಆಜ್ಞಾಚಕ್ರದಲ್ಲಿ ಉಷೆಯ ಕೆಂಪು ಮೂಡಿದೆ. ಹೃದಯದ ಅನಾಹತಚಕ್ರದಲ್ಲಿ ಅನಾಹತಧ್ವನಿಯ ಕೋಳಿ ಕೂಗುತ್ತಿದೆ. ಮೂಲಾಧಾರದಿಂದ ಹೊರಟು ಪರಾ ಆಗಿ, ಪಶ್ಯಂತಿ ಆಗಿ, ಹೃದಯ ಮಧ್ಯದಲ್ಲಿ ಮಧ್ಯಮಾ ಆಗಿ ನಿನದಿಸುವ ಈ ಅನಾಹತ ಧ್ವನಿ (Nonvibrative Sound) ಕಂಠ ತಾಲುಗಳಲ್ಲಿ ದಂತೋಷ್ಠಗಳಲ್ಲಿ ಆಹತವಾಗಿ ವೈಖರಿಯಾಗಿ ಹೊರಗಿವಿಗೆ ಬೀಳುವ ಮುನ್ನವೆ ಜ್ಞಾನಿಗಳ ಒಳಗಿವಿಗೆ ಸ್ಫುಟವಾಗಿ ಕೇಳಿಸುತ್ತದೆ. ಅಜ್ಞಾನಿಗಳಿಗೂ ಈ ಹೃದಯಮಂದಿರದ ಓಂಕಾರದ ಶಂಖನಾದ ಕಿವಿಮುಚ್ಚಿ ಆಲಿಸಿದಾಗ ಕಿಂಚಿತ್ತಾಗಿ ಕೇಳಿಸುತ್ತದೆ:

"ತಸ್ಯೈಷಾ ಶ್ರುತಿರ್ಯತ್ರೈತತ್ ಕರ್ಣಾವಪಿಗೃಹ್ಯ ನಿನದ-
ಮಿವ ನದಥುರಿವಾಗ್ನೇರಿವ ಜ್ವಲತ ಉಪಶೃಣೋತಿ"
(ಛಂದೋಗ: 3.13.8.)

(ಹೃದಯದಲ್ಲಿರುವ ವೈಶ್ವಾನರನನ್ನು ಪ್ರಾಣನು ಸ್ತುತಿಸುತ್ತಿದ್ದಾನೆ. ಎರಡೂ ಕಿವಿಯನ್ನು ಗಟ್ಟಿಯಾಗಿ ಮುಚ್ಚಿಕೊಂಡಾಗ ಏನೋ ಗಾಲಿ ಉರುಳಿದಂತೆ, ಗೂಳಿ ಕೆರಳಿ ಹೂಂಕರಿಸಿದಂತೆ, ಉರಿವ ಬೆಂಕಿಯು ಧೋ ಎನ್ನುವಂತೆ ಒಂದು ಒಳದನಿ ಕೇಳಿಸುತ್ತದೆ. ಅದೇ ಆ ಪ್ರಾಣಶಕ್ತಿಯ ನಾದ.)

ಪುರಂದರದಾಸರಿಗೆ ಈ ಅನಾಹತದ ನಾದ ಕೇಳಿಸಿತು. ಈ ಅಂತರ್ನಾದದ ಅನುಭವದ ಸಂತೋಷವನ್ನು ಅವರು ಭಗವಂತನ ಮುಂದೆ ತೋಡಿಕೊಳ್ಳುತ್ತಾರೆ: "ಕೋಳಿ ಕೂಗಿತು ಕೇಳು." ಇನ್ನು ಸಹಸ್ರಾರದಲ್ಲಿ ಸೂರ್ಯೋದಯಕ್ಕೆ ಹೆಚ್ಚು ಹೊತ್ತು ಕಾಯ ಬೇಕಾಗಿಲ್ಲ. ಅದೂ ಆಗಿಯೇ ಬಿಟ್ಟಿತು: "ಪುರಂದರ ವಿಠಲನೇ, ಬೆಳಗಾಯಿತು."

ಪುರಂದರದಾಸರಿಗೊಲಿದ ವಿಠ್ಠಲನೇ ಪುರಂದರವಿಠಲ. ಪುರ ಎಂದರೆ ದೇಹ ಕೂಡ ಹೌದು. ದೇಹ ಬಂಧನವನ್ನು ಕಳಚುವುದರಿಂದ ಪುರಂದರನಾದ ವಿಠ್ಠಲ. "ಪುರಂದರ ವಿಠ್ಠಲ" ಗುರು ವ್ಯಾಸತೀರ್ಥರು ದಾಸರಿಗೆ ಕೊಟ್ಟ ಪವಿತ್ರ ಮುದ್ರಿಕೆ ಇದು.

ವಿಠ್ಠಲ ಎನ್ನುವ ಶಬ್ದವೆ ಆಧ್ಯಾತ್ಮಿಕ ಸಂಕೇತವನ್ನುಳ್ಳದ್ದು. ಇದೊಂದು ಪ್ರತ್ಯೇಕ ಅವತಾರ ರೂಪವಲ್ಲ. ಶ್ರೀನಿವಾಸನೂ ಒಂದು ಅವತಾರವಲ್ಲ; ವಿಠ್ಠಲನೂ ಒಂದು ಅವತಾರವಲ್ಲ. ಕೃಷ್ಣನೇ ವಿಠ್ಠಲ; ಕೃಷ್ಣನೇ ಶ್ರೀನಿವಾಸ. ಪಂಢರಪುರದ ಶ್ರೀನಿವಾಸನೆ ವಿಠ್ಠಲ. ತಿರುಪತಿಯ ವಿಠ್ಠಲನೆ ಶ್ರೀನಿವಾಸ.

ಇದು ಕೃಷ್ಣಾವತಾರದ ರೂಪವೆ ಹೌದು ಎಂದು ಸೂಚಿಸುವುದಕ್ಕಾಗಿಯೆ ಮೊದಲನೆಯ ಸೊಲ್ಲಿನಲ್ಲಿ 'ವಾಸುದೇವನೆ' ಎಂಬ ಸಂಬೋಧನೆ. ವಸುದೇವತನಯನಾದ ಶ್ರೀಕೃಷ್ಣನೆ ವೇಂಗಡದ ಶ್ರೀನಿವಾಸ ಎನ್ನುವುದು ಇಲ್ಲಿ ಸ್ಪಷ್ಟ.

ಇದನ್ನು ಇನ್ನಷ್ಟು ಸ್ಫುಟಗೊಳಿಸುವುದಕ್ಕಾಗಿಯೆ ದಾಸರು ಎರಡನೆಯ ಸೊಲ್ಲಿನಲ್ಲಿ ಈ ಭಾವವನ್ನೆ ಮುಂದುವರಿಸುತ್ತ ನವನೀತ ಚೋರನಾದ ಶ್ರೀಕೃಷ್ಣನ ಲೀಲೆಯನ್ನು ನೆನಪಿಸುತ್ತ, ಸಾಕೂತವಾಗಿ ಹೀಗೆ ಹಾಡಿದ್ದರು: "ಲೇಸಾಗಿ ಕೆನೆಮೊಸರು ಬೆಣ್ಣೆಯನೆ ಮೆದ್ದು".

ವಿಠ್ಠಲ ಎನ್ನುವುದು ಕೃಷ್ಣನಿಗೆ ಅನುಭಾವಿಗಳಿಟ್ಟ ಹೆಸರು. ಮಹಾರಾಷ್ಟ್ರದಲ್ಲಿ ಇವನು ಪ್ರೀತಿಯ ವಿಟ್ಠೋ, ವಿಠೋಬ ಆದರೆ ಕನ್ನಡದ ದಾಸರ ಕೈಯಲ್ಲಿ ವಿಠಲ ಆದ. ಸಂಸ್ಕೃತ ಬಲ್ಲವರ ಕೈಯಲ್ಲಿ ವೇಂಗಡ, ವೇಂಕಟ ಆದಂತೆ ವಿಠಲ ವಿಠ್ಠಲನಾದ.

ವಿದ್ ಅಂದರೆ ಜ್ಞಾನ. ಜ್ಞಾನದ ಸ್ಥಲವೆ, ಹೃದಯ ಮಂದಿರವೆ ವಿತ್‌ಸ್ಥಲ— ವಿಠ್ಠಲ. ಅಲ್ಲಿ ನೆಲಸಿದ ಭಗವಂತನೆ ನಿಜವಾದ ವಿಠ್ಠಲ. ಇದು ಅನುಭಾವದ ನೆಲೆಯಲ್ಲಿ ಗೋಚರವಾಗುವ ಅರ್ಥ.

ಇಲ್ಲಿ ದಿನನಿತ್ಯದ ಹಗಲು – ರಾತ್ರಿಗಳ ಕುರಿತೂ ಒಂದು ಅನುಸಂಧಾನದ ಹಿನ್ನಲೆಯಿದೆ. ರಾತ್ರಿಯಲ್ಲಿ ನಾವು ನಿದ್ರಿಸುತ್ತೇವೆ – ಹೃದಯ ಕೋಶದಲ್ಲಿ, ಪ್ರಾಜ್ಞನಾಮಕ ಭಗವಂತನ ಆಸರೆಯಲ್ಲಿ. ಸುಷುಪ್ತ್ಯವಸ್ಥೆಯ ನಿಯಾಮಕನಾಗಿ ನಿದ್ರೆ ಬರಿಸುವವನು ಪ್ರಾಜ್ಞ. ಅವನು ಅಲ್ಲಿಂದ ಎದ್ದು ಬಂದು ನಮ್ಮ ಕಣ್ಣಲ್ಲಿ, ಆಜ್ಞಾ ಚಕ್ರದಲ್ಲಿ, ವಿಶ್ವನಾಮಕನಾಗಿ ನಿಂತು ಕಣ್ಣು ತೆರೆಸಿದಾಗ ಎಚ್ಚರ. ರಾತ್ರಿಯಲ್ಲಿ ನಿದ್ರಾಕಾಲದಲ್ಲಿ ಪ್ರಾಜ್ಞರೂಪದಿಂದ ನಮ್ಮನ್ನು ಸಲಹಿದ ಭಗವಂತನೆ ಹಗಲಿನಲ್ಲಿ ಜಾಗ್ರದವಸ್ಥೆಯಲ್ಲಿ ವಿಶ್ವನಾಗಿ ಕಣ್ಣಲ್ಲಿ ಕೂತು ಅರಳುಕಣ್ಣಿನ ಕೃಪಾದೃಷ್ಟಿಯಿಂದ ನಮ್ಮನ್ನು ಮಂಗಲದೆಡೆಗೆ ನಡೆಸಿ ಸಲಹಲಿ ಎನ್ನುವ ಅನುದಿನದ ಪ್ರಾರ್ಥನೆಯೂ ಈ ಪದ್ಯದಲ್ಲಿ ಧ್ವನಿತವಾಗಿದೆ. ಒಟ್ಟಿನಲ್ಲಿ, ಎಲ್ಲ ನಿಟ್ಟಿನಲ್ಲು ಇದು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವ ಪ್ರಾರ್ಥನೆ:

ಅಸತೋ ಮಾ ಸದ್ ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾಽಮೃತಂ ಗಮಯ

ಇಲ್ಲಿ ಹೃದಯ ರಂಗದಲ್ಲಿರುವ ವಿಠಲನೆ ಪ್ರಾಜ್ಞ. ಲೋಚನದಲ್ಲಿರುವ ವಿಶ್ವನೆ ಅರವಿಂದಲೋಚನ. ಹೀಗೆ ಇದು ಅನುದಿನದ ಪ್ರಾರ್ಥನೆಯಾಯಿತು. ಅಪರೋಕ್ಷಾನುಭೂತಿಯ ಕೊನೆಯ ಸೂರ್ಯೋದಯದ ಪ್ರಾರ್ಥನೆಯೂ ಆಯಿತು. ಜತೆಗೆ ಬದುಕಿನ ಅಸ್ಥಿರತೆಯ ಬಗೆಗೆ ಎಚ್ಚರ – ಅದರಿಂದ ಕಾಲ ಮೀರುವ ಮುನ್ನ ಭಗವಂತನ ದರ್ಶನದ ಬಗೆಗಿನ ಕಾತರವೂ ಈ ಕೊನೆಯ ಸಾಲುಗಳಲ್ಲಿ ತುಂಬಿದೆ:

ಅರವಿಂದಲೋಚನನ್ನೆ ಕೋಳಿ ಕೂಗಿತು ಕೇಳು
ಪುರಂದರ ವಿಠಲನೇ ಬೆಳಗಾಯಿತು.

ಕಾಲಪುರುಷನ ಕೋಳಿ ಕೂಗುತಿದೆ. ಆ ಕರೆಗೆ ಪ್ರತಿಯೊಬ್ಬ ಜೀವನೂ ಓಗೊಡಲೇ ಬೇಕು. ಅದರಿಂದ ನೀನು ಬೇಗನೆ ಎದ್ದು ಬರಬೇಕು. ಈ ದೇಹ ಬಿದ್ದು ಹೋಗುವ ಮುನ್ನ ನಿನ್ನ ಅರಿವಿನ ಬೆಳಕಾಗಬೇಕು.” ಅದಕ್ಕಾಗಿಯೇ – ಭಕ್ತನಿಗೆ ಸುಪ್ರಭಾತದ ಬಗೆಗೆ ಅಷ್ಟೊಂದು ಕಾತರ. ಆದರೆ ಪುರಂದರದಾಸರಿಗೆ ಆ ಭಯವಂತು ಇಲ್ಲ. ಕೋಳಿ ಕೂಗುವ ಮುನ್ನ ಅವರಿಗೆ ಬೆಳಗಾಯಿತು. ಆ ಸಂತಸದಲ್ಲಿ ಅವರು ಹಾಡಿದರು:

ಏಳಯ್ಯ ಬೆಳಗಾಯಿತು
ಏಳು ಲಕ್ಷ್ಮೀರಮಣ ಏಳು ನಾರಾಯಣ
ಏಳು ಶ್ರೀಗಿರಿಯೊಡೆಯ ವೇಂಕಟೇಶ

ಹೀಗೆ ಆಧ್ಯಾತ್ಮದ ಅನೇಕ ಮಜಲುಗಳಲ್ಲಿ ತನ್ನನ್ನು ತೆರೆದು ಕೊಳ್ಳುವ, ಯಾರು ಯಾವ ಹಂತದಲ್ಲಿ ನಿಂತು ನೋಡಿದರೂ ಅವರನ್ನು ಅವರ ಮಟ್ಟದಲ್ಲೆ ಅನುಭವದ ಪಾತಳಿಗೆ ಕೊಂಡೊಯ್ಯುವ, ಹೃದಯವನ್ನು ಮುಟ್ಟುವ, ಆತ್ಮಸಾಕ್ಷಿಯನ್ನು ತಟ್ಟಿ ಎಬ್ಬಿಸುವ ಈ ಸುಪ್ರಭಾತದ ಹಾಡು ಪುರಂದರ ದಾಸರ ಅನುಭಾವಗೀತೆಗಳ ಸಾಲಿನಲ್ಲಿ ಒಂದು ಅನರ್ಘ್ಯ ಮಾಣಿಕ್ಯ.

ಇದನ್ನು ಗಮನಿಸಿದವರಿಗೆ ಅರ್ಥವಾಗ ಬಹುದು. ಪುರಂದರ ದಾಸರ ಹಾಡುಗಳನ್ನು ವ್ಯಾಸತೀರ್ಥರು ‘ಕನ್ನಡದ ಉಪನಿಷತ್ತುಗಳು’ ಎಂದು ಏಕೆ ಕರೆದರು–ಎಂದು. ಅನುಭಾವದ ಆಳ ಮಾತ್ರ ಪುರಂದರ ದಾಸರದ್ದು. ನುಡಿಸಿದ್ದು ಪುರಂದರ ವಿಠಲ. ದಾಸರು ಏನನ್ನು ಯೋಚಿಸಿ ಇದನ್ನು ಹಾಡಿದರೋ ಅದಷ್ಟೆ ಇದರ ಅರ್ಥವಾಗ ಬೇಕಾಗಿಯೂ ಇಲ್ಲ. ಅನುಭಾವದ ರೀತಿಯೇ ಹಾಗೆ. ಯಾರ ಅನುಭಾವಕ್ಕೆ ಎಂಥ

ಭಾವ ಸ್ಫುರಿಸಿತೋ ಇದೆಲ್ಲವೂ ಅದರದೆ ಭಾವ; ಅದರದೇ ಪ್ರಭಾವ. ಏಕೆಂದರೆ ಈ ಹಾಡೆ ಒಂದು ದೈವೀ ಸ್ಫುರಣೆ; ಆರ್ಷದರ್ಶನ. ಅದರಿಂದಲೆ ಉಪನಿಷತ್ತು.

ಮುಂದೆಯೂ ಪುರಂದರದಾಸರ ಪದ್ಯಗಳನ್ನು ಗಮನಿಸುವಾಗ ಈ ಭಾವದ, ಅನುಭಾವದ ಹಿನ್ನೆಲೆ ಇರಬೇಕು ಎನ್ನುವುದಕ್ಕಾಗಿ ಈ ಮೊದಲ ಪದ್ಯಕ್ಕೆ ಇಷ್ಟು ವಿಸ್ತಾರವಾದ ಭಾಷ್ಯ ಬರೆಯಬೇಕಾಯಿತು. ಮುಂದಿನ ಪ್ರತಿಯೊಂದೂ ಪದ್ಯಕ್ಕೂ ಹೀಗಿಯೆ ತಿಳಿಸುವುದು ಸಾಧ್ಯವೂ ಅಲ್ಲ, ಸಾಧುವೂ ಅಲ್ಲ.

ಈ ಅಧ್ಯಾತ್ಮದ ಹಿನ್ನೆಲೆ ಎಲ್ಲ ಪದ್ಯಗಳಲ್ಲು ಯಥಾ ಸಂಭವ ಅನ್ವಯಿಸಿಕೊಳ್ಳುವಂಥದು. ಅಗತ್ಯವೆನಿಸಿದಾಗ ಅಲ್ಲೊಮ್ಮೆ ಇಲ್ಲೊಮ್ಮೆ ವಿವರಿಸಬಹುದು. ಉಳಿದದ್ದು ಅವರವರ ಅಧ್ಯಯನದ ಪ್ರಯತ್ನ ಶೀಲತೆಗೆ ಬಿಟ್ಟದ್ದು. ಮನನಶೀಲರಲ್ಲದವರಿಗೆ ಆಧ್ಯಾತ್ಮರಂಗದಲ್ಲಿ ಪ್ರವೇಶವಿಲ್ಲ. ಅವರಿಗೆ ಕೋಳಿ ಕೂಗಿದ್ದೂ ಕೇಳಿಸುವುದಿಲ್ಲ. ಬೆಳಗಾಗುವುದೂ ಇಲ್ಲ. ಬೆಳಗಾದರೂ ಅವರು ಹಾಸಿಗೆಯಿಂದೆದ್ದು ಕಣ್ಣು ತೆರೆಯುವುದಿಲ್ಲ.

ಈ ಪದ್ಯದಲ್ಲಿ ಒಂದು ಸಾಂಖ್ಯದರ್ಶನವೂ ಉಂಟು. ಸಂಖ್ಯೆಯ ಮೂಲಕ ತತ್ವದರ್ಶನ, ವೇದಪುರಾಣಗಳಲ್ಲೆಲ್ಲ ಬೆಳೆದುಬಂದ ಪರಂಪರೆ ಇದು. ಇಲ್ಲಿ ಒಟ್ಟು ಮೂರು ಸೊಲ್ಲುಗಳಿವೆ. ಈ ಮೂರರ ಸಂಕೇತದಲ್ಲಿ ಅನೇಕ ಅರ್ಥಗಳು ಅಡಗಿವೆ.

ಮನುಷ್ಯನ ಸ್ವಭಾವವನ್ನು, ಒಟ್ಟಿನಲ್ಲಿ ಈ ಪ್ರಾಕೃತ ಪ್ರಪಂಚವನ್ನು ನಿಯಂತ್ರಿಸುವ ಗುಣಗಳು ಮೂರು: ಸತ್ವ, ರಜಸ್ಸು, ತಮಸ್ಸು.

ಬದುಕಿನ ಅವಸ್ಥೆಗಳು ಮೂರು: ಜಾಗ್ರತೆ, ಸ್ವಪ್ನ, ಸುಷುಪ್ತಿ.

ಒಟ್ಟು, ಸಂಸಾರಗತಿಯ ಅವಸ್ಥೆಗಳೂ ಮೂರು: ಸೃಷ್ಟಿ, ಸ್ಥಿತಿ, ಸಂಹಾರ.

ಲೋಕಗಳು ಮೂರು: ಭೂಮಿ, ಅಂತರಿಕ್ಷ, ಸ್ವರ್ಗ.

ಕಾಲಗಳು ಮೂರು: ಭೂತ, ವರ್ತಮಾನ, ಭವಿಷ್ಯತ್ತು.

ದಿನದ ಸಂಧ್ಯೆಗಳೂ (ಮುಸ್ಸಂಜೆ) ಮೂರು: ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ.

ಕಾಲಿಕ ಆರಾಧನೆ – ಯಜ್ಞಗಳೂ ಮೂರು: ಪ್ರಾತಃಸವನ, ಮಾಧ್ಯಂದಿನ ಸವನ, ಸಾಯಂಸವನ.

ಆರಾಧನೆಯ ಕರಣಗಳೂ ಮೂರು: ಕಾಯ, ವಾಕ್ಕು, ಮನಸ್ಸು.

ಇವನ್ನೆಲ್ಲ ನಿಯಂತ್ರಿಸುವ ಭಗವಂತನ ರೂಪಗಳೂ ಮೂರು: ಅಮೃತ, ಕ್ಷೇಮ, ಅಭಯ. (ಅಚ್ಯುತ, ಅನಂತ, ಗೋವಿಂದ). "ತ್ರಿಪಾದಸ್ಯಾಮೃತಂ ದಿವಿ".

ಭಗವಂತನ ದಿವ್ಯಲೋಕಗಳೂ ಮೂರು: ಶ್ವೇತದ್ವೀಪ, ಅನಂತಾಸನ, ವೈಕುಂಠ.

ಭಗವಂತನನ್ನು ಪ್ರತಿಪಾದಿಸುವ ಓಂಕಾರದ ಅಕ್ಷರಗಳೂ ಮೂರು: ಅ, ಉ, ಮ. ವ್ಯಾಹೃತಿಗಳೂ ಮೂರು: ಭೂಃ ಭುವಃ ಸ್ವಃ; ವೇದಗಳೂ ಮೂರು: ಋಕ್, ಯಜುಸ್ಸು, ಸಾಮ.

ತ್ರಿವಿಕ್ರಮನ ಮೂರು ಹೆಜ್ಜೆಗಳಲ್ಲಿ ಇಡಿಯ ಬ್ರಹ್ಮಾಂಡವೆ ಒಳಗೊಂಡಂತೆ ಈ ಮೂರರ ಅಂಕೆಯಲ್ಲಿ ಇಡಿಯ ವಿಶ್ವದ ರಹಸ್ಯ ಅಡಗಿದೆ. ಇದು ಸಂಖ್ಯೆಯ ಮೂಲಕ ಅನುಸಂಧಾನ ಮಾಡಬೇಕಾದ ಸಾಂಖ್ಯದರ್ಶನದ ಬಗೆ.

ಮೂರರಿಂದ ಪ್ರತಿಪಾದ್ಯನಾಗಿ, ಮೂರಲ್ಲಿರುವ, ಮೂರು ರೂಪಗಳ ಭಗವಂತ ನಮಗೆ ಮೂರನ್ನು (ಜ್ಞಾನ, ಭಕ್ತಿ, ವೈರಾಗ್ಯ) ಕೊಡಲಿ.

ದಶಾವತಾರಿಗೆ ಸುಪ್ರಭಾತ

ಏಳಯ್ಯ ಬೆಳಗಾಯಿತು || ಪಲ್ಲವಿ ||

ಬೆಳಗಾಯಿತೇಳಯ್ಯ ಬಿಸಿಲು ಪ್ರೈದೋರುತಿದೆ
ಸುಳಿವು ದೋರ್‍ಶೈ ನಿಮ್ಮ ಹಾರೈಸಿ ನಿಂದಿಹರು
ತಳುವ ಮಾಡದಿರಯ್ಯ ಸ್ವಾಮಿ ತಿರುಮಲಿರಾಯ
ಸೆಳೆಮಂಚದಿಂದಲೇಳ || ಅನುಪಲ್ಲವಿ ||

ವೇದವನು ತರಲೇಳು ಮಂದರವ ಹೊರಲೇಳು
ಭೇದಿಸುತ ಅಸುರರನು ದಾಡೆಯಿಂ ತರಲೇಳು
ಕಾದಿ ಹಿರಣ್ಯಕನ ಕರುಳ ಕೊರಳೊಳಗೆ ಧರಿಸೇಳು ಕಾಯ್ದು
ಬಲಿಬಾಗಿಲದೊಳು ।
ಭೇದಿಸಿ ಭೂಮಿಯ ತ್ರಿಪಾದದಿಂದಳೆಯೇಳು
ಛೇದಿಸುತ ಕ್ಷತ್ರಿಯರ ಕೊಡಲಿಯಿಂ ಕಡಿಯೇಳು
ಸಾಧಿಸುತ ಶರಧಿಯಲಿ ಸೇತುವೆಯ ಕಟ್ಟೇಳು ನಂದಗೋಪನ ಉದರದಿ
|| ೧ ||

ಪುರಮೂರ ಗೆಲಬೇಕು ಅರಿವೆಯನು ಕಳಿಬೇಕು
ದುರುಳರನು ಕೊಲಬೇಕು ತುರಗವಾಹನನಾಗು
ಪರಪರಿಯ ಕೆಲಸಗಳ ಮಾಡಲುದ್ಯೋಗಿಸದೆ ಮರೆತು ನಿದ್ರೆಯ
ಗೈವರೆ ।
ಉರಿಗೈಯನಟ್ಟಿದರೆ ಹರನೋಡಿ ಬಂದಿಹನು
ಗಿರಿಜೆ ವರವನು ಬೇಡಬೇಕೆಂದು ನಿಂದಿಹಳು
ಸುರಪಾರಿಜಾತವನು ಕೊಂಡು ಸುರರಾಜ ಬಂದಿರುವನೇಳಯ್ಯ
ಹರಿಯೆ || ೨ ||

ಆಲದೆಲೆಯಿಂದೇಳು ಮಾಲಕುಮಿ ಬಂದಿಹಳು
ಹಾಲುಗಡಲಿಂದೇಳು ಶ್ರೀದೇವಿ ನಿಂದಿಹಳು
ಕಾಲ ಹಡೆಯಿಂದೇಳು ಭೂದೇವಿ ಬಂದಿಹಳು ಸಾಲಮಂಚಗಳಿಂದಲಿ ।

ಕ್ಷಿತಿನಾಥ ನೀನೇಳು ಸತಿಭಾಮೆ ಬಂದಿಹಳು
ಮತಿವಂತ ನೀನೇಳು ಜಾಂಬವತಿ ಬಂದಿಹಳು
ಗತಿವಂತ ನೀನೇಳು ತುಳಸಿ ಬಂದಿಹಳು ಏಕಾಂತ ಸೇವೆಯ ಮಾಡಲು ||೩||

ಅಂಬುರುಹದಿಂದ ಜನಿಸಿದ ಬ್ರಹ್ಮ ಬಂದಿಹನು
ಗಂಭೀರಗಾಯನದ ನಾರದನು ನಿಂದಿಹನು
ರಂಭೆ-ಮೇನಕೆ ಮೊದಲು ನರ್ತನಕೆ ಐದಿಹರು ಶಂಬರಾರಿಪಿತನೆ ಏಳು ।

ರಾಜಸೂಯವ ಕೊಳಲು ವಾಯುಸುತ ಬಂದಿಹನು
ತೇಜಿಯಾಟಕೆ ಅರ್ಜುನನು ಕರೆಯ ಬಂದಿಹನು
ಸಾಜ ಧರ್ಮಜ ಅಗ್ರ ಪೂಜೆಮಾಡುವೆನೆಂದು ಹೂಜೆಯನೆ ಪಿಡಿದುಕೊಂಡು || ೪ ||

ದೇವ ನಿನ್ನಂಘ್ರಿಯನು ಪೂಜೆ ಮಾಡುವೆವೆಂದು
ಕಾವೇರಿ ಕೃಷ್ಣೆ ಗೌತಮಿ ಗಂಗೆ ಮಲಪಹರಿ
ಸಾವಧಾನದಿ ಯಮುನೆ ತುಂಗಾ ಸರಸ್ವತೀ ಭೀಮರಥಿ ನೇತ್ರಾವತಿ ।
ದುರಿತಬಂಧನವನ್ನು ಪರಿಹರಿಸಿದೆಯೊ ಸ್ವಾಮಿ
ದುರಿತದುಷ್ಕರ್ಮವನು ದೇವ ಎಂದರೆ ಸುಡುವೆ
ದುರಿತತಾಪಕೆ ಚಂದ್ರ ನೀನೆನಿಸಿಕೊಂಡೆಯೋ ಸಿರಿಪುರಂದರ ವಿಠಲನೆ ||೫||

ಇನ್ನೂ ಬೆಳಕು ಹರಿದಿಲ್ಲ. ಬ್ರಾಹ್ಮಮುಹೂರ್ತದ ನಸುಕು. ಬೆಳ್ಳಿ ಮೂಡಿ ಉಷೆಯ ಕೆನ್ನೆ ನಾಚಿದಂತೆ ನಸೆಯಾಗಿ ಕೆಂಪೇರತೊಡಗಿದೆ. ಇಡಿಯ ವಾತಾವರಣವೆ ಪ್ರಸನ್ನವಾಗಿದೆ. ಅದರಿಂದ ಮನಸ್ಸು ಕೂಡ.

ಇಂಥ ಉಲ್ಲಾಸದ ಕ್ಷಣದಲ್ಲಿ ದೇವರ ಮುಂದೆ ನಿಂತ ದಾಸರು ಹಾಡಿದರು :

"ಏಳಯ್ಯ ಬೆಳಗಾಯಿತು".

ಬೆಳಕಿನ ಸನ್ನಾಹವಷ್ಟೆ ನಡೆದಿದೆ. ಇನ್ನೂ ಬೆಳಗಾಗಿಲ್ಲ. ಆದರೆ ಉಷೆ ಮೂಡಿ ಬೆಳಗಿನ ಡಂಗುರ ಸಾರಿದ್ದಾಯಿತು. ಅದಕೆಂದೆ "ಬೆಳಗಾಯಿತು" ಎಂದರು.

ಖಚಿತವಾದ ಸಮೀಪದ ಭವಿಷ್ಯತ್ತಿನ ಕ್ರಿಯೆಯನ್ನು ಭೂತಕಾಲದಲ್ಲಿ ನಿರ್ದೇಶಿಸುವುದು ಶಾಸ್ತ್ರದ ಸಂಪ್ರದಾಯ; ಲೋಕರೂಢಿ ಕೂಡ.

"ಭವಿಷ್ಯತ್ತು ನಿಶ್ಚಿತಂ ಯತ್ ತತ್ ಅತೀತತ್ವೇನ ಭಣ್ಯತೇ ।"

(ಯಾವುದು ಮುಂದೆ ನಡೆಯುವುದು ನಿಶ್ಚಿತವೋ ಅದನ್ನು ನಡೆದುಹೋದಂತೆ ನಿರ್ದೇಶಿಸುತ್ತಾರೆ)

ಹೆಣ್ಣು ನೋಡಿದ್ದಾಗಿದೆ. ನಿಶ್ಚಯ ತಾಂಬೂಲ ನಡೆದಿದೆ. ಮದುವೆ ದಿನವೂ ಇಟ್ಟಾಗಿದೆ. ಆಗ ಭಾವಿವರನನ್ನು ಕಂಡು ಗೆಳೆಯರು ಕೇಳುತ್ತಾರೆ: "ಏನಯ್ಯಾ ಮದುವೆಯಂತು ಆದ ಹಾಗಾಯಿತು. ಮುಂದಿನ ಯೋಜನೆಯೇನು ?".

ಗರ್ಭಿಣಿಗೆ ಒಂಬತ್ತು ತಿಂಗಳು ತುಂಬುತ್ತದೆ. ಆಗ ಆಕೆಯ ಗಂಡನ ಗೆಳೆಯರು ಹೇಳುತ್ತಾರೆ: "ನೀನೀಗ ಅಪ್ಪನಾದೆ". ಗೆಳತಿಯರು ಆಕೆಯನ್ನೂ ಛೇಡಿಸುತ್ತಾರೆ: "ನೀನಿನ್ನು ತಾಯಿ".

ಇವೆಲ್ಲ ಮುಂದೆ ಆಗುವುದರ ಖಚಿತತೆಯ ಭರವಸೆಯ ಮೇಲೆ ಆಡುವ ಮಾತುಗಳು. ಇಲ್ಲೂ ಹಾಗೆಯೆ: ಬೆಳ್ಳಿ ಮೂಡಿದಾಗ ಸೂರ್ಯ ಮೂಡುವುದು ಸದ್ಯೋಭವಿಷ್ಯದಲ್ಲಿ ಖಚಿತವಾಯಿತು. ಅದಕೆಂದೆ ಬೆಳ್ಳಿಯ ಬೆಳಕಿನಡಿಯಲ್ಲಿ ನಿಂತ ದಾಸರು ಸೂರ್ಯೋದಯದ ಮುನ್ನ ಭಗವಂತನನ್ನು ಎಬ್ಬಿಸಲೆಂದು ಹಾಡುತ್ತಾರೆ: "ಏಳಯ್ಯ ಬೆಳಗಾಯಿತು". ಇದರ ಭಾವ: ಇನ್ನೇನು ತಳುವಿದರೆ ಬೆಳಗಾಗಿ ಬಿಡುತ್ತದೆ. ಅದಕ್ಕೆ ಮುನ್ನ ಎದ್ದೇಳು.

ಅರಮನೆಗಳಲ್ಲಿ ರಾಜ – ಮಹಾರಾಜರನ್ನು ವಂದಿಮಾಗಧರು ಗುಣಗಾನ ಮಾಡಿ ಎಬ್ಬಿಸುತ್ತಾರೆ – ಅಂತಃಪುರದ ಬಾಗಿಲಲ್ಲಿ ನಿಂತು. ದಾಸರು ಭಗವಂತನ ಭಕ್ತಿಯ ಬಂದಿಯಾಗಿ ಜಗತ್ತಿನ ಅಧಿರಾಜನನ್ನು ಹಾಡಿ ಹೊಗಳಿ ಎಬ್ಬಿಸುತ್ತಾರೆ – ಗರ್ಭಗುಡಿಯ ಬಾಗಿಲಲ್ಲಿ ನಿಂತು. "ಏಳಯ್ಯ ಬೆಳಗಾಯಿತು".

ರಾಮಾಯಣದ ಕಾಲದಲ್ಲು ಇಂಥ ಒಂದು ಪ್ರಸಂಗ ನಡೆದಿತ್ತು: ರಾಮಚಂದ್ರ ಅರಮನೆಯ ಅಂತಃಪುರದಿಂದ ಮಹರ್ಷಿ ವಿಶ್ವಾಮಿತ್ರರ ಜತೆಗೆ ಕಾಡಿನ ಕುಟೀರಕ್ಕೆ ನಡೆದ. ಅಲ್ಲಿ ಮಲಗಲು ಹಂಸತೂಲಿಕಾ ತಲ್ಪವಿಲ್ಲ. ಎಬ್ಬಿಸಲು ವಂದಿ ಮಾಗಧರಿಲ್ಲ. ಹುಲ್ಲಿನ ಹಾಸಿನಲ್ಲಿ, ಕೃಷ್ಣಾಜಿನದ ಮೇಲೆ ಮಲಗಿದ್ದ ರಾಮಚಂದ್ರನನ್ನು ಈ ಕಾಡಿನ ಕೊಂಪೆಯಲ್ಲಿ ಯಾರು ಎಬ್ಬಿಸಬೇಕು? ಮುನಿ ವಿಶ್ವಾಮಿತ್ರರೇ ಆ ಕೆಲಸವನ್ನು ಮಾಡಿದರಂತೆ:

> ಕೌಸಲ್ಯಾ ಸುಪ್ರಜಾ ರಾಮ
> ಪೂರ್ವಾ ಸಂಧ್ಯಾ ಪ್ರವರ್ತತೇ ।
> ಉತ್ತಿಷ್ಠ ನರಶಾರ್ದೂಲ
> ಕರ್ತವ್ಯಂ ದೈವಮಾಹ್ನಿಕಮ್ ॥

(ರಾಮಾ. ಬಾಲ. 23.2)

(ಕೌಸಲ್ಯೆಯ ಮುದ್ದಿನ ಮಣಿಯೆ
ಓ ರಾಮನೆ, ಬೆಳಗಾಯಿತು
ಏಳಯ್ಯ ಪೌರುಷದ ಗಣಿಯೆ
ಅಹ್ನಿಕದ ಹೊತ್ತಾಯಿತು).

ವಿಶ್ವಾಮಿತ್ರರು ತನ್ನ ಜತೆ ಕಾಡಿಗೆಬಂದ ಭಗವಂತನನ್ನೆಬ್ಬಿಸಿದಂತೆ, ಭಕ್ತರಿಗಾಗಿ ಬೆಟ್ಟಕ್ಕಿಳಿದು ಬಂದ ಭಗವಂತನನ್ನು ದಾಸರು ಎಬ್ಬಿಸುತ್ತಾರೆ: "ಏಳಯ್ಯ ಬೆಳಗಾಯಿತು".

ಮಹಾರಾಜ ಬೆಳಗಿನ ಜಾವದಲ್ಲಿ ಎದ್ದು ಅಂತಃಪುರದಿಂದ ಹೊರಬರುತ್ತಾನೆ. ರಾಜಸಭೆಯಲ್ಲಿ ಭೇಟಿಗೆಂದು ಬಂದ ಮಂದಿಗೆ ದರ್ಶನ ನೀಡುತ್ತಾನೆ. ಅವರ ಯೋಗ ಕ್ಷೇಮಗಳನ್ನು ವಿಚಾರಿಸುತ್ತಾನೆ. ಅವರ ಸಮಸ್ಯೆಗಳಿಗೆ ಪರಿಹಾರ ನೀಡುತ್ತಾನೆ. ಇದು ಒಡೆಯನಾದವನ ಕ್ರಮವಲ್ಲವೆ? ನಮ್ಮೊಡೆಯನಾದ ನೀನೂ ಏಳಬೇಕು. ಎದ್ದು, ಭೆಟಿಗೆಂದು ಬಂದು ಹೊರಬಾಗಿಲಲ್ಲಿ ಕಾದು ನಿಂತ ಮಂದಿಗೆ ದರ್ಶನ ನೀಡುವ ಕೃಪೆ ದೋರಬೇಕು ಎಂದು ಮುಂದಿನ ನುಡಿಯಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ:

"ಬೆಳಗಾಯಿತೇಳಯ್ಯ ಬಿಸಿಲು ಮೈದೋರುತಿದೆ
ಸುಳಿವುದೋರೈ ನಿಮ್ಮ ಹಾರೈಸಿ ನಿಂದಿಹರು
ತಳುವ ಮಾಡದಿರಯ್ಯ ಸ್ವಾಮಿ ತಿರುಮಲೆರಾಯ
ಸೆಳೆಮಂಚದಿಂದಲೇಳು ||

ಇನ್ನು ತಡಮಾಡಿದೆಯೆಂದರೆ ಬಿಸಿಲು ಮೈದೋರಿ ಬಿಡುತ್ತದೆ. ಅದಕ್ಕೆ ಮುನ್ನ ನೀನು ಮೈದೋರಬೇಕು. ನೀನೆದ್ದು ಬರಬೇಕು. ಎನಿತು ಮಂದಿ ನಿನ್ನ ದರ್ಶನ ಭಾಗ್ಯಕ್ಕಾಗಿ ಎನಿತೊ ದಿನಗಳಿಂದ ಹಾರೈಸಿ ಹಾರೈಸಿ ಯಾವ ಯಾವದೋ ದಿಗ್ದೇಶಗಳಿಂದ, ಊರು ಕೇರಿಗಳಿಂದ, ಸಾವಿರಸಾವಿರ ಗಾವುದ ನಡೆದು ಬಂದಿದ್ದಾರೆ. ಬಂದು ನಿಮ್ಮ ದರ್ಶನ ಹಾರೈಸಿ ಕಾದು ನಿಂದಿಹರು. ಅದರಿಂದ 'ಸುಳಿವು ದೋರೈ'. ಅಂತಃಪುರದಿಂದ ಬರುವುದು ಕೊಂಚ ವಿಲಂಬವಾದರೂ ಚಿಂತಿಲ್ಲ. ಬರುವ ಸೂಚನೆಯನ್ನಾದರೂ ನಮಗೆ ನೀಡಯ್ಯ. "ಮಹಾರಾಜರು ಎದ್ದಿದ್ದಾರೆ; ಈಗ ಬಂದುಬಿಡುತ್ತಾರೆ" ಎಂಬ ಸುದ್ದಿ ಕಿವಿಗೆ ಬಿದ್ದರೂ ಸಾಕು. ನೀನು ಬರುವ ತನಕವೂ ನಾವು ಕಾಯಲು ಸಿದ್ಧ. ಆದರೆ ಬರುವ ಸುಳಿವನ್ನೇ ನೀಡದೆ ನಮ್ಮನ್ನು ಸಂದಿಗ್ಧದಲ್ಲಿ ಹಾಕಬೇಡ; ಅತಂತ್ರರನ್ನಾಗಿ ಮಾಡಬೇಡ. ಬರುವ ಭರವಸೆ ಸಿಕ್ಕಿದರೆ ಸಾಕು. ನಾವು ಎಷ್ಟು ಕಾಯಲೂ ಸಿದ್ಧ. ಈ ಮಾತಿನ ಹಿಂದಿರುವ ಆಧ್ಯಾತ್ಮಿಕ ಧ್ವನಿ ಸುಸ್ಪಷ್ಟ.

ಆದರೆ ನಾವು ಕಾಯುತ್ತೇವೆ ಎನ್ನುವುದಕ್ಕಾಗಿಯೆ ನೀನು ಕಾಯಿಸಬಾರದು. 'ಬೇಕಿದ್ದರೆ ಹೊರಗೆ ಕಾದುಕೊಂಡು ಬಿದ್ದಿರಲಿ' ಎಂದು ಕೆಟ್ಟ ರಾಜರಂತೆ ನೀನು ವರ್ತಿಸ

ಬಾರದು. ನಿನ್ನನ್ನು ಕಾಣುವ ನಮ್ಮ ಬಯಕೆ, ನಮ್ಮ ವಿರಹದ ಕಾತರತೆ ಎಷ್ಟು ಗಾಢವಾದದ್ದು ಎನ್ನುವುದನ್ನು ನಿನಗೆ ಬೇರೆ ಹೇಳಬೇಕೆ ?

ಅದರಿಂದ ತಳುವು (ತಡವು–ವಿಲಂಬ) ಮಾಡದಿರಯ್ಯ ಸ್ವಾಮಿ ತಿರುಮಲೆ ರಾಯ. ಅಕಾರಣವಾಗಿ, ಆಲಸ್ಯದಿಂದಲೋ, ನಮ್ಮ ಮೇಲಣ ಅನಾಸ್ಥೆಯಿಂದಲೋ ವಿಲಂಬ ಮಾಡದಿರಯ್ಯ. ನಾವು ಕಾಯುವುದಕ್ಕೆ ಸಿದ್ಧ ಎನ್ನುವ ಮಾತು ಯಾವ ಕಾಲಕ್ಕೂ ಸತ್ಯ. ಆದರೆ ನೀನು ಕಾಯಿಸುವುದಕ್ಕೆ ಸಿದ್ಧನಾಗಬಾರದು. ನೀನು ತಿರುಮಲೆರಾಯ – ತಿರುಮಲೆಯ ರಾಜ. ತಿರುಮಲೆಯಲ್ಲಿ ನೆಲೆನಿಂತ ಜಗದೊಡೆಯ. ಪ್ರಜಾವತ್ಸಲನಾದ ರಾಜನಂತೆ ನಿನ್ನನ್ನು ನಂಬಿ ಬಂದ ಪ್ರಜೆಗಳಿಗೆ ದರ್ಶನಭಾಗ್ಯ ನೀಡು.

ಓ ನಮ್ಮ ಸ್ವಾಮಿಯೆ, ಓ ಜಗದ ಸ್ವಾಮಿಯೆ, ಅದಕ್ಕಾಗಿ "ಸೆಳೆಮಂಚದಿಂದ ಲೇಳು". ತೂಗುಮಂಚದಲ್ಲಿ, ತೂಗುಯ್ಯಾಲೆಯಲ್ಲಿ ಹಂಸತೂಲಿಕಾತಲ್ಪದಲ್ಲಿ ನಿನ್ನ ಸುಖಶಯನಕ್ಕೆ ವಿರಾಮ ಹಾಕಿ ಈ ಭಕ್ತರಿಗಾಗಿ ಆ ಮಂಚದಿಂದೇಳು. ಎದ್ದು ಬಾ. ಬಂದು ನಮಗೆ ನಿನ್ನ ದರ್ಶನ ಭಾಗ್ಯ ನೀಡು.

ಭಗವಂತನನ್ನು ಎಬ್ಬಿಸಿ – ಅವನಿಗೆ ಕೆಲವು ಕರ್ತವ್ಯಗಳನ್ನೊಪ್ಪಿಸುವವರಂತೆ– ದಾಸರು ಮುಂದಿನ ನುಡಿಗಳಲ್ಲಿ ಅವನ ಅವತಾರದ, ಮುಖ್ಯವಾಗಿ ದಶಾವತಾರದ, ಲೀಲಾವಿಭೂತಿಗಳನ್ನು ವ್ಯಾಜೋಕ್ತಿಯಿಂದ ಕೊಂಡಾಡುತ್ತಾರೆ :

ಹಯಗ್ರೀವ ಮತ್ಸ್ಯಾವತಾರ

ವೇದವನು ತರಲೇಳು ಮಂದರವ ಹೊರಲೇಳು
ಭೇದಿಸುತ ಅಸುರರನು ದಾಡೆಯಿಂ ತರಲೇಳು
ಕಾದಿ ಹಿರಣ್ಯ (ಕ)ನ ಕರುಳ ಕೊರಳೊಳಗೆ ಧರಿಸೇಳು
ಕಾಯ್ದು ಬಲಿಬಾಗಿಲದೊಳು ||

ಭೇದಿಸಿ ಭೂಮಿಯ ತ್ರಿಪಾದದಿಂದಳೆಯೇಳು
ಭೇದಿಸುತ ಕ್ಷತ್ರಿಯರ ಕೊಡಲಿಯಿಂ ಕಡಿಯೇಳು
ಸಾಧಿಸುತ ಶರಧಿಯಲಿ ಸೇತುವೆಯ ಕಟ್ಟೇಳು
ನಂದಗೋಪನ ಉದರದಿ ||

ಪುರ ಮೂರ ಗೆಲಬೇಕು ಅರಿವೆಯನು ಕಳಿಬೇಕು
ದುರುಳನ ಕೊಲಬೇಕು ತುರುಗವಾಹನನಾಗು
ಪರಿಪರಿಯ ಕೆಲಸಗಳ ಮಾಡಲುದ್ಯೋಗಿಸದೆ
ಮರೆತು ನಿದ್ರೆಯ ಗೈವರೇ ||

ಸೃಷ್ಟಿಯ ಆರಂಭದಲ್ಲಿ ಮಧು-ಕೈಟಭರು ವೇದ ವಿದ್ಯೆಯನ್ನು ಕದ್ದರು. ಅವರನ್ನು ಕೊಂದು ವೇದವನ್ನು ತರಲು ನೀನು ಹಯಗ್ರೀವನಾಗಬೇಕು. ಮತ್ತೆ ಪುನಃ ಹಯಗ್ರೀವನೆಂಬ ಅಸುರನೆ ವೇದವನ್ನು ಕದ್ದ. ಅವನನ್ನು ಕೊಂದು ಪುನಃ ವೇದವನ್ನು ತರಲು ನೀನು ಮತ್ಸ್ಯಾವತಾರಿಯಾಗಬೇಕು. ಅದಕ್ಕಾಗಿ ಏಳು.

ಯುಗಯುಗಗಳ ಅಂತರದಲ್ಲಿ ನಡೆದ ಭಗವಂತನ ಲೀಲೆಗಳನ್ನು ದಾಸರು ತನ್ನ ಮಾನಸಪೂಜೆಯ ಧ್ಯಾನಯೋಗದಲ್ಲಿ – ವರ್ತಮಾನದ ಘಟನೆಯಂತೆ ಕಣ್ಣೆದುರಿ ಕಾಣುತ್ತಾರೆ. ಅದರ ಫಲವಾಗಿ 'ಅಸುರರು ವೇದವನ್ನು ಕದಿಯುತಿದ್ದಾರೆ; ಹಯಗ್ರೀವನಾಗಿ ಬಾ; ಮತ್ಸ್ಯನಾಗಿ ಬಾ' ಎನ್ನುತ್ತಾರೆ. ಮುಂದಿನ ಅವತಾರದ ಮಾತುಗಳೂ ಹೀಗೆಯೇ ಬಂದಿವೆ. ಅದೊಂದು ಭಕ್ತಿಯ ವಿನೋದ.

ಇದು ಬಹಿರ್ಮುಖವಾದ ನೋಟವಾಯಿತು. ಅಂತರಂಗದ ಇನ್ನೊಂದು ಪ್ರಪಂಚದಲ್ಲಿ ಪ್ರತಿದಿನವೂ ಭಗವಂತನು ಹತ್ತಾರು ಅವತಾರಗಳನ್ನು ಹೊತ್ತು ಬರಬೇಕಾಗುತ್ತದೆ. ಸಾಧಕರು ಪ್ರತಿದಿನವೂ ಅವನನ್ನು ಹಾಗೆಂದು ಪ್ರಾರ್ಥಿಸಬೇಕಾಗುತ್ತದೆ.

ವೇದ ವಿಜ್ಞಾನವನ್ನು ಮರೆಸಿದ ಆಸುರೀ ಶಕ್ತಿಯನ್ನು ನಿಗ್ರಹಿಸಿ ಮತ್ತೆ ಭಕ್ತನ ಬಗೆಗೆ ಆಧ್ಯಾತ್ಮದ ಅರಿವು ಮೂಡಿಸಲು ನೀನು ನಮ್ಮ ಹೃದಯ ಸಮುದ್ರದಲ್ಲಿ ಮೀನಾಗಿ ಬರಬೇಕು. ಬಂದು ಮತ್ತೆ ಮರೆಯಾದ ವೇದವನು ತಂದುಕೊಡಬೇಕು. ಅದಕ್ಕಾಗಿ ಏಳು.

ದೇವತೆಗಳು ಅಮೃತಕ್ಕಾಗಿ ಸಮುದ್ರಮಥನ ಮಾಡಿದರು. ಅವರು ಮಂದರವನ್ನೆ ಕಡೆಗೋಲಾಗಿ ಮಾಡಿ ಕಡೆದರು. ಆದರೆ ಭಾರದ ಒತ್ತಡಕ್ಕೆ ಮಂದರ ಕಡಲಿನಾಳಕ್ಕೆ ಕುಸಿಯಿತು. ಅದನ್ನು ಎತ್ತಿ ಹಿಡಿಯಲು ನೀನು ಕೂರ್ಮಾವತಾರಿಯಾಗಬೇಕು. ಅದಕ್ಕಾಗಿ ಏಳು.

ನನ್ನ ಹೃದಯದ ಸಮುದ್ರದಲ್ಲಿ ತತ್ವಜ್ಞಾನದ ಅಮೃತ ಮೂಡಿಬರಲು ಮನಸ್ಸಿನ ಮಂದರದಿಂದ ಕಡೆಯಬೇಕು. ಅದು ಕೆಳಕ್ಕೆ, ತಮಸ್ಸಿನಾಳಕ್ಕೆ ಕುಸಿಯದಂತೆ ಎತ್ತಿ ಹಿಡಿಯಲು ಕೂರ್ಮನಾಗಿ ನೀನು ಬರಬೇಕು. ಅದಕ್ಕಾಗಿ ಏಳು.

ನೀನು ಕೂರ್ಮನಾಗಿ ಬಂದೆ. ಮಂದರವನ್ನು ಎತ್ತಿ ಹಿಡಿದೆ. ಮಥನ ನಡೆಯಿತು. ಅಮೃತವೂ ಬಂತು. ಆದರೆ ಅಲ್ಲಿಗೇ ನಿನ್ನ ಪಾಲಿನ ಕೆಲಸ ಮುಗಿಯಲಿಲ್ಲ. ದೇವತೆಗಳ ಜತೆಗೆ ಅನರ್ಹರಾದ ಅಸುರರೂ ಅಮೃತದಲ್ಲಿ ಪಾಲು ಬಯಸಿ ಸಾಲು ಹಿಡಿದು ಕೂತಿದ್ದಾರೆ. ನೀನೀಗ ಮೋಹಿನಿಯಾಗಬೇಕು; ಧನ್ವಂತರಿಯಾಗಬೇಕು. ಅಸುರರನ್ನು ಮೋಹಗೊಳಿಸಿ ಅಮೃತ ಭಾಗಿಗಳಗುಂಪಿನಿಂದ ಅವರನ್ನು ವಿಚ್ಛೇದಿಸಬೇಕು; ಬೇರ್ಪಡಿಸಬೇಕು. ಹೀಗೆ ಅವರನ್ನು ಭೇದಿಸುತ್ತ ಛೇಡಿಸುತ್ತ ದೇವತೆಗಳಿಗೆ ಅಮೃ ಹಂಚಬೇಕು. ಮೋಸಗೊಂಡ ಅಸುರರು ದೇವತೆಗಳ ಮೇಲೆತ

ಎರಗಿ ಬೀಳುತ್ತಾರೆ. ಆಗ ಮತ್ತೆ ಅವರನ್ನು ನಿನ್ನ ಚಕ್ರದಿಂದ 'ಭೇದಿಸುತ' ದೇವತೆಗಳನ್ನು ಕಾಪಾಡಬೇಕು. ಅದಕ್ಕಾಗಿ ಏಳು.

ನಮ್ಮ ಹೃದಯಸಮುದ್ರದಲ್ಲಿ ತತ್ವಜ್ಞಾನದ ಅಮೃತ ಮೂಡಿಬಂದಾಗ ಅದನ್ನು ತಾಮಸೀಶಕ್ತಿಗಳು ಕಸಿಯದಂತೆ ಅವುಗಳನ್ನು ಕಂಗೆಡಿಸುವ ಮೋಹಿನಿಯಾಗಿ ನೀನು ಬರಬೇಕು. ಆ ಅಸುರೀಶಕ್ತಿಗಳನ್ನು ನಿನ್ನ ಅನುಗ್ರಹದ ಸುದರ್ಶನದಿಂದ ಭೇದಿಸಿ ಭವರೋಗ ವೈದ್ಯನಾಗಿ, ಧನ್ವಂತರಿಯಾಗಿ ಬರಬೇಕು. ಅದಕ್ಕಾಗಿ ಏಳು.

ಭೂಮಿ ಭಾರಕ್ಕೆ ತನ್ನ ಕಕ್ಷೆಯಿಂದ ಕುಸಿದಾಗ ಅದನ್ನು ಮೇಲೆತ್ತಲು, ಮೇಲೆತ್ತುವಾಗ ತಡೆಯಬಂದ ಬ್ರಹ್ಮಪುತ್ರನಾದ ಆದಿಹಿರಣ್ಯಾಕ್ಷನನ್ನು ಭೇದಿಸಲು ನೀನು ವರಾಹಾವತಾರಿಯಾಗಬೇಕು. ಹೀಗೆ ನೀನು ಶ್ವೇತವರಾಹನಾಗಿ ಮೇಲೆತ್ತಿಟ್ಟ ಭೂಮಿಯನ್ನು ಪುನಃ ದಿತಿಪುತ್ರನಾದ ಹಿರಣ್ಯಾಕ್ಷ ಕದ್ದೊಯ್ದಾಗ ಅವನನ್ನೂ ಲೀಲೆಯಿಂದ ಭೇದಿಸುತ ಮಗದೊಮ್ಮೆ ದಾಡೆಯಿಂದ ಮೇಲೆತ್ತಿ ತರಲು ನೀನು ಯಜ್ಞವರಾಹನಾಗಬೇಕು. ಅದಕ್ಕಾಗಿ ಏಳು. (ಎರಡು ಬಾರಿಯ ವರಾಹಾವತಾರದಲ್ಲಿ ಇಬ್ಬರು ಹಿರಣ್ಯಾಕ್ಷರನ್ನು ಸಂಹರಿಸಿದ ಪ್ರಮೇಯವನ್ನು ಸೂಚಿಸುವುದಕ್ಕಾಗಿಯೆ 'ಭೇದಿಸುತ ಅಸುರರನು' ಎಂಬ ಬಹುವಚನ ಬಂದಿದೆ.)

ಸಾಧನೆಯ ರಂಗಭೂಮಿಯಾದ ಈ ದೇಹವೆ ದುರ್ಗುಣಗಳಿಂದ ಕುಸಿದಾಗ ಅದನ್ನು ಸಾತ್ವಿಕತೆಯ ಬೆಳಕಿನ ಎತ್ತರಕ್ಕೇರಿಸಲು ನೀನು ಶ್ವೇತವರಾಹನಾಗಿ ಬರಬೇಕು; ಈ ಬದುಕನ್ನೆ ನಿನ್ನ ಆರಾಧನೆಯ ಯಜ್ಞಮಯವಾಗಿ ಎತ್ತರಕ್ಕೇರಿಸಲು ನೀನು ಯಜ್ಞವರಾಹನಾಗಿ ಬರಬೇಕು. ಸಾಧನೆಗೆ ಅಡ್ಡಿಬರುವ ಎಲ್ಲ ಅಸುರೀಶಕ್ತಿಗಳನ್ನು ಭೇದಿಸುವ ಕೆಲಸವಂತು ನಿನ್ನಿಂದಲೇ ಆಗಬೇಕು. ಹೀಗೆ ಅಡೆತಡೆಗಳನ್ನು ಭೇದಿಸುತ, ನಿನ್ನ ದಾಡೆಯೆಂಬ ಸೂರ್ಯ – ಚಂದ್ರರಿಂದ ಸಾಧಕನ ಬದುಕನ್ನು ಸ್ವರ್ಗಾಪವರ್ಗಗಳ ಪುಣ್ಯಪಥದಲ್ಲಿ ತಂದು ನಿಲ್ಲಿಸಬೇಕು. ಅದಕ್ಕಾಗಿ ಏಳು.

ದಾಡೆಯ ಸಂಕೇತವನ್ನು ಭಾಗವತ ನಮಗೆ ತಿಳಿಹೇಳುತ್ತದೆ:

"ದಂಷ್ಟ್ರಾ ಯಮೋಂದೂಡುಗಣಾ ದ್ವಿಜಾನಿ'

(ಭಾಗ 2. 1. 31.)

(ಸೂರ್ಯ–ಚಂದ್ರರೇ ಅವನ ಕೋರೆ ದಾಡೆಗಳು. ನಕ್ಷತ್ರಗಳೇ ಸುಲಿಪಲ್ಲುಗಳು.)

ಪ್ರವೃತ್ತಿಕರ್ಮದ ಪುಣ್ಯದ ಫಲವಾಗಿ ಪಿತೃಯಾಣದಲ್ಲಿ ಜೀವ ಸೇರಬೇಕಾದ ತಾಣ ಚಂದ್ರಲೋಕ. ಅಲ್ಲಿಂದ ಮರಳಿ ಭೂಮಿಗೆ ಪಯಣ. ನಿವೃತ್ತಿಕರ್ಮದ ಪುಣ್ಯದ ಫಲವಾಗಿ ದೇವಯಾನದಲ್ಲಿ ಸೇರಬೇಕಾದ ತಾಣ ಸೂರ್ಯಲೋಕ. ಅಲ್ಲಿಂದ ಮರಳಿ ಭೂಮಿಗೆ ಬರುವ ಕಾರಣವಿಲ್ಲ. ನೇರ ಭಗವಂತನ ಬಳಿಗೆ ಅಪುನರಾವೃತ್ತಿಗೆ ಪಯಣ.

ಅನಂತರ ಪ್ರಹ್ಲಾದನ ಕರೆಗೆ ನರಸಿಂಹನಾಗಿ ಕಂಭವೊಡೆದು ಬರಬೇಕು. ಹಿರಣ್ಯಕಶಿಪುವಿನ ಜತೆ ಕಾದಬೇಕು. ಕಾದಿ ಅವನ ಕರುಳು ಬಗಿಯಬೇಕು. ಬಗಿದ ಕರುಳನ್ನು ಕೊರಳೊಳಗೆ ಧರಿಸಬೇಕು. ಅದಕ್ಕಾಗಿ ಏಳು.

ನಮ್ಮೊಳಗೆ ಚಿನ್ನದ ಮೋಹವೆಂಬ ಹಿರಣ್ಯಕಶಿಪು ಕೂತಿದ್ದಾನೆ. ನನ್ನನ್ನು ಬಿಟ್ಟರೆ ಯಾರು ಎನ್ನುವ ಅಹಂಕಾರವೆಂಬ ಹಿರಣ್ಯಕಶಿಪು ಕೂತಿದ್ದಾನೆ. ಈ ದುಡ್ಡಿನ ದೌರ್ಬಲ್ಯ, ಈ ಅಹಂಕಾರದ ಮೋಹ ಮನುಷ್ಯನ ಕರುಳಿನಾಳಕ್ಕೆ ಇಳಿದುಬಿಟ್ಟಿದೆ. ಈ ಮೋಹದ ಕರುಳ ಬಳ್ಳಿಯನ್ನೆ ನೀನು ಬಗಿದು ತೆಗೆಯಬೇಕು. ನಮ್ಮ ಈ ಪ್ರಾಪಂಚಿಕ ಮೋಹ ಭಗವಂತನ ಮೋಹವಾಗಿ ಪರಿವರ್ತನೆಗೊಂಡು ನಿನ್ನ ಕೊರಳ ಮಾಲೆಯಾಗಬೇಕು. ಅವನ್ನು ಧರಿಸಿ ನೀನು ನರಸಿಂಹನಾಗಿ ಬರಬೇಕು. ಅದಕ್ಕಾಗಿ ಏಳು.

ಬಲಿಯ ಮನೆಗೆ ವಾಮನನಾಗಿ ಹೋಗಬೇಕು. ಹೋಗಿ ಮೂರು ಹೆಜ್ಜೆ ದಾನ ಬೇಡಬೇಕು. ಅವನು ಅಸ್ತು ಎನ್ನಲು ತ್ರಿವಿಕ್ರಮನಾಗಿ ಬೆಳೆದು ಬ್ರಹ್ಮಾಂಡ ಕಟಾಹವನ್ನೆ ಭೇದಿಸಿ ಭೂವ್ಯೋಮಗಳನ್ನು ತುಂಬಬೇಕು. ತುಂಬಿ ಭೂಮಿಯನ್ನು ತ್ರಿಪಾದದಿಂದ ಅಳೆಯಬೇಕು. ಅಳೆದು ಬಲಿಯ ಸರ್ವಸ್ವವನ್ನು ಕಸಿಯಬೇಕು. ಆದರೂ ಬಲಿಯ ಭಕ್ತಿಗೆ ಮೆಚ್ಚಿ ಅವನ ಮನೆಬಾಗಿಲನ್ನು ಕಾಯಬೇಕು. ಬಾಗಿಲನ್ನು ಕಾಯುದ್ದ ಆ ಮೂಲಕ ಬಲಿಯನ್ನು ಕಾಯ್ದು, ಬ್ರಹ್ಮಾಂಡವನ್ನು ಭೇದಿಸಿ, ಭೂಮಿಯನ್ನು ತ್ರಿಪಾದದಿಂದಳೆದು...... ಒಂದೇ ಎರಡೇ ; ಮಾಡಬೇಕಾದ ಕೆಲಸ ಸಾವಿರ ಉಂಟು. ಅದಕ್ಕಾಗಿ ಏಳು.

ಸಾಧಕನೂ ಒಬ್ಬ ಬಲಿ "ನಾಯಮಾತ್ಮಾ ಬಲಹೀನೇನ ಲಭ್ಯಃ" ಆತ್ಮಬಲ ದಿಂದ ಅವನು ಬಲಿ. ಅವನ ಮನದ ಬಾಗಿಲನ್ನು ಸದಾ ನೀನು ಕಾಯಬೇಕು. ಕಾಯ್ದು ಅವನ ಅಹಂಕಾರ ಭೂಮಿಯನ್ನು ಭೇದಿಸಿ, ಉಪಾಸನೆಯಲ್ಲಿ ಪುಟ ಮೂರ್ತಿಯಾಗಿ ಮೂಡಿಬಂದು, ವಿಶ್ವರೂಪನಾಗಿ ಬೆಳೆದು, ಅವನು ಶರಣಾಗಿ ತಲೆ ಯೊಡ್ಡಿದಾಗ ಅಂತರ್ಯಾಮಿಯಾಗಿ ನಿಂತು ನಿನ್ನ ಮೂರು ರೂಪಗಳನ್ನು, ಮೂರು ಹೆಜ್ಜೆಗಳನ್ನು ಭಕ್ತನ ಮುಂದೆ ಅಳೆದು ತೋರಬೇಕು. ಅದಕೆಂದೆ ನೀನು ವಾಮನನಾಗಿ ಬರಬೇಕು ; ತ್ರಿವಿಕ್ರಮನಾಗಿ ಬರಬೇಕು. ಅದಕ್ಕಾಗಿ ಏಳು.

ಮುಂದೆ ದುಷ್ಟ ಕ್ಷತ್ರಿಯರನ್ನು ಛೇದಿಸಿ ನಿರ್ನಾಮಗೊಳಿಸಬೇಕು. ಹೀಗೆ ಇಪ್ಪತ್ತೊಂದು ಬಾರಿ ಛೇದಿಸುತ ಅವರನ್ನು ಕೊಡಲಿಯಿಂದ ಕಡಿಯಲು ನೀನು ಪರಶು ರಾಮನಾಗಿ ಬರಬೇಕು. ಅದಕ್ಕಾಗಿ ಏಳು.

ನಮ್ಮೊಳಗೆ ತುಂಬಿರುವ ಸಂಪತ್ತಿನ ಮದವೆಂಬ, ದೌರ್ಜನ್ಯವೆಂಬ ದುಷ್ಟ ಕ್ಷತ್ರಿಯರನ್ನು ನಿನ್ನ ಅರಿವಿನ ಕೊಡಲಿಯಿಂದ ಕಡಿದು ಛೇದಿಸಲು ನೀನೆ ಪರಶುರಾಮ ನಾಗಿ ಬರಬೇಕು. ಅದಕ್ಕಾಗಿ ಏಳು.

ಸೀತೆಯನ್ನು ಕದ್ದ ರಾವಣನನ್ನು ಹಾಗೆಯೆ ಬಿಡುವಂತಿಲ್ಲ. ಅನ್ವೇಷಣೆಯ ಯತ್ನದಲ್ಲಿ ಗೆಲುವನ್ನು ಸಾಧಿಸಿಯೇ ತೀರಬೇಕು. ಲಂಕೆಗೆ ಲಗ್ಗೆ ಹೊಡೆಯಲೇಬೇಕು. ಇದನ್ನು ಸಾಧ್ಯವಾಗಿಸಲು ಶರಧಿಯಲಿ ಸೇತುವೆಯ ಕಟ್ಟಬೇಕು. ನಿನ್ನ ರಾಮಾವತಾರದ ಲೀಲೆ ನಡೆಯಬೇಕು. ಅದಕ್ಕಾಗಿ ಏಳು.

ಬಾಳ ಕಡಲಲ್ಲಿ ನಾವು ದಾರಿಗಾಣದೆ ಮುಳುಗದಂತೆ ಸೇತುವೆ ಕಟ್ಟಿ, ಛಲ ಸಾಧಿಸಿ ನೀನೆ ದಡಹಾಯಿಸಬೇಕು. "ಏಷ ಸೇತುರ್ವಿಧೃತಿಃ" "ಯಃ ಸೇತುರೀಜಾನಾನಾಮ್" ಎಂಬ ಶ್ರುತಿವಚನವನ್ನು ನಿಜಗೊಳಿಸಬೇಕು. ಅದಕೆಂದೆ ನೀನು ರಾಮನಾಗಿ ಬರಬೇಕು. ಅದಕ್ಕಾಗಿ ಏಳು.

ಉದಯಾಚಲದಿಂದ ಸೂರ್ಯಚಂದ್ರರು ಮೇಲೆದ್ದುಬರುವಂತೆ ನೀನು ನಂದಗೋಪನ ಉದರದಿಂದ ಕೃಷ್ಣನಾಗಿ ಮೇಲೆದ್ದು ಬರಬೇಕು. ಅದಕ್ಕಾಗಿ ಏಳು.

ವಾಸ್ತವವಾಗಿ ನಂದಗೋಪನ ಉದರದಿಂದ ಕೃಷ್ಣಾವತಾರ ಆದದ್ದಲ್ಲ. ವಸುದೇವನ ಉದರದಿ ಎಂದು ಹೇಳುವುದು ಸಹಜವಾಗಿತ್ತು. ಆದರೆ ಅದಾದರೂ ನಿಜವೆ? ಹುಟ್ಟು–ಸಾವುಗಳಿಲ್ಲದ ಭಗವಂತ ವಸುದೇವನ ಉದರದಿಂದ ಬಂದದ್ದಾದರೂ ಹೌದೇ? ಅದಕೆಂದೆ ದಾಸರು ಒಂದು ಬಗೆಯ ವಿನೋದವಾಡುತ್ತಾರೆ: ನಂದಗೋಪನ ಉದರದಿ ಏಳು.

ಪಾರಮಾರ್ಥಿಕವಾಗಿ ನೋಡಿದಾಗ ನಂದಗೋಪನ ಉದರದಿಂದ ಮಾತ್ರವೆ ಅಲ್ಲ – ವಸುದೇವನ ಉದರದಿಂದಲೂ ಹುಟ್ಟಿಲ್ಲ. ವ್ಯಾವಹಾರಿಕವಾಗಿ ಹಾಗೆ ಅನ್ನುತ್ತೇವೆ ಎಂದಾದರೆ ವ್ಯವಹಾರಕ್ಕಾಗಿ ಹೀಗೂ ಅನ್ನಬಹುದು. 'ತನ್ನ ಮಗ' ಎಂಬ ಅಭಿಮಾನ ಇಬ್ಬರಿಗೂ ಸಮಾನ. ಈ ರಹಸ್ಯವನ್ನು ಧ್ವನಿಸುವುದಕ್ಕಾಗಿಯೆ ದಾಸರು ನಗೆಯಾಡುತ್ತಾರೆ: "ನಂದಗೋಪನ ಉದರದಿ ಏಳು". ಕಂಸನ ಕಣ್ಣು ತಪ್ಪಿಸುವ ನಾಟಕಕ್ಕಾಗಿ ನಂದಗೋಪನ ಉದರದಿಂದ ಬಂದಂತೆ ಆಟ ಹೂಡಬೇಕು. ಅದಕ್ಕಾಗಿ ಏಳು.

ಅಧ್ಯಾತ್ಮದಲ್ಲಿ ಈ ಮಾತಿಗೆ ಹೆಚ್ಚಿನ ಸ್ವಾರಸ್ಯ: ಆನಂದರೂಪನಾದ ಭಗವಂತನನ್ನು ಗೋಪನಮಾಡುವ (ಜೋಪಾನವಾಗಿ ರಕ್ಷಿಸುವ ಮತ್ತು ಅಯೋಗ್ಯರಿಂದ ಮುಚ್ಚಿಡುವ) ವೇದ ವಾಙ್ಮಯವೆ ನಿಜವಾದ ನಂದಗೋಪ. ಕಂಸನ ಕಣ್ತಪ್ಪಿಸಿ ಕೃಷ್ಣನನ್ನು ಜೋಪಾನವಾಗಿಟ್ಟ ಎಂದು ನಂದಗೋಪನೂ ನಿಜವಾದ ನಂದ–ಗೋಪನಾದ. ಇಂಥ ವೇದವಾಙ್ಮಯದ ನಿಗೂಢತೆಯ ಗುಹಾಗರ್ಭದಿಂದ ಅಭಿವ್ಯಕ್ತನಾಗಿ, ಆನಂದತೀರ್ಥರಿಗೊಲಿದ ಕೃಷ್ಣನಾಗಿ ಹೊರಗೆ ಬರಬೇಕು: "ಗುಹಾ ಸಂತಂ ಮಥಾಯತಿ". ಅದಕ್ಕಾಗಿ ಏಳು.

ತ್ರಿಪುರಾಸುರರನ್ನು ಮೋಹಕ ಮಾತುಗಳಿಂದ ದಾರಿ ತಪ್ಪಿಸಿ ಗೆಲ್ಲಬೇಕು; ಬಟ್ಟೆ ಕಳೆದು ಬತ್ತಲೆಯಾಗಿ ನಿಲ್ಲಬೇಕು. ಬುದ್ಧಾವತಾರ ತಾಳಬೇಕು. ಅದಕ್ಕಾಗಿ ಏಳು.

ಸಾಧಕನೂ ತ್ರಿಗುಣಗಳ ಮೂರು ಪುರಗಳನ್ನು ಗೆಲ್ಲಬೇಕು. ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ತ್ರಿಪುರಗಳನ್ನು ಗೆದ್ದು ತುರೀಯನನ್ನು ಕಾಣಬೇಕು. ಅವನು ತನ್ನ ಅಜ್ಞಾನದ ಆವರಣವನ್ನು ಕಳಚಿ ಬತ್ತಲಾಗಬೇಕು. ಕೊನೆಗೆ ಲಿಂಗದೇಹದ ಅಂಗಿಯನ್ನೂ ಕಳಚಿ ಬತ್ತಲಾಗಬೇಕು; ಬಯಲಾಗಬೇಕು. ಅವನನ್ನು ಅಧ್ಯಾತ್ಮದ ನಿರ್ವಾಣದ ಬಯಲಿನಲ್ಲಿ 'ಗೋಪಿಕಾಸ್ತ್ರೀ'ಯರಂತೆ ಬಟ್ಟೆಕಳಚಿ ಪ್ರಬುದ್ಧನನ್ನಾಗಿಸಲು ನೀನು ಬುಧ್ಧನಾಗಿ ಬರಬೇಕು. ಅದಕ್ಕಾಗಿ ಏಳು.

ಕಲಿಯ ಆವಿಷ್ಕಾರ ಪೂರ್ಣವಾದಾಗ ನೀನು ಭೂಮಿಯಲ್ಲಿ ತುಂಬಿಹೋದ ದುರುಳರನ್ನು ಕೊಲ್ಲಬೇಕು. ಅದಕ್ಕಾಗಿ ಕುದುರೆಯೇರಿ ಕಲ್ಕಿಯಾಗಿ ಬರಬೇಕು. ತಡವೇಕೆ ? ಎದ್ದೇಳು. ತುರಗವಾಹನನಾಗು.

ನನ್ನೊಳಗೂ ಕಲಿಯ ಪರಿವಾರ, ದುರ್ಯೋಧನನ ಇಡಿಯ ಹನ್ನೊಂದು ಅಕ್ಷೋಹಿಣೀಸೇನೆ ನುಗ್ಗಿ ದಾಳಿ ಮಾಡುತ್ತಿದೆ. ಅವುಗಳನ್ನು ನೀನು ಕಲ್ಕಿಯಾಗಿ ಬಂದು ಕೊಲ್ಲಬೇಕು. ಅದಕ್ಕಾಗಿ ಏಳು. ಜ್ಞಾನದ ಕೂರಸಿ ಹಿರಿದು ಬಾ : ಧರ್ಮದ ಕುದುರೆಯೇರಿ ಬಾ.

ಹೀಗೆ ಸಾವಿರದೊಂದು ಕೆಲಸಗಳು ನಿನಗಾಗಿ ದಾರಿ ಕಾಯುತ್ತಿವೆ. ಒಳಗೂ ಹೊರಗೂ ನಿನ್ನಿಂದಲೇ ಈ ಕೆಲಸ ಆಗಬೇಕು. ನಮ್ಮ ದೊರೆ ಇದನ್ನೆಲ್ಲ ನಡೆಸಿ ಕೊಡುತ್ತಾನೆ ಎಂದು ನಿನ್ನ ಪ್ರಜೆಗಳು ನಂಬಿ ನಿಂತಿದ್ದಾರೆ. ಹೀಗೆ ಪರಿಪರಿಯ ಕೆಲಸಗಳಿದ್ದು, ಅವಶ್ಯವಾಗಿ ಜರೂರಾಗಿ ಮಾಡಬೇಕಾಗಿದ್ದು, ನೀನು ಅವುಗಳನ್ನು ಮಾಡಲುದ್ಯೋಗಿಸದೆ ನಿನ್ನನ್ನೇ ನಂಬಿ ನಿಂತ ನಿನ್ನದೇ ಜನರನ್ನು ಮರೆತು – ಅವರ ಉದ್ಧಾರದ ಕರ್ತವ್ಯದ ಹೊಣೆಯನ್ನು ಮರೆತು, ಮೈಮರೆತು ಹಾಯಾಗಿ ನಿದ್ರೆ ಗೈಯುವುದು ನಿನಗೆ ತರವೆ ? ಹೊಣೆಯರಿತ, ಪ್ರಜಾವತ್ಸಲರಾದ ಅರಸರು ಎಂದಾದರೂ ಹೀಗೆ ಕರ್ತವ್ಯವನ್ನೇ ಮರೆತು ನಿದ್ರೆಯ ಗೈಯುವರೆ ? ನೀನೇ ಹೇಳು.

ಹೀಗೆ ಮೇಲಿನ ಸೊಲ್ಲುಗಳಲ್ಲಿ ದಾಸರು ಸುಪ್ರಭಾತವನ್ನು ಹಾಡುವ ನೆಪದಿಂದ, ಮುಖ್ಯವಾಗಿ ಭಗವಂತನ ಹತ್ತು ಅವತಾರಗಳ ಮತ್ತು ಅದಕ್ಕೆ ಸಂಬಂಧಿಸಿದ ಇತರ ಅವತಾರಗಳ ಚರಿತೆ– ಮಹಿಮೆಗಳನ್ನೂ ಸೂಚ್ಯವಾಗಿ ಉಲ್ಲೇಖಿಸಿ ಭಗವಂತ–ಭಕ್ತರ ನಡುವಿನ ರಸಮಯವಾದ ವಿನೋದ ಸಂಭಾಷಣೆಯ ಒಂದು ಮಾದರಿಯನ್ನು ನಮಗೆ ನೀಡಿದ್ದಾರೆ. (ಹತ್ತು ಅವತಾರಗಳು, ಹಯಗ್ರೀವ, ಆದಿವರಾಹ, ಮೋಹಿನಿ, ಧನ್ವಂತರಿ, ತ್ರಿವಿಕ್ರಮ – ಹೀಗೆ ಹದಿನೈದು ರೂಪಗಳ ಉಲ್ಲೇಖ ಇಲ್ಲಿ ಬಂದಿದೆ.)

ಭಗವಂತ ಮಾಡಬೇಕಾದ ಕೆಲಸಗಳ ಪಟ್ಟಿಯನ್ನು ಒಪ್ಪಿಸಿದ್ದಾಯಿತು. ಕಾರ್ಯಾರ್ಥಿಗಳಾಗಿ ಅವನನ್ನು ಕಾಣಬಂದ ದರ್ಶನಾರ್ಥಿಗಳ ಸಂಖ್ಯೆಯೂ ದೊಡ್ಡದು. ಅವರೆಲ್ಲ ಹೊರಗೆ ಕಾಯುತ್ತಿದ್ದಾರೆ. ಅವರಿಗೆಲ್ಲ ದರ್ಶನ ನೀಡಬೇಕು– ಅದಕ್ಕಾಗಿ ನೀನೇಳಬೇಕು ಎನ್ನುತ್ತದೆ ಮುಂದಿನ ಸೊಲ್ಲು :

ರುದ್ರದೇವರು

ಉರಿಗೈಯ್ಯನಟ್ಟಿದರೆ ಹರನೋಡಿ ಬಂದಿಹನು
ಗಿರಿಜೆ ವರವನು ಬೇಡಬೇಕೆಂದು ನಿಂದಿಹಳು
ಸುರಪಾರಿಜಾತವನು ಕೊಂಡು ಸುರರಾಜ ಬಂ-
ದಿರುವನೇಳಯ್ಯ ಹರಿಯೆ || 2 ||

'ನೀನು ತಲೆಗೆ ಕೈಯಿಟ್ಟವರೆಲ್ಲ ಉರಿದು ಭಸ್ಮವಾಗಲಿ' ಎಂದು ಹರನಿಂದ ವರ ಪಡೆದ ಭಸ್ಮಾಸುರ 'ಉರಿಗೈಯ'ನಾದ. ಅವನು ತಾನು ಪಡೆದ ವರದ ಸತ್ವವನ್ನು ಪರೀಕ್ಷಿಸಲು ಹರನ ತಲೆಯಮೇಲೆಯೆ ಕೈಯಿಡಲು ಹೋದ. ಹರ ತಪ್ಪಿಸಿಕೊಂಡರೂ ಬಿಡದೆ ಬೆನ್ನಟ್ಟಿದ. ಹೀಗೆ ಉರಿಗೈಯ್ಯ ನಟ್ಟಿದರೆ ಹರನೇನು ಮಾಡಬೇಕು? ಅವನೋಡಿ ಬಂದಿಹನು ಭಕ್ತವತ್ಸಲನಾದ ನಿನ್ನ ಬಳಿಗೆ – ಸಮಸ್ಯೆಯ ಪರಿಹಾರಕ್ಕೆ. ಅದರಿಂದ ಮತ್ತೆ ನೀನು ಭಸ್ಮಾಸುರನ ಮೋಹಿನಿಯಾಗಬೇಕು. ಅದಕ್ಕಾಗಿ ತಳುವದೆ ನೀನೇಳಬೇಕು.

ಜತೆಗೆ ಗಿರಿಜೆಯೂ ಬಂದಿದ್ದಾಳೆ. ತನ್ನ ಪತಿಯನ್ನು ಈ ದುಷ್ಟ ರಕ್ಕಸನಿಂದ ರಕ್ಷಿಸುವ ವರವನ್ನು ಬೇಡಬೇಕೆಂದು ಕಾದು ನಿಂದಿಹಳು.

ಪಾರಿಜಾತ ದೇವಲೋಕದ ಹೂವು. ಅದಕೆಂದೆ ಅದು 'ಸುರಪಾರಿಜಾತ'; ಶ್ರೀಕೃಷ್ಣ ಸತ್ಯಭಾಮೆಗಾಗಿ ಅದನ್ನು ಭೂಮಿಗೆ ಕಿತ್ತು ತರುವ ಮುನ್ನ ಅದು ಮನುಷ್ಯಲೋಕದಲ್ಲಿ ದುರ್ಲಭ ವಸ್ತು. ಆದರೆ ಸತ್ಯಭಾಮೆ ಬಯಸಿದಳೆಂದು 'ನೀನೇ ಅದನ್ನು ಕಿತ್ತು ತರಬೇಕೆ? ಒಂದು ಮಾತು ಹೇಳಿದ್ದರೆ ನಾನೆ ತಂದೊಪ್ಪಿಸುತ್ತಿರಲಿಲ್ಲವೆ' ಎನ್ನುತ್ತ ಸುರರಾಜನಾದ ಇಂದ್ರ ಸುರಪಾರಿಜಾತವನು ಹಿಡಿದುಕೊಂಡು ಬಂದಿರುವನಯ್ಯ. 'ಪಾರಿಜಾತ ಕಿತ್ತು ತರುವ ಕ್ಷಣದಲ್ಲಿ ಏನೋ ದುಡುಕಿ ಯುದ್ಧಕ್ಕಿಳಿದುಬಿಟ್ಟೆ. ದಯವಿಟ್ಟು ಬೇಸರಿಸದೆ ಕ್ಷಮಿಸು' ಎಂದು ಪ್ರಾರ್ಥಿಸಿಕೊಳ್ಳುವಂತೆ ಸುರಪಾರಿಜಾತವನು ಕೊಂಡು ಸುರರಾಜ ಬಂದಿರುವನು. ಅವನನ್ನು ಕ್ಷಮಾದೃಷ್ಟಿಯಿಂದ ಕಂಡು ಹರಸಯ್ಯ. ಏಳಯ್ಯ ಹರಿಯೆ.

ಎಲ್ಲರ ಎಲ್ಲ ಸಮಸ್ಯೆಗಳ ಕೊನೆಯ ಪರಿಹಾರ ನಿನ್ನಿಂದಲೆ; ಅದರಿಂದಲೆ ನೀನು ಹರಿಯಲ್ಲವೆ?

ಈ ಪದ್ಯದಲ್ಲಿ ಬಂದ ಮೂವರು ದೇವತೆಗಳು ಅಂತರಂಗದ ಮೂರು ಸ್ತರದ ಅಭಿಮಾನಿಗಳು. ಇಂದ್ರ ಮನಸ್ಸಿನ ದೇವತೆ, ಗಿರಿಜೆ ಬುದ್ಧಿಯ ದೇವತೆ, ರುದ್ರ ಅಹಂಕಾರದ ದೇವತೆ. ನಮ್ಮ ಮನೋ–ಬುದ್ಧಿ–ಅಹಂಕಾರಗಳನ್ನು ನಿಯಂತ್ರಿಸುವವರು ಇವರು. ಇವರ ಮನೋ–ಬುದ್ಧಿ–ಅಹಂಕಾರಗಳೆಲ್ಲ ನಿನ್ನ ಅಧೀನ. ಮನದ ದೇವತೆ ಇಂದ್ರ ತನ್ನ ದುಡುಕಿಗಾಗಿ ಮನನೊಂದು ನಿನ್ನ ಬಳಿ ಬಂದಿದ್ದಾನೆ. ಬುದ್ಧಿಯ ದೇವತೆ ಪಾರ್ವತಿ ಕಂಗೆಟ್ಟು ನಿನ್ನಿಂದ ಸಾಂತ್ವನದ ಬುದ್ಧಿವಾದ ಕೇಳಲು ಬಂದಿದ್ದಾಳೆ.

ಅಹಂಕಾರದ ದೇವತೆ ಹರ ಅಹಂಕಾರ ಕಳಚಿ ಆತ್ಮ ರಕ್ಷಣೆಗಾಗಿ ನಿನ್ನೆಡೆ ಓಡಿ ಬಂದಿದ್ದಾನೆ.

ಆಲದೆಲೆಯಿಂದೇಳು ಮಾಲಕುಮಿ ಬಂದಿಹಳು
ಹಾಲುಗಡಲಿಂದೇಳು ಶ್ರೀದೇವಿ ನಿಂದಿಹಳು
ಕಾಲ ಹೆಡೆಯಿಂದೇಳು ಭೂದೇವಿ ಬಂದಿಹಳು
ಸಾಲ ಮಂಚಗಳಿಂದಲಿ ||

ನೀನು ಎಲ್ಲಿ ಮಲಗಿರುವೆಯೋ ಗೊತ್ತಿಲ್ಲ. ನಿನಗೆ ಹಲವು ಮಲಗುತಾಣಗಳು ಎಂದು ಹೇಳುತ್ತಾರೆ. 'ವಟಸ್ಯ ಪತ್ರಸ್ಯ ಪುಟೇ ಶಯಾನಂ' (ಆಲದೆಲೆಯ ಮೇಲೆ ಮಲಗಿದವನು) ಎಂದವರುಂಟು. 'ಹಾಲುಗಡಲಲ್ಲಿ ಪವಡಿಸಿದವನು' ಎಂದವರುಂಟು. ಕಾಲಸರ್ಪನ ಮೇಲೆ ಮಲಗಿದವನು ಎಂದವರುಂಟು. ಆಲದೆಲೆಯಿಂದಾದರೂ ಸರಿಯೆ; ಹಾಲುಗಡಲಿಂದಾದರೂ ಸರಿಯೆ; ಕಾಳಸರ್ಪನ ಹೆಡೆಯಿಂದಾದರೂ ಸರಿಯೆ. ಎಲ್ಲಿ ಮಲಗಿದ್ದರೂ ಏಳು; ಎದ್ದು ಬಾ.

ತಾವು ತಮ್ಮ ಸಾಲುಮಂಚಗಳಿಂದ ಮೊದಲಾಗಿ ಎದ್ದು ನಿನ್ನನ್ನು ಎಬ್ಬಿಸಲೆಂದೆ ನಿನ್ನರಸಿಯರು ಬಂದಿದ್ದಾರೆ. ಮಹಾಲಕ್ಷ್ಮಿ ಒಂದು ರೂಪದಿಂದ ನಿನ್ನನ್ನು ಸೇವಿಸಿ ತೃಪ್ತಳಾಗದೆ ಶ್ರೀದೇವಿಯಾಗಿ, ಭೂದೇವಿಯಾಗಿ ಇಕ್ಕೆಲಗಳಲ್ಲು ನಿನ್ನನ್ನು ಸೇವಿಸಬೇಕೆಂದು ಕಾದು ನಿಂತಿದ್ದಾಳೆ. ಎದ್ದು ಬಾ ಎಂದು ಸುಪ್ರಭಾತವನ್ನು ಹಾಡುತ್ತಿದ್ದಾಳೆ.

ಶ್ರುತಿಗೀತೆಯಲ್ಲಿ ಈ ಮಾತು ಬಂದಿದೆ:

ಸ್ವಸೃಷ್ಟಮಿದಮಾಪೀಯ
ಶಯಾನಂ ಸಹ ಶಕ್ತಿಭಿಃ |
ತದಂತೇ ಬೋಧಯಾಂಚಕ್ರುಃ
ತಲ್ಲಿಂಗೈಃ ಶ್ರುತಯಃ ಪರಮ್ ||

ಯಥಾ ಶಯಾನಂ ಸಮ್ರಾಜಂ
ವಂದಿನಸ್ತತ್ಪರಾಕ್ರಮೈಃ |
ಪ್ರತ್ಯೂಷೇಽಭ್ಯೇತ್ಯ ಸುಶ್ಲೋಕೈಃ
ಬೋಧಯಂತ್ಯನುಜೀವಿನಃ || (ಭಾಗ. 10. 94. 12-13.)

(ತಾನು ಸೃಷ್ಟಿಸಿದ ಈ ವಿಶ್ವವನ್ನು ತಾನೆ ಕಬಳಿಸಿ ಶ್ರೀ – ಭೂ – ದುರ್ಗೆಯರ ಜತೆಗೆ ಯೋಗನಿದ್ರೆಯಲ್ಲಿ ಪವಡಿಸಿರುವ ಭಗವಂತನನ್ನು ಪ್ರಳಯದ ಕತ್ತಲು ಕಳೆದು ಸೃಷ್ಟಿಯ ಸನ್ನಾಹದ ಮುಂಜಾವದಲ್ಲಿ ಲಕ್ಷ್ಮಿಯದೆ ರೂಪಾಂತರಗಳಾದ ಶ್ರುತಿ

ದೇವಿಯರು ಅವನ ಚರಿತಗಳನ್ನು ಹಾಡಿ ಎಬ್ಬಿಸಿದರು. ರಾತ್ರಿ ಮಲಗಿದ ಸಮ್ರಾಟ ನನ್ನು ಬೆಳಗಿನ ಜಾವದಲ್ಲಿ ಎಬ್ಬಿಸಬೇಕೆಂದು ಅವನ ಗುಣಗಾನ ಮಾಡಿ ಸುಪ್ರಭಾತ ಹಾಡುವ ವಂದಿಮಾಗಧರಂತೆಯೆ ಶ್ರುತಿದೇವಿಯಾದ ರಮೆಯು ಈ ಲೀಲಾ ಸುಪ್ರಭಾತ ಸೃಷ್ಟಿಯ ತರುಣದಲ್ಲಿ ನಡೆದಿದೆ.)

ಮಾಲಕುಮಿ–ಮಹಾಲಕ್ಷ್ಮಿ ಎನ್ನುವುದು ಮೂಲಪ್ರಕೃತಿ. ಆ ತತ್ವದ್ದೆ ಎರಡು ಮುಖಗಳು ಶ್ರೀ ಮತ್ತು ಭೂ. ಭಗವಂತನ ಎಡಬಲಗಳಲ್ಲಿ ನಿಂತು ಸೇವೆಮಾಡಲು ಅವಳೇ ಶ್ರೀ – ಭೂ ಎಂದು ದ್ವಿರೂಪಳಾದಳು. ಕೃಷ್ಣಾವತಾರದಲ್ಲಿ ರುಕ್ಮಿಣಿ – ಸತ್ಯ ಭಾಮೆ ಎಂದು ದ್ವಿರೂಪಳಾದಂತೆ :

ಶ್ರೀಭೂರ್ಮಿರಿತಿ ರೂಪಾಭ್ಯಾಂ
ಪ್ರಕೃತಿರ್ವಿಷ್ಣುನಾ ಸಹ ।
ಶೇತೇ ಶ್ರುತಿಸ್ವರೂಪೇಣ
ಸ್ತೌತಿ ಬ್ರಹ್ಮಲಯೇ ಹರಿಮ್ ॥ (ಭಾಗ - ತಾತ್ಪರ್ಯ.)

(ಪ್ರಕೃತಿ ದೇವತೆಯಾದ ಮಹಾಲಕ್ಷ್ಮಿ ಶ್ರೀದೇವಿ – ಭೂದೇವಿ ರೂಪಗಳಿಂದ ನಾರಾಯಣನ ಜತೆಗೆ ಮಹಾಪ್ರಳಯದಲ್ಲಿ ಪವಡಿಸುತ್ತಾಳೆ. ಅವಳೇ ಶ್ರುತಿರೂಪ ದಿಂದ ಭಗವಂತನನ್ನು ಸ್ತುತಿಸುತ್ತಿರುತ್ತಾಳೆ.)

ಪದ್ಯದ ಮೊದಲ ಚರಣದಲ್ಲಿ ಬಂದ 'ಮಾಲಕುಮಿ' ಎಂಬ ಪದದಿಂದಲೇ ದುರ್ಗಾರೂಪವನ್ನು ಸಂಗ್ರಹಿಸಿದರೆ ತ್ರಿಗುಣಮಾನಿನಿಯಾದ ತಾಯಿ ರಮೆಯ ಮೂರೂ ರೂಗಳನ್ನು ಸ್ಮರಿಸಿದಂತಾಯಿತು. ಈ ಲಕ್ಷ್ಮಿಯೆ ವೇದಮಾನಿಗಳಾದ ರೂಪಾಂತರಗಳಿಂದ ನಿನ್ನನ್ನು ಸುಪ್ರಭಾತ ಹಾಡಿ ಎಬ್ಬಿಸುತ್ತಿದ್ದಾಳೆ – ಶ್ರುತಿಗೀತೆ ಗಳಿಂದ. ಆದರಿಂದ ಏಳಯ್ಯ ಹರಿಯೆ. ಪ್ರಳಯದ ತಮಸ್ಸನ್ನು ಪರಿಹರಿಸು. ಸೃಷ್ಟಿಯ ಬೆಳಕನ್ನು ಹರಿಸು.

ಭಗವದ್ಗೀತೆ ಹೇಳುತ್ತದೆ : 'ಛಂದಾಂಸಿ ಯಸ್ಯ ಪರ್ಣಾನಿ' (ವೇದಗಳೆಂದರೆ ಈ ವಿಶ್ವದ್ರುಮದ ಎಲೆಗಳು.) ಅದರಂತೆ ಈ ವಿಶ್ವವೆಂಬ ಆಲದ ಮರದ ವೇದಗಳೆಂಬ ಎಲೆಯಲ್ಲಿ ವಾಚ್ಯನಾಗಿ ಪವಡಿಸಿರುವ ಹರಿಯೆ, ಏಳು ; ಭಕ್ತರ ಬಗೆಯಲ್ಲಿ ಅಭಿವ್ಯಕ್ತ ನಾಗು. ವೇದದ ಹೃದಯವನ್ನು ಅವರಿಗಾಗಿ ತೆರೆದು ತೋರು.

ಅಲ್ಲಿಂದ, ಭಕ್ತರ ಹೃದಯದ ಹಾಲುಗಡಲಿನಿಂದ ಎದ್ದು ಬಾ. ಕೊನೆಯದಾಗಿ ಸಪುಮ್ನಾ ಎಂಬ ಕರಿನಾಗದ ಹೆಡೆಯುಂತಿರುವ ಸಹಸ್ರಾರದಿಂದ ಎದ್ದು ಬಾ.

ಕಾಲ ಹೆಡೆಯಿಂದೇಳು ಎಂದಾಗ ಕಾಲಿಯ ನಾಗನ ಹೆಡೆಯಲ್ಲಿ ನಾಟ್ಯವಾಡಿದ ಕೃಷ್ಣಾವತಾರದ ಲೀಲೆ ದಾಸರ ಬಗೆಯಲ್ಲಿ ಮೂಡಿಬಂತು. ಆ ಹಿನ್ನಲೆಯಲ್ಲಿ

ಮೂಲರೂಪದ ಬಣ್ಣನೆಯ ಜತೆಗೆಯೆ ಕೃಷ್ಣಾವತಾರಿಯಾದ ಶ್ರೀನಿವಾಸನನ್ನು ಸ್ತುತಿ ಸುತ್ತಾರೆ :

ಕ್ಷಿತಿನಾಥ ನೀನೇಳು ಸತಿಭಾಮೆ ಬಂದಿಹಳು
ಮತಿವಂತ ನೀನೇಳು ಜಾಂಬವತಿ ಬಂದಿಹಳು
ಗತಿವಂತ ನೀನೇಳು ತುಳಸಿ ಬಂದಿಹಳು ಏ-
ಕಾಂತ ಸೇವೆಯ ಮಾಡಲು ‖ 3 ‖

ಕೃಷ್ಣಾವತಾರದಲ್ಲಿ ಪಟ್ಟದ ಅರಸಿಯರು ಇಬ್ಬರು : ರುಕ್ಮಿಣಿ – ಸತ್ಯಭಾಮೆ. ಪದ್ಯದಲ್ಲಿ ಬಂದಿರುವ ಭಾಮೆ ಎಂದರೆ ಸತ್ಯಭಾಮೆ. ಸತ್ಯಭಾಮೆಯನ್ನು ಸತ್ಯಾ ಎಂದೋ ಭಾಮಾ ಎಂದೋ ಅರ್ಧಹೆಸರಿನಿಂದ ಶಾಸ್ತ್ರಕಾರರು ಕರೆದದ್ದುಂಟು 'ಸತ್ಯಭಾಮೆ ಬಂದಿಹಳು' ಎಂಬ ಪಾಠ ಬಳಕೆಯಲ್ಲಿದೆ. ಪದ್ಯದ ನಡೆಗೆ ಅದು ಅಷ್ಟೊಂದು ಹೊಂದಿಕೆಯಾಗುವುದಿಲ್ಲ.

ರುಗ್ಮಿಣಿಯ ಅಂತಃಪುರದಲ್ಲಿ ಇರುಳನ್ನು ಕಳೆದ ಕೃಷ್ಣನನ್ನು ಎಬ್ಬಿಸಲು ಸತ್ಯಭಾಮೆ ಬಂದಿದ್ದಾಳೆ, ಎನ್ನುತ್ತಾರೆ ದಾಸರು : "ಕ್ಷಿತಿನಾಥ, ನೀನೇಳು ಸತಿಭಾಮೆ ಬಂದಿಹಳು".

ಕ್ಷಿತಿ ಅಂದರೆ ಭೂಮಿ. ನೀನು ಮೂಲರೂಪದಲ್ಲಿ ಕ್ಷಿತಿನಾಥ. ರಮೆಯ ಎರಡನೆಯ ರೂಪವಾದ ಭೂದೇವಿಯ ಒಡೆಯ. ಶ್ರೀದೇವಿ ರುಗ್ಮಿಣಿಯಾದರೆ ಭೂದೇವಿ ಇಲ್ಲಿ ಸತ್ಯಭಾಮೆಯಾದಳು. ಅಲ್ಲಿ ಕ್ಷಿತಿನಾಥನಾದ ನೀನು ಇಲ್ಲಿ ಸತ್ಯಭಾಮಾ ಪತಿಯಾದೆ. ಪತಿಪರಾಯಣೆಯಾದ ನಿನ್ನ ಕೈಹಿಡಿದ ನಲ್ಲೆ ಸತ್ಯಭಾಮೆ ಬಂದಿಹಳು ನಿನ್ನನೆಬ್ಬಿಸಲೆಂದು. ಇನ್ನಾದರೂ ಏಳು.

ಭಾಮೆ ಎಂದರೆ ಸುಂದರಿಯಾದ ಹೆಣ್ಣು ಎಂಬ ಸಾಮಾನ್ಯ ಅರ್ಥವೂ ಇದೆ. ಆದರಿಂದ ಈ ಪದದಿಂದಲೇ ತಂತ್ರನ್ಯಾಯದಿಂದ ದಾಸರು ರುಗ್ಮಿಣಿಯನ್ನೂ ಉಲ್ಲೇಖಿಸಿ ದಂತಿದೆ.

ನೀನು ಯಾವ ಸಿಂಹಾಸನವನ್ನೇರದಿದ್ದರೂ ಜರಾಸಂಧ ಮುಂತಾದ ಎಲ್ಲ ರಾಜರೂ ನಿನಗೆ ಸೋತು ಮಣಿದರು. ನೀನು ರುಗ್ಮಿಣಿಯ ಕೈ ಹಿಡಿದೆ. ಅದರಿಂದ ನಿಜವಾದ ಕ್ಷಿತಿನಾಥ – ಜಗದೊಡೆಯ ನೀನೆ. ನಿನ್ನ ಕರುಣಾಬಲದಿಂದ ಉಳಿದೆಲ್ಲ ರಾಜರು ಕ್ಷಿತಿನಾಥರಾದರು. ಅಂಥ ನಿನ್ನನ್ನು ಎಬ್ಬಿಸಲು ಭಾಮಿನಿ ರುಗ್ಮಿಣಿ ಬಂದಿಹಳು. 'ಕ್ಷಿತಿನಾಥ ನೀನೇಳು'.

ಕೃಷ್ಣನ ಅಷ್ಟಮಹಿಷಿಯರಲ್ಲಿ ಇನ್ನುಳಿದ ಆರು ಮಂದಿ : ನೀಲಾ, ಭದ್ರಾ, ಮಿತ್ರವಿಂದಾ, ಕಾಳಿಂದಿ, ಲಕ್ಷಣಾ ಮತ್ತು ಜಾಂಬವತಿ. ಈ ಆರು ಮಹಿಷಿಯರಲ್ಲು ಜಾಂಬವತಿಯಲ್ಲಿ ಲಕ್ಷ್ಮಿಯ ವಿಶೇಷಾವೇಶ. ಅದರಿಂದ ಅವಳ ಹೆಸರನ್ನು ದಾಸರು

ವಿಶೇಷತಃ ಉಲ್ಲೇಖಿಸಿದ್ದಾರೆ. ಜಾಂಬವತಿಯ ಜತೆಗೆ – ಐದು ಮಂದಿ ಮಹಿಷಿಯರೂ ಇಲ್ಲಿ ಅನುಸಂಧೇಯರು.

ಕೃಷ್ಣನ ಅಷ್ಟಮಹಿಷಿಯರ ವಿವಾಹಾನುಕ್ರಮದ ವಿವರ ಹೀಗಿದೆ :

ರುಗ್ಮಿಣಿ : ಕುಂಡಿನಪುರದ ರಾಜಕುಮಾರಿ. ಭೀಷ್ಮಕನ ಮಗಳು. ರುಗ್ಮಿಯ ತಂಗಿ. ರಮೆಯ ಶ್ರೀರೂಪ.

ಜಾಂಬವತಿ : ಜಾಂಬವಂತನ ಮಗಳು.

ಸತ್ಯಭಾಮಾ : ಸತ್ರಾಜಿತ್ ಯಾದವನ ಮಗಳು. ರಮೆಯ ಭೂರೂಪ.

ಕಾಳಿಂದಿ : ಸೂರ್ಯಪುತ್ರಿ, ಯಮುನೆಯ ತಂಗಿ. ನದೀದೇವತೆ.

ನೀಲಾ : ನಗ್ನಜಿತ್ ಯಾದವನ ಮಗಳು. (ಯಶೋದೆಯ ಸೋದರ ಕುಂಭಕನ ಮಗಳಾದ ನೀಲೆಯೂ ಇವಳದೇ ಪೂರ್ವರೂಪ.)

ಮಿತ್ರವಿಂದಾ : ಕೃಷ್ಣನ ಸೋದರತ್ತೆ, ವಸುದೇವನ ಸೋದರಿ ರಾಜಾಧಿ–ದೇವಿಯ ಮಗಳು. ಅವಂತಿ ದೇಶದ ರಾಜಕುಮಾರಿ. ವಿಂದಾನುವಿಂದರ ತಂಗಿ.

ಭದ್ರಾ : ವಸುದೇವನ ಸೋದರಿ ಶ್ರುತಕೀರ್ತಿಯ ಮಗಳು. ಕೇಕಯ ದೇಶದ ರಾಜಪುತ್ರಿ. ಪಂಚಕೇಕಯರ ತಂಗಿ.

ಲಕ್ಷಣಾ : ಮದ್ರದೇಶದ ರಾಜಕುಮಾರಿ.

ಮುಖ್ಯಮಹಿಷಿಯರಾದ ರುಗ್ಮಿಣಿ–ಸತ್ಯಭಾಮೆಯರು ಬಂದು ಓಲೈಸುತಿದ್ದಾರೆ. ಕ್ಷಿತಿನಾಥ ನೀನೇಳು. ಷಣ್ಮಹಿಷಿಯರು ಜಾಂಬವತಿಯನ್ನು ಮುಂದೆ ಮಾಡಿಕೊಂಡು ಬಂದು ಕರೆಯುತಿದ್ದಾರೆ. ಯಾರಿಗೂ ಬೇಸರವಾಗದಂತೆ, ಎಲ್ಲ ಹೆಂಡತಿಯರನ್ನೂ ಸಂತೈಸಿಕೊಂಡು ಸರಸ ದಾಂಪತ್ಯ ನಡೆಸುತ್ತಿರುವ, ಷೋಡಶ ಸ್ತ್ರೀ ಸಹಸ್ರೇಶನಾಗಿಯೂ ಅನಾದಿ ಬ್ರಹ್ಮಚಾರಿ ಎನಿಸಿದ ಮತಿವಂತ ನೀನೇಳು.

ಇಲ್ಲಿ ಮತಿವಂತ – ಗತಿವಂತ ಎನ್ನುವ ವಿಶೇಷಣಗಳು ಮುಖ್ಯವಾಗಿ – 'ಮತಿ ಉಳ್ಳವ' 'ಗತಿ ಉಳ್ಳವ' ಎನ್ನುವ ಅರ್ಥದಲ್ಲಿ ಬಂದದ್ದಲ್ಲ. 'ಮತಿ ನೀಡುವವ' 'ಗತಿ ನೀಡುವವ' ಎಂಬ ಅರ್ಥದಲ್ಲಿ ಬಂದಿವೆ. ಮೊದಲು ನಮಗೆ ಸನ್ಮತಿಯನ್ನು ನೀಡುವವ. ಅನಂತರ ಆ ಮೂಲಕ ಸದ್‌ಗತಿಯನ್ನು ನೀಡುವವ. ಅದರಿಂದ ಮತಿವಂತ ನೀನೇಳು ; ನಮಗೆ ಸನ್ಮತಿಯ ನೀಡು. ಗತಿವಂತ ನೀನೇಳು ; ನಮ್ಮನ್ನು ಸದ್‌ಗತಿಯ ಪಥದಲ್ಲಿ ನಡೆಸು.

ಪ್ರಾಣದೇವರ ಹನುಮದವತಾರವನ್ನೂ ಮತಿ ಎಂದು ಕರೆಯುತ್ತಾರೆ. (ಹನುಮಾನ್ ಮತಿ ಶಬ್ದಿತಃ) ಹನುಮಂತನಿಗೊಲಿದ ರಾಮಚಂದ್ರನೆ ಮತಿವಂತ. ಎಂದ ಮೇಲೆ ಹನುಮಂತನಿಗೊಲಿದು ಮತಿವಂತನೆನಿಸಿದ ನೀನು ಸೀತಾನ್ವೇಷಣೆಯಲ್ಲಿ

ಹನುಮಂತನ ಜತೆಗೆಯೆ ನಿನಗೆ ಹಿರಿಯ ಸೇವೆ ಸಲ್ಲಿಸಿದ ಜಾಂಬವಂತನಿಗೊಲಿವುದು, ಒಲಿದು ಅವನ ಮಗಳು ಜಾಂಬವತಿಯನ್ನು ವರಿಸುವುದು ಸಹಜವೆ ತಾನೆ? ಅದರಿಂದ 'ಮತಿವಂತ, ನೀನೇಳು ಜಾಂಬವತಿ ಬಂದಿಹಳು'.

ತುಲಸಿಯ ಬಗೆಗೆ ಪುರಾಣಗಳು ನಾನಾಬಗೆಯ ಉಲ್ಲೇಖ ಮಾಡಿವೆ. ಸಮುದ್ರ ಮಥನ ಕಾಲದಲ್ಲಿ ನಾರಾಯಣನ ಕಣ್ಣಿಂದ ಅಮೃತಕಲಶದಲ್ಲಿ ಉದುರಿದ ಆನಂದಾಶ್ರುವೆ ತುಲಸೀದೇವಿಯಾದಳು. ಲಕ್ಷ್ಮಿಯ ಜತೆಗೆ ತುಲಸಿಯನ್ನು ಅವನು ಮದುವೆಯಾದ. ಇವಳೆ ವೃಂದಾದೇವಿಯಾದಳು. ಇವಳೆ ರಾಧೆಯಾದಳು. ಅದಕೆಂದೆ ತುಳಸಿಯ ಕಟ್ಟೆ ವೃಂದಾವನವಾಯಿತು. ರಾಧಾ – ಕೃಷ್ಣರ ವಿಹಾರ ಭೂಮಿಯೂ ವೃಂದಾವನವಾಯಿತು.

ವಿಜಯದಾಸರ ಒಂದು ಸುಳಾದಿಯಲ್ಲು ನಾವೀ ಮಾತಿನ ಉಲ್ಲೇಖ ಕಾಣುತ್ತೇವೆ:

ವೃಂದಾದೊಳಗೆ ಸಕಲ ವೃಕ್ಷಜಾತಿಗೆ ಮಿಗಿಲು
ಎಂದೆನಿಸುವ ತುಳಸಿ ಪೆತ್ತ ಲೋಚನ

ಒಂದು ತುಳಸೀಸ್ತುತಿ ಹೀಗೆ ಹೇಳುತ್ತದೆ:

ತುಳಸಿ ಶ್ರೀಸಖಿ ಶುಭೇ
ಪಾಪಹಾರಿಣಿ ಪುಣ್ಯದೇ ।
ನಮಸ್ತೇ ನಾರದನುತೇ
ನಾರಾಯಣಮನಃಪ್ರಿಯೇ ॥

(ಓ ತುಳಸಿಯೆ, ನೀನು ಶ್ರೀರಮೆಯ ಗೆಳತಿ. ಶುಭಂಕರಿ. ನಮ್ಮ ಪಾಪಗಳನ್ನು ಕಳೆದು ಪುಣ್ಯದ ಬುತ್ತಿ ಕಟ್ಟಿಕೊಡುವವಳು. ನಾರದನಿಂದ ನುತಳಾದವಳು. ನಾರಾಯಣನ ಬಗೆ ಕದ್ದವಳು. ನಿನಗೆ ನಮಸ್ಕಾರ.)

ಅಕೆಯಲ್ಲಿ ರಮಾದೇವಿ ವಿಶೇಷತಃ ಸನ್ನಿಹಿತಳಾಗಿದ್ದಾಳೆ ಎನ್ನುತ್ತದೆ ಇನ್ನೊಂದು ವಚನ:

ತುಳಸ್ಯಾಂ ತು ರಮಾದೇವಿ
ಸಾ ವಿಷ್ಣೋರ್ನಿತ್ಯದಾ ಪ್ರಿಯಾ ।

(ತುಳಸಿಯಲ್ಲಿ ರಮಾದೇವಿ ನೆಲಸಿದ್ದಾಳೆ. ಅದಕೆಂದೆ ಯಾವಾಗಲೂ ತುಳಸಿಯೆಂದರೆ ವಿಷ್ಣುವಿಗೆ ಅತಿಪ್ರಿಯ.)

ಹೀಗೆ ತುಳಸಿ ರೂಪವಿಶೇಷದಿಂದ ಭಗವಂತನ ಪತ್ನಿಯೂ ಹೌದು; ಉಳಿದ ಹೂಗಳಿಂದ ಮಿಗಿಲಾಗಿ ಭಗವಂತನಿಗೆ ಪ್ರಿಯವಾದ ಪೂಜಾಸಾಧನವೂ ಹೌದು. ಒಂದು ದಳ ತುಳಸಿಯಿಂದ ಅರ್ಚಿಸಿದರೆ ಸಾಕು; ಪ್ರೀತನಾಗಿ ಸದ್ಗತಿಯನ್ನು ಕರುಣಿಸುತ್ತಾನೆ. ಅದಕ್ಕಾಗಿ ದಾಸರು ಹಾಡಿದರು: "ಗತಿವಂತ ನೀನೇಳು ಶ್ರೀ ತುಳಸಿ ಬಂದಿಹಳು; ಏಕಾಂತನೇ, ನಿನ್ನ ಏಕಾಂತ ಸೇವೆಗೆ". ಇಲ್ಲಿ "ಶ್ರೀ ತುಳಸಿ ಬಂದಿಹಳು" ಎಂಬ ಪಾಠ ಛಂದಸ್ಸಿನ ನಡೆಯ ದೃಷ್ಟಿಯಿಂದ ಸರಿಹೊಂದುವುದಿಲ್ಲ. ಯಾರೋ ಮತ್ತೆ ಶ್ರೀಕಾರವನ್ನು ಸೇರಿಸಿರಬೇಕು.

"ಏಕಾಂತದಲ್ಲಿ ಸೇವೆ; ಏಕಾಂತವಾದ ಸೇವೆ. ಯಾವ ಫಲಾಪೇಕ್ಷೆಯೂ ಇಲ್ಲದೆ ಕೇವಲ ಭಗವತ್‌ಪ್ರೀತಿಗಾಗಿ ಮಾಡುವ ಸೇವೆ ಏಕಾಂತವಾದ ಸೇವೆ. ಏನನ್ನಾದರೂ ಬಯಸಿ ಅದಕ್ಕಾಗಿ ಭಗವಂತನನ್ನು ಆರಾಧಿಸಿದರೆ ಅದು ವ್ಯಾಪಾರೀ ಸೇವೆಯಾಯಿತು. ಭಗವಂತ ಇನ್ನಾವುದಕ್ಕಾಗಿಯೂ ಅಲ್ಲ, ಎಲ್ಲವೂ ಭಗವಂತನಿಗಾಗಿ ಎನ್ನುವ ಸ್ಥಿತಿಯಲ್ಲಿ ನಡೆಯುವ ಸೇವೆ ಏಕಾಂತಸೇವೆ.

ಕೈ ಹಿಡಿದ ಮಹಿಷಿಯರು ಬಿಟ್ಟು ತುಳಸಿ ಏಕೆ ಏಕಾಂತಸೇವೆಗೆ ಬಂದಳು? ತುಳಸಿಯ ಹಿರಿಮೆಯನ್ನು ಸಾರುವುದಕ್ಕಾಗಿ ಈ ಮಾತು ಬಂದಿದೆ. ಈ ಹಿರಿಮೆಯ ಬಗ್ಗೆ ಭಾಗವತ ನಮಗೆ ತಿಳಿಸುತ್ತದೆ:

> ಮಂದಾರ ಕುಂದ ಕುರವೋತ್ಪಲ ಚಂಪಕಾರ್ಣ-
> ಪುನ್ನಾಗ ನಾಗ ಬಕುಳಾಂಬುಜ ಪಾರಿಜಾತಾಃ ।
> ಗಂಧೇಽರ್ಚಿತೇ ತುಳಸಿಕಾಭರಣೇನ ತಸ್ಯಾಃ
> ಯಸ್ಮಿಂಸ್ತಪಃ ಸುಮನಸೋ ಬಹುಮಾನಯಂತಿ ॥
>
> (ಭಾಗ: 3. 16. 19.)

(ವೈಕುಂಠದಲ್ಲಿ ಮುಕ್ತರು ಭಗವಂತನಿಗೆ ಹೂ—ತುಳಸಿಗಳನ್ನು ಅರ್ಪಿಸುತ್ತಾರೆ. ಆಗ ಭಗವಂತ ಉಳಿದ ಹೂವುಗಳಿಂದ ಮಿಗಿಲಾಗಿ ತುಳಸಿಯನ್ನು ಕೈಗೆತ್ತಿಕೊಂಡು ಅದರ ಕಂಪನ್ನು ಸವಿಯುತ್ತಾನೆ. ಮಂದಾರ, ಮೊಲ್ಲೆ ಮಲ್ಲಿಗೆ, ಕುರಬಕ (ಗೋರಂಟೆ) ನೈದಿಲೆ, ಸಂಪಿಗೆ, ಊರ್ಣ (ಕೇಸರಜಾಲಿ ?) ಸುರಹೊನ್ನೆ, ನಾಗಕೇಸರ, ಬಕುಳ (ಸುರಗಿ), ತಾವರೆ, ಪಾರಿಜಾತ ಮುಂತಾದ ಹೂವುಗಳು (ಹೂವಿನ ಅಭಿಮಾನಿ ದೇವತೆಗಳು) ತಮ್ಮ ಪಾಲಿಗಿರದ ತುಳಸಿಯ ಈ ಹಿರಿಯ ತಪೋಭಾಗ್ಯವನ್ನು ಬಹು ಗೌರವದಿಂದ ಕಾಣುತ್ತವೆ.)

> ಯಂ ವೈ ವಿಭೂತಿರುಪಯಾತ್ಯನುವೇಲಮನ್ಯೈಃ
> ಅರ್ಥಾರ್ಥಿಭಿಃ ಸ್ವಶಿರಸಾ ಧೃತಪಾದರೇಣುಃ ।

ಧನ್ಯಾರ್ಪಿತಾಂಘ್ರಿ ತುಳಸೀನವದಾಮಧಾಮ್ನೋ
ಲೋಕಂ ಮಧುವ್ರತಪತೇರಿವ ಕಾಮಯಾನಾ ||

(ಭಾಗ. 3. 17. 20)

(ಪುರುಷಾರ್ಥವನ್ನು ಬಯಸುವ ಬ್ರಹ್ಮಾದಿಗಳು ಯಾರ ಪಾದರೇಣುವನ್ನು ತಮ್ಮ ತಲೆಯಲ್ಲಿ ಹೊತ್ತಿರುವರೋ ಅಂಥ ಲಕ್ಷ್ಮೀದೇವಿ, ತಾನು ಭಗವಂತನ ಎದೆಯಲ್ಲಿ ನೆಲಸುವ ಹಿರಿಯ ಭಾಗ್ಯವನ್ನು ಪಡೆದಿದ್ದರೂ ಕೂಡ, ಕೃತಕೃತ್ಯರಾದ ಮುಕ್ತರಿಂದ ಪಾದಕ್ಕೆ ಅರ್ಪಿತಗೊಂಡ ತುಲಸೀನವಮಾಲಿಕೆಯನ್ನು ಹೊತ್ತ ನಾರಾಯಣನು ಆ ತುಳಸಿಗಿತ್ತ ಸ್ಥಾನ – ಮಾನವನ್ನೆ ತಾನೂ ಪಡೆಯ ಬೇಕೆಂಬ ಜಿದ್ದಿನಿಂದಲೋ ಎಂಬಂತೆ ಅನುದಿನವೂ ಅತಿಶಯವಾದ ಸೇವೆ ಗೈಯುತ್ತಿದ್ದಾಳೆ.)

ತುಳಸಿಯ ರೂಪದಿಂದಲೂ ಲಕ್ಷ್ಮಿಯೇ ಭಗವಂತನನ್ನು ಪೂಜಿಸುತ್ತಾಳೆ. ಆದರೂ ತುಳಸಿಯ ಬಗೆಗೆ ಲಕ್ಷ್ಮಿಗೂ 'ಸವತಿಮಾತ್ಸರ್ಯ ಮೂಡುವಷ್ಟು' ತುಳಸಿಯ ಮಂಜರಿ ಭಗವಂತನಿಗೆ ಪ್ರಿಯ ಎಂದು ಈ ಶ್ಲೋಕ ಆಲಂಕಾರಿಕವಾಗಿ ತುಳಸಿಯ ಮಹಿಮೆಯನ್ನು ವಿವರಿಸುತ್ತದೆ. ಆದರಿಂದಲೆ ದಾಸರು ಹೇಳುತ್ತಾರೆ: ಉಳಿದವರಿಗೆ ಅಲಭ್ಯವಾದ ನಿನ್ನ ಏಕಾಂತ ಸೇವೆಯ ಮಾಡಲು ತುಳಸಿ ಬಂದಿಹಳು, ಎದ್ದೇಳು.

ಪತ್ನಿಯರೆಲ್ಲ ಬಂದಿದ್ದಾರೆ. ಅಷ್ಟೆ ಅಲ್ಲ, ಜತೆಗೆ ತಂದೆಯನ್ನು ಕಾಣಲು ಮಗನೂ ಬಂದಿದ್ದಾನೆ; ಗಾಯಕರು ನರ್ತಕಿಯರು ಸೇವೆ ಸಲ್ಲಿಸಲು ಕಾದಿದ್ದಾರೆ ಎನ್ನುತ್ತದೆ ಮುಂದಿನ ಸೊಲ್ಲು :

ಅಂಬುರುಹದಿಂದ ಜನಿಸಿದ ಬ್ರಹ್ಮ ಬಂದಿಹನು
ಗಂಭೀರಗಾಯನದ ನಾರದನು ನಿಂದಿಹನು
ರಂಭೆ ಮೇನಕೆ ಮೊದಲು ನರ್ತನಕೆ ಐದಿಹರು
ಶಂಬರಾರಿಪಿತನೆ ಏಳು ||

ಪ್ರಳಯಜಲಧಿಯಲ್ಲಿ ಅರಳಿದ ತಾವರೆ – ಅಂಬುರುಹ ಈ ಬ್ರಹ್ಮಾಂಡ. ಇಂಥ ಬ್ರಹ್ಮಾಂಡರೂಪವಾದ ನಿನ್ನ ನಾಭಿಕಮಲದಿಂದ ಜನಿಸಿದ ಬ್ರಹ್ಮ ತನ್ನ ತಂದೆಯನ್ನು ಕಾಣಲೆಂದು ಬಂದಿಹನು – ತನ್ನ ಮಾನಸಪುತ್ರ ನಾರದನ ಜತೆಗೆ.

ನಿನ್ನ ಮೊಮ್ಮಗನಾದ ನಾರದನೇನು ಕಮ್ಮಿಯೆ ? ಸಂಗೀತ ಪಿತಾಮಹನಲ್ಲವೆ ಅವನು ? ಅವನ ಸಂಗೀತವೆಲ್ಲ ನಿನ್ನ ಗುಣಗಾನಕ್ಕೆ ಮೀಸಲು. ಕ್ಷುದ್ರ ವಿಷಯಗಳಿಗಾಗಿ, ಸ್ವಾರ್ಥಕ್ಕಾಗಿ, ಯಾರು ಯಾರನ್ನೋ ಹೊಗಳಲು ಆ ಸಂಗೀತ ಎಂದೂ ಉಪಯೋಗವಾದದ್ದಿಲ್ಲ. ನಿನ್ನ ಗುಣಗಳಂತೆಯೆ ಅವನ ಗಾನವೂ ಗಂಭೀರ. ಆ ಗಾಂಭೀರ್ಯ ಅವನ ಗಾನಕ್ಕೆ ಮೀಸಲು. ಅಂಥ ಗಂಭೀರಗಾಯನದ ನಾರದನೂ ನಿನ್ನನ್ನು ಕಂಡು ಕೊಂಡಾಡಬೇಕು ಎಂದು ಕಾದು ನಿಂದಿಹನು.

ನಾರದನ ಹಾಡಿಗೆ ತಕ್ಕಂತೆ ತಾವೂ ಗಂಭೀರವಾಗಿ ನಲಿದು ನಿನ್ನನ್ನು ಒಲಿಸಬೇಕು ಎಂದು ರಂಭೆ – ಮೇನಕೆ ಮೊದಲಾದ ಅಪ್ಸರೆಯರೂ ಬಂದಿಹರು. ಈ ಅಪ್ಸರೆಯರಲ್ಲೆ ಪ್ರಧಾನರಾದ ರಂಭೆ–ಮೇನಕೆ ಇಂಥ ಮಂದಿ ಎಲ್ಲರಿಗಿಂತ ಮೊದಲು ನಿನಗೆ ನಾಟ್ಯಸೇವೆ ಸಲ್ಲಿಸಬೇಕೆಂದು ಮೊದಲು ಬಂದಿಹರು.

ಶಂಬರನೆಂಬ ಮಾಯಾವಿ ಅಸುರನನ್ನು ಕೊಂದ ಕಾಮನ ತಂದೆಯೆ, ಕೃಷ್ಣಾವತಾರದಲ್ಲಿ ರುಗ್ಮಿಣಿಯಲ್ಲಿ ಅವನನ್ನೆ ಪ್ರದ್ಯುಮ್ನನೆಂಬ ಮಗನಾಗಿ ಪಡೆದ ತಂದೆಯೆ, ಸಾಕ್ಷಾತ್ ಮನ್ಮಥ ಮನ್ಮಥನೆ, ತ್ರಿಲೋಕ ಸುಂದರನೆ, ನಿನ್ನನ್ನು ಕಾಣ ಬಂದ ಈ ಭಕ್ತ ಸಂಸಾರದ ಬಯಕೆ ಈಡೇರಿಸುವ ಸಲುವಾಗಿ ನೀನು ಸೆಳೆಮಂಚದಿಂದ ಏಳು. ನೀನು ಕಾಮನ ತಂದೆಯಾದರೂ ಭಕ್ತಿ ಕಾಮನಲ್ಲವೆ? ಭಕ್ತಿ ತುಂಬಿದ ಬಗೆಯಿಂದ ನಿನ್ನ ಬಳಿಬಂದ ಭಕ್ತರನ್ನು ಹರಸಲು ಎದ್ದು ಬಾ.

ಇತ್ತ ರಾಜರ್ಷಿಗಳೂ ರಾಜರಾಜೇಶ್ವರನಾದ ನಿನ್ನ ಸೇವೆಯ ಸರದಿಗಾಗಿ ಕಾದು ನಿಂತಿದ್ದಾರೆ ಎನ್ನುತ್ತದೆ ಮುಂದಿನ ಸೊಲ್ಲು :

ರಾಜಸೂಯವ ಕೊಳಲು ವಾಯುಸುತ ಬಂದಿಹನು
ತೇಜಿಯಾಟಕೆ ಅರ್ಜುನನು ಕರೆಯ ಬಂದಿಹನು
ರಾಜ ಧರ್ಮಜ ಅಗ್ರಪೂಜೆ ಮಾಡುವೆನೆಂದು
ಹೂಜೆಯನೆ ಪಿಡಿದುಕೊಂಡು ||

ರಾಜಸೂಯವನ್ನು ಕೈಕೊಳ್ಳಲು ಪೂರ್ವಭಾವಿಯಾಗಿ ದಿಗ್ವಿಜಯಕ್ಕೆ ತೆರಳಲು ನಿನ್ನ ಅನುಮತಿಗಾಗಿ ವಾಯುಸುತನಾದ ಭೀಮಸೇನ ಬಂದಿದ್ದಾನೆ. ರಾಜಸೂಯವನ್ನು ಕೈಕೊಳ್ಳಲು ಅದರಮೊದಲು ಜರಾಸಂಧನನ್ನು ಕೊಲ್ಲಲು ನಿನ್ನ ಜತೆ ಮಗಧಕ್ಕೆ ಹೋಗಲೆಂದು ವಾಯುಸುತ ಸಿದ್ಧನಾಗಿ ಬಂದಿದ್ದಾನೆ. ರಾಜಸೂಯದ ಯಜಮಾನ ಹಿರಿಯಣ್ಣ ಧರ್ಮರಾಜನಾದರೂ ವಾಯುಸುತನಾದ ಭೀಮಸೇನನೆ ಮುಖ್ಯಾಧಿಕಾರಿಯಾದ್ದರಿಂದ ರಾಜಸೂಯದ ಫಲವ ಕೊಳಲು ವಾಯುಸುತ ಬಂದಿಹನು.

ಕುರುಕ್ಷೇತ್ರದ ಯುದ್ಧದಲ್ಲಿ ತನ್ನ ರಥದ ಸಾರಥಿಯಾಗಿ ನೀನು ಕುದುರೆ (ತೇಜಿ) ನಡೆಸುವ ಆಟವನ್ನು, ನಿನ್ನ ಆ ಲೀಲೆಯನ್ನು ಕಾಣಲು ಕಾತರನಾಗಿ, ಯುದ್ಧರಂಗಕ್ಕೆ ಅಣಿಯಾಗಿ ಇಂದ್ರಸುತನಾದ ಅರ್ಜುನ ಕರೆಯ ಬಂದಿಹನು.

ಧರ್ಮಪುತ್ರನಾದ ಧರ್ಮರಾಜ, ತನ್ನ ಧರ್ಮನಿಷ್ಠೆಯಿಂದ ಸಹಜವಾಗಿ, ಅನ್ವರ್ಥವಾಗಿ ಧರ್ಮರಾಜ ಎನ್ನಿಸಿದ ಯುಧಿಷ್ಠಿರ ರಾಜಸೂಯದ ಕೊನೆಯಲ್ಲಿ ನಿನಗೆ ಅಗ್ರಪೂಜೆ ಮಾಡುವೆನೆಂದು ಬಂದಿಹನು – ಅರ್ಘ್ಯಕ್ಕಾಗಿ, ಪಾದ್ಯಕ್ಕಾಗಿ ನೀರು ತುಂಬಿದ ಹೂಜೆಯನೆ ಹಿಡಿದುಕೊಂಡು. ತಳುವದಿರು, ಎದ್ದೇಳು ಬಾ.

ದಾಸರ ಮಾನಸಚಿಂತನೆಯಲ್ಲಿ ಈ ಎಲ್ಲ ಘಟನೆಗಳು ಇತಿಹಾಸಗಳಾಗಿ ಬರದೆ– ವರ್ತಮಾನದ ಸಂಗತಿಗಳಂತೆ ಅವರ ಕಣ್ಮುಂದೆ ಸುಳಿಯುತ್ತವೆ. ಹಾಗಾಗಿ ಅವರು ಈ ಪೌರಾಣಿಕ ವಿಷಯಗಳನ್ನೆಲ್ಲ ಅಂದು ಮುಂಜಾನೆ ಎದ್ದು ಮಾಡಬೇಕಾದ ಕಜ ಗಳೆನ್ನುವಂತೆ ಹಾಡಿ ಭಗವಂತನನ್ನು ಎಬ್ಬಿಸುತ್ತಾರೆ.

ಇಲ್ಲಿ ಘಟನೆಗಳು ಇತಿಹಾಸದ ಅನುಕ್ರಮವಾಗಿ ಬಂದೂ ಇಲ್ಲ. ಅದೇ ಕ್ರಮ ದಲ್ಲಿ ಹೇಳುವುದಿದ್ದರೆ ಮೊದಲು ರಾಜಸೂಯ, ಅನಂತರ ಅಗ್ರಪೂಜೆ, ಕೊನೆಗೆ ತೇಜಿ ಯಾಟ ಬರಬೇಕಿತ್ತು. ಧ್ಯಾನಕಾಲದಲ್ಲಿ ಬಗೆಯಲ್ಲಿ ಸುಳಿದ ಕ್ರಮವೆ ಮುಖ್ಯ ಹೊರತು ಈ ಇತಿಹಾಸದ ಅನುಕ್ರಮ ದಾಸರಿಗೆ ಮುಖ್ಯವಲ್ಲ.

ಈ ಅಕ್ರಮದಲ್ಲಿ ಇನ್ನೊಂದು ಕ್ರಮವೂ ಸೇರಿಕೊಂಡಿದೆ. ಘಟನೆಯ ಅನುಕ್ರಮಕ್ಕಿಂತಲೂ ದೇವತಾತಾರತಮ್ಯದ ಅನುಕ್ರಮವನ್ನು ಸೂಚಿಸುವುದು ದಾಸರ ಮುಖ್ಯ ಉದ್ದೇಶವಾಗಿತ್ತು. ಆ ಉದ್ದೇಶ ಇಲ್ಲಿ ಸಫಲವಾಗಿದೆ.

ಇಲ್ಲಿನ ತಾರತಮ್ಯದ ಕ್ರಮ ಹೀಗಿದೆ: ತಾರತಮ್ಯದ ಮೂರನೆಯ ಕಕ್ಷೆಯಲ್ಲಿ ಬರುವ ಪ್ರಾಣ ಸ್ವರೂಪನಾದ ಭೀಮಸೇನ ಮೊದಲು. ಎಂಟನೆಯ ಕಕ್ಷೆಯ ಇಂದ್ರ ಸ್ವರೂಪನಾದ ಅರ್ಜುನ ಅನಂತರ. ಯಮಧರ್ಮ ಹನ್ನೆರಡನೆಯ ಕಕ್ಷೆಯಲ್ಲಿ ಬರುವವನು. ಅದರಿಂದ ಧರ್ಮಜ ಕೊನೆಗೆ.

ಹೀಗೆ ದೇವತೆಗಳು ಮೂಲರೂಪದಿಂದ ಮಾತ್ರವೆ ಅಲ್ಲ; ಅವತಾರ ರೂಪ ಗಳಿಂದಲು ನಿನ್ನನ್ನು ಆರಾಧಿಸಲು ಕಾದು ನಿಂತಿದ್ದಾರೆ. ಅದರಿಂದ ತಳುವದೆ ಏಳು.

ಇಡಿಯ ಪ್ರಕೃತಿಯೆ ನಿನ್ನ ಪೂಜೆಗೆ ಅಣಿಯಾಗಿದೆ. ಉಷೆಯ ಹೊಂಬೆಳಕಿ ನಿಂದ ಮೈ ತೊಳೆದುಕೊಂಡು, ಅರಳಿದ ಗಿಡಬಳ್ಳಿಗಳಲ್ಲಿ ಹೂ–ಹಣ್ಣು ಹೊತ್ತು ಪ್ರಸನ್ನ ಭಾವದಿಂದ ನಿನ್ನ ಸೇವೆಗೆ ಸಜ್ಜಾಗಿ ನಿಂತಿದೆ. ಈ ನೆಲದಲ್ಲಿ ಹರಿಯುವ ಪುಣ್ಯ ನದಿಗಳು ಕೂಡ ನಿನ್ನ ಕಾಲು ತೊಳೆಯಲೆಂದೆ ಗಿರಿ ಬೆಟ್ಟಗಳಿಂದ ಹರಿಯುತ್ತವೆ ಎನ್ನುತ್ತದೆ ಮುಂದಿನ ಸೊಲ್ಲು:

ದೇವ ನಿನ್ನಂಘ್ರಿಯನು ಪೂಜೆ ಮಾಡುವೆವೆಂದು
ಕಾವೇರಿ ಕೃಷ್ಣೆ ಗೌತಮಿ ಗಂಗೆ ಮಲಪಹರಿ
ಸಾವಧಾನದಿ ಯಮುನೆ ತುಂಗಾ ಸರಸ್ವತೀ
ಭೀಮರಥಿ ನೇತ್ರಾವತಿ ||

ಈ ನದಿಗಳ ಅಭಿಮಾನಿ ದೇವಿಯರು ತಮ್ಮ ಜಲವೆಲ್ಲ ವಿಷ್ಣು ಪಾದೋದಕ ವಾಗಲಿ ಎಂಬ ಆಸೆಯಿಂದ – ತಮ್ಮ ಜಲದಿಂದಲೇ ನಿನ್ನ ಅಂಘ್ರಿಯನು ತೊಳೆದು ತಮ್ಮ ಪಾಲಿನ ಪೂಜೆ ಸಲ್ಲಿಸಬೇಕೆಂದು ಬಂದಿಹರು. ಓ ದೇವ, ನಿನ್ನ ಕೃಪಾಪೂರ ವನ್ನು ಅವರ ಮೇಲೂ ಹರಿಸು. ಏಳು ಏಳಯ್ಯ ಬೆಳಗಾಯಿತು.

ದೇವ ಎಂಬ ಶಬ್ದಕ್ಕೆ ವಿಶಿಷ್ಟವಾದ ಅರ್ಥ ಉಂಟು : ಲೋಕದ ವ್ಯವಹಾರಗಳನ್ನೆಲ್ಲ ನಡೆಸುವವನು ನಿಯಂತ್ರಿಸುವವನು ದೇವ (ದಿವು ವ್ಯವಹಾರೇ). ಇರುಳಲ್ಲಿ ಸೋತ ಜಗತ್ತಿಗೆ ವಿಶ್ರಾಂತಿಯ ನಿದ್ರೆಯನ್ನು ನೀಡುವವನೂ ದೇವ (ದಿವು ಸ್ವಪ್ನೇ).

ನೀನು ಎಚ್ಚರಿದ್ದು ಜಗಕ್ಕೆಲ್ಲ ನಿದ್ರೆ ನೀಡುವವನು. ನೀನೆ ನಿದ್ರಿಸುವುದೆಂದರೇನು? ನೀನು ನಿದ್ರಿಸಿದೆಯೆಂದರೆ ಜಗತ್ತಿನ ವ್ಯವಹಾರ ನಡೆಯುವುದಾದರೂ ಹೇಗೆ? ಅದರಿಂದ ನಿನ್ನ ಈ ಲೀಲಾ ನಿದ್ರೆಯನ್ನು ಸಾಕುಮಾಡು.

ಕಾವೇರಿ ಕರ್ನಾಟಕದಲ್ಲಿ ಹುಟ್ಟಿ, ದಕ್ಷಿಣಕ್ಕೆ ಜರುಗಿ ಪೂರ್ವಾಭಿಮುಖವಾಗಿ ಸಾಗಿ, ಶ್ರೀರಂಗನಿಗೆ ಪ್ರದಕ್ಷಿಣೆ ಹಾಕಿ ತಮಿಳುನಾಡಿನಲ್ಲಿ ಕಡಲುಸೇರುವ ಪುಣ್ಯನದಿ. ಕಾವೇರಿಯೇ ವಿರಜಾನದಿ; ಶ್ರೀರಂಗಕ್ಷೇತ್ರವೆ ವೈಕುಂಠ ಎಂದು ಭಾವುಕರು ಹಾಡಿದ್ದುಂಟು :

"ಕಾವೇರೀ ವಿರಜಾ ಸೇಯಂ
ವೈಕುಂಠಂ ರಂಗಮಂದಿರಮ್"

ಈ ಪುಣ್ಯನದಿಯ ಪ್ರಶಂಸೆ ಮಹಾಭಾರತದಲ್ಲೂ ಬಂದಿದೆ :

"ತತೋ ಗಚ್ಛೇತ ಕಾವೇರೀಂ
ವೃತಾಮಪ್ಸರಸಾಂ ಗಣೈಃ ।
ತತ್ರ ಸ್ನಾತ್ವಾ ನರೋ ರಾಜನ್
ಗೋಸಹಸ್ರಫಲಂ ಲಭೇತ್ ॥" (ಭಾರ. ವನ 85. 22.)

(ಕಾವೇರಿ ನದಿಯ ತೀರವೆಂದರೆ ಅಪ್ಸರೆಯರ ವಿಹಾರದ ತಾಣ. ಇಂಥ ಪುಣ್ಯನದಿಯಲ್ಲಿ ಒಮ್ಮೆ ಮಿಂದರೆ ಸಾಕು ; ಸಾವಿರ ಗೋದಾನದ ಫಲವುಂಟು)

ನಾವು ನಿತ್ಯವೂ ಸ್ನಾನಕಾಲದಲ್ಲಿ, ಜಪ – ಪೂಜಾಕಾಲದಲ್ಲಿ ಸನ್ನಿಧಿಯನ್ನು ಪ್ರಾರ್ಥಿಸುವ ಸಪ್ತ ಪುಣ್ಯತೀರ್ಥಗಳಲ್ಲಿ ಕಾವೇರಿಯೂ ಒಂದು :

ಗಂಗೇ ಚ ಯಮುನೇ ಚೈವ
ಗೋದಾವರಿ ಸರಸ್ವತಿ ।
ನರ್ಮದೇ ಸಿಂಧು ಕಾವೇರಿ
ಜಲೇಽಸ್ಮಿನ್ ಸನ್ನಿಧಿಂ ಕುರು ॥

ಈ ಕಾವೇರಿಯನ್ನು ದಕ್ಷಿಣದ ಗಂಗೆಯೆಂದೂ ಹೇಳುತ್ತಾರೆ. ತುಲಾಸಂಕ್ರಮಣದಂದು ತಲಕಾವೇರಿಯಲ್ಲಿರುವ ಕಾವೇರಿಯ ಉದ್ಗಮಕುಂಡದಲ್ಲಿ ಗಂಗೆ ಆವಿರ್ಭವಿಸುತ್ತಾಳೆ ಎಂಬ ನಂಬಿಕೆ ಉಂಟು.

ಕಾವೇರಿ ಭಾರತದ ದಕ್ಷಿಣದ ತುದಿಯಲ್ಲಿ ಪೂರ್ವ-ಪಶ್ಚಿಮಗಳನ್ನು ವ್ಯಾಪಿಸಿ ಹರಿಯುವ ಪುಣ್ಯನದಿ. ಅಲ್ಲಿಂದ ಉತ್ತರಕ್ಕೆ ಸಾಗಿದಾಗ ಕೃಷ್ಣೆ. ಇನ್ನೂ ಉತ್ತರಕ್ಕೆ ಗೌತಮಿ (ಗೋದಾವರಿ). ಇವು ಮೂರು ದಕ್ಷಿಣಭಾರತದ ಪಶ್ಚಿಮ ತುದಿಯಿಂದ ಪೂರ್ವದ ತುದಿಗೆ ಹರಿದು ಭಾರತದ ಭೂವಿಭಾಗವನ್ನು ಅಡ್ಡವಾಗಿ ವಿಭಾಗಿಸುವ ಸೀಮಾನದಿಗಳು. ಕಾವೇರಿ ಕನ್ನಡದ ನೆಲದಲಿ ಹುಟ್ಟಿ ತಮಿಳುನಾಡಿನಲ್ಲಿ ಕಡಲು ಸೇರಿದರೆ, ಕೃಷ್ಣೆ ಮತ್ತು ಗೋದಾವರಿ ಮಹಾರಾಷ್ಟ್ರದಲ್ಲಿ ಸಹ್ಯಾದ್ರಿಯ ನೆತ್ತಿಯಲ್ಲಿ ಹುಟ್ಟಿ ಆಂಧ್ರದಲ್ಲಿ ಕಡಲು ಸೇರುವಂಥವು. ಗೋದಾವರಿ ಮಹಾರಾಷ್ಟ್ರದಿಂದ ನೇರ ಆಂಧ್ರವನ್ನು ಪ್ರವೇಶಿಸಿದರೆ ಕೃಷ್ಣೆ ನಡುವೆ ಕನ್ನಡದ ನೆಲವನ್ನೂ ಹಾದು ಆಂಧ್ರಕ್ಕೆ ಕಾಲಿಡುತ್ತಾಳೆ.

ಕೃಷ್ಣಾನದಿಯನ್ನೆ ಪುರಾಣಗಳಲ್ಲಿ ಕೃಷ್ಣವೇಣಿ ಎಂದು. ಕೃಷ್ಣವೇಣಾ ಎಂದು ಕೆಲವೊಮ್ಮೆ ಬರಿಯ ವೇಣಾ ಎಂದು ಕರೆದದ್ದುಂಟು.

"ಗೋದಾವರೀ ಕೃಷ್ಣವೇಣೀ
ಕಾವೇರೀ ಚ ಸರಿದ್ವರಾ" (ಭಾರ. ಸಭಾ. 9. 20)

(ಗೋದಾವರಿ, ಕೃಷ್ಣವೇಣಿ ಮತ್ತು ಕಾವೇರಿ ಇವು ದಕ್ಷಿಣಭಾರತದ ಹಿರಿಯ ನದಿಗಳು.)

ತತೋ ವೇಣೀಂ ಸಮಾಸಾದ್ಯ
ತ್ರಿರಾತ್ರೋಪೋಷಿತೋ ಯದಿ ।
ಮಯೂರ ಹಂಸ ಸಂಯುಕ್ತಂ
ವಿಮಾನಂ ಲಭತೇ ನರಃ ॥ (ಭಾರ. ವನ. 85. 32.)

(ಮೂರು ದಿನ ಉಪವಾಸವಿದ್ದು ಶುದ್ಧನಾಗಿ ಕೃಷ್ಣವೇಣಿಯಲ್ಲಿ ಸ್ನಾನ ಮಾಡಿದವನು ನವಿಲು-ಹಂಸಗಳಿಂದ ಕಂಗೊಳಿಸುವ ವಿಮಾನದಲ್ಲಿ ಸ್ವರ್ಗವನ್ನೇರುತ್ತಾನೆ.)

ಗೌತಮರ ಆಶ್ರಮದ ಬಳಿ ಇಳಿದು ಬಂದ ಗಂಗೆಯೆ ಗೋದಾವರಿ. ಗೌತಮರಿಗಾಗಿ ದಕ್ಷಿಣಕ್ಕೆ ಬಂದದ್ದರಿಂದಲೆ ಇವಳು ಗೌತಮಿ. ಅವರ ಆಶ್ರಮದಲ್ಲಿ ಸತ್ತ ಗೋವನ್ನು ಬದುಕಿಸಲೆಂದು ಬಂದದ್ದರಿಂದಲೆ ಗೋದಾವರಿ (ಗೋದ+ವಾರಿ). ಗೋದಾವರಿಯ ಇನ್ನೊಂದು ಹೆಸರು (ವೃದ್ಧಗಂಗೆ).

ಉತ್ತರ ಭಾರತದ ಗಂಗೆಯೇ ದಕ್ಷಿಣಭಾರತದ ಗೋದಾವರಿ ಎನ್ನುವ ಮಾತು ಪುರಾಣಗಳಲ್ಲಿ ಬಂದಿದೆ :

ವಿಂಧ್ಯಸ್ಯ ದಕ್ಷಿಣೇ ಗಂಗಾ
ಗೌತಮೀ ಸಾ ನಿಗದ್ಯತೇ ।

ಉತ್ತರೇ ಸಾಽಪಿ ವಿಂಧ್ಯಸ್ಯ
ಭಾಗೀರಥ್ಯಭಿಧೀಯತೇ ||

(ವಿಂಧ್ಯದ ದಕ್ಷಿಣಭಾಗದಲ್ಲಿ ಹರಿಯುವ ಗಂಗೆಯನ್ನು ಗೌತಮಿ (ಗೋದಾವರಿ) ಎಂದು ಕರೆಯುತ್ತಾರೆ. ವಿಂಧ್ಯದ ಉತ್ತರದಲ್ಲಿ ಹರಿಯುವ ಗಂಗೆಯನು ಭಾಗೀರಥಿ ಎಂದು ಕರೆಯುತ್ತಾರೆ.)

ದಕ್ಷಿಣಭಾರತದ ಹೆಗ್ಗಳಿಕೆಯನ್ನು ವರ್ಣಿಸುವಾಗ ಮಹಾಭಾರತ 'ಗೊದಾವರಿ ಹರಿಯುವ ಪುಣ್ಯಭೂಮಿ ದಕ್ಷಿಣದೇಶ' ಎಂದು ಅಭಿಮಾನದಿಂದ ಉಲ್ಲೇಖಿಸುತ್ತದೆ :

"ಯಸ್ಯಾಮಾಖ್ಯಾಯತೇ ಪುಣ್ಯಾ
ದಿಶಿ ಗೋದಾವರೀ ನದೀ |
ಬಹ್ವಾರಾಮಾ ಬಹುಜಲಾ
ತಾಪಸಾಚರಿತಾ ಶಿವಾ || (ಭಾರ. ವನ. 88 2.)

(ಗೋದಾವರಿಯ ಪುಣ್ಯಜಲ ಹರಿಯುವ ನೆಲ ಎನ್ನುವುದು ದಕ್ಷಿಣ ದಿಕ್ಕಿನ ಹಿರಿಮೆ. ತುಂಬಿ ಹರಿವ ಸಮೃದ್ಧವಾದ ನೀರು, ಸುತ್ತೆಲ್ಲ ಹೂದೋಟಗಳು ; ಉದ್ಯಾನ ಗಳು ; ಕಾಡು ಮೇಡುಗಳು. ಈ ಶುಭಂಕರಿಯಾದ ಗೋದಾವರಿಯನ್ನು ಋಷಿ ಗಳೂ ಬಂದು ಸೇವಿಸುತ್ತಾರೆ.)

ತತೋ ಗೋದಾವರೀಂ ಪ್ರಾಪ್ಯ
ನಿತ್ಯಂ ಸಿದ್ಧನಿಷೇವಿತಾಮ್ |
ಗವಾಮಯನಮಾಪ್ನೋತಿ
ವಾಸುಕೇರ್ಲೋಕಮುತ್ತಮಮ್ | (ಭಾರ. ವನ. 85. 34.)

(ಸದಾ ಕಾಲವೂ ಸಿದ್ಧಪುರುಷರು ಸೇವಿಸುವ ಗೋದಾವರಿಯಲ್ಲಿ ಮಿಂದವನು 'ಗವಾಮಯನ' ಎಂಬ ಯಜ್ಞದ ಫಲವನ್ನು ಪಡೆಯುತ್ತಾನೆ ; ನಾಗಲೋಕದಲ್ಲಿ ಸುಖಭೋಗವನ್ನು ಪಡೆಯುತ್ತಾನೆ.)

ಕೃಷ್ಣೆಯ ಜತೆಗೂಡಿ ಕಡಲು ಸೇರುವ ಇನ್ನೆರಡು ನದಿಗಳು ತುಂಗಭದ್ರೆ ಮತ್ತು ಭೀಮರಥಿ ಅಥವಾ ಭೀಮೆ. ತುಂಗೆಯೇ ಭದ್ರೆಯೊಡನೆ ಸೇರಿಕೊಂಡಾಗ ತುಂಗ ಭದ್ರೆ. ಅವಳು ಕರ್ನಾಟಕದಲ್ಲಿ, ಸಹ್ಯಾದ್ರಿಯಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿದು ಕನ್ನಡದ ತವರಿನಿಂದ ಆಂಧ್ರದ ಅತ್ತೆಮನೆಗೆ ಸಾಗಿ ಅಲ್ಲಿ ಕೃಷ್ಣೆಯೊಡನೆ ಬೆರೆತು ಕಡಲು ಸೇರುತ್ತಾಳೆ. ಭೀಮರಥಿ ಮಹಾರಾಷ್ಟ್ರದಲ್ಲಿ ಸಹ್ಯಾದ್ರಿಯಲ್ಲಿ ಹುಟ್ಟಿ ಕನ್ನಡನಾಡಿನ ದಾರಿಯಲ್ಲಿ ಹರಿದು ಕೊನೆಯಲ್ಲಿ ಕೃಷ್ಣೆಯ ಜತೆಗೂಡಿಯೆ ಕಡಲು

ಸೇರುತ್ತಾಳೆ. ಕೃಷ್ಣೆ ನಡುವಿನಲ್ಲಿ ಹರಿದರೆ ದಕ್ಷಿಣದ ಕವಲು ತುಂಗಭದ್ರೆ; ಉತ್ತರದ ಕವಲು ಭೀಮರಥಿ.

ಭಾಗವತದಲ್ಲಿ ಈ ನದೀಶಾಖೆಗಳ ಉಲ್ಲೇಖವನ್ನು ಕಾಣಬಹುದು :

"ತುಂಗಭದ್ರಾ ಕೃಷ್ಣಾ ಭೀಮರಥೀ ಗೋದಾವರೀ'

(ಭಾಗ. 5. 19. 18.)

(ತುಂಗಭದ್ರೆಯ ಉತ್ತರದಲ್ಲಿ ಕೃಷ್ಣೆ. ಕೃಷ್ಣೆಯ ಉತ್ತರದಲ್ಲಿ ಭೀಮರಥಿ. ಭೀಮರಥಿಗೂ ಉತ್ತರದಲ್ಲಿ ಗೋದಾವರಿ.)

ಮಹಾಭಾರತದಲ್ಲಿ ಕೃಷ್ಣವೇಣಿಯ ಜತೆಯಲ್ಲಿ ಬರುವ ತುಂಗವೇಣಿ ಈ ತುಂಗಭದ್ರೆಯೇ ಇರಬೇಕು.

ತುಂಗವೇಣೀಂ ಮಹಾನದೀಮ್ ।

ವಿದಿಶಾಂ ಕೃಷ್ಣವೇಣೀಂ ಚ...... (ಭಾರ. ಭೀಷ್ಮ. 9. 27.)

ಭೀಮರಥಿಯನ್ನೂ ಕೃಷ್ಣವೇಣಿಯ ಜತೆಗೆ ಭಾರತ ಉಲ್ಲೇಖಿಸುತ್ತದೆ:

"ವೇಣೀ ಭೀಮರಥೀ ಚೈವ

ನದ್ಯೌ ಪಾಪಭಯಾಪಹೇ ।" (ಭಾರ. ವನ. 88. 3.)

(ಕೃಷ್ಣವೇಣಿ ಮತ್ತು ಭೀಮರಥೀ ನದಿಗಳಲ್ಲಿ ಮಿಂದವರಿಗೆ ಪಾಪದ ಭಯವಿಲ್ಲ.)

ದಾಸರ ಮುದ್ರಿಕೆಯ ಮೂರ್ತಿ ಪುರಂದರ ವಿಠಲನ ಪಂಢರಪುರ ಈ ಭೀಮರಥಿಯ ತಡಿಯಲ್ಲಿ ಇದೆ. ಇವಳ ಹುಚ್ಚು ಹೊನಲಿನ ಭೀಮ ಸೌಂದರ್ಯಕ್ಕಾಗಿ ಇವಳನ್ನೂ ಭೀಮೆ ಎಂದೂ ಕರೆಯುತ್ತಾರೆ: "ಭೀಮಾಮೋಘವತೀಂ ತಥಾ" (ಭಾರ. ಭೀಷ್ಮ 9. 22.)

ಪದ್ಯದಲ್ಲಿ ಬಂದ, ಕರ್ನಾಟಕದ ಇನ್ನೊಂದು ನದಿ ಮಲಪಹರಿ. ಮಲಾಪಹರಿಯೆ ಗಾನದ ಮಾತ್ರೆಗಳಿಗೆ ತಕ್ಕಂತೆ ಮಲಪಹರಿಯಾಗಿದ್ದಾಳೆ. ಈ ಮಲಾಪಹೆ (ಈಗಣ ಮಲಪ್ರಭೆ) ಅಪ್ಪಟ ಕರ್ನಾಟಕದ ನದಿ. ಉತ್ತರ ಕರ್ನಾಟಕದ ಅಂಚಿನಲ್ಲಿ ಹುಟ್ಟಿ ಪೂರ್ವವಾಹಿನಿಯಾಗಿ ಹರಿದು ಸಂಗಮದಲ್ಲಿ ಕೃಷ್ಣೆಯನ್ನು ಸೇರಿ, ಕೃಷ್ಣೆಯ ಜತೆಗೆ ಕಡಲನ್ನು ಸೇರುವ ನದಿ. ತುಂಗಭದ್ರೆಯಂತೆ ಮಲಾಪಹೆಯೂ ಕೃಷ್ಣಾನದಿಯ ಶಾಖೆ. ಈ ನದಿಯನ್ನು ನದೀ ಸ್ತೋತ್ರದಲ್ಲಿ ಮಲಹರಿ ಎಂದು ಕರೆದಿದ್ದಾರೆ. "ತುಂಗಭದ್ರಾ ಮಲಹರೀ ವರದಾ ಚ ಕುಮುದ್ವತೀ".

ಮಲಾಪಹಾ ಎನ್ನುವುದು ಗಂಗೆಯ ಹನ್ನೆರಡು ಹೆಸರುಗಳಲ್ಲಿ ಒಂದೂ ಹೌದು. ಇವು ಆ ಹನ್ನೆರಡು ಹೆಸರುಗಳು :

"ನಂದಿನೀ ನಳಿನೀ ಸೀತಾ
ಮಾಲತೀ ಚ ಮಲಾಪಹಾ |
ವಿಷ್ಣುಪಾದಾಬ್ಜ ಸಂಭೂತಾ
ಗಂಗಾ ತ್ರಿಪಥಗಾಮಿನೀ |
ಭಾಗೀರಥೀ ಭೋಗವತೀ
ಜಾಹ್ನವೀ ತ್ರಿದಶೇಶ್ವರೀ ||

ಆದಕೆಂದೆ ದಾಸರು 'ಗಂಗೆ ಮಲಪಹರಿ' ಎಂದು ಇದು ಗಂಗೆಗೂ ವಿಶೇಷಣ ವಾಗುವಂತೆ ಜತೆಜತೆಯಾಗಿಯೇ ಬಳಸಿದ್ದಾರೆ. ಎರಡೂ ಅರ್ಥ ಇಲ್ಲಿ ಸುಸಂಗತವೆ.

ನೇತ್ರಾವತಿ ಕನ್ನಡದಲ್ಲೆ ಹುಟ್ಟಿ ಕನ್ನಡದಲ್ಲೆ ಕಡಲು ಸೇರುವ ನದಿ. ಪಶ್ಚಿಮ ಘಟ್ಟ ದಲ್ಲಿ ಹುಟ್ಟಿ ಪಶ್ಚಿಮ ವಾಹಿನಿಯಾಗಿ ಹರಿದು, ಧರ್ಮಸ್ಥಳದ ಮಂಜುನಾಥನ ಬಳಿ ಸುಳಿದು ಸುಬ್ರಹ್ಮಣ್ಯದ ಕುಮಾರ ಧಾರೆಯನ್ನು ಒಳಗೊಂಡು ಮಂಗಳೂರಿನಲ್ಲಿ ಕಡಲು ಸೇರುವ ತುಳುನಾಡಿನ ನದಿ.

ವಾದಿರಾಜರು ಈ ನದಿಯನ್ನು ಹೀಗೆ ಕೊಂಡಾಡಿದ್ದಾರೆ:

ವರಾಹನಯನಾನಂದ
ಧಾರಾ ನೇತ್ರಾವತೀ ಸರಿತ್ |

(ವರಾಹರೂಪೀ ಭಗವಂತನ ಕಣ್ಣಿನಿಂದ ಹರಿದ ಆನಂದಾಶ್ರುವಿನ ಧಾರೆಯೆ ನೇತ್ರಾವತೀ ನದಿಯಾಯಿತು.)

ಹೀಗೆ ಇವು ಏಳು ದಕ್ಷಿಣ ಭಾರತದ ಸಹ್ಯಾದ್ರಿಯಿಂದ ಹುಟ್ಟಿಬಂದ ನದಿಗಳು. ಇವುಗಳಲ್ಲಿ ಆರು ಪೂರ್ವ ವಾಹಿನಿಗಳಾಗಿ ಬಂಗಾಲಕೊಲ್ಲಿಯನ್ನು ಸೇರಿದರೆ–ನೇತ್ರಾವತಿ ಮಾತ್ರ ಪಶ್ಚಿಮ ವಾಹಿನಿಯಾಗಿ ಪಶ್ಚಿಮ ಸಮುದ್ರವನ್ನೆ ಸೇರುತ್ತದೆ.

ಇನ್ನುಳಿದ ಮೂರು ನದಿಗಳು – ಗಂಗೆ, ಯಮುನೆ ಮತ್ತು ಸರಸ್ವತಿ: ಮೂರು ಹಿಮವಂತನಿಂದ ಇಳಿದು ಬಂದು ಪ್ರಯಾಗದಲ್ಲಿ ಮುಪ್ಪುರಿಗೊಂಡು ಮೇಳವಿಸಿ ಬಂಗಾಲಕೊಲ್ಲಿಯಲ್ಲಿ ಕಡಲು ಸೇರುವ ಉತ್ತರದ ನದಿಗಳು. ವೇದಮಂತ್ರದ ಋಷಿ ಗಳು ಮೊದಲು ಉಲ್ಲೇಖಿಸುವುದು ಈ ಮೂರು ನದಿಗಳನ್ನೆ: "ಇಮಂ ಮೇ ಗಂಗೇ ಯಮುನೇ ಸರಸ್ವತಿ".

ಗಂಗೋತ್ತರಿಯಿಂದ ಬಿಳಿನದಿ ಗಂಗೆ ಹರಿದು ಬಂದರೆ, ಅವಳ ಬಲ ಮಗ್ಗುಲಲ್ಲಿ ಯಮುನೋತ್ತರಿಯಿಂದ ಯಮುನೆ ಇಳಿದು ಬರುತ್ತಾಳೆ. ಯಮುನೆ ಗಂಗೆಯದೇ ಇನ್ನೊಂದು ಕವಲು ಎಂದರೂ ಸರಿಯೆ. ಗಂಗೆ ಹುಚ್ಚು ಹೊನಲಾಗಿ ಕೊಚ್ಚಿ ಹರಿದರೆ ಯಮುನೆ ಕೃಷ್ಣನ ವಿಹಾರಭೂಮಿಯಾದ ಮಥುರಾ ವೃಂದಾವನಗಳ ಬಳಿ

ಸುಳಿದು, ಕೃಷ್ಣ ಪಾದಸ್ಪರ್ಶದಿಂದ ಪಾವನಗೊಂಡ ನೆಲದ ಮೇಲಣ ಮೋಹದಿಂದ ಅದರ ಸುತ್ತೆಲ್ಲ ಗಂಭೀರವಾಗಿ ಸಾವಧಾನದಿಂದ ಹರಿಯುತ್ತಾಳೆ.

ಈ ಇಬ್ಬರ ಜತೆಗೆ ಸರಸ್ವತಿಯೂ ಹಿಮಾಲಯದಿಂದಲೇ ಹರಿದು ಗುಪ್ತ ಗಾಮಿನಿಯಾಗಿ ಮುಂದುವರಿದು ತ್ರಿವೇಣೀಸಂಗಮದಲ್ಲಿ ಗಂಗೆ – ಯಮುನೆಯರ ಜತೆಗೂಡಿ ಕಡಲು ಸೇರುತ್ತಾಳೆ. ಯಮುನೆಯಂತೆಯೆ ಸರಸ್ವತಿಯೂ ಗಂಗೆಯದೇ ಒಂದು ಕವಲು ಎನ್ನುವ ಮಾತೂ ಉಂಟು. ಗಂಗೆಯ ಸಪ್ತಧಾರೆಗಳು ಇವು: ಗಂಗಾ, ಯಮುನಾ, ಸರಸ್ವತೀ, ರಥಸ್ಥಾ, ಸರಯೂ, ಗೋಮತಿ ಮತ್ತು ಗಂಡಕೀ.

ಗಂಗೆಯ ಮಹಿಮೆಯನ್ನು ಪುರಾಣಗ್ರಂಥಗಳು ಅಸದೃಶವಾಗಿ ವರ್ಣಿಸುತ್ತವೆ:

ಪುನಾತಿ ಕೀರ್ತಿತಾ ಪಾಪಂ
ದೃಷ್ಟ್ವಾ ಭದ್ರಂ ಪ್ರಯಚ್ಛತಿ ।
ಅವಗಾಢಾ ಚ ಪೀತಾ ಚ
ಪುನಾತ್ಯಾಸಪ್ತಮಂ ಕುಲಮ್ ॥ (ಭಾರ. ವನ. 85. 93.)

(ಗಂಗೆ ಎಂದು ನುಡಿದರೆ ಪಾಪವೆಲ್ಲ ತೊಳೆದು ಹೋಗುತ್ತದೆ. ಗಂಗಾಜಲವನ್ನು ಕಂಡರೆ ಬದುಕು ಮಂಗಲಮಯವಾಗುತ್ತದೆ. ಗಂಗೆಯಲ್ಲಿ ಮಿಂದರೆ, ಗಂಗೆಯ ನೀರನ್ನು ಕುಡಿದರೆ ಏಳು ತಲೆಮಾರು ಪಾವನವಾಗುತ್ತದೆ.)

"ನ ಗಂಗಾ ಸದೃಶಂ ತೀರ್ಥಂ
ನ ದೇವಃ ಕೇಶವಾತ್ ಪರಃ ॥"

(ಗಂಗೆಗೆ ಮಿಗಿಲಾದ ತೀರ್ಥವಿಲ್ಲ. ನಾರಾಯಣನಿಗೆ ಮಿಗಿಲಾದ ದೇವರಿಲ್ಲ.)

ಕಲಿಯುಗದಲ್ಲೂ ಜನರ ಪಾಪವನ್ನು ತೊಳೆಯಬಲ್ಲ ಶಕ್ತಿಯನ್ನು ಪೂರ್ಣವಾಗಿ ಉಳಿಸಿಕೊಂಡ ಏಕಮಾತ್ರ ನದಿಯೆಂದರೆ ಗಂಗೆ ಎನ್ನುತ್ತದೆ. ಸ್ಕಾಂದದ ಕಾಶೀಖಂಡ: "ಕಲೌ ಗಂಗೈವ ಕೇವಲಮ್". ಭಾರತ ಕೂಡ ಇದನ್ನು ಅನುಮೋದಿಸುತ್ತದೆ: "ಗಂಗಾ ಕಲಿಯುಗೇ ಸ್ಮೃತಾ".

ಗಂಗೆಯಂತೆಯೆ ಯಮುನೆಯನ್ನೂ ಋಷಿಗಳು ಕೊಂಡಾಡುತ್ತಾರೆ:

"ಏಷಾ ಸಾ ಯಮುನಾ ರಾಜನ್
ಮಹರ್ಷಿಗಣಸೇವಿತಾ ।
ನಾನಾಯಜ್ಞಾರ್ಜಿತಾ ಚೈವ
ಪುಣ್ಯಾ ಪಾಪಭಯಾಪಹಾ ॥" (ಭಾರ. ವನ. 125. 25.)

(ಯಮುನೆಯ ಪಾವಿತ್ರ್ಯಕ್ಕೆ ಮನಸೋತು ಮಹರ್ಷಿಗಳೆಲ್ಲ ಇದರ ತಡಿಯಲ್ಲಿ ವಾಸಿಸುತ್ತಾರೆ. ಅನೇಕ ಮಂದಿ ಋಷಿಗಳು, ಕ್ಷತ್ರಿಯರು ಇದರ ತಡಿಯಲ್ಲಿ ಯಜ್ಞ ಯಾಗಗಳನ್ನು ಮಾಡಿದ್ದಾರೆ. ಪುಣ್ಯದ ಧಾರೆಯೆ ಯಮುನೆಯ ನೀರಾಗಿ ಹರಿಯುತ್ತದೆ. ಇಲ್ಲಿ ಮಿಂದವರಿಗೆ ಪಾಪದ ಭಯವಿಲ್ಲ.)

ವೇದಕಾಲದಲ್ಲಿ – ಭಾರತದಲ್ಲಿ ಸಮೃದ್ಧ ಜಲೆಯಾಗಿ ಹರಿಯುತ್ತಿದ್ದ ಸರಸ್ವತಿ ಕ್ರಮೇಣ ಇಂಗುತ್ತ ಮಳಲ ರಾಶಿ ಮಾತ್ರವಾಗಿ ಉಳಿದಳು. ಗುಪ್ತಗಾಮಿನಿಯಾಗಿ ಗಂಗೆಯ ಜತೆ ಸೇರಿದಳು. ಬದರಿಯ ಸಮೀಪದಲ್ಲಿ ಸರಸ್ವತಿಯ ಹೊನಲನ್ನು ನಾವು ಕಾಣಬಹುದು. ಮುಂದೆ ಅದೃಶ್ಯಳಾಗಿ ತ್ರಿವೇಣೀ ಸಂಗಮದಲ್ಲಿ ಮತ್ತೆ ವ್ಯಕ್ತಳಾ–ಗುತ್ತಾಳೆ.

"ದೃಶ್ಯಾದೃಶ್ಯಾ ಚ ಭವತಿ
ತತ್ರತತ್ರ ಸರಸ್ವತೀ" (ಭಾರ. ಭೀಷ್ಮ 6. 50.)

(ಸರಸ್ವತಿ ಕೆಲವೆಡೆ ದೃಶ್ಯಳಾಗಿ, ಕೆಲವೆಡೆ ಅದೃಶ್ಯಳಾಗಿ ಹರಿಯುತ್ತಾಳೆ.)

ಹೀಗೆ ದಕ್ಷಿಣೋತ್ತರದ ನದೀ ದೇವತೆಗಳೆಲ್ಲ ದೇವಾಧಿದೇವನಾದ ನಿನ್ನ ಅಂಘ್ರಿಯನ್ನು ತೊಳೆದು ಸಾವಧಾನದಿಂದ ಪೂಜೆ ಮಾಡುವೆನೆಂಬ ಹಂಬಲದಿಂದ ನಿನ್ನ ಬರವನ್ನು ಕಾದು ನಿಂತಿದ್ದಾರೆ. ಅದಕ್ಕಾಗಿ ಓ ದೇವ, ತಳುವದೆ ಏಳು.

ದುರಿತ ಬಂಧನವನ್ನು ಪರಿಹರಿಸಿದೆಯೊ ಸ್ವಾಮಿ
ದುರಿತ ದುಷ್ಕರ್ಮವನು ದೇವ ಎಂದರೆ ಸುಡುವೆ
ದುರಿತ ತಾಪಕೆ ಚಂದ್ರ ನೀನೆನಿಸಿಕೊಂಡೆಯೋ
ಸಿರಿಪುರಂದರ ವಿಠಲನೆ ‖ 5 ‖

ಇದು ಮೂಲತ: ಅಂತರಂಗದ ಸುಪ್ರಭಾತ ಎನ್ನುವುದನ್ನು ಸ್ಫುಟಪಡಿಸುವ ಈ ಕೊನೆಯ ನುಡಿಯಲ್ಲಿ ದಾಸರು ತಮಗೆ ದೊರೆತ ಈ ದೈವೀ ಅನುಭೂತಿಗಾಗಿ ಭಗವಂತನನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ: ಸ್ವಾಮಿ ದುರಿತ ಬಂಧನವನ್ನು ಪರಿಹರಿಸಿದೆಯೋ.

ನಮ್ಮನ್ನು ತಮಸ್ಸಿನೆಡೆಗೆ ಕೊಂಡೊಯ್ಯುವ ದುರಿತಗಳೇ, ಪಾಪಕರ್ಮಗಳೇ ನಮ್ಮ ಬಾಳಿಗೆ ಕವಿದ ಕತ್ತಲು. ಈ ಕತ್ತಲ ಕೋಣೆಯ ಬಂಧನವೆ ಸಂಸಾರ. ನನ್ನ ಪಾಲಿಗಂತು ಇದು ಭೂತಕಾಲದ ಕಹಿನೆನಪು; ಮುಗಿದ ಕಥೆ. ಏಕೆಂದರೆ ಕತ್ತಲ ಸೆರೆಯಲ್ಲಿ ತಳ್ಳಿದ ಸ್ವಾಮಿ ನೀನೆ. ಈಗ ನೀನೆ ಸ್ವತಃ ಸೆರೆಯಿಂದ ಬಿಡಿಸಲು ಒಲಿದು ಬಂದಿರುವೆ. ಬಂಧನದಲ್ಲಿಟ್ಟ ಸ್ವಾಮಿಯೆ ಬಿಡಿಸಬಯಸಿದಾಗ ಬಂಧನದ ಭಯವೇನು?

ನನ್ನ ಬದುಕಿನ ಕತ್ತಲೆಯನ್ನು ನೀನು ಪರಿಹರಿಸಿದೆ. ಬಿಡುಗಡೆಯ ಸುಪ್ರಭಾತದ ಬೆಳಕು ದಿಗಂತದಲ್ಲಿ ಕಾಣಿಸುತ್ತಿದೆ.

ಈ ಸಾಲಿನಲ್ಲಿ ಒಂದು ಕಾಕು ಧ್ವನಿಯೂ ಇದೆ. ಬಿಡುಗಡೆಯ ಕಾತರತೆಯಿಂದ ಭಗವಂತನನ್ನು ಪ್ರೀತಿಯಿಂದ ಹಂಗಿಸಿ ಒತ್ತಾಯಿಸುವ ಸಲುಗೆಯ ಕಾಕು.

ನಾನು ಇನ್ನೊಂದು ಕಾತರತೆಯಿಂದ ಅಹರ್ನಿಶಿ ನಿನ್ನನ್ನು ಆರಾಧಿಸುತ್ತಿರುವೆ; ಈ ದುರಿತ ಬಂಧನದ ಕತ್ತಲ ಸೆರೆಯನ್ನು ಪರಿಹರಿಸು ಎಂದು ಪ್ರಾರ್ಥಿಸುತ್ತಿರುವೆ. ಆದರೆ ನೀನು ಪರಿಹರಿಸಿದೆಯೋ ? ಸ್ವಾಮಿ, ಏಕೆ ಹೀಗೆ ? ಇನ್ನಾದರೂ ತಳುವದೆ ಕಣ್ಣು ತೆರೆದು ನೋಡು.

ನನ್ನ ಅಪರಾಧಗಳು ಬೆಟ್ಟದಷ್ಟಿರುವಾಗ ಇದರಿಂದ ಬಿಡುಗಡೆ ಹೇಗೆ ಸಾಧ್ಯ ಎನ್ನುವ ಭಯವಂತು ನನಗಿಲ್ಲ. ಏಕೆಂದರೆ 'ದುರಿತದುಷ್ಕರ್ಮವನು ದೇವ ಎಂದರೆ ಸುಡುವೆ'.

ದೇವ ಎಂದರೆ ನಂಬಿದವರಿಗೆ ಸದ್ಗತಿ ನೀಡುವವ (ದಿವು ಗತೌ). ಓ ದೇವನೆ, ನೀನೆ ಎನಗೆ ಗತಿ ಎಂದು ಶರಣಾದವನ ದುರಿತ – ದುಷ್ಕರ್ಮವನೆಲ್ಲ ನೀನು ಕ್ಷಣಾರ್ಧದಲ್ಲಿ ಸುಡುವೆ. ನನ್ನ ದುಷ್ಕರ್ಮಗಳು, ಅದರಿಂದ ನಾನು ಬೆಳೆಸಿದ ದುರಿತದ ಬೆಟ್ಟ ಬಹಳ ದೊಡ್ಡದಿರಬಹುದು. ಆದರೆ ನಿನ್ನ ನಾಮದ ಮಹಿಮೆ ಅದಕಿಂತಲು ದೊಡ್ಡದು. ನಿನ್ನ ನಾಮಸ್ಮರಣೆಗೂ ಕರಗದಷ್ಟು ಪಾಪವನ್ನು ಮಾಡುವುದು ಯಾರಿಂದಲೂ ಸಾಧ್ಯವಿಲ್ಲ.

"ನಾರಾಯಣೋ ನಾಮ ನರೋ ನರಾಣಾಂ
ಪ್ರಸಿದ್ಧ ಚೋರಃ ಕಥಿತಃ ಪೃಥಿವ್ಯಾಮ್ ।
ಅನೇಕ ಜನ್ಮಾರ್ಜಿತ ಪಾಪಸಂಚಯಂ
ದಹತ್ಯಶೇಷಂ ಸ್ಮೃತಮಾತ್ರ ಏವ ||"

(ಈ ನಾರಾಯಣನೊಬ್ಬ ಜಗತ್‌ಪ್ರಸಿದ್ಧನಾದ ಮಹಾಕಳ್ಳ. ನಾವು ನೂರಾರು ಜನ್ಮಗಳಲ್ಲಿ ಕಷ್ಟಪಟ್ಟು ಕೂಡಿಟ್ಟ ಪಾಪರಾಶಿಯನ್ನೆಲ್ಲ ಸ್ಮರಣ ಮಾತ್ರದಿಂದ ಇವನು ಸುಟ್ಟು ಬಿಡುತ್ತಾನೆ.)

ಗೋವಿಂದಸ್ಮರಣಂ ಪುಂಸಾಂ
ಪಾಪರಾಶಿಮಹಾಚಲಮ್ ।
ಅಸಂಶಯಂ ದಹತ್ಯಾಶು
ತೂಲರಾಶಿಮಿವಾನಲಃ ||"

(ಹತ್ತಿಯ ರಾಶಿಯನ್ನು ಒಂದು ಬೆಂಕಿಯ ಕಿಡಿ ಹೇಗೆ ಹಾಗೆ ಪಾಪದ ಹಿರಿ ಬೆಟ್ಟವನ್ನು ಗೋವಿಂದನ ನಾಮಸ್ಮರಣೆ ಕ್ಷಣದಲ್ಲಿ ಸುಟ್ಟುಬಿಡುತ್ತದೆ. ಇದಕ್ಕೆ ಸಂಶಯ ಬೇಡ.)

ದುರಿತಕ್ಕೆ ನೀನು ಬೆಂಕಿ. ಆದರೆ ದುರಿತವೇ ಮರುಭೂಮಿಯ ಸುಡುಬಿಸಿಲಾಗಿ ನಮ್ಮನ್ನು ಕಾಡತೊಡಗಿದಾಗ ಅಂಥ ದುರಿತ ತಾಪಕೆ ನೀನು ಚಂದ್ರನಾಗಿ ಬಂದು ತಂಪೆರೆದೆಯೋ ಸ್ವಾಮಿ.

ಇಲ್ಲಿಯೂ ಹಿಂದಿನಂತೆ ಕಾಕುಧ್ವನಿ ಸ್ಪಷ್ಟ; ಇಂಥ ತಾಪದಲ್ಲಿ ಸಿಕ್ಕು ನಿನ್ನ ಭಕ್ತ ದಿಕ್ಕುತೋಚದವನಾದಾಗಲಾದರೂ ನೀನು ತಂಪೆರೆದು ಚಂದ್ರ ಎನಿಸಿ ಕೊಂಡೆಯೋ? ಏಕೆ ನಿನಗಿನ್ನೂ ಕರುಣೆ ಬರಲಿಲ್ಲ. ಸೂರ್ಯನಾಗಿ ಬಾ; ದುರಿತದ ಕತ್ತಲು ಕಳೆದು ಬೆಳಕು ಹರಿಸು. ಚಂದ್ರನಾಗಿ ಬಾ; ದುರಿತ ತಾಪಕ್ಕೆ ನಿನ್ನ ಕರುಣೆಯ ಬೆಳದಿಂಗಳ ತಂಪನ್ನೆರೆ.

ಹೊರಗಿನ ಹಗಲಲ್ಲಿ ಸೂರ್ಯನಿದ್ದರೂ ಚಂದ್ರನಿಲ್ಲ. ಆದರೆ ಒಳಬಗೆಯಲ್ಲಿ ಸುಪ್ರಭಾತವಾದಾಗ ಸೂರ್ಯ – ಚಂದ್ರರಿಬ್ಬರೂ ಬೆಳಗುತ್ತಿರುತ್ತಾರೆ. ಏಕೆಂದರೆ ಭಗವಂತ 'ಕೋಟಿ ಸೂರ್ಯಸಮಪ್ರಭ'ನೂ ಹೌದು; 'ಅನಂತ ಚಂದ್ರಾಧಿಕ–ಕಾಂತಸನ್ಮುಖ'ನೂ ಹೌದು.

ಅವನು ಆದಿತ್ಯವರ್ಣನೂ ಹೌದು:

"ಆದಿತ್ಯವರ್ಣಂ ತಮಸಃ ಪರಸ್ತಾತ್"
"ಶಶಿವರ್ಣಂ ಚತುರ್ಭುಜಮ್"

ಅದರಿಂದಲೇ ಆಚಾರ್ಯ ಮಧ್ವರು ಭಗವಂತನನ್ನು "ಆತ್ಮಭಾಸ್ಕರ" ಎಂದೂ, "ಈಶಚಂದ್ರಮಾ" ಎಂದೂ ಕರೆದರು.

ಹೀಗೆ ಭಗವದ್ದರ್ಶನದ ಸುಪ್ರಭಾತದಲ್ಲಿ ಸೂರ್ಯ – ಚಂದ್ರರಿಬ್ಬರನ್ನೂ ಕಂಡ ದಾಸರು – ಅವರೇ ವೆಂಕಟಗಿರಿಯ ಶ್ರೀನಿವಾಸ – ಅವರೇ ತನ್ನ ಆರಾಧ್ಯ ಬಿಂಬ ಮೂರ್ತಿ ಪುರಂದರ ವಿಠಲ ಎನ್ನುತ್ತಾರೆ: "ಸಿರಿ ಪುರಂದರ ವಿಠಲನೆ, ಏಳಯ್ಯಾ ಬೆಳಗಾಯಿತು".

ಸಿರಿಯ ನಿವಾಸನಾದ ಪುರಂದರ ವಿಠ್ಠಲ: ಹೀಗೆ ತಿರುಪತಿಯ ಶ್ರೀನಿವಾಸ ಮತ್ತು ಪಂಢರಪುರದ ವಿಠ್ಠಲ ಇಬ್ಬರೂ ಈ ಮುದ್ರಿಕೆಯ ಮಾತಿನಲ್ಲಿ ಅಡಕ ಗೊಂಡಿದ್ದಾರೆ.

ಈ ಪದ್ಯದ ಸೊಲ್ಲುಗಳ ಸಂಖ್ಯೆಯನ್ನು ಎರಡು ಬಗೆಯಿಂದ ನಿರೂಪಿಸಬಹುದು. ಐದು ಸೊಲ್ಲುಗಳು ಎನ್ನುವುದು ಒಂದು ಪಕ್ಷ. ಹನ್ನೊಂದು ಸೊಲ್ಲುಗಳು ಎನ್ನುವುದು ಇನ್ನೊಂದು. ಐದು ಸೊಲ್ಲುಗಳು ಹೇಗೆ ಎನ್ನುವುದನ್ನು ಮೊದಲು ನೋಡೋಣ.

ಈ ಪದ್ಯಗಳು ಬಹ್ವಂಶ ವಾರ್ಧಕ ಷಟ್ಪದಿಯಲ್ಲಿವೆ. (1 – 2 ಮತ್ತು 4 5 ನೆಯ ಚರಣಗಳಲ್ಲಿ 5 ಮಾತ್ರೆಯ ನಡೆಯ 20 ಮಾತ್ರೆಗಳು. 3 ಮತ್ತು 6ನೆಯ ಚರಣಗಳಲ್ಲಿ 20+10 ಮಾತ್ರೆಗಳು ಮತ್ತೆ ಕೊನೆಗೊಂದು ಗುರು.) ಒಟ್ಟು ಪದ್ಯದಲ್ಲಿ ಮೂರು ಕಡೆ ಮಾತ್ರ ಈ ನಿಯಮಕ್ಕೆ ಕಿಂಚಿತ್ತು ಭಂಗ ಬಂದಿದೆ : (1) "ಕಾದಿ ಹಿರಣ್ಯಕನ ಕರುಳ" ಇಲ್ಲಿ 10 ಮಾತ್ರೆಗಳ ಬದಲಿಗೆ 12 ಮಾತ್ರೆಗಳು ಬಂದಿವೆ. (2) "ಭೇದಿಸಿ ಭೂಮಿಯ ತ್ರಿ" ಇಲ್ಲಿ ಒಟ್ಟು ಮಾತ್ರೆಗಳು ಹತ್ತೇ ಆದರೂ ಐದು ಮಾತ್ರೆಗಳ ಗಣದ ನಡೆಯಿಲ್ಲ. (3) "ಶಂಬರಾರಿಪಿತನೆ ಏಳು." ಇಲ್ಲಿ ಕೊನೆಯ ಅಕ್ಷರದ ಮೊದಲು 10 ಮಾತ್ರೆಗಳ ಬದಲು 11 ಮಾತ್ರೆಗಳಿವೆ.

ಗಾನಪ್ರಧಾನವಾದ ರಚನೆಯಲ್ಲಿ ಇಂಥದು ತೀರ ಸಹಜ. ಅಲ್ಲದೆ ಇವನ್ನು ವಾರ್ಧಕದ ನಡೆಗೆ ಹೊಂದಿಸುವುದೂ ಸಾಧ್ಯ. ಮೊದಲ ಪದ್ಯದಲ್ಲಿ 'ಕಾದಿ ಹಿರಣ್ಯಕನ ಕರುಳ' ಎನ್ನುವ ಬದಲು 'ಕಾದಿ ಹಿರಣ್ಯನ ಕರುಳ ಎಂದು ಪಾಠವಿದ್ದರೆ, ರೇಫವನ್ನು ಶಿಥಿಲದ್ವಿತ್ವದಿಂದ ಲಘುವಾಗಿ ಉಚ್ಚರಿಸಿದರೆ ಅದನ್ನು 10 ಮಾತ್ರೆಗಳಿಗೆ ಅಳವಡಿಸಬಹುದು. ಹಾಗೆಯೇ "ಭೇದಿಸಿ ಭೂಮಿಯ ತ್ರಿ"– ಎನ್ನುವ ಬದಲು "ಭೇದಿಸುತ ಭೂಮಿಯ ತ್ರಿ" ಎಂದು ಪಾಠವಿದ್ದರೆ, ಮತ್ತು ಯಕಾರವನ್ನು ಶಿಥಿಲ–ದ್ವಿತ್ವದಿಂದ ಲಘುವೆಂದು ಪರಿಗಣಿಸಿದರೆ ಇಲ್ಲೂ ಐದು ಮಾತ್ರೆಯ ನಡೆಯೆ ಬರುತ್ತದೆ. "ಶಂಬರಾರಿಪಿತನೆ, ಏಳು" ಎನ್ನುವುದನ್ನು ಛಂದಸ್ಸಿನ ನಡೆಗೆ ಸರಿಯಾಗಿ ಎರಡು ರೀತಿಯಿಂದ ಪಠಿಸಬಹುದು. "ಶಂಬರಾರಿಪಿತನೇಳು" ಅಥವಾ "ಶಂಬರರಿಪಿತನೆ ಏಳು" ಎರಡೂ ಬಗೆಯಲ್ಲಿ ಮಾತ್ರೆಯ ಲೆಕ್ಕ, ಛಂದಸ್ಸಿನ ನಡೆ ಸುಸಂಗತವಾಗುತ್ತದೆ. ಶಂಬರಾರಿ ಇದ್ದದ್ದು ಕಾವ್ಯದ ಲಯಕ್ಕಾಗಿ ಹ್ರಸ್ವಗೊಂಡು ಶಂಬರರಿ ಆಗುವುದು ಅಸಹಜವೇನಲ್ಲ. ಇದೇ ಹಾಡಿನಲ್ಲಿ ಮುಂದೆ 'ಮಲಾಪಹಾರಿ' ಲಯದ ಸೊಬಗಿಗಾಗಿ 'ಮಲಪಹರಿ' ಆದಂತೆ. ಕುಮಾರವ್ಯಾಸನ ವೀರನಾರಾಯಣ "ವೀರನಾರಯಣ" ಆದಂತೆ.

ಹೀಗೆ ಇದು ಷಟ್ಪದಿಯ ರಚನೆಯೆಂದಾದರೆ, ಮೊದಲನೆಯ ಅರ್ಧವಾರ್ಧಕವನ್ನು ಅನುಪಲ್ಲವಿ ಎಂದು ತೆಗೆದುಕೊಂಡರೆ ಮತ್ತೆ ಉಳಿಯುವುದು ವಾರ್ಧಕದ ಐದು ಸೊಲ್ಲುಗಳು.

ಪೃಥಿವಿ–ಅಪ್–ತೇಜಸ್ಸು–ವಾಯು ಆಕಾಶಗಳೆಂಬ ಪಂಚಭೂತದಲ್ಲಿ, ಗಂಧರಸ ರೂಪ–ಸ್ಪರ್ಶ–ಶಬ್ದಗಳೆಂಬ ಪಂಚತನ್ಮಾತ್ರೆಗಳಲ್ಲಿ, ಮೂಗು–ನಾಲಗೆ–ಕಣ್ಣು–ತೊಗಲು–ಕಿವಿಗಳೆಂಬ ಪಂಚಜ್ಞಾನೇಂದ್ರಿಯಗಳಲ್ಲಿ, ಬಾಯಿ–ಕೈ–ಕಾಲು–ಪಾಯು–ಉಪಸ್ಥಗಳೆಂಬ ಪಂಚಕರ್ಮೇಂದ್ರಿಯಗಳಲ್ಲಿ, ಮನಸ್ಸು–ಬುದ್ಧಿ–ಅಹಂಕಾರ–ಚಿತ್ತ–ಚೇತನಾ ಎಂಬ ಪಂಚವಿಧ ಅಂತಃಕರಣದಲ್ಲಿ, ಪ್ರಾಣ–ಅಪಾನ–ವ್ಯಾನ–ಉದಾನ–ಸಮಾನರೆಂಬ ಪಂಚಪ್ರಾಣರಲ್ಲಿ ತುಂಬಿರುವ, ಪಂಚರಾತ್ರ ಪ್ರತಿಪಾದ್ಯನಾದ ವಾಸು

ದೇವ – ಸಂಕರ್ಷಣ – ಪ್ರದ್ಯುಮ್ನ – ಅನಿರುದ್ಧ – ನಾರಾಯಣನೆಂಬ ಪಂಚರೂಪಿ ಪರಮಾತ್ಮನನ್ನು ಅನುಸಂಧಾನ ಮಾಡುವ ಹಿನ್ನೆಲೆಯೇ ಈ ಐದರ ಸಾಂಖ್ಯದರ್ಶನ.

ಪಂಚರೂಪಿ ನಾರಾಯಣ ನಮ್ಮನ್ನು ಪಂಚತ್ವ (ಮೃತ್ಯು ಬಂಧನ)ದಿಂದ ಅಮೃತತತ್ವದೆಡೆಗೆ ಕೊಂಡೊಯ್ಯಲಿ ಎಂಬ ಅನುಸಂಧಾನ ನಮ್ಮದಾಗಬೇಕು.

ಇನ್ನು ಈ ಹಾಡಿನಲ್ಲಿ ಹನ್ನೊಂದು ಸೊಲ್ಲುಗಳು ಎಂಬ ಪಕ್ಷವನ್ನು ಗಮನಿಸೋಣ: ಈ ಪಕ್ಷದಲ್ಲಿ ಇದು ಷಟ್‌ಪದಿಯಲ್ಲ; ಚೌಪದಿ. ಷಟ್‌ಪದಿಯ 3 ಮತ್ತು 6ನೆಯ ಪಾದಗಳ 20 ಮಾತ್ರೆಗಳ ಅನಂತರದ 12 ಮಾತ್ರೆಗಳ ಪಾದಖಂಡ ಇಲ್ಲಿ ನಾಲ್ಕನೆಯ ಚರಣವಾಗಿ ಒಂದೊಂದು ಷಟ್‌ಪದಿಯೂ ಎರಡೆರಡು ಚೌಪದಿಗಳಾಗುತ್ತವೆ. ಈ ಪಕ್ಷಕ್ಕೆ ಮೂಲದ ರಚನೆಯಲ್ಲಿ ಒಂದು ಬೆಂಬಲ ಉಂಟು. ವಾಸ್ತವವಾಗಿ ಇದು ಷಟ್‌ಪದಿಯಾಗಿದ್ದರೆ ಆರು ಚರಣಗಳಲ್ಲಿ ಏಕರೂಪವಾದ ದ್ವಿತೀಯಾಕ್ಷರ ಪ್ರಾಸ ಇರುವುದು ಹೆಚ್ಚು ಸಹಜ. ಆದರೆ ಇಲ್ಲಿ ಮೊದಲ ಎರಡು ಷಟ್‌ಪದಿಗಳನ್ನು ಬಿಟ್ಟರೆ ಮುಂದಿನ ಪದ್ಯಗಳಲ್ಲಿ ಮೂರು ಮೂರು ಸಾಲಿಗೆ ಪ್ರಾಸ ಬದಲಾಗುತ್ತದೆ. ಅಷ್ಟೆ ಅಲ್ಲ, ಕೊನೆಯ ಪದ್ಯದ ಒಂದೆಡೆ (ಭೀಮರಥಿ ನೇತ್ರಾವತಿ ಎಂಬಲ್ಲಿ) ಬಿಟ್ಟು ಉಳಿದೆಲ್ಲ ಕಡೆ, ಷಟ್‌ಪದಿಯಾದರೆ ಮೂರನೆಯ ಚರಣದ ಅನುವೃತ್ತ ಭಾಗವಾಗಬೇಕಾದ ಕೊನೆಯ 12 ಮಾತ್ರೆಗಳ ಪಾದಖಂಡದಲ್ಲಿ – ಪ್ರತ್ಯೇಕಪಾದವೆಂಬಂತೆ ನಿಯತವಾಗಿ ದ್ವಿತೀಯಾಕ್ಷರ ಪ್ರಾಸವನ್ನು ಉಳಿಸಿಕೊಳ್ಳಲಾಗಿದೆ. ಆದ್ದರಿಂದ ಅರ್ಧವಾರ್ಧಕವೆ ಇಲ್ಲಿ ಒಂದು ಪೂರ್ಣ ಚೌಪದಿಯಾಗುತ್ತದೆ. ಮೊದಲ ಮೂರು ಪಾದಗಳಲ್ಲಿ 20 ಮಾತ್ರೆಗಳು, ಕೊನೆಯ ಪಾದದಲ್ಲಿ 12 ಮಾತ್ರೆಗಳು ಹೀಗಿದೆ. ಈ ಚೌಪದಿಯ ಮಾತ್ರಾಕ್ರಮ ಈ ಪಕ್ಷದಲ್ಲಿ ಅನುಪಲ್ಲವಿ ಎಂದು ಪರಿಗಣಿಸಿದ ಮೊದಲ ಅರ್ಧವಾರ್ಧಕವೂ ಒಂದು ಪೂರ್ಣ ಸೊಲ್ಲೆ ಆಗುವುದರಿಂದ ಈ ಹಾಡಿನಲ್ಲಿ ಒಟ್ಟು ಹನ್ನೊಂದು ಸೊಲ್ಲುಗಳಾಗುತ್ತವೆ. ಇದು ಇನ್ನೊಂದು ಬಗೆಯ ಸಾಂಖ್ಯದರ್ಶನ.

ಐದು ಕರ್ಮೇಂದ್ರಿಯಗಳು; ಐದು ಜ್ಞಾನೇಂದ್ರಿಯಗಳು ಮತ್ತು ಅಂತಃಕರಣ ಈ ಹನ್ನೊಂದರ ಬೆಳಕು ಒಳಬಗೆಯ ಬೆಳಕು; ಒಳಮನೆಯ ಬೆಳಕು. ಇದೇ ಅಧ್ಯಾತ್ಮದ ಸುಪ್ರಭಾತ.

ಈ ಹನ್ನೊಂದು ಇಂದ್ರಿಯಗಳ ಗುಂಪೇ ಜೀವನ ಲಿಂಗದೇಹ. ಅಲ್ಲಿ ಬೆಳಕು ಮೂಡುವುದೇ ಜೀವನ್ಮುಕ್ತಿ. ಈ ಹನ್ನೊಂದು ಬೆಳಕನ್ನು ನೀಡುವ ಭಗವಂತನ ರೂಪಗಳೂ ಹನ್ನೊಂದು: 'ಶಕ್ತಿ, ಪ್ರತಿಷ್ಠಾ, ಸಂವಿತ್, ಸ್ಫೂರ್ತಿ, ಪ್ರವೃತ್ತಿ, ಕಲಾ, ವಿದ್ಯಾ, ಮತಿ, ನಿಯತಿ, ಮಾಯಾ ಮತ್ತು ಕಾಲ.

ಏಕಾದಶ ರುದ್ರರನ್ನು ನಿಯಂತ್ರಿಸುವ, ತಾನು ಹನ್ನೆರಡನೆಯ ಆದಿತ್ಯನಾಗಿ ಏಕಾದಶ ಆದಿತ್ಯರನ್ನು ನಿಯಂತ್ರಿಸುವ, ಭಗವಂತನ ಏಕಾದಶ ಶಕ್ತಿಗಳು ನಮ್ಮ ಏಕಾದಶೇಂದ್ರಿಯಗಳನ್ನು ಬೆಳಗಿಸಲಿ; ಜಾಗೃತಗೊಳಿಸಲಿ. ★

ಭಗವಂತನಿಗೆ ಸ್ವಾಗತ

ಬಾರಯ್ಯ ವೆಂಕಟರಮಣ ಭಕ್ತರ ನಿಧಿಯೆ || ಪಲ್ಲವಿ ||

ತೋರಯ್ಯ, ನಿನ್ನ ದಯೆ ತೋಯಜಾಂಬಕನೆ || ಅನು ಪಲ್ಲವಿ ||

ವೇದಗೋಚರ ಬಾರೋ
ಆದಿಕಚ್ಛಪ ಬಾರೋ ।
ಮೋದಸೂಕರ ಬಾರೋ
ಸದಯ ನರಸಿಂಹ ಬಾರೋ || ೧ ||

ವಾಮನ-ಭಾರ್ಗವ ಬಾರೋ
ರಾಮ-ಕೃಷ್ಣನೆ ಬಾರೋ ।
ಪ್ರೇಮದ ಬುದ್ಧನೆ ಬಾರೋ
ಸ್ವಾಮಿ ಕಲ್ಕಿಯೆ ಬಾರೋ || ೨ ||

ಅರವಿಂದನಾಭ ಬಾರೋ
ಸುರರ ಪ್ರಭುವೆ ಬಾರೋ ।
ಪುರುಹೂತವಂದ್ಯ ಬಾರೋ
ಪುರಂದರ ವಿಠಲ ಬಾರೋ || ೩ ||

ಒಬ್ಬರು ಮನೆ ಕಟ್ಟಿಸುತ್ತಾರೆ. ಪ್ರೀತಿಯಿಂದ ಕಟ್ಟಿದ ಮನೆ. ಚೆಂದದ ಮನೆ. ಇನ್ನು ಒಕ್ಕಲಾಗಬೇಕು, ಮನೆಯ ಯಜಮಾನ ಯೋಚಿಸುತ್ತಾನೆ: ಯಾರಾದರೂ ದೊಡ್ಡವರನ್ನು ಕರೆಯಬೇಕು; ಅವರ ಪಾದಧೂಳಿ ಮನೆಗೆ ಬೀಳಬೇಕು.

ಪುರಂದರದಾಸರೂ ಒಂದು ಮನೆ ಕಟ್ಟಿದ್ದಾರೆ. ರತ್ನಪಡಿ ವ್ಯಾಪಾರಿಯ ಹಳೆಯ ಮನೆಯನ್ನು ಕೆಡವಿ ಹೊಸತಾಗಿ ಕಟ್ಟಿಸಿದ ಭಕ್ತಿಯ ಮಹಡಿಮನೆ. ಕಟ್ಟುತ್ತ ಕಟ್ಟುತ್ತ ತಿಳಿಯಿತು: ಇದರ ಯಜಮಾನ ತಾನಲ್ಲ; ತಾನು ಬರಿಯ ಒಕ್ಕಲು. ಮನೆಯ ಯಜಮಾನ ಬರದೆ ಇದ್ದರೆ ಕಟ್ಟಿ ಏನು ಪ್ರಯೋಜನ? ಅವನು ಬರಬೇಕು. ಬಂದು ಈ ಹೊಸಮನೆಯನ್ನು ಕಾಣಬೇಕು. ಕಂಡು ಮೆಚ್ಚಿಕೊಳ್ಳಬೇಕು. ಅದಕ್ಕಾಗಿ ದಾಸರು ತನ್ನ ಮನೆಯ ದಣಿಯಾದ ಭಗವಂತನನ್ನು ಇತ್ತ ಬರುವಂತೆ ಕರೆಯುತ್ತಾರೆ:

ಬಾರಯ್ಯ ವೆಂಕಟರಮಣ, ಭಕ್ತರ ನಿಧಿಯೆ,
ತೋರಯ್ಯ ನಿನ್ನ ದಯೆ ತೋಯಜಾಬಕನೆ

ಬಾರಯ್ಯ ನನ್ನ ಮನೆಗೆ; ನಿನ್ನದೇ ಮನೆಗೆ. ನಿನಗಾಗಿ ಕಾದಿರುವ ಹನ್ನೊಂದು ಬಾಗಿಲಮನೆಗೆ:

ಪುರಮೇಕಾದಶದ್ವಾರಂ
ಅಜಸ್ಯಾವಕ್ರ ಚೇತಸಃ। (ಕಠ 2. 2. 1.)

(ಈ ಪುರಕ್ಕೆ ಹನ್ನೊಂದು ಬಾಗಿಲು: ಕಣ್ಣು ಎರಡು, ಕಿವಿ ಎರಡು, ಮೂಗಿನ ಹೊರಳೆ ಎರಡು, ಬಾಯಿ, ಹೊಕ್ಕಳು, ಗುದದ್ವಾರ, ಉಪಸ್ಥ ಮತ್ತು ನೆತ್ತಿಯ ಸಹಸ್ರಾರದ ತುದಿ. ಇದು ನಮ್ಮ ಮನೆಯಲ್ಲ. ಇದರೊಳಗಿದ್ದೂ ಹುಟ್ಟದ, ಅಜ್ಞಾನ ತಟ್ಟದ ಭಗವಂತನ ಮನೆ.)

ಇಂಥ ನಿನ್ನ ಮನೆಗೆ ನೀನು ಬರಬೇಕು; ಬಂದು ನೆಲಸಬೇಕು. "ಬಾರಯ್ಯ ವೆಂಕಟರಮಣ", ನೀನು ಈ ವೇಂಗಡದ ಒಡೆಯ. ಅದರಿಂದ ವೆಂಕಟರಮಣ. ವೆಂಕಟಾಚಲದಲ್ಲಿ ನೆಲಸಿದ ಜಗತ್ತಿನ ರಮಣ. ಅದರಿಂದಲೂ ವೆಂಕಟರಮಣ. ವೆಂಕಟಗಿರಿಯಲ್ಲಿ ನೆಲಸಿದ ಮೂಜಗದ ಸುಂದರ.

ದಾಸರ ಸಲುಗೆಯ ನಿಟ್ಟಿನಲ್ಲಿ ನೋಡಿದಾಗ ಇವು ಬೇರೆ ಬೇರೆ ಹೆಸರುಗಳೂ ಹೌದು: ಬಾರಯ್ಯ ವೆಂಕಟ; ಬಾರಯ್ಯ ರಮಣ.

ಊರಿನ ಪ್ರಮುಖರನ್ನು ಊರಿನ ಹೆಸರಿನಿಂದಲೇ ಕರೆಯುತ್ತಾರೆ. ಕೇಕಯ ದೇಶದ ರಾಜಕುಮಾರರು ಕೇಕಯರು. ಮದ್ರದೇಶದವರು ಮದ್ರರು. ಪಂಚಾಲ ದವರು ಪಂಚಾಲರು. ಹಾಗೆ ವೆಂಗಡದಲ್ಲಿ ನೆಲಸಿದ್ದರಿಂದ ನೀನೆ ವೆಂಕಟನಾದೆ: "ಬಾರಯ್ಯ ವೆಂಕಟ".

ನೀನು ಸ್ವರಮಣ. ಸ್ವಯಂ ಆನಂದಮಯ; ನಿನ್ನ ಆನಂದಕ್ಕೆ ಬಾಹ್ಯ ವಿಷಯಗಳ ನೆರವು ಬೇಡ. ಉಳಿದವರ ಆನಂದ ನಿನ್ನದೇ ಕೊಡುಗೆ. ಎಲ್ಲರನ್ನೂ ರಮಿಸುವವ ನೀನೊಬ್ಬನೆ. ಅದರಿಂದ ನಿಜವಾದ ರಮಣ ನೀನೊಬ್ಬನೆ: "ಬಾರಯ್ಯ ರಮಣ". ಬಾರಯ್ಯ ಜಗತ್ತಿನ ರಮಣ. ಬಾರಯ್ಯ ನನ್ನ ರಮಣ – ನಿನ್ನದೇ ಆದ ನನ್ನ ಒಳಮನೆಗೆ.

ಒಮ್ಮೆ ಬಂದೆಯೆಂದರೆ ಮತ್ತೆ ನಿನ್ನನ್ನು ನಿಧಿಯಂತೆ ಜೋಪಾನವಾಗಿ ಉಳಿಸಿ ಕೊಳ್ಳುವ ಆಸೆ ಉಂಟು; ಆ ಭರವಸೆಯೂ ಉಂಟು. ಅದಕೆಂದೆ "ಬಾರಯ್ಯ ಭಕ್ತರ ನಿಧಿಯೆ".

ನೀನು ಎಲ್ಲರ ಹೃದಯದೊಳಗೂ ಹೂತಿರುವ ನಿಧಿ. ಆದರೆ ಒಳಗೇ ಇರುವ ಈ ಕೊಪ್ಪರಿಗೆಯನ್ನು ಅರಿತವರು ಎಷ್ಟು ಮಂದಿ? ಒಳಗೇ ಇರುವ ಸಂಪತ್ತಿನ ನೆಲೆ ಯನ್ನು ಮರೆತು ಬಡತನದಲ್ಲಿ ಬಾಳುವವರುಂಟು. ತಮ್ಮದೇ ಆದ ಸಂಪತ್ತಿನ ಅರಿವಿಲ್ಲದ ದರಿದ್ರ ಜನಾಂಗ. ಒಳಗಿನ ಚಿನ್ನವನ್ನು ಹೊರಮನೆಯಲ್ಲಿ ನೆರೆಮನೆಯಲ್ಲಿ

ಅರಸುವ ತಿಳಿಗೇಡಿಗಳು. ಇರವು ಮುಖ್ಯವಲ್ಲ. ಇರವಿನ ಅರಿವು ಮುಖ್ಯ. ಅರಿಯದವನಿಗೆ ನೀನು ಇದ್ದೂ ಇರದಂತೆ. ನಿನ್ನ ಭಕ್ತರಿಗೆ ಮಾತ್ರ ಈ ಅರಿವಿದೆ. ಅರಿವಿದೆಯೆಂದೆ ಅವರು ಭಕ್ತರಾದರು. ಭಕ್ತರಾದರೆಂದೆ ಅವರಿಗೆ ಈ ಅರಿವು ಮೂಡಿತು. ಅದರಿಂದ ನೀನು ಭಕ್ತರ ನಿಧಿ.

ನಾನೂ ಒಬ್ಬ ಭಕ್ತ. ನನ್ನ ಖಾಸಾ ನಿಧಿ ನೀನು. ಅದಕ್ಕಾಗಿ "ಬಾರಯ್ಯ ಭಕ್ತರ ನಿಧಿಯೆ" ಅರಿವಾಗಿ ನನ್ನೊಳಗೆ ಮೂಡಿ ಬಾ.

'ನಿಧಿ' ಭಗವಂತನ ಉಪಾಸನೆಯ ಒಂದು ರಹಸ್ಯ ನಾಮವೂ ಹೌದು. ಸಹಸ್ರ ನಾಮಗಳಲ್ಲಿ ಈ ಹೆಸರೂ ಬಂದಿದೆ: "ಭೂತಾದಿರ್ನಿಧಿರವ್ಯಯು".

ಈ ಹೊರಗಿನ ನಿಧಿ ಎಷ್ಟು ದಿನ ಬಂದೀತು ? ಕೆಗೆದಂತೆ ಕರಗಿ ಹೋಗುತ್ತದೆ. ಭಗವಂತನೊಬ್ಬನೆ ಅವ್ಯಯನಾದ ನಿಧಿ; ಕರಗದ ನಿಧಿ. ಶಾಶ್ವತವಾದ ನಿಧಿ. ಈ ರಹಸ್ಯವನ್ನರಿತ ಭಕ್ತರಿಗೆ ಅವನೇ ನಿಧಿ. ಹೊರಗಿನ ನಿಧಿ ಅವರ ಮಟ್ಟಿಗೆ ನಿಧಿಯೇ ಅಲ್ಲ. ಅವರು 'ಸಮಲೋಷ್ಟಾಶ್ಮಕಾಂಚನರು'. ಮಣ್ಣು ಹೊನ್ನಿಗಿಂತ ಕೀಳಲ್ಲ. ಹೊನ್ನು ಮಣ್ಣಿಗಿಂತ ಮೇಲಲ್ಲ. ಮಣ್ಣು ಮತ್ತು ಮಣ್ಣಿನಲ್ಲಿ ಹೂತಿಟ್ಟ ಹೊನ್ನು ಎರಡಕ್ಕೂ ಒಂದೇ ಬೆಲೆಯಾದಾಗ ಅದನ್ನು ಅಗೆದು ತೆಗೆವುದು ವ್ಯರ್ಥ ಪ್ರಯತ್ನ. ಅದಕ್ಕಾಗಿ ಅವರು ಒಳಬಗೆಯನ್ನು ಅಗೆದು ಒಳಗಿನ ನಿಧಿಯನ್ನು ಅರಸುತ್ತಾರೆ.

ಪುರಂದರ ದಾಸರಂತು ರತ್ನಪಡಿಯ, ಹೊನ್ನರಾಶಿಯ ನಿಧಿಯನ್ನೆ ತೊರೆದು ಕೈ ತೊಳೆದು ಬಂದವರು. ಅದಕೆಂದೆ ಅವರು ಅರ್ಥಪೂರ್ಣವಾಗಿ ಹೀಗೆ ಭಗವಂತನನ್ನು ಕರೆಯುತ್ತಾರೆ: "ಬಾರಯ್ಯ ಭಕ್ತರ ನಿಧಿಯೆ".

ನಾನು ಸಂಪತ್ತಿನ ಅಹಂಕಾರದಿಂದ ನಿನ್ನನ್ನು ಕರೆಯುತ್ತಿಲ್ಲ. ಸಂಪತ್ತನ್ನು ಚೆಲ್ಲಿ ಬಂದಿದ್ದೇನೆ. ಈಗ ನನ್ನ ಎಲ್ಲ ಸಂಪತ್ತೂ ನೀನೆ. ನೀನು ಭಕ್ತರ ನಿಧಿ; ನನ್ನ ನಿಧಿ. ನನ್ನ ಹೃದಯ ಗುಹೆಯಲ್ಲಿ ಜೋಪಾನವಾಗಿ ಅವಿತಿಟ್ಟು ಕಾಯುತ್ತೇನೆ; ಬಾರಯ್ಯ.

ಅದಕ್ಕಾಗಿ "ತೋರಯ್ಯ ನಿನ್ನ ದಯೆ ತೋಯಜಾಂಬಕನೆ".

ನಿನ್ನ ದಯೆಯನ್ನು ನನ್ನ ಮೇಲೆ ಹರಿಸಯ್ಯ. ನಿನ್ನ ದಯಾಮೂರ್ತಿಯನ್ನು ನನಗೆ ತೋರಿಸಯ್ಯ. ದಯೆ ತುಂಬಿ ನನ್ನ ಬಳಿಗೆ ಬಾ. ನನ್ನೆದರು ಬಾ. ಬಂದು ತೋರಯ್ಯ ನಿನ್ನ ನನಗೆ. ಈ ಭಕ್ತನ ಮೇಲೆ ಅಷ್ಟೊಂದು ದಯೆ ತೋರಯ್ಯ. ನಿನ್ನ ದಯೆಯ ಮಹಿಮೆಯನ್ನು ಒಮ್ಮೆ ತೋರಿಸಯ್ಯ. ದಯೆದೋರಿ ನನ್ನ ಒಳಮನೆಗೆ ದಯಮಾಡಯ್ಯ. ನೀನು ದಯ ಮಾಡಿದೆ ಎಂದರೆ ನನ್ನ ನಿಧಿ ನನಗೆ ದೊರೆತಂತಾಯಿತು. ನೀನೇ ದೊರಕಿದ ಮೇಲೆ ಮತ್ತೆ ಯಾವುದು ದುರ್ಲಭ? "ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ".

ನೀನು ಇದ್ದರೆ ಎಲ್ಲವೂ ಇದೆ. ನೀನು ಇಲ್ಲದಿರೆ ಯಾವುದೂ ಇಲ್ಲ. ನಿನ್ನರಿತರೆ ಎಲ್ಲವನ್ನೂ ಅರಿತಂತೆ. ನಿನ್ನನರಿಯದಿದ್ದರೆ ಯಾವ ಅರಿವಿನಿಂದ ಏನು ಫಲ ? ಅದಕೆಂದೆ ನೀನು ನಮ್ಮ ನಿಧಿ. ಬರಿಯ ನಿಧಿಯಲ್ಲ ; ಶ್ರೀನಿಧಿ, ದಯಾನಿಧಿ. ಎಲ್ಲ ನಿಧಿಯೂ ನೀನೆ. "ಓ ದಯಾನಿಧಿಯೇ, ತೋರಯ್ಯ ನಿನ್ನ ದಯೆ ತೋಯಜಾಂಬಕನೆ".

ದಯೆಯ ಮೊದಲ ಸೂಚನೆ ಪ್ರೀತಿಯಿಂದ ಅರಳಿದ ಕಣ್ಣುಗಳು. ರಾಜ ತನ್ನ ಸೇವಕನನ್ನು ಪ್ರೀತಿಯಿಂದ ಕಣ್ಣರಳಿ ಕಂಡನೆಂದರೆ ಸೇವಕ ನಿಧಿ ದೊರಕಿದವನಂತೆ ಉಬ್ಬಿಬಿಡುತ್ತಾನೆ. 'ದೊರೆ ನನ್ನನ್ನು ಕಣ್ಣರಳಿ ನೋಡಿದರು. ಅವರ ದಯೆ ನನ್ನ ಮೇಲೆ ಹರಿದಿದೆ. ನಾನು ಧನ್ಯನಾದೆ' ಎಂದುಕೊಳ್ಳುತ್ತಾನೆ. ದಾಸರೂ ಭಗವಂತನ ಅರಳುಗಣ್ಣಿನ ದರ್ಶನ ಭಾಗ್ಯಕ್ಕಾಗಿ ಹಾತೊರೆಯುತ್ತಾರೆ. ಈ ಅರಳು ಗಣ್ಣ ನೋಟವೆ ಸಾಧಕರ ಬಾಳಿನ ಬಹುದೊಡ್ಡ ನಿಧಿ. ಅದಕ್ಕಾಗಿ ಅದೇ ಸಂಬೋಧನೆ: ತೋಯಜಾಂಬಕನೆ".

ತೋಯಜ ಅಂದರೆ, ತಾವರೆ. ಅಂಬಕ ಅಂದರೆ ಕಣ್ಣು. ಓ ಅರಳುದಾವರೆ ಗಣ್ಣಿನ ಚೆಲುವನೆ, ನನ್ನ ಮೇಲಣ ದಯೆಯಿಂದ, ಪ್ರೀತಿಯಿಂದ ಅರಳಿ ನಿಂತ ನಿನ್ನ ಚೆಲುಗಣ್ಣುಗಳಿಂದ ನನ್ನನ್ನು ಕಂಡು ಹರಸು.

ಈಗ ಮೊದಲನೆಯ ಸೊಲ್ಲಿಗೆ ಬರೋಣ :

ವೇದಗೋಚರ ಬಾರೋ
ಆದಿಕಚ್ಛಪ ಬಾರೋ
ಮೋದಸೂಕರ ಬಾರೋ
ಸದಯ ನರಸಿಂಹ ಬಾರೋ ॥ ೧ ॥

ಹನ್ನೊಂದು ಬಾಗಿಲಿನ ಈ ದೇಹದಲ್ಲಿ ಹನ್ನೊಂದು ಇಂದ್ರಿಯಗಳೂ ಇವೆ. ಒಂದೊಂದು ಇಂದ್ರಿಯದಲ್ಲು ಭಗವಂತನ ಒಂದೊಂದು ಲೀಲಾರೂಪ ನಿಯಾಮಕವಾಗಿದೆ. ದಾಸರು ಈ ಹಾಡಿನಲ್ಲಿ ಅಂಥ ಒಂದೊಂದು ರೂಪವನ್ನೂ ಪ್ರತ್ಯೇಕವಾಗಿ ಕರೆದು ತನ್ನಲ್ಲಿ ನೆಲೆಸುವಂತೆ ಪ್ರಾರ್ಥಿಸುತ್ತಾರೆ. ಹೀಗೆ ಇದು ಗಾಯತ್ರಿಯ ಹತ್ತು ಶಬ್ದಗಳಿಂದ ವಾಚ್ಯವಾದ ಹತ್ತು ಅವತಾರಗಳ ಸ್ತುತಿಯೂ ಹೌದು ; ಇಂದ್ರಿಯ ಸ್ವಾಮಿಯಾದ ಹೃಷೀಕೇಶನ ಸ್ತುತಿಯೂ ಹೌದು. ಇಂಥ ಹನ್ನೊಂದು ರೂಪಗಳಲ್ಲಿ ಮೊದಲ ನಾಲ್ಕು ರೂಪಗಳು ಮೊದಲ ಸೊಲ್ಲಿನಲ್ಲಿ ಬಂದಿವೆ.

ಮೊದಲನೆಯದು ಮತ್ಸ್ಯಾವತಾರ. ಈ ರೂಪವನ್ನೇ ದಾಸರು ಕರೆದರು : "ವೇದಗೋಚರ ಬಾರೋ".

ಹಯಗ್ರೀವಾಸುರ ವೇದಗಳನ್ನು ಕದ್ದಾಗ ಅವನನ್ನು ಕೊಂದು ವೇದಗಳನ್ನು ಮರಳಿ ತಂದವನು ; ರಕ್ಕಸನಿಂದ ಕಣ್ಮರೆಯಾದ ವೇದಗಳನ್ನು ಗೋಚರಕ್ಕೆ

ತಂದವನು, ವೇದಗೋಚರ. ಬ್ರಹ್ಮಜ್ಞಾನಿಗಳ ಹೃದಯದಲ್ಲಿ ವೇದಗಳ ಮೂಲಕ ಗೋಚರನಾದವನು: ವೇದಗೋಚರ.

ಗೋ ಎಂದರೆ ಸಂಸ್ಕೃತದಲ್ಲಿ ನೀರು ಕೂಡ ಹೌದು. ವೇದಗಳಿಗಾಗಿ ಗೋಚರನಾದವನು, ಜಲಚರನಾದವನು ವೇದಗೋಚರ. ಅವನು ಪ್ರಳಯದ ಕಡಲ ನೀರಲ್ಲಿ ಮಾತ್ರ ಚರಿಸುವವನಲ್ಲ. ವೇದವಾಙ್ಮಯವೆಂಬ ಕಡಲ ನೀರಲ್ಲಿ ಕೂಡ ಚರಿಸುವವನು. ಆದರಿಂದಲೂ ವೇದಗೋಚರ. ಅಂಥ ವೇದಗೋಚರನಾಗಿ ನನ್ನೆಡೆ ಬಾ. ನನ್ನ ಹೃದಯಸಮುದ್ರದಲ್ಲಿ ಚರಿಸುವ ಮೀನಾಗಿ ಬಾ.

ಆಧ್ಯಾತ್ಮಿಕವಾಗಿ, ಈ ಹನ್ನೊಂದು ಬಾಗಿಲ ಮನೆಯಲ್ಲಿ ಮತ್ಸ್ಯರೂಪಿ ಭಗವಂತ ನೆಲಸಿರುವ ತಾಣ : ಶ್ರವಣೇಂದ್ರಿಯ. ಮತ್ಸ್ಯನಾಗಿ ಬಾರಯ್ಯಾ, ನನ್ನ ಕಿವಿಗಳಲ್ಲಿ ನೆಲೆ ನಿಂತು ಒಳ್ಳೆಯದನ್ನು ಕೇಳಿಸಯ್ಯಾ, ನನ್ನ ಕಿವಿಗಳಿಗೆ ವೇದವಾಙ್ಮಯ ಗೋಚರವಾಗುವಂತೆ ಮಾಡಯ್ಯಾ, ಸದಾ ನಿನ್ನ ಪುಣ್ಯನಾಮ, ನಿನ್ನ ರಮ್ಯಕಥೆ ಗೋಚರವಾಗುವಂತೆ ಕರುಣಿಸಯ್ಯಾ.

ಆಚಾರ್ಯಮಧ್ವರು ದಶಾವತಾರ ಸ್ತುತಿಯಲ್ಲಿ ಮತ್ಸ್ಯನನ್ನು ಹೀಗೆ ವರ್ಣಿಸಿದ್ದಾರೆ:

"ಮತ್ಸ್ಯಕರೂಪ ಲಯೋದವಿಹಾರಿನ್
ವೇದವಿನೇತ್ರ ಚತುರ್ಮುಖವಂದ್ಯ"

(ಪುಟ್ಟ ಮೀನಾಗಿ ಹುಟ್ಟಿ ಬಂದವನೆ
ಪ್ರಳಯ ಜಲಧಿಯಲಿ ತುಂಬಿ ನಿಂತವನೆ
ವೇದವಾಙ್ಮಯವ ಮರಳಿ ತಂದವನೆ
ನಾಲ್ಮೊಗನು ನಮಿಸಿ ಕೊಂಡಾಡಿದವನೆ)

ಇಲ್ಲಿರುವ 'ವೇದವಿನೇತ್ರ' ದಾಸರ ಹಾಡಿನಲ್ಲಿ ವೇದಗೋಚರವಾಯಿತು. ಸ್ತೋತ್ರದ ಇಡಿಯ ಭಾವವನ್ನು ದಾಸರು ಈ ಒಂದು ನುಡಿಗಟ್ಟಿನಲ್ಲಿ ತುಂಬಲು ಪ್ರಯತ್ನಿಸಿದಂತಿದೆ.

ಮುಂದೆ ಎರಡನೆಯ ಅವತಾರವನ್ನು ದಾಸರು ಸ್ವಾಗತಿಸುತ್ತಾರೆ: "ಆದಿ ಕಚ್ಛಪ ಬಾರೋ".

ಆದಿ ಎನ್ನುವುದಕ್ಕೆ ಎರಡು ಅರ್ಥ: ಮೊದಲಿಗ ಮತ್ತು ಕಾರಣ. ಭಗವಂತ ಎಲ್ಲಕ್ಕಿಂತ ಮೊದಲಿದ್ದವ. ಈ ಸೃಷ್ಟಿಯ ಮುನ್ನ ಯಾವುದೂ ಇರದಿದ್ದಾಗಲೂ ತಾನು ಇದ್ದವ: "ಆತ್ಮಾ ವಾ ಇದಮಗ್ರ ಆಸೀತ್". ಸಮಸ್ತ ಚರಾಚರಕ್ಕು ಕಾರಣನಾದವ; ಎಲ್ಲ ಕಾರಣಗಳಿಗೂ ಮೂಲಕಾರಣನಾದವ. ಅಂಥ, ಆದಿ

ನಾರಾಯಣನೆ ಕಚ್ಛಪ (ಕೂರ್ಮ)ನಾದ. ಈ ಅವತಾರಕ್ಕೂ ಆ ಮೂಲ ರೂಪಕ್ಕೂ ಯಾವ ಅಂತರವೂ ಇಲ್ಲ. ಎರಡೂ ಆದಿ, ಎರಡೂ ಅನಾದಿ. ಎರಡೂ ಪರಿಪೂರ್ಣ : "ಪೂರ್ಣಮದಃ ಪೂರ್ಣಮಿದಮ್''. ಈ ಪ್ರಮೇಯ ವನ್ನು ಸೂಚಿಸುವುದಕ್ಕೆಂದೆ "ಆದಿಕಚ್ಛಪ" ಎಂಬ ಪದವನ್ನು ದಾಸರು ಬಳಸಿದರು.

ಇಲ್ಲಿ ಇನ್ನೂ ಒಂದು ಉದ್ದೇಶ ಉಂಟು : ಕೂರ್ಮರೂಪ ಎರಡಿದೆ. ಒಂದು ಬ್ರಹ್ಮಾಂಡವನ್ನು ಹೊತ್ತ ಕೂರ್ಮ. ಇನ್ನೊಂದು ಸಮುದ್ರಮಥನದಲ್ಲಿ ಮಂದರ ವನ್ನು ಹೊತ್ತ ಕೂರ್ಮ. ಧಾರಣ ಶಕ್ತಿಯಾಗಿ ಬ್ರಹ್ಮಾಂಡವನ್ನು ಹೊತ್ತ ಆದಿ ಕೂರ್ಮ ಬೇರೆ ಅಲ್ಲ ; ಮಂದರವನ್ನು ಹೊತ್ತ ದಶಾವತಾರಿ ಕೂರ್ಮ ಬೇರೆ ಅಲ್ಲ. ಮೂಲರೂಪ–ಅವತಾರ ರೂಪಗಳಿಗೆ ಹೇಗೆ ಹಾಗೆ ಅವತಾರ ರೂಪಗಳಿಗೂ ಪರಸ್ಪರ ಭೇದವಿಲ್ಲ. ಅದರಿಂದ ಆ ಆದಿಕಚ್ಛಪನೆ ಇವನು. ಅದಕೆಂದೆ ದಾಸರು ಹಾಡಿದರು : "ಆದಿಕಚ್ಛಪ ಬಾರೋ''. ನನ್ನ ಮನೋಮಂದರವನ್ನು ಕುಸಿಯದಂತೆ ಆಧರಿಸುವ ಕೂರ್ಮನಾಗಿ ಬಾ.

ಆಚಾರ್ಯ ಮಧ್ವರ ಸ್ತೋತ್ರದಲ್ಲಿ ಈ ಧ್ವನಿ ಇದೆ.

"ಕೂರ್ಮಸ್ವರೂಪಕ ಮಂದರಧಾರಿನ್
ಲೋಕವಿಧಾರಕ ದೇವವರೇಣ್ಯ"

(ಕೂರ್ಮರೂಪವ ತಳೆದ ಸುಖರೂಪನೆ
ಮಂಬರವ ಬೆನ್ನಲ್ಲಿ ಧರಿಸಿದವನೆ
ಲೋಕಗಳನೆಲ್ಲ ಹೊತ್ತ ಆಧಾರವೆ
ದೇವತೆಗಳೂ ಮಣಿದ ಪರದೈವವೆ)

ಇಲ್ಲಿ ಮಂದರವನ್ನು ಹೊತ್ತ ಕೂರ್ಮನನ್ನೂ ಲೋಕಗಳನ್ನು ಹೊತ್ತ ಆದಿ ಕೂರ್ಮನನ್ನೂ ಅಭೇದದಿಂದ ವರ್ಣಿಸಲಾಗಿದೆ. ಈ ಪರಂಪರೆಯ ಹಿನ್ನೆಲೆಯಲ್ಲೇ ದಾಸರೂ ಹಾಡಿದರು : ಆದಿಕಚ್ಛಪ ಬಾರೋ".

ಈ ದೇಹದಲ್ಲಿ ಭಗವಂತ ಕೂರ್ಮರೂಪದಿಂದ ನೆಲಸಿರುವ ತಾಣ : ಚಕ್ಷು ರಿಂದ್ರಿಯ. ಕೂರ್ಮನಾಗಿ ಬಾರಯ್ಯ. ನನ್ನ ಕಣ್ಣುಗಳಲ್ಲಿ ನಿಂತು ಒಳ್ಳೆಯದನ್ನು ಕಾಣಿಸಯ್ಯ. ನನ್ನ ಕಣ್ಣುಗಳಿಗೆ ನಿನ್ನ ಕ್ಷೇತ್ರಗಳ, ನಿನ್ನ ಪ್ರತೀಕಗಳ ದರ್ಶನ ಭಾಗ್ಯ ಕರುಣಿಸಯ್ಯ.

ಮೂರನೆಯದು ವರಾಹಾವತಾರ : "ವೇದಸೂಕರ ಬಾರೋ"

ಆಚಾರ್ಯಮಧ್ವರು ಈ ರೂಪವನ್ನು ಹೀಗೆ ಸ್ತುತಿಸಿದ್ದಾರೆ :

"ಸೂಕರರೂಪಕ ದಾನವಶತ್ರೋ
ಭೂಮಿವಿಧಾರಕ ಯಜ್ಞವರಾಂಗ"

(ಸೂಕರರೂಪನೆ ಸುಖಸ್ವರೂಪನೆ
ದಾನವಕುಲವನೆ ತರಿದವನೆ
ಕುಸಿದ ಭೂಮಿಯನು ಎತ್ತಿ ಹಿಡಿದವನೆ
ಯಜ್ಞಾಂಗವನಂಗಾಂಗದಿ ಪೆತ್ತವನೆ)

ಆಚಾರ್ಯರು ಈ ಸ್ತುತಿಯಲ್ಲಿ ವರಾಹರೂಪವನ್ನು 'ಸೂಕರರೂಪಕ' ಎಂದು ಕರೆದಿದ್ದಾರೆ. ಕ ಅಂದರೆ ಆನಂದ. ಆನಂದಪೂರ್ಣನಾದ ಸೂಕರರೂಪ: ಸೂಕರ ರೂಪ–ಕ; ಭಗವಂತನಿಗೆ ಈ ಸೂಕರರೂಪ ಒಂದು ಅನಿವಾರ್ಯ ಪ್ರಾರಬ್ಧವಲ್ಲ. ಜೀವರಂತೆ ಪಾಪದ ಫಲವಾಗಿ ದುಃಖ ಅನುಭವಿಸಲೆಂದು ಅವನು ಸೂಕರನಾದದ್ದಲ್ಲ. ಅವನು ಹಂದಿಯಾದರೂ ಆನಂದಿಯೆ. ಈ ರೂಪವೂ ಒಂದು ಆನಂದದ ಅಭಿವ್ಯಕ್ತಿ; ಒಂದು ಲೀಲಾವಿನೋದ. ಆಚಾರ್ಯಮಧ್ವರ ಈ ಭಾವವನ್ನೆ ದಾಸರು ಹೀಗೆ ಹೇಳಿದರು: "ಮೋದಸೂಕರ ಬಾರೋ" ಓ ಆನಂದ ಸ್ವರೂಪನಾದ ಸೂಕರನೆ, ನನ್ನನ್ನೂ ಆ ಸಾಧನದ ಪಥದಲ್ಲಿ ನೈಜಾನಂದಾನುಭವದ ಎತ್ತರಕ್ಕೆ ಎತ್ತಿ ನಿಲ್ಲಿಸು.

ದೇಹದಲ್ಲಿ ಭಗವಂತ ವರಾಹರೂಪದಿಂದ ನೆಲಸಿರುವ ತಾಣ: ತ್ವಗಿಂದ್ರಿಯ ಓ ಆನಂದರೂಪಿ ಸೂಕರನೆ. ನನ್ನೆಡೆಗೆ ಬಾರಯ್ಯ. ನನ್ನ ತೊಗಲಲ್ಲಿ ಬಂದು ನೆಲಸಯ್ಯ. ನಿನ್ನ ಪ್ರತೀಕಗಳನ್ನು ಮುಟ್ಟಿ ಪೂಜಿಸುವ ಆ ಸ್ಪರ್ಶಸುಖದ ಭಾಗ್ಯವನ್ನು ಕರುಣಿಸಯ್ಯ.

ನಾಲ್ಕನೆಯದು ನರಸಿಂಹಾವತಾರ: "ಸದಯ ನರಸಿಂಹ ಬಾರೊ".

ಅವನು ದುರ್ಜನರನ್ನು ನಿರ್ದಯವಾಗಿ ಸದೆ ಬಡಿದರೂ ಸಜ್ಜನರ ಪಾಲಿಗೆ ಸದಾ ಸದಯ. ಹಿರಣ್ಯಕನ ಕರುಳು ಬಗೆದರೇನು? ಬಾಲಕ ಪ್ರಹ್ಲಾದನಿಗೆ ಒಲಿದು ಬಂದ ಮಮತಾಮೂರ್ತಿಯಲ್ಲವೆ? ನಾವೂ ಹಿರಣ್ಯಕಶಿಪುಗಳಾಗಿ ಭಗವಂತನ ಬಳಿ ಸಾರಬಾರದು. ಪ್ರಹ್ಲಾದರಾಗಿ ಸಾರಬೇಕು. ಆಗ ನರಸಿಂಹ ರೂಪ ಕಂಡು ನಾವು ಭಯಪಡಬೇಕಾಗಿಲ್ಲ. ಏಕೆಂದರೆ ನಂಬಿದವರಿಗೆ ಅವನು ಸದಯ.

ನೃಸಿಂಹಾಷ್ಟೋತ್ತರ ಶತನಾಮ ಸ್ತೋತ್ರದಲ್ಲಿ ಬರುವ ಎರಡು ನಾಮಗಳು ಹೀಗಿವೆ:

"ಹಿರಣ್ಯ ಕಶಿಪೋರ್ವಕ್ಷೋವಿದಾರಣನಖಾಂಶುಕಃ।
ಪ್ರಹ್ಲಾದವರದ"............

(ಹಿರಣ್ಯಕಶಿಪುವಿನ ಎದೆಯನ್ನು ಬಗಿದ ಕೂರುಗುರಿನ ಭಯಾನಕ ಮೂರ್ತಿ; ಆದರೆ ಶಿಶು ಪ್ರಹ್ಲಾದನಿಗೆ ವರವಿತ್ತು ಹರಸಿದ ದಯಾಮೂರ್ತಿ.)

ಇಂಥದೇ ಇನ್ನೆರಡು ನಾಮಗಳು ಮುಂದೆ ಬರುತ್ತವೆ:

"ಅಭಕ್ತಜನ ಸಂಹಾರೀ
ಭಕ್ತಾನಾಮಭಯಪ್ರದಃ"

(ಅವನು ಅಭಕ್ತರನ್ನು ಸಂಹರಿಸುವ ಭಯಂಕರ. ಆದರೆ ಭಕ್ತರಿಗೆ ಅಭಯಪ್ರದ.)

ಭಕ್ತರಿಗೆ ಅಭಯವನ್ನು ನೀಡುವುದೆ ಅವನ ಅವತಾರದ ದೀಕ್ಷೆ:

"ಅಭಯಂ ಸರ್ವಭೂತೇಭ್ಯೋ
ದದಾಮ್ಯೇತದ್ ವ್ರತಂ ಮಮ"

(ರಾಮಾ. ಯುದ್ಧ 18. 33.)

(ಶರಣಾದವರಿಗೆಲ್ಲ ಅಭಯರಕ್ಷೆ ನೀಡುವೆನು, ಇದು ನಾನು ತೊಟ್ಟ ದೀಕ್ಷೆ.)

ರಾಮಾವತಾರದಲ್ಲಿ ಆಡಿದ ಈ ಮಾತು ಎಲ್ಲ ಅವತಾರಗಳಿಗೂ ಸಮಾನವಾಗಿ ಅನ್ವಯವಾಗುವುದು. ಆದ್ದರಿಂದ ಅವನು ಭಕ್ತರಿಗೆ ಸದಯ.

ಆಚಾರ್ಯ ಮಧ್ವರು ಈ ರೂಪವನ್ನು ಹೀಗೆಯೇ ವರ್ಣಿಸಿದ್ದಾರೆ:

"ದೇವ ನೃಸಿಂಹ ಹಿರಣ್ಯಕಶತ್ರೋ
ಸರ್ವಭಯಾಂತಕ ದೈವತ ಬಂಧೋ"

(ಓ ದೇವ, ನರಸಿಂಹನೇ,
ಹಿರಣ್ಯಕನ ಎದೆಯ ಬಗಿದವನೆ,
ನಂಬಿದವರ ಭಯ ಕಳೆವ ದಯಾಸಿಂಧುವೆ
ಓ ದೇವತೆಗಳ ಬಂಧುವೆ.)

ಓ ನರಸಿಂಹನೆ, ಈ ಭಕ್ತನೆಡೆಗೆ ಬಾರಯ್ಯ. ಆದರೆ ಹಿರಣ್ಯಕನ ಬಳಿ ಬಂದಂತೆ ನಿರ್ದಯನಾಗಿ, ಭಯಂಕರನಾಗಿ ಬರಬೇಡ. ನಾನೂ ಪ್ರಹ್ಲಾದನಂತೆ ಅನನ್ಯ ಭಕ್ತಿಯಿಂದ ಶರಣಾಗಿದ್ದೇನೆ. ಸದಯನಾಗಿ ಬಾರಯ್ಯ. ಪ್ರಹ್ಲಾದನಂತೆ ನನಗೂ ಉದ್ಧಾರದ ಅಭಯರಕ್ಷೆ ನೀಡುವ ದೀಕ್ಷೆ ತೊಟ್ಟು ಬಾ.

ಈ ದೇಹದಲ್ಲಿ ನೃಸಿಂಹ ರೂಪದಿಂದ ಭಗವಂತ ನೆಲಸಿರುವ ತಾಣ: ರಸನೇಂದ್ರಿಯ. ಓ ಸದಯ ನರಸಿಂಹ, ಬಾರಯ್ಯ. ಈ ನಾಲಗೆಯಲ್ಲಿ ಬಂದು

ನೆಲಸಯ್ಯ. ನೆಲಸಿ ನಿನಗರ್ಪಿತವಾದ ನೈವೇದ್ಯದ ರುಚಿಯನ್ನು ಹಿಡಿಸಯ್ಯ. ಅಷ್ಟೇ ಏಕೆ ? ತಿಂದ ಅನ್ನವೆಲ್ಲ ಕಾಲಗೆಯಲ್ಲಿ ನಿಂತ ನಿನಗೇ ಅರ್ಪಿತವಯ್ಯ.

ಮೊದಲ ನಾಲ್ಕು ರೂಪಗಳನ್ನು ಮೊದಲ ಸೊಲ್ಲಿನಲ್ಲಿ ನಿರೂಪಿಸಿದ್ದಾಯಿತು. ಮುಂದಿನ ಸೊಲ್ಲು ಉಳಿದ ಆರು ರೂಪಗಳನ್ನು ಉಲ್ಲೇಖಿಸಿ ಆಹ್ವಾನಿಸುತ್ತದೆ :

ವಾಮನ-ಭಾರ್ಗವ ಬಾರೋ
ರಾಮ-ಕೃಷ್ಣನೆ ಬಾರೋ ।
ಪ್ರೇಮದ ಬುದ್ಧನೆ ಬಾರೋ
ಸ್ವಾಮಿ ಕಲ್ಕಿಯೆ ಬಾರೋ ॥

ಐದನೆಯ ರೂಪ : "ವಾಮನ ಬಾರೋ", ಬಲಿಯ ಮನೆಗೆ ಬಂದಂತೆ ನನ್ನ ಮನೆಗೂ. ಅವನಿಗೆ ತೋರಿದಂತೆ ನನಗೂ ನಿನ್ನ ವಿಶ್ವರೂಪವನ್ನು ತೋರೋ.

ದೇಹದಲ್ಲಿ ವಾಮನರೂಪ ನೆಲಸಿರುವ ತಾಣ, ನಾಸೇಂದ್ರಿಯ. ಬಾರಯ್ಯ ವಾಮನ. ನನ್ನ ಮೂಗಿನಲ್ಲಿ ಬಂದು ನೆಲೆಸಯ್ಯ. ನೆಲಸಿ, ನಿನಗರ್ಪಿತವಾದ ಹೂ-ತುಳಸಿಗಳ ಸುಗಂಧವನ್ನು ಆಘ್ರಾಣಿಸುವ ದಯೆ ತೋರಯ್ಯ.

ಇಲ್ಲಿಗೆ ಜ್ಞಾನೇಂದ್ರಿಯಗಳಲ್ಲಿ ನಿಹಿತವಾದ ಪಂಚರೂಪಗಳನ್ನು ಹೇಳಿದ್ದಾಯಿತು. ಈ ಐದು ಇಂದ್ರಿಯಗಳು ಭಗವತ್ ಸನ್ನಿಧಿಯಿಂದ ಪರಿಶುದ್ಧವಾಗಲಿ ; ಅದರಿಂದಲೆ ದುರ್ವಿಷಯಗಳತ್ತ ಹರಿಯದೆ ಸದ್‌ವಿಷಯಗಳನ್ನಷ್ಟೆ ಗ್ರಹಿಸಲಿ. ಆಧ್ಯಾತ್ಮ ಸಾಧನೆಗೆ ಪೋಷಕವಾದ ಸುಜ್ಞಾನವನ್ನೆ ಬೆಳೆಸಲಿ. ಆ ಮೂಲಕ ಇವು ಐದು ಇಂದ್ರಿಯಗಳು ಭಗವಂತನಿಗೆ ಅರ್ಪಿತವಾಗಲಿ. ಇವುಗಳ ಮೂಲಕ ವಿಷಯಗಳನ್ನು ಅವನೇ ಭೋಗಿಸಲಿ.

ಮತ್ಸ್ಯಾದಿಕ್ರಮದಿಂದಲೆ ಪಂಚೇಂದ್ರಿಯಗಳನ್ನು ಉಲ್ಲೇಖಿಸಿ ಭಗವತ್ ಗೀತೆಯೂ ಈ ಮಾತನ್ನು ಹೇಳುತ್ತದೆ :

ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ
ರಸನಂ ಘ್ರಾಣಮೇವ ಚ ।
ಅಧಿಷ್ಠಾಯ ಮನಶ್ಚಾಯಂ
ವಿಷಯಾನುಪಸೇವತೇ ॥ (ಭ. ಗೀ. 15. 9.)

(ಕಿವಿ (ಮತ್ಸ್ಯ) ಕಣ್ಣು (ಕೂರ್ಮ) ತ್ವಕ್ (ವರಾಹ), ನಾಲಿಗೆ (ನರಸಿಂಹ); ಮೂಗು (ವಾಮನ) ಮತ್ತು ಮನಸ್ಸು (ಮೂಲರೂಪ) ಈ ಇಂದ್ರಿಯಗಳಲ್ಲಿ ಸನ್ನಿಹಿತ ನಾದ ಭಗವಂತನೆ ವಿಷಯಗಳ ಸಾರವನ್ನು ಭೋಗಿಸುತ್ತಾನೆ.)

ಆರನೆಯ ರೂಪ: "ಭಾರ್ಗವ ಬಾರೋ" ಭೃಗುವಂಶದಲ್ಲಿ ಜನಿಸಿದ ಕೊಡಲಿ ರಾಮನೆ ಬಾರೋ – ನನ್ನ ಮನೆಗೆ. ಬಗೆಯಲ್ಲಿ ತುಂಬಿರುವ ಕೊಳೆಯನ್ನು ತರಿಯಲು ಕೊಡಲಿ ತಾರೋ.

ದೇಹದಲ್ಲಿ ಪರಶುರಾಮ ರೂಪದ ಸ್ಥಾನ: ವಾಗಿಂದ್ರಿಯ. ವಾಕ್ಕಿನಲ್ಲಿ ಅಗ್ನಿಯಿದ್ದಾನೆ. ಅಗ್ನಿಯಲ್ಲಿ ಹರಿಣೀಪತಿಯಾದ ಪರಶುರಾಮನಿದ್ದಾನೆ. ಬಾರಯ್ಯ ಭಾರ್ಗವನೆ, ಬಂದು ನನ್ನ ಬಾಯಲ್ಲಿನೆಲಸು. ಜ್ಞಾನೇಂದ್ರಿಯಗಳಿಂದ ಪಡೆದ ಅರಿವನ್ನು ಬಾಯಿಂದ ಮಾತಾಗಿ ನುಡಿಸು; ಸತ್ಯವನ್ನೆ ನುಡಿಸು; ಸತ್ಯಸ್ವರೂಪನಾದ ನಿನ್ನ ನಾಮವನ್ನು ನುಡಿಸು; ನಿನ್ನ ಗುಣಗಾನವನ್ನೆ ನುಡಿಸು. ನುಡಿದ ಮಾತೆಲ್ಲ ನಿನ್ನ ಸ್ತುತಿಯಾಗಲಿ. ನೀನೆ ನುಡಿಸಿದ ನಿನ್ನ ಸ್ತುತಿಯನ್ನು ನೀನೆ ಸ್ವೀಕರಿಸಿ ಪ್ರಸನ್ನನಾಗು.

ವಾಮನನಾಗಿ ಜ್ಞಾನೇಂದ್ರಿಯದಲ್ಲಿದ್ದಾನೆ. ಭಾರ್ಗವನಾಗಿ ಕರ್ಮೇಂದ್ರಿಯದಲ್ಲಿದ್ದಾನೆ. ಎಲ್ಲಕಡೆಯೂ ಇರುವವನು ಎಲ್ಲಿದ್ದರೇನು? ಅಲ್ಲಿ ಇದ್ದು ಮೇಲಲ್ಲ; ಇಲ್ಲಿ ಇದ್ದು ಕೀಳಲ್ಲ. ಅವನು ಎಲ್ಲಿದ್ದರೂ ಎಲ್ಲ ರೂಪದಲ್ಲು ಸಮಾನ – ಏಕರೂಪ. ಅದಕೆಂದೆ ದಾಸರು 'ವಾಮನ – ಭಾರ್ಗವ' ಎಂದು ಎರಡೂ ರೂಪಗಳನ್ನು ಏಕೀಕರಿಸಿ ಕರೆದಿದ್ದಾರೆ.

ಮುಂದೆ ಏಳನೆಯ ರೂಪ: "ರಾಮ ಬಾರೋ". ಬಾರಯ್ಯ ರಾಮಚಂದ್ರ. ನನ್ನ ಸಂಸಾರದ ಕಡಲಿಗೆ ಸೇತು ಕಟ್ಟಲು; ಹತ್ತು ತಲೆಯಿಂದ ತಲೆಯೇರಿ ನಿಂತ ಅಹಂಕಾರವನ್ನು ಕಡಿಯಲು.

ಜತೆಗೆ ಇರಬೇಕಾದ ಎಂಟನೆಯ ರೂಪ: "ಕೃಷ್ಣನೆ ಬಾರೋ". ನನ್ನ ಒಳಮನೆಯಲ್ಲಿ ನಿನ್ನ ಗೀತೆಯ ಬೆಳಕನ್ನು ತೋರೋ.

ಅಧ್ಯಾತ್ಮದಲ್ಲಿ ರಾಮ ಹಸ್ತದ ದೇವತೆಯಾದರೆ ಕೃಷ್ಣ ಪಾದದೇವತೆ. ಕೈ-ಕಾಲು ಎಂದು ಜತೆಯಾಗಿಯೆ ಹೇಳುತ್ತೇವೆ. ಇವು ದೇಹದ ಬಹುಮುಖ್ಯವಾದ ಎರಡು ಅಂಗಗಳು. ದೇಹ ನಿಷ್ಕ್ರಿಯವಾಯಿತು ಎನ್ನುವುದಕ್ಕೆ ಅವನ ಕೈಕಾಲು ಬಿದ್ದು ಹೋಯಿತು ಎನ್ನುತ್ತಾರೆ. ಸಂಸ್ಕೃತದಲ್ಲು ಹೀಗೆ ಜತೆಯಾಗಿಯೆ ಹೇಳುತ್ತಾರೆ: ನ ಮೇ ಹಸ್ತಪಾದಂ ಪ್ರಸರತಿ (ನನ್ನ ಕೈಕಾಲು ಕೆಲಸ ಮಾಡುತ್ತಿಲ್ಲ.)

ಅದಕೆಂದೆ ಅಲ್ಲಿ ನೆಲೆಸಿರುವ ಭಗವಂತನ ರೂಪಗಳನ್ನೂ ದಾಸರು ಜತೆಯಾಗಿಯೆ ಕರೆಯುತ್ತಾರೆ: "ರಾಮಕೃಷ್ಣನೆ ಬಾರೋ".

ಬಾರಯ್ಯ ರಾಮ. ಬಂದು ನನ್ನ ಕೈಗಳಲ್ಲಿ ನೆಲಸಿ, ಅವುಗಳಿಂದ ನಿನ್ನ ಪಾದ ಸೇವೆ ಮಾಡಿಸು. ನನ್ನ ಕೈಗಳು ಮಾಡಿದ ಕಾಯಕವೆಲ್ಲ ನಿನ್ನ ಪೂಜೆಯಾಗಲಿ. ನೀನೇ ಮಾಡಿಸಿದ ನಿನ್ನ ಪೂಜೆಯನ್ನು ಅಲ್ಲಿ ನಿಂತು ನೀನೇ ಸ್ವೀಕರಿಸು.

ಬಾರಯ್ಯ ಕೃಷ್ಣನೆ, ನನ್ನ ಪಾದಗಳಲ್ಲಿ ನಿಯಾಮಕನಾಗಿ ನೆಲೆಸಿ ನನ್ನನ್ನು ಸತ್ ಪಥದಲ್ಲಿ ನಡೆಸು. ನಾನು ನಡೆದದ್ದೆಲ್ಲ ನಿನ್ನ ಪ್ರದಕ್ಷಿಣೆಯಾಗಲಿ. ಅದು ಅಲ್ಲಿದ್ದ ನಿನಗೇ ಅರ್ಪಿತವಾಗಲಿ.

ಇಲ್ಲಿ ಇನ್ನೂ ಒಂದು ಉಪಾಸನೆಯ ರಹಸ್ಯ ಉಂಟು. ರಾಮ ಎನ್ನುವುದು ಒಂದು ರೂಪ. ಕೃಷ್ಣ ಎನ್ನುವುದು ಒಂದು ರೂಪ. ಅಷ್ಟೇ ಅಲ್ಲ, ರಾಮಕೃಷ್ಣ ಎನ್ನುವುದೂ ಒಂದು ರೂಪ. ಈ ಸಂಯುಕ್ತ ರೂಪದ ಉಪಾಸನೆ ಶಾಸ್ತ್ರಗಳಲ್ಲಿ ವಿಹಿತವಾಗಿದೆ :

"ರಾಮರಾಮೋ ರಾಮಕೃಷ್ಣಃ
ಕೃಷ್ಣರಾಮ ಇತಿ ಕ್ರಮಾತ್" (ಯೋಗದೀಪಿಕಾ 10.31.)

ಈ ಉಪಾಸನೆಯ ಮುಖವನ್ನು ಸೂಚಿಸುವುದಕ್ಕಾಗಿಯೂ ದಾಸರು "ರಾಮ ಕೃಷ್ಣನೆ ಬಾರೋ" ಎಂದು ಸಂಯುಕ್ತವಾಗಿ ಕರೆದರು. "ವಾಮನ ಭಾರ್ಗವ ಬಾರೋ" ಎನ್ನುವಲ್ಲಿಯೂ ಈ ಮಾತನ್ನು ಅನ್ವಯಿಸಿಕೊಳ್ಳಬಹುದು.

ಒಂಬತ್ತನೆಯ ರೂಪ : "ಪ್ರೇಮದ ಬುದ್ಧನೆ ಬಾರೋ".

ಹತ್ತನೆಯದು : ಸ್ವಾಮಿ ಕಲ್ಕಿಯೆ ಬಾರೋ".

ತ್ರಿಪುರರ ವಂಚನೆಗಾಗಿ ಬುದ್ಧನಾದರೂ ಜ್ಞಾನಿಗಳ ಉದ್ಧಾರಕ್ಕಾಗಿಯೆ ಆದ ಪ್ರೇಮಾವತಾರವಲ್ಲವೆ ಅದು ? ದೇವತೆಗಳ ಪ್ರಾರ್ಥನೆಯ ಮೇರೆಗೆ, ಅವರ ಮೇಲಣ ಪ್ರೇಮದಿಂದಲೆ ಇಂಥ ಮೋಹಕ ರೂಪ ತೊಟ್ಟೆಯಲ್ಲವೆ ನೀನು ?

ಅಂಥ ಓ ! ಪ್ರೇಮದ ಬುದ್ಧನೆ, ನನ್ನೆಡೆಗೆ ಬಾರೋ. ತ್ರಿಪುರರಂತೆ ನನ್ನನ್ನೂ ಮೋಹಗೊಳಿಸಲಿಕ್ಕಾಗಿ ಅಲ್ಲ. ಉದ್ಧರಿಸಲಿಕ್ಕಾಗಿ ಪ್ರೇಮದ ಮೂರ್ತಿಯಾಗಿ ಬಾ. ಪ್ರೇಮದಿಂದ ಪ್ರಬುದ್ಧನನ್ನಾಗಿ ಮಾಡಲು ಬಾ.

ಆಚಾರ್ಯಮಧ್ವರ ಸ್ತುತಿಯಲ್ಲೂ ಈ ಪ್ರೇಮಾವತಾರದ ಉಲ್ಲೇಖ ಹೀಗೇ ಬಂದಿದೆ :

ದೈತ್ಯವಿಮೋಹಕ ನಿತ್ಯಸುಖಾದೇ
ದೇವಸುಬೋಧಕ ಬುದ್ಧಸ್ವರೂಪ ॥

(ವಂಚಿಸಿಯೆ ದೈತ್ಯರನು ಮೋಹದಲಿ ಕೆಡದವನೆ,
ನಿತ್ಯಸುಖದ ಮೋಕ್ಷಪಥಕೆ ಮೂಲಕಾರಣನೆ,
ನಂಬಿ ಬಂದ ದೇವತೆಗಳ ಮೇಲೆ ಮಮತೆಯಿಂದ
ನಿಜದರಿವನಿತ್ತವನೆ ಓ ಬುದ್ಧನೆ !)

ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಈ ಮಾತು ಇನ್ನಷ್ಟು ಸ್ಫುಟವಾಗಿ ಬಂದಿದೆ :

ಪ್ರಶಾಂತವಿದ್ಯೇತ್ಯಭಿಧಂ ತಥಾऽನ್ಯತ್
ಬುದ್ಧೋಕ್ತಶಾಸ್ತ್ರಂ ತ್ರಿದಶಾ ಅವಾಪ್ಯ ।
ತೋಷಂ ಯಯುರ್ವೇದಸಮಸ್ತಸಾರಂ
ಯಾಮಾಸ್ಥಿತಾನಾಮಚಿರೇಣ ಮುಕ್ತಿ: ॥

(ಮಹಾಭಾ. ತಾ. ನಿ. 32. 148)

(ಬುದ್ಧ ದೇವನು ದೇವತೆಗಳಿಗೆ ಬೇರೆಯ ಆಧ್ಯಾತ್ಮಿಕ ವಿದ್ಯೆಯನ್ನು ಉಪದೇಶಿಸಿದನು. ಸಮಸ್ತ ವೇದಗಳ ಸಾರರೂಪವಾದ ಈ ವಿದ್ಯೆಗೆ ಪ್ರಶಾಂತ ವಿದ್ಯೆ ಎಂದು ಹೆಸರು. ಶೀಘ್ರದಲ್ಲಿ ಮುಕ್ತಿಯನ್ನು ಕರುಣಿಸುವ ಈ ಮಹಾವಿದ್ಯೆಯನ್ನು ಪಡೆದು ದೇವತೆಗಳು ಸಂತುಷ್ಟರಾದರು.)

ಪ್ರೇಮದಿಂದ ದೇವತೆಗಳಿಗೆ ವಿದ್ಯೆಯನ್ನು ಬೋಧಿಸಿದವ; ಪ್ರೇಮದ ವಿದ್ಯೆಯನ್ನು ಬೋಧಿಸಿದವ; ದೇವತೆಗಳು ಪ್ರೇಮಿಸಿದ ವಿದ್ಯೆಯನ್ನು ಬೋಧಿಸಿದವ. ಆದರಿಂದ ದಾಸರು ಕರೆದರು :" ಪ್ರೇಮದ ಬುದ್ಧನೆ ಬಾರೋ".

ಮತ್ತೆ, "ಸ್ವಾಮಿ ಕಲ್ಕಿಯೆ ಬಾರೋ". ಯುಗಾಂತದಲ್ಲಿ ದುರ್ಜನಸಂಹಾರಕ್ಕೆ ಹೊರಟ ನಿನ್ನ ಕತ್ತಿಗೆ ನಾನು ಕೊರಳಾಗಬಾರದು. ನನ್ನನ್ನು ಉದ್ಧರಿಸುವ ಸ್ವಾಮಿಯಾಗಿ ಬಾ. ಕಲ್ಕಿ–ಅವತಾರಕ್ಕೆ ಎರಡು ಮುಖಗಳು. ಅಧರ್ಮದ ನಾಶ, ಅಧಾರ್ಮಿಕರ ನಾಶ ಒಂದು ಮುಖ; ಧರ್ಮದ ಉದ್ಧಾರ, ಧಾರ್ಮಿಕರ ಉದ್ಧಾರ ಎರಡನೆಯ ಮುಖ, ನನ್ನ ಅಂತರಂಗದಲ್ಲಿ ಧರ್ಮವನ್ನು ಜಾಗೃತಗೊಳಿಸುವ ಸ್ವಾಮಿಯಾಗಿ ಬಾ ಎನ್ನುವುದು ಇಲ್ಲಿಯ ತಾತ್ಪರ್ಯ.

ಆಚಾರ್ಯಮಧ್ವರ ಸ್ತೋತ್ರದಲ್ಲು ಈ ಎರಡು ಮುಖ ಸ್ಪಷ್ಟವಾಗಿ ಉಲ್ಲೇಖಗೊಂಡಿದೆ :

ದುಷ್ಟಕುಲಾಂತಕ ಕಲ್ಕಿಸ್ವರೂಪಾ
ಧರ್ಮವಿವರ್ಧನ ಮೂಲಯುಗಾದೇ ॥

(ದುರ್ಜನರ ಕುಲವನ್ನು ಕತ್ತರಿಸಿದವನೆ
ಕಲ್ಕಿಸ್ವರೂಪದಲಿ ಮೂಡಿ ಬಂದವನೆ
ಧರ್ಮದ ಬೆಳೆಯನ್ನು ಬೆಳೆಸಿದವನೆ
ಕೃತಯುಗದ ಬೀಜವನು ಬಿತ್ತಿದವನೆ.)

ದಶಾವತಾರದ ಕೊನೆಯ ಈ ಬುದ್ಧ–ಕಲ್ಕಿರೂಪಗಳೇ ದೇಹದಲ್ಲಿ ಕ್ರಮವಾಗಿ ಪಾಯು ಮತ್ತು ಉಪಸ್ಥೇಂದ್ರಿಯಗಳಲ್ಲಿ ಸನ್ನಿಹಿತವಾಗಿವೆ ಎಂದು ಬಲ್ಲವರು ಹೇಳುತ್ತಾರೆ.

ಹೀಗೆ ತನ್ನ ಹತ್ತು ಇಂದ್ರಿಯಗಳಲ್ಲಿ ಭಗವಂತನ ಹತ್ತು ರೂಪಗಳು ಸನ್ನಿಹಿತವಾಗಿ ತನ್ನ ಈ ಭೌತಿಕ ದೇಹವನ್ನು ಭಗವನ್ಮಯಗೊಳಿಸುವಂತೆ ಪ್ರಾರ್ಥಿಸಿ ಆಹ್ವಾನಿಸಿದ್ದಾಯಿತು. ಕೊನೆಯದಾಗಿ ಹನ್ನೊಂದನೆಯ ಇಂದ್ರಿಯ – ಮನಸ್ಸಿನಲ್ಲಿ ನಾರಾಯಣನೆ ಮೂಲರೂಪದಿಂದ ಬಂದು ನೆಲಸುವಂತೆ ಮುಂದಿನ ಸೊಲ್ಲಿನಲ್ಲಿ ಪ್ರಾರ್ಥಿಸುತ್ತಾರೆ :

ಅರವಿಂದನಾಭ ಬಾರೋ
ಸುರರ ಪ್ರಭುವೆ ಬಾರೋ ।
ಪುರುಹೂತವಂದ್ಯ ಬಾರೋ
ಪುರಂದರವಿಠಲ ಬಾರೋ ॥

ಸೃಷ್ಟಿಯ ಆದಿಯಲ್ಲಿ ಎಲ್ಲ ಅವತಾರ ರೂಪಗಳನ್ನೂ ತನ್ನಲ್ಲಿ ಏಕೀಭವಿಸಿ ನಾರಾಯಣನೊಬ್ಬನೆ ಇದ್ದ. ಮುಂದೆ, ಅವನ ನಾಭಿಯಿಂದ ಲೋಕಾತ್ಮಕವಾದ ಅರವಿಂದ ಹುಟ್ಟಿತು. ಅವನು ಅರವಿಂದನಾಭನಾದ. ಅದರಿಂದ ದಾಸರು ಕರೆಯುತ್ತಾರೆ : "ಅರವಿಂದನಾಭ ಬಾರೋ"

ಓ ನಾರಾಯಣನೆ, ನಾಭಿಯಲ್ಲಿ ಅರವಿಂದವನ್ನು ಪಡೆದ, ಅದರಲ್ಲಿ ಬ್ರಹ್ಮನನ್ನು ಪಡೆದ ಓ ಪದ್ಮನಾಭನೆ, ಬಾರೋ, ನನ್ನ ಅಂತಃಕರಣದೊಳಗೆ ಬಂದು ನೆಲಸೋ. ನೆಲಸಿ ನನ್ನ ಮನವನ್ನು ಸನ್ಮಾರ್ಗದಲ್ಲಿ ನಡೆಸೋ.

ಇಂದ್ರಿಯಗಳಲ್ಲಿ ಅಭಿಮಾನಿ ದೇವತೆಗಳು ನೆಲಸಿದ್ದಾರೆ. ಅವರು ಅನುಕ್ಷಣವೂ ಇಂದ್ರಿಯಗಳನ್ನು ಪ್ರೇರಿಸುತ್ತಿದ್ದಾರೆ. ಮತ್ತೇಕೆ ಭಗವಂತನೂ ಹತ್ತು ಹಲವು ರೂಪಗಳನ್ನು ಹೊತ್ತು ಬರಬೇಕು? ಈ ಪ್ರಶ್ನೆಗೆ ಉತ್ತರವಾಗಿ ಎರಡನೆಯ ಸಾಲು ಬಂದಿದೆ : "ಸುರರ ಪ್ರಭುವೆ ಬಾರೋ".

ನೀನು ಇದ್ದರೆ ಎಲ್ಲ ಸುರರೂ ಇದ್ದಾರೆ. ನೀನಿಲ್ಲವಾದರೆ ಯಾರೂ ಇಲ್ಲ. ನೀನು ನಿಂತು ಸುರರನ್ನು ಪ್ರೇರಿಸಿದೆಯೆಂದರೆ ಸುರರು ನನ್ನ ಇಂದ್ರಿಯಗಳನ್ನು ಪ್ರೇರಿಸಬಲ್ಲರು. ನೀನು ದೂರ ನಿಂತೆಯಾದರೆ ಪಾಪ, ಅವರಾದರೂ ಏನು ಮಾಡಬಲ್ಲರು? ಏಕೆಂದರೆ ನೀನು ಇಂದ್ರಿಯಾಭಿಮಾನಿಗಳಾದ ಸುರರಿಗೂ ಪ್ರಭುವಲ್ಲವೆ? ನೀನು ಕೈಬಿಟ್ಟ ದೇಹವನ್ನು ಅವರು ಕೈಹಿಡಿದು ನಡೆಸುವುದುಂಟೆ?

ಬ್ರಹ್ಮಣಾ ತ್ಯಕ್ತದೇಹಸ್ತು
ಮೃತ ಇತ್ಯುಚ್ಯತೇ ಬುಧೈಃ ।

(ಭಗವಂತ ದೇಹ ಬಿಟ್ಟು ತೆರಳಿದಾಗ ಜೀವ ಮೃತನಾದ ಎನ್ನುತ್ತಾರೆ.)

ಈ ಶಾಸ್ತ್ರವಚನದಂತೆ ನೀನೇ ನಮ್ಮ ಬದುಕು; ನೀನೇ ನಮ್ಮ ಉಸಿರು. ನೀನು ಇದ್ದಾಗ ದೇವತೆಗಳೂ ಇದ್ದು ತಮ್ಮ ಕೆಲಸ ನಡೆಸುತ್ತಾರೆ. ನೀನು ಹೊರಟರೆ ಅವರೂ ತಮ್ಮ ಪ್ರಭುವಿನ ಜತೆ ಹೊರಟು ಬಿಡುತ್ತಾರೆ. ಆಗ ಇದು ಬರಿಯ ಮರದ ಕೊರಡು; ಮಣ್ಣಿನ ಮುದ್ದೆ. ಅದಕ್ಕಾಗಿ, ಓ ಸುರರ ಪ್ರಭುವೆ, ಬಾರೋ. ಈ ಜೀವದ ಉದ್ಧಾರದ ಸಾಧನೆಯ ದಾರಿತೋರೋ.

ಸುರರ ಪ್ರಭು ಎಂದು ಇಂದ್ರನನ್ನೂ ಕರೆಯುವುದುಂಟು. ಅದಕ್ಕೂ ಕಾರಣ ಉಂಟು. ಹತ್ತು ಬಾಹ್ಯೇಂದ್ರಿಯಗಳ ಅಭಿಮಾನಿ ದೇವತೆಗಳಿಗೆಲ್ಲ ಅವನು ಒಡೆಯ. ಯೋಗ್ಯತೆಯಲ್ಲಿ ಅವರಿಗಿಂತ ಹಿರಿಯ. ಹತ್ತು ಇಂದ್ರಿಯಗಳಿಗೂ ಮುಖ್ಯ ದೇವತೆ. ಅಷ್ಟೇ ಅಲ್ಲ; ಮನಸ್ಸಿಗೂ ಅವನು ದೇವತೆ. ಇವು ಇಂದ್ರನ ಅಧೀನವಾದವುಗಳು. (ಆದರಿಂದಲೇ ಇಂದ್ರಿಯಗಳು) – ಹೀಗೆ ಒಂದು ಸಾಪೇಕ್ಷ ಅರ್ಥದಲ್ಲಿ ಇಂದ್ರನೂ ಸುರರ ಪ್ರಭು. ಆದರೆ ಇದು ಪೂರ್ಣಸತ್ಯವಲ್ಲ. ಏಕೆಂದರೆ ಇಂದ್ರನೂ ಸುರರಲ್ಲಿ ಒಬ್ಬ. ನೀನು ಅವನಿಗೂ ಪ್ರಭು. ಆದರಿಂದ ನೀನೇ ನಿಜವಾದ ಸುರರ ಪ್ರಭು. ಈ ಮಾತನ್ನು ಸ್ಪಷ್ಟೀಕರಿಸುವುದಕ್ಕಾಗಿಯೆ ಮುಂದಿನ ಸಾಲು: "ಪುರುಹೂತವಂದ್ಯ ಬಾರೋ''. ನೀನು ಪುರುಹೂತ (ಇಂದ್ರ) ನಿಂದಲೂ ವಂದ್ಯ. ಅದರಿಂದ ನೀನೇ ಎಲ್ಲ ಸುರರ ಮುಖ್ಯ ಪ್ರಭು.

ಹಾಗಿದ್ದರೆ ವೇದಗಳೇಕೆ ಅಗ್ನಿ, ವಾಯು, ವರುಣ, ಇಂದ್ರ ಇಂಥ ಬೇರೆ ಬೇರೆ ಇಂದ್ರಿಯಾಭಿಮಾನಿಗಳನ್ನು ಪ್ರತ್ಯೇಕವಾಗಿ ಸ್ತುತಿಸುತ್ತವೆ ? ಈ ಪ್ರಶ್ನೆಗೆ ಉತ್ತರವಾಗಿಯೂ ಈ ಸಾಲು ಬಂದಿದೆ: "ಪುರುಹೂತ ಬಾರೋ''. ಪುರು+ಹೂತ ಎಂದರೆ ಎಲ್ಲರ ಎಲ್ಲ ನಾಮಗಳಿಂದಲೂ ಕರೆಯಲ್ಪಡುವ ಏಕದೇವ. ನಿಜವಾಗಿ ಇಂದ್ರನೂ 'ಪುರುಹೂತನಲ್ಲ'. ನೀನೊಬ್ಬನೇ ಪುರುಹೂತ. ಏಕೆಂದರೆ ಎಲ್ಲ ನಾಮಗಳಿಂದ ವಾಚ್ಯನಾದವನು ನೀನೊಬ್ಬನೆ ಎಂದು ಶ್ರುತಿಗಳು ಸಾರುತ್ತಿವೆ:

ನಾಮಾನಿ ಸರ್ವಾಣಿ ಯಮಾವಿಶಂತಿ
ತಂ ವೈ ವಿಷ್ಣುಂ ಪರಮಮುದಾಹರಂತಿ ।

(ಎಲ್ಲ ಶಬ್ದಗಳೂ ಮುಖ್ಯವಾಗಿ ಯಾರ ಹೆಸರೊ ಅಂಥ ಪರದೈವತವೆ ವಿಷ್ಣು ಎಂದು ಜ್ಞಾನಿಗಳು ಹೇಳುತ್ತಾರೆ.)

ಎಲ್ಲ ನಾಮಗಳೂ ಎಲ್ಲ ನಮನಗಳೂ ಕೊನೆಗೆ ಅವನನ್ನೇ ತಲುಪುತ್ತವೆ; ಎಲ್ಲ ನೀರೂ ಕಡಲನ್ನು ತಲಪುವಂತೆ: "ಸರ್ವ ದೇವ ನಮಸ್ಕಾರಃ ಕೇಶವಂ ಪ್ರತಿ

ಗಚ್ಛತಿ''– ಎಂದ ಮೇಲೆ ವೇದಗಳು ಯಾವ ಹೆಸರಿನಿಂದ ಸ್ತುತಿಸಿದರೇನು ? ಎಲ್ಲವೂ ಭಗವಂತನ ಹೆಸರೆ; ಎಲ್ಲವೂ ಭಗವಂತನ ಸ್ತುತಿಯೆ. ಅದಕೆಂದೆ ದಾಸರು ಮತ್ತೆ ಒತ್ತಿ ಹೇಳುತ್ತಾರೆ; "ವಂದ್ಯ ಬಾರೋ''.

ವಂದ್ಯ ಎಂದರೆ ನಮಸ್ಕೃತನಾದವ ಮತ್ತು ಸ್ತುತನಾದವ. (ವದಿ ಅಭಿವಾದನ ಸ್ತುತ್ಯೋಃ). ಎಲ್ಲ ನಾಮಪದಗಳಿಂದ, ಎಲ್ಲರಿಂದ ಸ್ತುತನಾದವ ನೀನೆ. ಬ್ರಹ್ಮಾದಿ ಸಕಲ ದೇವತೆಗಳಿಂದ ನಮಸ್ಕೃತನಾದವ ನೀನೆ. ಅದರಂತೆಯೆ ನನ್ನಿಂದಲೂ ವಂದ್ಯನಾಗಿ ನನ್ನ ಈ ಕಿಂಚಿತ್ ಸ್ತುತಿ–ನುತಿಗಳಿಗೂ ದೊಡ್ಡ ಮನಸ್ಸು ಮಾಡಿ ಒಲಿದು ನನ್ನೆಡೆಗೆ ಬಾ.

ಹೀಗೆ ಹನ್ನೊಂದು ರೂಪಗಳಿಂದ ಇಂದ್ರಿಯ ಸ್ವಾಮಿಯಾಗಿ, ಹೃಷೀಕೇಶನಾಗಿ ಭಗವಂತ ತನ್ನೆಡೆಗೆ ಬರಬೇಕೆಂಬ ಕಳಕಳಿಯ ಕರೆಗೆ ದಾಸರು ಕೊನೆಯ ಸಾಲಿನಲ್ಲಿ ತಮ್ಮ ಅಧಿಕೃತ ಮುದ್ರಿಕೆಯನ್ನೊತ್ತುತ್ತಾರೆ; "ಪುರಂದರ ವಿಠಲ ಬಾರೋ''.

ದಶಾವತಾರಿ ಹರಿಯನ್ನು ನಮ್ಮ ಇಂದ್ರಿಯಗಳಲ್ಲಿ ಧ್ಯಾನಿಸುವ ಒಂದು ಹೊಸ ಪ್ರಮೇಯವನ್ನು ನಾವೀ ಪದ್ಯದಲ್ಲಿ ಗುರುತಿಸಿದ್ದಾಯಿತು. ಜಗನ್ನಾಥದಾಸರ ಹರಿಕಥಾಮೃತಸಾರ ಈ ಅಧ್ಯಾತ್ಮ ಪ್ರಮೇಯವನ್ನು ವಿವರವಾಗಿ ತಿಳಿ ಹೇಳುತ್ತದೆ;

ಮೂಲರೂಪನು ಮನದೊಳಿಹ ಶ್ರವ
ಣಾಲಿಯೊಳಗಿಹ ಮತ್ಸ್ಯ - ಕೂರ್ಮನು
ಕೋಲ ರೂಪನು ತ್ವಕ್ ರಸನದೊಳಗಿಪ್ಪ ನರಸಿಂಹಾ |
ಬಾಲವಟು ವಾಮನನು ನಾಶಿಕ -
ನಾಳದೊಳು ವದನದಲಿ ಭಾರ್ಗವ
ವಾಲಿಭಂಜನ ಹಸ್ತದಲಿ ಪಾದದಲಿ ಶ್ರೀಕೃಷ್ಣಾ ||

ಜಿನವಿಮೋಹಕ ಬುದ್ಧ ಪಾಯುಗ
ದನುಜಮರ್ದನ ಕಲ್ಕಿ ಮೇಢ್ರದಿ
ಇನಿತು ದಶರೂಪಗಳ ದಶಕರಣಂಗಳಲಿ ತಿಳಿದು |
ಅನುಭವಿಪ ವಿಷಯಗಳ ಕೃಷ್ಣಾ -
ರ್ಪಣವೆನಲು ಕೈಕೊಂಬ ವೃಜಿನಾ -
ರ್ದನ ವರಜಗನ್ನಾಥ ವಿಠ್ಠಲ ವಿಶ್ವವ್ಯಾಪಕನು ||

(ಸಂಧಿ: 4. 34. - 5.)

ಮನಸ್ಸಿನಲ್ಲಿ ಮೂಲರೂಪಿ ನಾರಾಯಣ. ಶ್ರವಣದಲ್ಲಿ ಮತ್ಸ್ಯ. ಕಣ್ಣಾಲಿಯಲ್ಲಿ ಕೂರ್ಮ. ತ್ವಕ್ಕಿನಲ್ಲಿ ಕೋಲ (ವರಾಹ) ರೂಪನು. ರಸನೆಯಲ್ಲಿ ನರಸಿಂಹ. ನಾಸಾದಂಡದಲ್ಲಿ ವಾಮನ. ವದನದಲ್ಲಿ ಭಾರ್ಗವ ರಾಮ. ಹಸ್ತದಲ್ಲಿ ವಾಲಿಭಂಜನ ರಾಮ. ಪಾದದಲ್ಲಿ ಶ್ರೀಕೃಷ್ಣ, ಬುದ್ಧ ಪಾಯು (ಗುದದ್ವಾರ) ಗತ. ಕಲ್ಕಿ ಮೇಢ್ರ (ಲಿಂಗ–ಉಪಸ್ಥ)ಗತ.

ಇದು ಯಥಾಶ್ರುತವಾದ ಅರ್ಥ. ಕೆಲವರು ಈ ಪದ್ಯದಲ್ಲಿ ಬಂದ ಕ್ರಮವನ್ನು ಬದಲಿಸಿ ಶ್ರವಣದಲ್ಲಿ ಕೂರ್ಮ. ಕಣ್ಣಾಲಿಯಲ್ಲಿ ಮತ್ಸ್ಯ ಎಂದು ಅನ್ವಯಿಸುತ್ತಾರೆ. ಮತ್ಸ್ಯ – ಕೂರ್ಮ ಎರಡು ರೂಪಗಳೂ ಶ್ರವಣದಲ್ಲಿವೆ ಎಂದು ಇನ್ನು ಕೆಲವರು. ಹಾಗಿದ್ದರೆ ಕಣ್ಣಿನಲ್ಲಿ ಯಾವ ರೂಪ ? ಇವೇ ಮತ್ಸ್ಯ – ಕೂರ್ಮಗಳೇ ಕಣ್ಣಿನಲ್ಲೂ ಇವೆಯೆಂದು ಕೂಡಿಸಿಕೊಳ್ಳಬೇಕಾಗುತ್ತದೆ. ಒಂದು ಬದಿಯ ಕಣ್ಣು – ಕಿವಿಗಳಲ್ಲಿ ಮತ್ಸ್ಯ, ಇನ್ನೊಂದು ಬದಿಯ ಕಣ್ಣು – ಕಿವಿಗಳಲ್ಲಿ ಕೂರ್ಮ ಎಂದು ಅವರ ಭಾವವಿರಬೇಕು. ಇವೆಲ್ಲ ಜಗ್ಗಿ ಎಳೆದ ಅರ್ಥಗಳು. ಯಥಾಶ್ರುತವಾದ ಅರ್ಥವೇ ಹೆಚ್ಚು ಸೂಕ್ತ. ಅದು ಹರಿಕಥಾಮೃತಸಾರದ ಪಾಠಕ್ರಮಕ್ಕೆ ಮಾತ್ರವಲ್ಲ 'ಶ್ರೋತ್ರಂ ಚಕ್ಷುಃ' ಎಂಬ ಗೀತೆಯ ಅನುಪೂರ್ವಿಗೂ ಅನುಗುಣವಾಗಿದೆ.

ಜಗನ್ನಾಥದಾಸರ ಈ ಷಟ್‌ಪದಿಯ ಹಿನ್ನಲೆಯಲ್ಲಿ ಈ ದಶಾವತಾರದ ಹಾಡಿಗೆ ಒಂದು ಆಧ್ಯಾತ್ಮಿಕ ಮುಖವಿರುವುದು ಸ್ಪಷ್ಟವಾಗುತ್ತದೆ. ಅದನ್ನು ಗುರುತಿಸಿ ಈ ಹಾಡನ್ನು ಮನನಮಾಡಿದಾಗ ಇದೂ ಒಂದು ಮಂತ್ರತುಲ್ಯವಾದ ಉಪನಿಷತ್ತಾಗಬಲ್ಲದು.

ಇದು ದಾಸರು ಕಂಡ ದಶೋಪನಿಷತ್ತು : ದಶಾವತಾರಗಳ ಉಪನಿಷತ್ತು.

ಒಳಮನೆಗೆ ಬಾರಯ್ಯ

ಬಾರಯ್ಯ ವೆಂಕಟರಮಣ || ಪಲ್ಲವಿ ||

ಬಾರಯ್ಯ ವೆಂಕಟರಮಣ ನೀನೆನಗೆ
ಧಾರುಣಿಯೊಳು ನಿನ್ನ ಮೂರುತಿ ತೋರುತ || ಅನುಪಲ್ಲವಿ ||

ಮನವೆಂಬ ಮಂಟಪ ನಿನಗೆ ಹಾಕಿ ಎನ್ನ
ತನುವನೊಪ್ಪಿಸಿ ಕೈಯ ಮುಗಿವೆನಯ್ಯ ।
ವನಜಜ-ಭವ-ಸುರ ಮುನಿಗಳು ಭಜಿಸುವ
ಘನಮಹಿಮನೆ ಪಾದಕೆರಗಲೆನ್ನ ಶಿರ || 1 ||

ಲಿಂಗದೇಹವೆಂಬ ಪವಳಿ ಶೃಂಗರಿಸಿ
ಅಂಗವ ನಿನಗೆ ಕಾಣಿಕೆಯ ನೀಡುವೆ ।
ಮಂಗಳಮೂರುತಿ ಅಂಗನೆ ಸಹಿತ ಭು-
ಜಂಗಶಯನ ಎನ್ನ ಕಂಗಳಿಗುತ್ಸವವೀಯೋ || 2 ||

ಕಡಗ ಕಿರುಗೆಜ್ಜೆ ಪೆಂಡೆಗಳಿಂದಲೊಪ್ಪುವ
ಉಡುಗೆ ಪೀತಾಂಬರ ತರಳಕೌಸ್ತುಭ ।
ಪಿಡಿದ ಶಂಖ ಚಕ್ರ ಕರ್ಣಕುಂಡಲದಿಂದ
ಕಡಲಶಯನ ಎನ್ನ ಹೃದಯದೊಳಗೆ ನಿಲ್ಲೋ || 3 ||

ಒಡೆಯ ನೀನೆನಗೆ ಅನಾದಿಕಾಲದಿಂದ
ಬಡವನು ನಾನಿನ್ನ ದಾಸನಯ್ಯ ।
ಕಡುಕರುಣದಿಂದ ದಾಸತ್ವ ನೀಡು ಗ-
ರುಡಗಮನನೆ ವೆಂಕಟೇಶ ಎನ್ನ ಮನಕೆ || 4 ||

ಬರಿಯ ಮನೆಯಲ್ಲವೋ ಪರಿವಾರ ಉಂಟು
ಪರಮಪುರುಷ ನಿನ್ನ ರೂಪಗಳುಂಟು ।
ಸಿರಿದೇವಿ ಸಹಿತದಿ ಪುರಂದರವಿಠಲನೆ
ಕರುಣದಿಂದಲಿ ಮನ್ಮಂದಿರದೊಳಗೆ || 5 ||

ಭಗವಂತನ ಆರಾಧನೆ ಎರಡು ಬಗೆ: ಬಾಹ್ಯಪೂಜೆ ಮತ್ತು ಅಂತರಿಕ ಪೂಜೆ. ನಾನಾಕ್ಷೇತ್ರಗಳಲ್ಲಿರುವ ವಿಗ್ರಹಗಳಲ್ಲಿ, ಸಾಲಗ್ರಾಮಗಳಲ್ಲಿ ಭಗವಂತನನ್ನು ಆರಾಧಿಸುವುದು ಬಾಹ್ಯಪೂಜೆ; ಮಾನಸರೂಪದ ಆರಾಧನೆ ಮಾನಸಿಕ ಪೂಜೆ.

ಎರಡೂ ಬಗೆಯ ಪೂಜೆಯನ್ನು ಮಾಡಬಯಸಿದ ದಾಸರು ಒಳಗೂ ಹೊರಗೂ ಭಗವಂತನ ದರ್ಶನವನ್ನು ಬಯಸಿ ಪ್ರಾರ್ಥಿಸುತ್ತಾರೆ. ತಿರುಮಲೆಯ ವೆಂಕಟರಮಣನ ಮುಂದೆ ಹಾಡಿದ ಹಾಡಿದು. ಅದರಿಂದ ತನ್ನ ಮನವಿಯನ್ನು ಅವನಿಗೇ ಸಲ್ಲಿಸುತ್ತಾರೆ:

" ಬಾರಯ್ಯ ವೆಂಕಟರಮಣ "

ನನ್ನ ಹೃದಯದೊಳಗೆ ಬಾರಯ್ಯ – ನನ್ನ ಮಾನಸ ಪೂಜೆಯನ್ನು ಕೊಳ್ಳಲು. ಧ್ಯಾನ ಕಾಲದಲ್ಲಿ ನಿನ್ನ ಧ್ಯೇಯಮೂರ್ತಿ ನನ್ನ ಮನಸ್ಸಿನ ಕಣ್ಣ ಮುಂದೆ ಬಂದು ನಿಲ್ಲುವಂತೆ ಮಾಡಯ್ಯ. ಅಷ್ಟೇ ಅಲ್ಲ:—

" ಬಾರಯ್ಯ ವೆಂಕಟರಮಣ ನೀನೆನಗೆ
ಧಾರುಣಿಯೊಳು ನಿನ್ನ ಮೂರುತಿ ತೋರುತ "

ಸಮಸ್ತ ಚರಾಚರಗಳ ಧಾರಿಣಿಯಾದ ಧರಣಿಯೇ ಧಾರುಣಿ. ಭೂಮಿಯಲ್ಲಿ ನಾನಾ ಬಗೆಯ ಪ್ರತೀಕಗಳ ಮೂಲಕ ನಾನು ನಿನ್ನನ್ನು ಅರ್ಚಿಸಬಹುದು. ಆ ಅರ್ಚಾಮೂರ್ತಿ ಕಲ್ಲಿನದ್ದೋ ಪಂಚಲೋಹದ್ದೋ ಇರಬಹುದು. ಆದರೆ ಅದು ನನ್ನ ಪಾಲಿಗೆ ಅಷ್ಟೇ ಆಗದಿರಲಿ. ಆ ಕಲ್ಲಿನಲ್ಲಿ, ಆ ಪಂಚಲೋಹದಲ್ಲಿ, ನಿನ್ನ ದಿವ್ಯಮೂರುತಿಯನ್ನು ತೋರುತ ಬಾರಯ್ಯ. ನನ್ನ ಪ್ರಾರ್ಥನೆಗೆ ಕಿವಿಗೊಡದೆ ಕಲ್ಲಾಗಬೇಡ. ಅದರೊಳಗಿರುವ ನಿನ್ನ ಚಿನ್ಮಯ ಮೂರ್ತಿಯನ್ನು ತೋರು. ತೋರುತ ನನ್ನ ಹೃದಯ ಮಂಟಪಕೆ ಬಾರಯ್ಯ. ಬಂದು ಮನದಲ್ಲೂ ನಿನ್ನ ಮೂರ್ತಿಯನ್ನು ತೋರಯ್ಯ.

ಜನರು ದೇವಾಲಯಗಳಿಗೆ ಹೋಗುತ್ತಾರೆ. ಗರ್ಭಗುಡಿಯಲ್ಲಿ ಪೂಜೆಗಿಟ್ಟ ಬಿಂಬವನ್ನು ಕಂಡು ದೂರದಲ್ಲೆ ನಿಂತು ಭಯ–ಭಕ್ತಿಯಿಂದ ಕೈಮುಗಿಯುತ್ತಾರೆ. ತಮ್ಮ ಸ್ವಂತದ ಬಯಕೆಗಳೇನಾದರೂ ಇದ್ದರೆ ಬೇಡಿಕೊಳ್ಳುತ್ತಾರೆ. ಮತ್ತೆ ಎಲ್ಲವನ್ನೂ ಮರೆತು ಮನೆಗೆ ಮರಳುತ್ತಾರೆ. ಯಾರೂ ದೇವರ ಮುಂದೆ ನಿಂತು 'ಬಾರಯ್ಯ–ನನ್ನೆಡೆಗೆ' ಎಂದು ಕರೆಯುವುದಿಲ್ಲ. ಅಂಥವರಿಗೆ ದೇವರು ಎಂದರೆ ನಾವು ಕೇಳಿದ ವರವನ್ನು ಕೊಡುತ್ತ ದೂರದ ದೇವಾಲಯದಲ್ಲೆ ಇರಬೇಕಾದ ವಸ್ತು. ಆದರೆ ದಾಸರು ಗುಡಿಗೆ ಬಂದು ದೇವರನ್ನೆ ಆಹ್ವಾನಿಸುತ್ತಾರೆ; ಬಾರಯ್ಯ ವೆಂಕಟರಮಣ. ದಾಸರಂಥವರು ಕರೆದರೆಂದರೆ ದೇವರೂ ಅವರ ಬೆನ್ನಹಿಂದೆ ಹೊರಟುಬಿಡುತ್ತಾನೆ.

ವ್ಯಾಸತೀರ್ಥರು ಹಾಡಿ ಕರೆದಾಗ ಅವರ ಆರಾಧ್ಯ ಮೂರ್ತಿ ಗೋಪಾಲಕೃಷ್ಣ ನಾಟ್ಯವಾಡುತ್ತ ಬಂದನಂತೆ. ವಾದಿರಾಜರು ಹಾಡಿ ಕರೆದಾಗ ಹಯಗ್ರೀವ ಕುದುರೆಯಾಗಿ ಕುಣಿದು ಬಂದನಂತೆ. ವೈಕುಂಠದಾಸರು ಕೂಗಿ ಕರೆದಾಗ ಬೇಲೂರು ಚೆನ್ನಕೇಶವ ಮಗುವಾಗಿ ನಲಿಯುತ್ತ ಬಂದನಂತೆ. ಉಳಿದವರ ಮಾತೇಕೆ? ಪುರಂದರ ದಾಸರೇ ಉಡುಪಿಯಲ್ಲಿ ತಾವು ಕೃಷ್ಣನನ್ನು ಕಂಡ ಅನುಭವವನ್ನು "ಧಿಂ ಧಿಂ ಧಿಮಿಕೆಂದು ಕುಣಿವ ಕೃಷ್ಣನ ಕಂಡೆ" ಎಂದು ಹಾಡಿದ್ದಾರೆ. "ಹರಿ ಕುಣಿದ ನಮ್ಮ ಹರಿ ಕುಣಿದ" ಎಂದು ಮೈಯುಬ್ಬಿ ಹಾಡಿದ್ದಾರೆ.

ಸಾವಿರಾರು ಮಂದಿ ಯಾತ್ರಿಕರಾಗಿ ಉಡುಪಿಗೆ ಬರುತ್ತಾರೆ; ಇತರ ಕ್ಷೇತ್ರಗಳಿಗೂ ಹೋಗುತ್ತಾರೆ. ಯಾರಿಗಾದರೂ 'ಧಿಂ ಧಿಂ ಧಿಮಿಕೆಂದು ಕುಣಿವ ಕೃಷ್ಣ' ಕಂಡದ್ದುಂಟೆ ? ಅವರೆಲ್ಲ ಬಾರಯ್ಯ ಎಂದು ಕೃಷ್ಣನನ್ನು ಕರೆದದ್ದೂ ಇಲ್ಲ. ಕೃಷ್ಣ ಅವರ ಮುಂದೆ ಕುಣಿದು ಬಂದದ್ದೂ ಇಲ್ಲ. ದಾಸರಂತೆ ಎಲ್ಲರೂ ತಿರುಪತಿ ಯಾತ್ರೆ ಮಾಡುತ್ತಾರೆ. ಉಳಿದವರು ಬೆಟ್ಟದಲ್ಲೇ ಶ್ರೀನಿವಾಸನನ್ನು ಬಿಟ್ಟು ಬಂದರೆ ದಾಸರು ಅವನನ್ನೂ ತನ್ನ ಹೃದಯದಲ್ಲಿ ಕೂಡಿಸಿ ಕರೆದುಕೊಂಡು ಬರುತ್ತಾರೆ. ಹೊರನೋಟಕ್ಕೆ ಎರಡೂ ಯಾತ್ರೆ. ಆದರೆ ದಾಸರದು ಚೈತ್ರಯಾತ್ರೆ. ನಮ್ಮದು ಜನಮರುಳು ಜಾತ್ರೆ.

ನಮಗೆ ಕಾಣುವುದು ಚಿನ್ನ–ಬೆಳ್ಳಿಯ ಮೂರ್ತಿ. ಅವರಿಗೆ ಕಾಣುವುದು ಚಿನ್ಮಯ ಮೂರ್ತಿ. ಎಲ್ಲ ಪ್ರತೀಕಗಳಲ್ಲೂ ಭಗವಂತನ ಇಂಥ ಲೀಲಾಮೂರ್ತಿಯನ್ನು ಕಾಣುವ ಬಯಕೆಯನ್ನೆ ದಾಸರು ಇಲ್ಲಿ ವ್ಯಕ್ತಪಡಿಸಿದ್ದಾರೆ; ಧಾರುಣಿಯೊಳು ನಿನ್ನ ಮೂರುತಿಯನು ನೀನೆನಗೆ ತೋರುತ ಬಾರಯ್ಯ.

ಧಾರುಣಿಯಲ್ಲಿ ಸಮಸ್ತ ಚರಾಚರವೂ ಭಗವಂತನ ಪ್ರತೀಕವೆ:

ವಿದ್ಯಾ ವಿನಯಸಂಪನ್ನೇ
ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ
ಪಂಡಿತಾಃ ಸಮದರ್ಶಿನಃ ॥ (ಭ. ಗೀ. 5–18)

(ವಿದ್ವಾಂಸನೂ ವಿನೀತನೂ ಆದ ವಿಪ್ರನಲ್ಲಿ, ಹಸುವಿನಲ್ಲಿ, ಆನೆಯಲ್ಲಿ, ನಾಯಿಯಲ್ಲಿ ಮತ್ತು ನಾಯಿಮಾಂಸ ತಿನ್ನುವ ಅನಾಗರಿಕನಲ್ಲಿ – ಹೀಗೆ ಎಲ್ಲೆಡೆಯು ಭಗವಂತ ತುಂಬಿದ್ದಾನೆ. ಈ ಸ್ಥಾನಗಳ ಮೇಲು – ಕೀಳು ಭಗವಂತನಿಗೆ ತಟ್ಟದು. ಅವನು ಎಲ್ಲೆಡೆಯು ಸಮಾನರೂಪ. ಅವನ ರೂಪಗಳಲ್ಲಿ ತಾರತಮ್ಯವಿಲ್ಲ.)

ನರಿ–ನಾಯಿ–ಹಂದಿ–ಹಲ್ಲಿ–ಕ್ರಿಮಿ–ಕೀಟಗಳಲ್ಲೂ ಭಗವಂತ ತುಂಬಿದ್ದಾನೆ. ಮರ–ಗಿಡ–ಬಳ್ಳಿ–ಕಲ್ಲು–ಮುಳ್ಳುಗಳಲ್ಲೂ ತುಂಬಿದ್ದಾನೆ. ಕಾಣುವ ಕಣ್ಣಿದ್ದವರಿಗೆ ಎಲ್ಲವೂ ಭಗವಂತನ ಪ್ರತೀಕ. ಇದನ್ನೇ ಭಗವಂತನ ಸಾಧಾರಣರೂಪ ಎನ್ನುತ್ತಾರೆ.

ಎಲ್ಲ ಶಿಲೆಗಳಲ್ಲು ಭಗವಂತ ಸಾಧಾರಣನಾದರೂ ಸಾಲಗ್ರಾಮ ಶಿಲೆಯಲ್ಲಿ ವಿಶೇಷ ವಿಭೂತಿ. ಎಲ್ಲ ವೃಕ್ಷಗಳಲ್ಲಿ ಸಾಧಾರಣನಾದರೆ ಅಶ್ವತ್ಥದಲ್ಲಿ ವಿಶೇಷ. ಎಲ್ಲ ಜೀವಿಗಳಲ್ಲಿ ಸಾಧಾರಣನಾದರೆ ಮನುಷ್ಯರಲ್ಲಿ ವಿಶೇಷ. ಎಲ್ಲ ಜಡಗಳಲ್ಲಿ ಸಾಧಾರಣನಾದರೂ ಪೂಜಾಪ್ರತೀಕಗಳಲ್ಲಿ ವಿಶೇಷ ಸನ್ನಿಧಾನ.

ಹೀಗೆ ವಿಶೇಷಪ್ರತೀಕಗಳು ಮುಖ್ಯವಾಗಿ ಎರಡು ಬಗೆ; ಚರಪ್ರತೀಕ ಮತ್ತು ಅಚರ ಪ್ರತೀಕ. ಚೇತನವೆ ಚರಪ್ರತೀಕವಾದರೆ ಜಡ ಅಚರಪ್ರತೀಕ.

ಚರಪ್ರತೀಕವೂ ಎರಡು ಬಗೆ: ಹೆಣ್ಣು ಮತ್ತು ಗಂಡು. ನಾವು ನಮ್ಮೆದುರು ನಡೆದಾಡುವ ನೂರಾರು ಹೆಣ್ಣು–ಗಂಡುಗಳನ್ನು ನೋಡುತ್ತೇವೆ. ಅಷ್ಟೆ ಕಂಡರೆ ಸಾಲದು. ಹೆಣ್ಣಿನೊಳಗೆ ಹೆಣ್ಣಾಗಿ, ಗಂಡಿನೊಳಗೆ ಗಂಡಾಗಿ ತುಂಬಿರುವ ಭಗವಂತನನ್ನು ಕಾಣಬೇಕು. ಇವರೆಲ್ಲ ಭಗವಂತನ ನಡೆದಾಡುವ ಪ್ರತೀಕಗಳು ಎನ್ನುವ ಅರಿವು ಬೇಕು.

ಪುರುಷಶರೀರದಲ್ಲಿ ವಾಸುದೇವ ಮತ್ತು ಅನಿರುದ್ಧ ರೂಪಗಳು; ಸ್ತ್ರೀ ಶರೀರದಲ್ಲಿ ಸಂಕರ್ಷಣ ಮತ್ತು ಪ್ರದ್ಯುಮ್ನ ರೂಪಗಳು ನೆಲಸಿವೆ ಎಂದು ಬಲ್ಲವರು ಹೇಳುತ್ತಾರೆ. ಸ್ತ್ರೀ ಪುರುಷರೆಂಬ ಚರಪ್ರತೀಕಗಳನ್ನು ಕಂಡಾಗ ಈ ಚತುರ್ಮೂರ್ತಿಯ ರೂಪ ಕಣ್ಣ ಮುಂದೆ ಕಾಣಬೇಕು. ಆಗ ಹೆಣ್ಣು ಹೆಣ್ಣಾಗಿ, ಗಂಡು ಗಂಡಾಗಿ ಕಾಣುವುದಿಲ್ಲ. ಎಲ್ಲವೂ ಭಗವನ್ಮಯವಾಗಿ ಬಿಡುತ್ತದೆ. ಈ ಅನುಭೂತಿಯ ಬಯಕೆಯಿಂದಲೇ ದಾಸರು ಹೇಳಿದರು: ಧಾರುಣಿಯೊಳು ನಿನ್ನ ಮೂರುತಿ ತೋರುತ ಬಾರಯ್ಯ.

ಇದು ಚರಪ್ರತೀಕದ ಮಾತಾಯಿತು. ಜಡವಾದ ಅಚರಪ್ರತೀಕ ಕೂಡ ಮುಖ್ಯವಾಗಿ ಎರಡು ಬಗೆ. ಆಹಿತಪ್ರತೀಕ ಮತ್ತು ಸಹಜಪ್ರತೀಕ. ಮನೆ–ಮನೆಗಳಲ್ಲಿ, ಕ್ಷೇತ್ರ ದೇವಾಲಯಗಳಲ್ಲಿ ಆವಾಹಿತವಾಗಿ ಪೂಜೆಗೊಳ್ಳುವ ಪ್ರತೀಕ ಆಹಿತಪ್ರತೀಕ. ಸಾಲಗ್ರಾಮದಂತೆ ಸಹಜವಾಗಿ ಸದಾ ಭಗವಂತನ ಸನ್ನಿಧಾನವಿರುವ ಪ್ರತೀಕ ಸಹಜಪ್ರತೀಕ.

ಇಂಥ ಆಹಿತ ಪ್ರತಿಮೆಗಳು ಪೂಜೆಗೆ ಅಣಿಯಾಗಿ ಆವಾಹನೆ ಮಾಡಿದಾಗ ಆ ಪ್ರತೀಕಗಳಲ್ಲಿ ಆವಾಹಿತನಾಗಿ ಬಾ. ಅಲ್ಲಿ ಸನ್ನಿಧಾನಗೊಂಡ ನಿನ್ನ ದಿವ್ಯ ಮೂರುತಿಯನ್ನು ತೋರುತ ಬಾ ಎಂದು ದಾಸರು ಭಗವಂತನನ್ನು ಪ್ರಾರ್ಥಿಸುತ್ತಾರೆ: ಧಾರುಣಿಯೊಳು ನಿನ್ನ ಮೂರುತಿ ತೋರುತ ಬಾರಯ್ಯ.

ಹಾಗೆಯೆ ಸಹಜಪ್ರತೀಕಗಳಲ್ಲಿ ಸದಾ ಸನ್ನಿಹಿತವಾಗಿರುವ ನಿನ್ನ ಆ ವಿಶೇಷ ಮೂರುತಿಯನು ತೋರುತ ಬಾ. ಈ ರೂಪವನ್ನು ಅಖಂಡರೂಪ ಎಂದು ಕರೆಯುತ್ತಾರೆ. ಇಂಥ ರೂಪದರ್ಶನದ ಬಗೆಗೆ ವಿಜಯದಾಸರ ಒಂದು ಮಾತು ವಿಶೇಷ ಬೆಳಕನ್ನು ಚೆಲ್ಲುತ್ತದೆ:

ನಿರುತ ಅಖಂಡರೂಪ ಪೇಳುವೆ ಕೇಳು ನಿತ್ಯ
ಶಿರಿ ಶಾಲಿಗ್ರಾಮದಲ್ಲಿ ಪ್ರಕಟಿಸಿ ಪೂಜಿಪಾಗೆ
ಪೊರಿವಾನು ಪ್ರತಿದಿನ ನಸುನಗುತ

ಸಂಪುಟ ತೆರೆದಾಗ ಬರಿಯ ಕರಿಶಿಲೆಯ ಸಾಲಗ್ರಾಮ ಕಂಡರೆ ಸಾಲದು. ನಸು ನಗುತ ಬರುವ ಅವನ ಅಖಂಡರೂಪ ಕಾಣಬೇಕು. ಇಂಥ ಮೂರ್ತಿಯ ದರ್ಶನವನ್ನು ಬಯಸಿ ದಾಸರು ಹಾಡಿದರು: ಧಾರುಣಿಯೊಳು ನಿನ್ನ ಅಖಂಡ ಮೂರುತಿ ತೋರುತ ಬಾರಯ್ಯ.

ಹೀಗೆ ಸ್ತ್ರೀ–ಪುರುಷ, ಆಹಿತ–ಸಹಜ ಎಲ್ಲವೂ ಬಾಹ್ಯ ದರ್ಶನವಾಯಿತು. ಕೊನೆಗೆ ನನ್ನ ಮಾನಸಧ್ಯಾನದಲ್ಲಿ 'ನಿನ್ನ ಮನೋಮಯ ಮೂರುತಿ ತೋರುತ ಬಾರಯ್ಯ'.

ಭಗವಂತನೆ ನಮಗೆ ನೀಡಿದ ಚರ ಮತ್ತು ಸಹಜಪ್ರತೀಕ, ನಾವು ರಚಿಸಿ ಪೂಜಿಸಬಹುದಾದ ಆಹಿತ ಪ್ರತೀಕಗಳನ್ನು ಶಾಸ್ತ್ರಕಾರರು ಹಲವು ಬಗೆಯಲ್ಲಿ ಪರಿಗಣಿಸಿದ್ದಾರೆ;

ಅರ್ಚಾದೌ ಹೃದಯೇ ವಾಪಿ
ಯಥಾಲಬ್ಧೋಪಚಾರಕೈಃ ।
ದ್ರವ್ಯಕ್ಷಿತ್ಯಾತ್ಮಲಿಂಗಾನಿ ... (ಭಾಗ. 11.3.50)

[ಪೂಜೆ ಮೂಲತಃ ಎರಡು ವಿಧ: ಪ್ರತಿಮೆ ಮುಂತಾದವುಗಳಲ್ಲಿ ಬಾಹ್ಯ ಪೂಜೆ; ಹೃದಯದಲ್ಲಿ ಆಂತರಿಕಪೂಜೆ. ಯಥಾಶಕ್ತಿ ಸಂಪಾದಿಸಿದ ಉಪಚಾರ ದ್ರವ್ಯಗಳಿಂದ ಮಾಡಬಹುದಾದ ಈ ಪೂಜೆಯನ್ನು ಹೀಗೆ ಮೂರುವಿಧವಾಗಿಯೂ ವಿಂಗಡಿಸಬಹುದು. ದ್ರವ್ಯಪ್ರತೀಕದಲ್ಲಿ ಪೂಜೆ; ಭೂಪ್ರತೀಕದಲ್ಲಿ ಪೂಜೆ ಮತ್ತು ಮಾನಸ ಪ್ರತೀಕದಲ್ಲಿ ಪೂಜೆ.]

ಈ ಮೂರು ಬಗೆಯ ಪೂಜೆಯನ್ನು 'ಕರ್ಮತಂತ್ರ' ಸ್ಫುಟವಾಗಿ ವಿವರಿಸುತ್ತದೆ:

ದ್ರವ್ಯಲಿಂಗಂ ಶಿಲಾದ್ಯಂ ಸ್ಯಾತ್
ಆತ್ಮಲಿಂಗಂ ಮನೋಮಯಮ್ ।
ಅಥವಾ ಸ್ಥಂಡಿಲಂ ಚೈವ
ವಿಷ್ಣೋರ್ಲಿಂಗಂ ಪ್ರಕೀರ್ತಿತಮ್ ॥

[ಶಿಲೆ, ಲೋಹ ಮುಂತಾದವುಗಳ ಪ್ರತಿಮೆ ದ್ರವ್ಯಪ್ರತೀಕ; ನೆಲದ ಮೇಲೆ ಬರೆದ ಮಂಡಲ, ಸ್ಥಂಡಿಲ ಮುಂತಾದವು ಭೂಪ್ರತೀಕ. ಮನೋಮಯ ರೂಪವೆ ಆತ್ಮಪ್ರತೀಕ ಅಥವಾ ಮಾನಸಪ್ರತೀಕ.]

ಇನ್ನೊಂದೆಡೆ ಆರಾಧನೆಯ ಪ್ರತೀಕಗಳು ಎಂಟುಬಗೆ ಎಂದು ಪರಿಗಣಿಸಿದ್ದುಂಟು:

ಶೈಲೀ ದಾರುಮಯೀ ಲೌಹೀ
ಲೇಪ್ಯಾ್ಯಲೇಖ್ಯಾ ಚ ಸೈಕತೀ ।
ಮನೋಮಯೀ ಮಣಿಮಯೀ
ಪ್ರತಿಮಾಽಷ್ಟವಿಧಾ ಸ್ಮೃತಾ ॥ (ಭಾಗ. 11.27.12)

[ಶಿಲಾವಿಗ್ರಹ, ಮರದ ವಿಗ್ರಹ, ಪಂಚಲೋಹದ ವಿಗ್ರಹ, ಬಣ್ಣದಲ್ಲಿ ಬಿಡಿಸಿದ ಚಿತ್ರ, ಗೆರೆಯೆಳೆದು ಬಿಡಿಸಿದ ಮಂಡಲ ಮತ್ತು ರಂಗವಲ್ಲಿ, ಮಣ್ಣಿನ ವಿಗ್ರಹ ನವರತ್ನಗಳಲ್ಲಿ ಕಡೆದ ವಿಗ್ರಹ ಇವು ಏಳು ಬಾಹ್ಯಪ್ರತೀಕಗಳು. ಎಂಟನೆಯದು ಮನೋಮಯವಾದ ಮಾನಸಪ್ರತೀಕ. ಹೀಗೆ ಪ್ರತಿಮೆಗಳು ಒಟ್ಟು ಎಂಟು ಬಗೆ.]

ಇನ್ನೂ ವ್ಯಾಪಕವಾದ ಪರಿಗಣನೆಯಲ್ಲಿ ಈ ಪ್ರತೀಕಗಳ ಸಂಖ್ಯೆ ಹನ್ನೊಂದಕ್ಕೇರುತ್ತದೆ:

ಸೂರ್ಯೋಽಗ್ನಿರ್ಬ್ರಾಹ್ಮಣೋ ಗಾವಃ
ವೈಷ್ಣವಃ ಖಂ ಮರುಜ್ಜಲಮ್ ।
ಭೂರಾತ್ಮಾ ಸರ್ವಭೂತಾನಿ
ಭದ್ರಪೂಜಾಪದಾನಿ ಮೇ ॥ (ಭಾಗ. 11.11.42)

[ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಸೂರ್ಯ, ಬ್ರಾಹ್ಮಣ, ವೈಷ್ಣವ, ಗೋವುಗಳು, ಸರ್ವಭೂತಗಳು ಮತ್ತು ಆತ್ಮ – ಇವು ಹನ್ನೊಂದು ಭಗವಂತನ ಆರಾಧನೆಯ ಅಧಿಷ್ಠಾನಗಳು.]

ಭೂಮಿಯಲ್ಲಿ ಬಿಡಿಸಿದ ಚಕ್ರಾಬ್ಜಾದಿಮಂಡಲಗಳೇ ಭೂಮಿ ಪ್ರತೀಕ. ಪವಿತ್ರ ತೀರ್ಥಗಳೇ ಜಲಪ್ರತೀಕ. ಅರ್ಘ್ಯ–ತರ್ಪಣಾದಿಗಳ ಮೂಲಕ ಈ ಪ್ರತೀಕದ ಆರಾಧನೆ: "ಕೆರೆಯ ನೀರನು ಕೆರೆಗೆ ಚೆಲ್ಲಿ". ಹೋಮದಲ್ಲಿ ಆಹುತಿಗಳ ಮೂಲಕ ಅಗ್ನಿಪ್ರತೀಕದ ಆರಾಧನೆ; ನಮ್ಮ ಉಸಿರಾಗಿ ನಿಂತಿರುವ ಮುಖ್ಯಪ್ರಾಣನೇ ವಾಯುಪ್ರತೀಕ, ಹೃದಯಾಕಾಶವೆ ಆಕಾಶಪ್ರತೀಕ, ಮಾನಸ ಭಾವಪುಷ್ಪಗಳಿಂದ ಈ ಪ್ರತೀಕದ ಆರಾಧನೆ, ಗಾಯತ್ರೀಪ್ರತಿಪಾದ್ಯನಾದ ನಾರಾಯಣನ ಧ್ಯಾನವೆ ಸೂರ್ಯ ಪ್ರತೀಕದ ಆರಾಧನೆ. "ಜ್ಞಾನೀ ತ್ವಾತ್ಮೈವ ಮೇ ಮತಮ್" ಎಂಬಂತೆ ಭಗವಂತನ ವಿಶೇಷ ಸನ್ನಿಧಾನಕ್ಕೆ ಪಾತ್ರನಾದ ಬ್ರಹ್ಮಜ್ಞಾನಿಯನ್ನು ಆದರದಿಂದ ಗೌರವಿಸುವುದೆ ಬ್ರಾಹ್ಮಣಪ್ರತೀಕದ ಆರಾಧನೆ. ಯಾವ ಜಾತಿಯವನೇ ಇರಲಿ, ವಿಷ್ಣುಭಕ್ತನಾದವನನ್ನು ಬಂಧುವಿನಂತೆ ಆತ್ಮೀಯತೆಯಿಂದ ಕಾಣುವುದು ವೈಷ್ಣವಪ್ರತೀ

ಕದ ಆರಾಧನೆ. ಸರ್ವದೇವತಾಮಯಿಯಾದ ಗೋವಿನಲ್ಲಿ ಗೋಪಾಲಕೃಷ್ಣನನ್ನು ಕಂಡು ಪ್ರೀತಿಯಿಂದ ಸೇವೆ ಮಾಡುವುದು ಗೋಪ್ರತೀಕದ ಆರಾಧನೆ. ಸಮಸ್ತ ಚರಾಚರಗಳಲ್ಲಿ ಭಗವಂತ ತುಂಬಿದ್ದರೂ ಆ ಅಧಿಷ್ಠಾನದ ಗುಣದೋಷಗಳಿಂದ ನಿರ್ಲಿಪ್ತನಾಗಿ ಎಲ್ಲೆಡೆಯೂ ಗುಣಪೂರ್ಣನಾಗಿದ್ದಾನೆ ಎಂಬ ಸಮತ್ವೋಪಾಸನೆಯು ಸರ್ವಭೂತ ಪ್ರತೀಕದ ಆರಾಧನೆ; "ಸಮತ್ವಮಾರಾಧನಮಚ್ಯುತಸ್ಯ". ತನ್ನ ದೇಹದೊಳಗೆ, ತನ್ನ ಅಂತರಂಗದಲ್ಲಿ ತುಂಬಿರುವ ಭಗವಂತನನ್ನು ಮಾನಸ ಧ್ಯಾನದಲ್ಲಿ ಸಾಕ್ಷಾತ್ಕರಿಸಿಕೊಳ್ಳುವುದೆ ಆತ್ಮ ಪ್ರತೀಕದ ಆರಾಧನೆ.

ಹೀಗೆ ಧಾರುಣಿಯಲ್ಲಿ ಅನಂತ ಪ್ರತೀಕಗಳಲ್ಲಿ ಅನಂತರೂಪಗಳಿಂದ ಭಗವಂತ ತುಂಬಿದ್ದಾನೆ. ಈ ಎಲ್ಲ ಆರಾಧನೆಯ ಪದ್ಧತಿಯುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ದಾಸರು ಹಾಡಿದರು: ಧಾರುಣಿಯೊಳು ಅನಂತ ಪ್ರತೀಕಗಳಲ್ಲಿ ತುಂಬಿರುವ ನಿನ್ನ ಮೂರುತಿ ತೋರುತ, ನನ್ನೊಳಗೂ ತುಂಬಿ ನಿನ್ನ ಬಿಂಬ ಮೂರುತಿ ತೋರುತ ನನ್ನೆಡೆಗೆ ಬಾರಯ್ಯ.

ಮುಂದೆ ಮಾನಸಪೂಜೆಯ ವಿಧಾನವನ್ನೆ ಇಡಿಯ ಪದ್ಯ ವಿವರಿಸುತ್ತದೆ. ಭಗವಂತನನ್ನು ಬಾರಯ್ಯ ಎಂದು ಕರೆದ ದಾಸರು ಆವನನ್ನು ಕೂಡಿಸಲು ಮಂಟಪದ ಸಿದ್ಧತೆಯನ್ನು ಮೊದಲ ಸೊಲ್ಲಿನಲ್ಲಿ ಹೇಳುತ್ತಾರೆ:

ಮನವೆಂಬ ಮಂಟಪ ನಿನಗೆ ಹಾಕಿ ಎನ್ನ
ತನುವನೊಪ್ಪಿಸಿ ಕಯ್ಯ ಮುಗಿನೆನಯ್ಯ ।
ವನಜಜ-ಭವ-ಸುರಮುನಿಗಳು ಭಜಿಸುವ
ಘನಮಹಿಮನೆ ಪಾದಕೆರಗಲೆನ್ನ ಶಿರ ॥

ಚಿತ್ತವೆಂಬ ಮನದ ಪ್ರಭೇದ ಇಲ್ಲಿ 'ಮನ' ಎಂಬ ಪದದಿಂದ ಗೃಹೀತವಾಗಿದೆ; ಹೃದಯಕೋಶ ಕೂಡ. ಮನವೆಂಬ, ಹೃದಯವೆಂಬ ಮಂಟಪವನ್ನು ನಿನಗೆ ಸಿದ್ಧಪಡಿಸಿದ್ದೇನೆ. ಆ ಮಂಟಪದಲ್ಲಿ ಬಂದು ಕೂಡು. ಅಷ್ಟೇ ಅಲ್ಲ; ಎನ್ನ ತನುವನ್ನು ಎನ್ನ ಸರ್ವಾಂಗವನ್ನು ನಿನಗೆ ಒಪ್ಪಿಸಿ 'ಇದು ನನ್ನದಲ್ಲ; ನಿನ್ನದೇ ಸೊತ್ತು. ಸ್ವೀಕರಿಸಿ ಅನುಗ್ರಹಿಸು' ಎಂದು ಬೇಡುತ್ತ ಕಯ್ಯ ಮುಗಿವೆನಯ್ಯ.

ಮನೋಮಂಟಪ ಅವನ ಒಳಮನೆ, ಇಡಿಯ ತನುವೆ ಅವನ ಮನೆ. ಮಾನಸ ಪೂಜೆಯ ಈ ಅನುಸಂಧಾನದ ವಿವರವನ್ನು ಜಗನ್ನಾಥದಾಸರು ಸುಂದರವಾಗಿ ಚಿತ್ರಿಸಿದ್ದಾರೆ :

ಮಧುವಿರೋಧಿಯ ಪಟ್ಟಣಕೆ ಪೂ-
ರ್ವದ ಕವಾಟಗಳಕ್ಷಿ-ನಾಸಿಕ-
ವದನ, ಶ್ರೋತ್ರಗಳೆರಡು ದಕ್ಷಿಣ-ಉತ್ತರದ್ವಾರಾ ।

ಗುದ–ಉಪಸ್ಥಗಳೆರಡು ಪಶ್ಚಿಮ
ಕದಗಳೆನಿಪವು, ಷಟ್‌ಸರೋಜವೆ
ಸದನ, ಹೃದಯುವೆ ಮಂಟಪ, ತ್ರಿಗುಣಂಗಳೇ ಕಲಶಾ ||
(ಹರಿಕ. ಸಾ: 5.19)

ಈ ಶರೀರ ಮಧುಸೂದನನ ಪಟ್ಟಣ, ಇದಕ್ಕೆ ಪೂರ್ವದಲ್ಲಿ ಐದು ಬಾಗಿಲುಗಳು: ಎರಡು ಕಣ್ಣುಗಳು, ಎರಡು ನಾಸಾರಂಧ್ರಗಳು ಮತ್ತು ಬಾಯಿ. ಪಶ್ಚಿಮದಲ್ಲಿ (ಹಿಂದುಗಡೆ ಅಥವಾ ಕೆಳಬದಿಯಲ್ಲಿ) ಎರಡು ಬಾಗಿಲುಗಳು: ಮಲದ್ವಾರ ಮತ್ತು ಉಪಸ್ಥ. ದಕ್ಷಿಣದ ಬಾಗಿಲು ಬಲಗಿವಿ; ಉತ್ತರದ ಬಾಗಿಲು ಎಡಗಿವಿ. ಈ ಪಟ್ಟಣದೊಳಗೆ ಭಗವಂತನಿಗೆ ಆರು ಮನೆಗಳಿವೆ: ಮೂಲಾಧಾರದಲ್ಲಿ ನಾಲ್ಕು ದಳದ ಕಮಲ; ನಾಭಿಯಲ್ಲಿ ಆರುದಳದ ಕಮಲ; ಹೃದಯದಲ್ಲಿ ಎಂಟುದಳದ ಕಮಲ; ಕಂಠದಲ್ಲಿ ಎರಡು ದಳದ ಕಮಲ; ಭ್ರೂಮಧ್ಯದಲ್ಲಿ ನಾಲ್ಕುದಳದ ಕಮಲ; ನೆತ್ತಿಯಲ್ಲಿ ಹನ್ನೆರಡು ದಳದ ಕಮಲ. ನಾಡೀಚಕ್ರದ ಈ ಆರು ಕಮಲಗಳೇ ಆರು ಮನೆಗಳು, ಮನಸ್ಸು ಅಥವಾ ಹೃದಯವೆ ಮುಖ್ಯಮಂಟಪ; 'ನಿವಿಷ್ಟೋ ಹೃದಯೇ ನಿತ್ಯಮ್''. ಸತ್ವ–ರಜಸ್–ತಮಸ್ಸುಗಳೆಂಬ ಮೂರು ಗುಣಗಳೇ ಈ ಮಂಟಪದ ಶಿಖರದ ಮೂರು ಮುಗುಳಿಗಳು. ಇಂಥ ಮನೋಮಂಟಪದಲ್ಲಿ ಭಗವಂತ ಗೋಚರನಾಗುತ್ತಾನೆ. ಇದನ್ನೆ ದಾಸರು ಹಾಡಿದರು: ನಿನ್ನ ಪಟ್ಟಣವಾದ ಎನ್ನ ತನುವನ್ನು ನಿನಗೇ ಒಪ್ಪಿಸಿ ಹೃದಯವೆಂಬ ಮಂಟಪ ಕಟ್ಟಿ ಕಯ್ಯಮುಗಿವೆನಯ್ಯ.

ಜಗನ್ನಾಥ ದಾಸರು ಹೇಳಿದ ಈ ಉಪಾಸನೆಯ ಮೂಲ ಭಾಗವತದಲ್ಲಿದೆ:

ಅಕ್ಷಿಣೀ ನಾಸಿಕೇ ಆಸ್ಯ-
ಮಿತಿ ಪಂಚ ಪುರಸ್ಕೃತಾಃ
ದಕ್ಷಿಣಾ ದಕ್ಷಿಣಃ ಕರ್ಣ
ಉತ್ತರಾ ಚೋತ್ತರಃ ಸ್ಮೃತಃ ||
ಪಶ್ಚಿಮೇ ಇತ್ಯಧೋದ್ವಾರಾ
ಗುದಶಿಶ್ನಾವಿಹೋದಿತೇ | (ಭಾಗ-4-24-9-10)

" ಅಂತಃಪುರಂ ತು ಹೃದಯಮ್..." (ಭಾಗ. 4.29.16)

(ಕಣ್ಣುಗಳು, ನಾಸಾಪುಟಗಳು ಮತ್ತು ಬಾಯಿ ಇವು ಐದು ಎದುರುಗಡೆಯ ಬಾಗಿಲುಗಳು. ಎಡ–ಬಲ ಕಿವಿಗಳು ಎಡಬಲದ ಬಾಗಿಲುಗಳು. ಕೆಳಗಡೆ ಯಿರುವ ಗುದ–ಶಿಶ್ನಗಳೇ ಹಿಂದಿನ ಬಾಗಿಲುಗಳು... ಹೃದಯವೆ ಅಂತಃಪುರ...)

ತನುವನೊಪ್ಪಿಸುವ ಉಪಾಸನೆಯ ಇನ್ನೊಂದು ಬಗೆ ಹೀಗಿದೆ:

ಧಾತುಗಳೆ ಸಪ್ತಾವರಣ, ಉಪ
ವೀಥಿಗಳು ನಾಡಿಗಳು, ಮದಗಳು
ಯೂಥಪಗಳು, ಸುಷುಮ್ನನಾಡಿಯೆ ರಾಜಪಂಥಾನಾ
ಈ ತನೂರುಹಗಳೆ ವನಂಗಳು
ಮಾತರಿಶ್ವನು ಪಂಚರೂಪದಿ
ಪಾತಕಗಳೆಂಬರಿಗಳನು ಸಂಹರಿಪ ತಳವಾರಾ ||

(ಹರಿಕ. ಸಾ : 5.20)

ತ್ವಕ್ (ಸ್ಪರ್ಶದ ಅನುಭವವನ್ನು ನೀಡುವ ತೊಗಲಿನ ಸೂಕ್ಷ್ಮಭಾಗ), ಚರ್ಮ (ತೊಗಲಿನ ಸ್ಥೂಲಭಾಗ), ಮಾಂಸ, ನೆತ್ತರು, ಮಜ್ಜೆ (ಕೊಬ್ಬು), ಮೇದಸ್ಸು (ಬೊಜ್ಜು) ಮತ್ತು ಎಲುಬು ಇವು ಏಳು ಧಾತುಗಳು: "ತ್ವಕ್ ಚರ್ಮ ಮಾಂಸಂ ರುಧಿರಂ ಮಜ್ಜಾ ಮೇದೋಽಸ್ಥಿ ಧಾತವಃ".

ಇನ್ನೊಂದು ರೀತಿಯ ಪರಿಗಣನೆಯಲ್ಲಿ: ದೇಹಕ್ಕೆ ಕಳೆ ಕೊಡುವ ರಸ – ಪಸೆ, ನೆತ್ತರು, ಮಾಂಸ, ಬೊಜ್ಜು, ಎಲುಬು, ಕೊಬ್ಬು ಮತ್ತು ರೇತಸ್ಸು, ಇವು ಏಳು ಧಾತುಗಳು: "ರಸಾಸೃಙ್‌ಮಾಂಸಮೇದೋಽಸ್ಥಿ ಮಜ್ಜಾ ಶುಕ್ರಾಣಿ ಧಾತವಃ". ಈ ಏಳು ಧಾತುಗಳೇ ಈ ಪಟ್ಟಣದ ಏಳು ಕೋಟೆಗಳು. ನರನಾಡಿಗಳೆ ಅಡ್ಡರಸ್ತೆಗಳು, ಕಿರುದಾರಿಗಳು, ಕಾಲುದಾರಿಗಳು, ರೂಪಮದ, ಯೌವನಮದ, ಸ್ತ್ರೀಮದ, ವಿದ್ಯಾಮದ, ಅರ್ಥಮದ, ಕುಲಮದ, ಅನ್ನಮದ, ಉದ್ಯೋಗಮದಗಳೆಂಬ ಅಷ್ಟಮದಗಳೇ ಎಂಟು ಮದ್ದಾನೆಗಳು. ಸುಷುಮ್ನಾನಾಡಿಯೆ ಪಟ್ಟಣದ ರಾಜಬೀದಿ. ರೋಮಾವಳಿಯೆ ನಗರೋದ್ಯಾನ. ಪಂಚರೂಪನಾದ ಮುಖ್ಯಪ್ರಾಣನೆ ನಗರದ ಶತ್ರುಗಳಾದ ಪಾತಕಗಳನ್ನು ತರಿವ ತಳವಾರ. ಇಂಥ ಮನೋಮಂಟಪದಲ್ಲಿ ಭಗವಂತನಿದ್ದಾನೆ. ಇದನ್ನೂ ದಾಸರು ಹೇಳಿದರು: ಸಪ್ತಧಾತುಗಳಿಂದ, ಸಾವಿರ ಸಾವಿರ ನಾಡಿಗಳಿಂದ ಕೂಡಿದ ತನುವನೊಪ್ಪಿಸಿ ಕಯ್ಯ ಮುಗಿವೆನಯ್ಯ.

ಉಪಾಸನೆಯ ಇನ್ನೊಂದು ಬಗೆ:

ಇನ–ಶಶಾಂಕಾದಿಗಳೆ ಲಕ್ಷ್ಮೀ–
ವನಿತೆಯರಸನ ದ್ವಾರಪಾಲಕ–
ರೆನಿಸುತಿಪ್ಪರು, ಮನದ ವೃತ್ತಿಗಳೇ ಪದಾತಿಗಳೂ |
ಅನುಭವಿಪ ವಿಷಯಂಗಳೇ ಪ–
ಟ್ಟಣಕೆ ಬಪ್ಪ ಪಸಾರಗಳು, ಜೀ–
ವನೆ ಸುವರ್ತಕ, ಕಪ್ಪಗಳ ಕೈಗೊಂಬ ಹರಿ ತಾನೂ ||

(ಹರಿಕ. ಸಾ: 5. 21.)

ಇಂದ್ರಿಯಾಭಿಮಾನಿಗಳಾದ ಸೂರ್ಯಚಂದ್ರಾದಿಗಳು ಈ ನಗರದ ದ್ವಾರ ಪಾಲಕರು. ಮನಸ್ಸಿನ ಸಂಕಲ್ಪ-ವಿಕಲ್ಪಗಳೇ ಕಾವಲು ಭಟರು, ಇಂದ್ರಿಯಗಳ ಮೂಲಕ ಅನುಭವಿಸುವ ಶಬ್ದಾದಿ ವಿಷಯಗಳೇ ಈ ಪಟ್ಟಣದ ಬೀದಿಯಲ್ಲಿ ಮಾರಲಿಕ್ಕಿಟ್ಟ ಸರಕು (ಪಸಾರ)ಗಳು. ಜೀವ ಈ ಅಂಗಡಿಯ ವ್ಯಾಪಾರಿ. ಈ ವ್ಯಾಪಾರಿಯಿಂದ ಕರ್ಮದ ಕಪ್ಪ ಕೊಳ್ಳುತ್ತ ಪುರದೊಡೆಯನಾದ ಭಗವಂತ ಹೃದಯ ಮಂಟಪದಲ್ಲಿ ನೆಲಸಿದ್ದಾನೆ. ಇದು ತನುವನೊಪ್ಪಿಸುವ ಮತ್ತೊಂದು ಬಗೆ. ಇದನ್ನೂ ದಾಸರು ಹೇಳಿದರು: ಈ ಅಂಗಡಿಯ ಸರಕು ಕಪ್ಪಗಳ ಸಹಿತ ತನುವನೊಪ್ಪಿಸಿ ಕಯ್ಯ ಮುಗಿವೆನಯ್ಯ.

ಮೇಲಿನ ಎರಡು ಪದ್ಯಗಳಲ್ಲಿ ಬಂದ ಉಪಾಸನೆಯ ಸುಳಿವು ಭಾಗವತದಲ್ಲಿ ಬಂದಿದೆ:

ಪಂಚೇಂದ್ರಿಯಾರ್ಥಪ್ರಕ್ಷೇಪಃ
ಸಪ್ತಧಾತುವರೂಥಕಃ (ಭಾಗ. 4.29.19)

(ಪಂಚೇಂದ್ರಿಯಗಳ ವಿಷಯಗಳೇ ಅಂಗಡಿಯಲ್ಲಿ ಬಿಡಿಸಿಟ್ಟ ಮಾಲುಗಳು. ಏಳು ಧಾತುಗಳೇ ಇದರ ರಕ್ಷಾಪಂಜರಗಳು.)

ಇನ್ನೂ ಪ್ರಕಟವಾಗದ ನಾರಾಯಣ ಪಂಡಿತರ ಅಪೂರ್ವಗ್ರಂಥ "ಮಾನಸ ಪೂಜಾವಿಧಿ" ಈ ನಗರದ ಹೆದ್ದಾರಿ ಸುಷುಮ್ನಾನಾಡಿಯ ಬಗೆಗೆ ಹೊಸ ಬೆಳಕು ಚೆಲ್ಲುತ್ತದೆ:

ಶತೋತ್ತರಾ ತು ನಾಡಿಕಾ
ಸುಷುಮ್ನಾರಶ್ಮಿದೀಪಿತಾ ।
ಉಪಾಸತೋ ಜನಾರ್ದನಂ
ಕಳೇಬರೇಽಭಿಭಾಸತೇ ॥

ನೂರ ಒಂದನೆಯ ನಾಡಿ ಸುಷುಮ್ನಾ ನಾಡಿ. ಸೂರ್ಯನ ಪ್ರಧಾನ ಕಿರಣವಾದ ಸುಷುಮ್ನ ಕಿರಣ ಈ ನಾಡಿಯೊಳಗೆ ತುಂಬಿ ಬೆಳಗುತ್ತಿರುತ್ತದೆ. ಭಗವಂತನನ್ನು ಉಪಾಸನೆ ಮಾಡತಕ್ಕ ಸಾಧಕನಿಗೆ ಈ ಬೆಳಕಿನ ದಾರಿ ಗೋಚರವಾಗುತ್ತದೆ.)

ಈ ಉಪಾಸನೆಯ ಇನ್ನೊಂದು ಮುಖ:

ಉರುಪರಾಕ್ರಮನರಮನೆಗೆ ದಶ-
ಕರಣಗಳೆ ಕನ್ನಡಿಯ ಸಾಲುಗ-
ಳರವಿದೂರನ ಸದ್ವಿಹಾರಕೆ ಚಿತ್ತ ಮಂಟಪವೂ ।
ಮರಳಿ ಬೀಸುವ ಶ್ವಾಸಗಳು ಚಾ-

ಮುರ, ವಿಲಾಸಿನಿ ಬುದ್ಧಿ, ದಾವೋ-
ದರಗೆ ಸಾಷ್ಟಾಂಗಪ್ರಣಾಮಗಳೇ ಸುಶಯನಗಳೂ ||

(ಹರಿಕ. ಸಾ : 5,22)

ಈ ಶರೀರ ಭಗವಂತನ ಅರಮನೆ. ಹತ್ತು ಇಂದ್ರಿಯಗಳೆ ಈ ಅರಮನೆಯ ಅಲಂಕಾರದ ಕನ್ನಡಿಗಳು, ಹೀಗೆ ಇದೊಂದು ಕನ್ನಡಿಯ ಮಹಡಿ: ಮುಕುರ ಮಂಟಪ. ಉಸಿರಾಟವೆ ಬೀಸಣಿಗೆ–ಚಾಮರಗಳು. ಬುದ್ಧಿಯೆ ಅಂತಃಪುರದ ನಾಟ್ಯ ವಿಲಾಸಿನಿ. ದಂಡಪ್ರಣಾಮವೆ ಆವನ ಶಯನ ವಿಹಾರ ಅಥವಾ ಶಯನವೆ ಅವನಿಗೆ ಪ್ರಣಾಮ ಸೇವೆ. ಇಂಥ ವೈಭವದ ಅರಮನೆಯಲ್ಲಿ ಚಿತ್ತವೆಂಬ ಮಂಟಪದಲ್ಲಿ ಭಗವಂತ ವಿಹರಿಸುತ್ತಾನೆ. ಇದನ್ನೆ ದಾಸರು ಇಲ್ಲಿ ಹಾಡಿದರು : ನಿನ್ನ ವಿಹಾರದ ಅರಮನೆಯಾದ ಈ ತನುವನೊಪ್ಪಿಸಿ ಕಯ್ಯ ಮುಗಿವೆನಯ್ಯ.

ಅರಮನೆಯ ಇನ್ನೊಂದು ಬಗೆಯ ಅನುಸಂಧಾನ ಹೀಗಿದೆ :

ಮಾರಮಣನರಮನೆಗೆ ಸುಮಹಾ-
ದ್ವಾರವೆನಿಸುವ ವದನಕೊಪ್ಪುವ
ತೋರಣ ಶ್ಮಶ್ರುಗಳು, ಕೇಶಗಳೇ ಪತಾಕೆಗಳೂ |
ಊರಿ ನಡೆವಂಘ್ರಿಗಳು ಜಂಘೆಗ-
ಳೂರು ಮಧ್ಯೋದರ ಶಿರಗಳಾ-
ಗಾರದುಪ್ಪರಿಗೆಗಳು. ಕೋಶಗಳೈದು ಕೋಣೆಗಳೂ ||

(ಹರಿಕ. ಸಾ : 5. 23)

ಬಾಯಿಯೆ ಈ ಅರಮನೆಯ ಹೆಬ್ಬಾಗಿಲು : ಗೋಪುರದ್ವಾರ. ಮೀಸೆಯೇ ಬಾಗಿಲಿಗೆ ಬಿಗಿದ ತಳಿರು ತೋರಣ. ತಲೆಗೂದಲುಗಳೇ ಪತಾಕೆಗಳು. ಕಾಲುಗಳು, ಮೊಣಕಾಲುಗಳು, ತೊಡೆ, ನಡು, ಹೊಟ್ಟೆ, ತಲೆ–ಇವು ಈ ಅರಮನೆಯ ಮಹಡಿ ಮಹಲುಗಳು. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎಂಬ ಐದು ಕೋಶಗಳೇ ಐದು ಕೋಣೆಗಳು; ಇಂಥ ಸುಂದರ ವಾದ ಅರಮನೆಯ ಮನೋಮಂಟಪದಲ್ಲಿ ಭಗವಂತನಿದ್ದಾನೆ. ಇದನ್ನು ದಾಸರು ಹಾಡಿದರು – ಪಂಚ ಕೋಶಗಳಿಂದ ಕೂಡಿದ ಮಹಡಿಯ ಮನೆಯಾದ ಈ ತನು ವನೊಪ್ಪಿಸಿ ಕಯ್ಯ ಮುಗಿವೆನಯ್ಯ.

ಹೀಗೆ ದೇಹ ಭಗವಂತನ ಪಟ್ಟಣ ಎನ್ನುವುದು ಒಂದು ಮುಖ. ಅರಮನೆ ಎನ್ನುವುದು ಇನ್ನೊಂದು ಮುಖ. ಇದು ಭಗವಂತ ಪಯಣಿಸುವ ರಥ ಎನ್ನುವುದು ಉಪಾಸನೆಯ ಮೂರನೆಯ ಮುಖ :

ಈ ಶರೀರವೆ ರಥ, ಪತಾಕೆ ಪು-
ವಾಸಗಳು, ಪುಂಢ್ರಗಳು ಧ್ವಜ, ಸಿಂ
ಹಾಸನ ಚಿತ್ತವು, ಸುಬುದ್ಧಿಯು ಕಲಶ, ಸನ್ಮನವು |
ಪಾಶ, ಗುಣ ದಂಡತ್ರಯಗಳು, ಶು-
ಭಾಶುಭದ್ವಯ ಕರ್ಮ ಚಕ್ರ, ಮು-
ಹಾ ಸಮ ಥಾ ಶ್ವಗಳು ದೀಕರಣಾಂಗಳೆನಿಸುವವು ||

(ಹರಿಕ. ಸಾರ: 5. 24)

ಈ ಶರೀರ ಒಂದು ರಥ. ಉಟ್ಟುಟ್ಟಿಗಳೆ ಕಿರಿನಿಶಾನೆಗಳು. ಊರ್ಧ್ವ ಪುಂಢ್ರಗಳೆ ರಾಜಚಿಹ್ನಾಂಕಿತವಾದ ಉನ್ನತ ಧ್ವಜ. ಭಗವಂತನನ್ನು ಸ್ಮರಿಸುವ ಚಿತ್ತವೆ ಆವನ ಸಿಂಹಾಸನ. ವಿವೇಕಪ್ರಜ್ಞೆಯೆಂಬ ಬುದ್ಧಿಯೆ ಈ ರಥದ ಮುಗುಳಿ. ಮನಸ್ಸೇ ಕಡಿವಾಣ. ಗುಣತ್ರಯವೆ ಮೂರು ಪಟ್ಟಿಯ ನೊಗ. ಸತ್ ಕರ್ಮ ದುಷ್ಕರ್ಮಗಳೇ ರಥದ ಎರಡು ಗಾಲಿಗಳು. ಹತ್ತು ಇಂದ್ರಿಯಗಳೇ ಚುರುಕಾಗಿ ಓಡ ಬಲ್ಲ ಕುದುರೆಗಳು. ಇಂಥ ರಥದಲ್ಲಿ ಮನೋಮಂಟಪದಲ್ಲಿ ಭಗವಂತನಿದ್ದಾನೆ. ಇದನ್ನೂ ದಾಸರು ಸೂಚಿಸಿದರು: ನಿನ್ನ ಪಯಣದ ಗಾಡಿಯಾದ ಈ ತನುವ ನೊಪ್ಪಿಸಿ ಕಯ್ಯ ಮುಗಿವೆನಯ್ಯ.

ಈ ದೇಹರಥದ ಉಪಾಸನೆಯ ಬಗೆಯನ್ನು ಮೊತ್ತಮೊದಲಾಗಿ ನಾವು ಉಪನಿಷತ್ತುಗಳಲ್ಲಿ ಕಾಣುತ್ತೇವೆ–

ಆತ್ಮಾನಂ ರಥಿನಂ ವಿದ್ಧಿ
ಶರೀರಂ ರಥಮೇವ ಚ
ಬುದ್ಧಿಂ ತು ಸಾರಥಿಂ ವಿದ್ಧಿ
ಮನಃ ಪ್ರಗ್ರಹಮೇವ ತು |
ಇಂದ್ರಿಯಾಣಿ ಹಯಾನಾಹುಃ
ವಿಷಯಾಂಸ್ತೇಷು ಗೋಚರಾನ್ || (ಕಾಠಕ 1. 3. 3–4)

(ಈ ಶರೀರವನ್ನು ರಥವೆಂದು ಭಾವಿಸು, ಪರಮಾತ್ಮನೆ ಆದರ ರಥಿಕ, ಬುದ್ಧಿ ಸಾರಥಿ, ಮನಸ್ಸು ಕಡಿವಾಣ, ಇಂದ್ರಿಯಗಳೇ ಕುದುರೆಗಳು. ವಿಷಯ ಪ್ರಪಂಚವೇ ಅವು ಓಡಾಡುವ ತಾಣಗಳು).

ಭಾಗವತ ಇದನ್ನು ಇನ್ನಷ್ಟು ವಿವರಿಸುತ್ತದೆ–

ದೇಹೋ ರಥಸ್ತ್ವಿಂದ್ರಿಯಾಶ್ವಃ
ಸಂವತ್ಸರವಯೋಗತಿ: |
ದ್ವಿಕರ್ಮಚಕ್ರಸ್ತ್ರಿಗುಣ-
ಧ್ವಜಃ ಪಂಚಾಸುಬಂಧುರ: ||

ಮನೋರಶ್ಮಿರ್ಬುದ್ಧಿಸೂತ:
ಹೃನ್ನೀಡೋ ದ್ವಂದ್ವಕೂಬರ: | (ಭಾಗ 4. 29. 18–19)

(ದೇಹವೇ ರಥ. ಇಂದ್ರಿಯಗಳೇ ಕುದುರೆಗಳು. ವರುಷ–ವರುಷ ಸಂದು ಹೋಗುವ ವಯಸ್ಸೇ ಇದರ ವೇಗದ ಓಟ. ಎರಡು ಕರ್ಮಗಳೇ ಇದರ ಗಾಲಿಗಳು. ಮೂರು ಗುಣಗಳೇ ಇದರ ಪತಾಕೆ. ಪಂಚ ಪ್ರಾಣಗಳೇ ಗಾಡಿಯ ಚೆಲುವು ಹೆಚ್ಚಿಸುವ ಅಂತಸ್ತುಗಳು. ಹೃದಯವೆ ರಥಿಕನಾದ ಭಗವಂತನ ನೆಲೆವೀಡು. ಸುಖ – ದುಃಖಗಳ ದ್ವಂದ್ವವೆ ನೊಗದ ಅಡ್ಡಪಟ್ಟಿ–ಕೂಬರ.)

ಹೃದಯ ಮಂಟಪದಲ್ಲಿ ಭಗವಂತನ ಧ್ಯಾನದ ಬಗೆಯನ್ನು ಮಹಾನಾರಾಯಣೋಪನಿಷತ್ತು ಪ್ರಸ್ತಾಪಿಸಿದೆ:–

ದಹ್ರಂ ವಿಪಾಪ್ಮಂ ಪರವೇಶ್ಮಭೂತಂ
ಯತ್ ಪುಂಡರೀಕಂ ಪುರಮಧ್ಯಸಂಸ್ಥಮ್ |
ತತ್ರಾಪಿ ದಹ್ರಂ ಗಗನಂ ವಿಶೋಕಃ
ತಸ್ಮಿನ್ ಯದಂತಸ್ತದುಪಾಸಿತವ್ಯಮ್ ||

(ಈ ದೇಹವೆಂಬ ಪಟ್ಟಣದ ಮಧ್ಯದಲ್ಲಿ ಹೃದಯಕಮಲವೆಂಬ ಭಗವಂತನ ಪುಟ್ಟ ಮನೆಯಿದೆ. ಇದು ಪಾಪದ ಲೇಪ ತಟ್ಟದ ಪವಿತ್ರ ತಾಣ. ಆ ಕಮಲದ ನಡುವೆ ಪುಟ್ಟ ಹೃದಯಾಕಾಶವಿದೆ. ಅಲ್ಲಿ ಭಗವಂತನಿದ್ದಾನೆ. ಅವನನ್ನು ಉಪಾಸನೆ ಮಾಡಿ ಒಲಿಸಿಕೊಳ್ಳಬೇಕು)

ನಾರಾಯಣ ಪಂಡಿತರು 'ಯೋಗದೀಪಿಕಾ' ದಲ್ಲಿ ಈ ಆರಾಧನೆಯನ್ನು ಸ್ಫುಟಗೊಳಿಸಿದ್ದಾರೆ:–

ಹೃತ್ಪದ್ಮವಿಷ್ಟರಾಸೀನಂ
ಉದ್ಯದರ್ಕೋಜ್ಜ್ವಲಪ್ರಭಮ್ |
ಸಂಭಾವ್ಯ ಚಾರ್ಘ್ಯಪಾದ್ಯಾದ್ಯೈಃ
ಅರ್ಚಯೇದಬ್‌ಗಂಧಪುಷ್ಪಕೈಃ || (ಯೋ. ದೀ. 3.5.)

(ಉದಿಸುವ ಸೂರ್ಯನಂತೆ ಬೆಳಗುವ ಭಗವಂತ ಹೃದಯಕಮಲದ ಪೀಠದಲ್ಲಿ ಆಸೀನನಾಗಿದ್ದಾನೆ. ಅವನನ್ನು ಅರ್ಘ್ಯ-ಪಾದ್ಯಗಳಿಂದ, ಗಂಧ ಪುಷ್ಪಗಳಿಂದ ಅರ್ಚಿಸಬೇಕು.)

"ಮಾನಸ ಪೂಜಾವಿಧಿ"ಯಲ್ಲಿ ಇದನ್ನು ಇನ್ನಷ್ಟು ವಿವರವಾಗಿ ಬಣ್ಣಿಸಿದ್ದಾರೆ:-

ವರೋಽಪಿ ರತ್ನಮಂಡಪೋ
ವಿಭಾತಿ ತತ್ರ ಪೇಶಲಮ್ ।
ಅನಂತಕಾಂತಿಕಾಂತಸನ್-
ಮಣೀಂದ್ರಮಾಲಿಕಾಸ್ಫುರನ್ ॥

(ಈ ಒಳಬಗೆಯಲ್ಲಿ ದಿವ್ಯ ಮಂಟಪವೊಂದು ಸುಂದರವಾಗಿ ಕಂಗೊಳಿಸುತ್ತದೆ. ಝಗಝಗಿಸುವ ಅಸಂಖ್ಯ ಮಣಿಗಳ ಮಾಲೆಯಿಂದ ಈ ಮಂಟಪ ಬೆಳಗುತ್ತಿದೆ.)

ಇಹಾಪಿ ರತ್ನನಿರ್ಮಿತಂ
ಸರೋರುಹಂ ಮನೋರಮಮ್ ।
ಸುತೀವ್ರಮಜ್ಜನಚ್ಛದಂ
ವಿಕಸ್ವರಂ ವಿರಾಜತೇ ॥

(ಈ ಮಂಟಪದಲ್ಲಿ ಮನೋಹರವಾದ ಮಣಿಮಯ ಕಮಲವಿದೆ. ಅರಳಿದ ಎಸಳುಗಳಿಂದ ಇದು ಕಂಗೊಳಿಸುತ್ತಿದೆ.)

ವಿಪಾಪ್ಮತಾಂ ಚ ದಭ್ರತಾಂ
ಪರಸ್ಯ ವೇಶ್ಮಭೂತತಾಮ್ ।
ಪುರಸ್ಯ ಮಧ್ಯಸಂಸ್ಥಿತಾಂ
ಮನೀಷಿಣಃ ಶ್ರುತಾ ಸ್ಫುಟಮ್ ॥

ಉದಾಹರಂತಿ ಯಾನ್ ಗುಣಾನ್
ತದೇತದುತ್ತಮೋತ್ತಮಮ್ ।
ಹೃದಂಬುಜಂ ದಿವಾಕರ-
ಪ್ರಕಾರದೀಧಿತಿಜ್ವಲತ್ ॥

(ನಾರಾಯಣ ಶ್ರುತಿಯಲ್ಲಿ ಜ್ಞಾನಿಗಳು ಇದನ್ನೇ ವಿಪಾಪ್ಮ (ಪಾಪಸ್ಪರ್ಶವಿಲ್ಲದ್ದು), ದಭ್ರ (ಸೂಕ್ಷ್ಮವಾದದ್ದು), ಪರವೇಶ್ಮಭೂತ (ಭಗವಂತನ ಆವಾಸಸ್ಥಾನ),

ಮತ್ತು ಪುರಮಧ್ಯಸಂಸ್ಥ (ದೇಹವೆಂಬ ಪುರದ ಮಧ್ಯದಲ್ಲಿರುವಂಥದು) – ಎಂದು ನಾನಾ ಬಗೆಯಲ್ಲಿ ಹೊಗಳಿದ್ದಾರೆ. ಉತ್ತಮೋತ್ತಮವಾದ ಈ ಹೃದಯ ಕಮಲ ಸೂರ್ಯನಂತೆ ಪ್ರಕಾಶಮಾನವಾಗಿ ಧ್ಯಾನಗೋಚರವಾಗುತ್ತದೆ.)

ಅಮುಷ್ಯ ಕರ್ಣಿಕಾಪುಟೇ
ಸುದೀಪ್ತರತ್ನವಿಷ್ಟರಮ್ ।
ಚಕಾಸ್ತಿ ತತ್ ಪರಃ ಪುಮಾನ್
ಅಧಿಷ್ಠಿತೋsತಿಶೋಭನಮ್ ॥

(ಈ ಕಮಲದ ನಡುವಿನ ಕೋಶದಲ್ಲಿ ಥಳಥಳಿಸುವ ಮುತ್ತಿನ ಸಿಂಹಾಸನವಿದೆ. ಚೆಲುವಿನ ನೆಲೆಯಾದ ಈ ಹೃದಯ ಪೀಠದಲ್ಲಿ ಭಗವಂತ ಅಧಿಷ್ಠಿತನಾಗಿದ್ದಾನೆ.)

ಇದು ಮನವೆಂಬ ಮಂಟಪದಲ್ಲಿ ಭಗವಂತನನ್ನು ಕೂಡಿಸಿಕೊಂಡು ತನುವನ್ನು ಅವನಿಗರ್ಪಿಸುವ ವಿಧಾನ. ಈ ಮಾನಸಪೂಜೆಯಲ್ಲಿ ಈ ಹೊರಮೈ ಪಟ್ಟಣವಾಗಿ, ಅರಮನೆಯಾಗಿ, ರಥವಾಗಿ–ಹಲವು ಬಗೆಯಲ್ಲಿ ಭಗವಂತನಿಗೆ ಅರ್ಪಿತವಾಗುತ್ತದೆ. ಎಲ್ಲ ಬಗೆಯ ಅರ್ಪಣವನ್ನೂ ಮನಸ್ಸಿನಲ್ಲರಿಸಿಕೊಂಡು ದಾಸರು ಹಾಡಿದರು: "ಎನ್ನ ತನುವನೊಪ್ಪಿಸಿ ಕಯ್ಯ ಮುಗಿವೆನಯ್ಯ".

ಈ ರೀತಿಯ ಉಪಾಸನೆ ಮನುಷ್ಯರಿಗೆ ಮಾತ್ರ ಸೀಮಿತವಲ್ಲ. ಬ್ರಹ್ಮಾದಿ ದೇವತೆಗಳೂ ತಮ್ಮ ಇಡಿಯ ಬಾಳನ್ನು ಭಗವಂತನ ಸೇವೆಗೆ ಮೀಸಲಿಟ್ಟಿದ್ದಾರೆ ಎನ್ನುತ್ತದೆ ಮುಂದಿನ ಮಾತು: "ವನಜಜ–ಭವ–ಸುರಮುನಿಗಳು ಭಜಿಸುವ ಘನಮಹಿಮನೆ"

ವನ ಅಂದರೆ ನೀರು. ವನಜ ಅಂದರೆ ನೀರಿನಲ್ಲಿ ಹುಟ್ಟುವ ತಾವರೆ; ಇಲ್ಲಿ ಭಗವಂತನ ನಾಭಿಕಮಲ, ಅದರಲ್ಲಿ ಹುಟ್ಟಿದ ಬ್ರಹ್ಮ ವನಜಜ. ಭವ ಅಂದರೆ ರುದ್ರದೇವರು. ಅನಂತರ ಎಲ್ಲ ಸುರರು ಮುನಿಗಳು ಬ್ರಹ್ಮ–ರುದ್ರರು, ಅವರ ಅನಂತರದ ಇಂದ್ರಾದಿ ಸುರರು, ನಾರದಾದಿ ಮುನಿಗಳು ಕೂಡ ಭಜಿಸುವ, ಸೇವಿಸುವ, ಆರಾಧಿಸುವ ಘನಮಹಿಮ ಭಗವಂತ.

ಈ ಮಾತಿಗೆ ಇನ್ನೊಂದು ಅರ್ಥವೂ ಹೊರಡುತ್ತದೆ; ವನಜಜಭವರಾದ ಅಂದರೆ ಬ್ರಹ್ಮಸಂಭವರಾದ ಎಲ್ಲ ಸುರರು ಮತ್ತು ಮುನಿಗಳು. ಅಂತು ಸಮಸ್ತ ಜೀವಕೋಟಿಯಿಂದ ಪೂಜಿತನಾದ ಭಗವಂತನೆ, ನಿನ್ನ ಪಾದಕೆರಗಲೆನ್ನ ಶಿರ. ಬ್ರಹ್ಮಾದಿಗಳಿಗೂ ನಿಲುಕದ ನಿನ್ನ ಮಹಿಮೆಯ ಎತ್ತರ ತಿಳಿದು ತಲೆ ತನ್ನ ತಾನೆ ಸಹಜವಾಗಿ ಬಾಗಲಿ: "ನತೇ ಮಹಿತ್ವಮನ್ವಶ್ನುವಂತಿ"

"ತನುವು ನಿನ್ನದು, ಜೀವನವು ನಿನ್ನದು" ಎಂದು ಭಗವಂತನಿಗೆ ತಮ್ಮ ತನು ಮನಗಳನ್ನರ್ಪಿಸಿದ ಮೇಲೆ, ಇದು ಅವನದೇ ಮನೆ ಎಂದು ತಿಳಿದ ಮೇಲೆ 'ನಾನು'

ಎಂಬ ಅಹಂಕಾರ ತಲೆಯೆತ್ತುವುದು ಸಾಧ್ಯವಿಲ್ಲ. ಈ ಅರಿವು ಬರುವ ಮುನ್ನ ಎತ್ತಿದ್ದ ಶಿರ ಈಗ ನಿನ್ನ ಪಾದಕ್ಕೆರಗಲಿ. ವಾಮನನಾಗಿ ಬಂದಾಗ ದಾನ ನೀಡುವ ಹಮ್ಮಿನಿಂದ ಎತ್ತಿದ್ದ ಬಲಿಯ ತಲೆ ನೀನು ತ್ರಿವಿಕ್ರಮನಾದಾಗ ಬಾಗಿದಂತೆ ನನ್ನ ತಲೆಯೂ ಬಾಗಲಿ. ನನ್ನ ತಲೆಯ ಮೇಲೆ ನಿನ್ನ ಶ್ರೀಪಾದದ ರಕ್ಷೆಯಿರಲಿ.

ಮೊದಲ ಸೊಲ್ಲಿನಲ್ಲಿ ಬಂದ ಮಾನಸಪೂಜೆಯ ವಿವರಣೆಯೆ ಎಡನೆಯ ಸೊಲ್ಲು :—

ಲಿಂಗ ದೇಹವೆಂಬ ಪವಳಿ ಶೃಂಗರಿಸಿ
ಅಂಗವ ನಿನಗೆ ಕಾಣಿಕೆಯ ನೀಡುವೆ
ಮಂಗಳ ಮೂರುತಿ ಅಂಗನೆ ಸಹಿತ ಭು—
ಜಂಗಶಯನ ಎನ್ನ ಕಂಗಳಿಗುತ್ಸವವೀಯೋ ||

ನೀನು ಕುಳಿತಿರುವ ಗರ್ಭಗೃಹ ಮನಸ್ಸು. ಲಿಂಗದೇಹವೆ ಅದರ ಸುತ್ತುಪೌಳಿ. ಮಂಟಪವನ್ನು ಸಿಂಗರಿಸಿದಂತೆ ಈ ಪೌಳಿಯನ್ನು ಸಿಂಗರಿಸಿದ್ದೇನೆ—ಬಾರಯ್ಯ ಈ ಗರ್ಭ ಮಂಟಪದಲ್ಲಿ ನೆಲಸು—ಎನ್ನುತ್ತಾರೆ ದಾಸರು.

ಈ ಪದ್ಯದ ಹಿನ್ನೆಲೆಯಲ್ಲಿ ಕಂಡಾಗ ಮೊದಲ ಪದ್ಯಕ್ಕೆ ಇನ್ನೂ ಒಂದು ಹೊಸ ಮುಖ ಬಂತು. ಮನವೆಂಬ ಮಂಟಪ ಎಂದರೆ ಬರಿಯ ಅಂತಃಕರಣದ ಮಂಟಪ ಅಲ್ಲ. ಒಳಬಗೆಯಲ್ಲಿ ಎರಡು ಬಗೆಯ ಮನಸ್ಸು ಉಂಟು. ಒಂದು ಜಡವಾದ ಅಂತಃಕರಣ. ಇನ್ನೊಂದು ಜೀವಸ್ವರೂಪವೇ ಆದ ಚಿನ್ಮಯವಾದ ಮನಸ್ಸು. ಲಿಂಗದೇಹ ಜೀವಸ್ವರೂಪಕ್ಕೆ ಅಂಟಿಕೊಂಡಿರುವ ಆವರಣ. ಅದು ಅಂತಃಕರಣದ ಪವಳಿಯಾಗಲಾರದು.

ಆತ್ಮನಿಗೆ ಸುತ್ತಿಕೊಂಡಿರುವುದರಿಂದ ಆತ್ಮಸ್ವರೂಪವಾದ ಮನಸ್ಸಿಗೆ ಪವಳಿಯಾಗಬಲ್ಲುದು.

ಆದರಿಂದ ದಾಸರು ಅಧ್ಯಾತ್ಮದ ಆಳಕ್ಕೆ ಇಳಿದು ಹೀಗೆ ಹೇಳುತ್ತಾರೆ:— ನನ್ನ ಆತ್ಮದೊಳಗೆ ಅಂತರಾತ್ಮನಾಗಿ, ಬಿಂಬರೂಪನಾಗಿ ನೀನಿರುವೆ. "ಬಿಂಬೋಽಸಿ ಪ್ರತಿಬಿಂಬೋಽಸ್ಮಿ". ನನ್ನ ಜೀವದೊಳಗೆ ಜೀವದ ಜೀವವಾಗಿ ನಿಂತಿರುವೆ: "ಜೀವಾಂತರ್ಯಾಮಕೋ ವಿಷ್ಣುರಾತ್ಮಸಾಮಾ ಪ್ರಕೀರ್ತಿತಃ" ಸಾಕ್ಷಿಸ್ವರೂಪವಾದ ಚಿನ್ಮಯ ಮನವೆಂಬ ಮಂಟಪ ಕಟ್ಟಿ ನಿನ್ನನು ಅಲ್ಲಿ ಆರಾಧಿಸುತ್ತೇನೆ. ಲಿಂಗದೇಹವೆಂಬ ಪ್ರದಕ್ಷಿಣಪಥವನ್ನು ಸಿಂಗರಿಸಿ ನಿನಗೆ ಸುತ್ತುವರಿಯುತ್ತೇನೆ. ನನ್ನ ಮನವೆಂಬ ಸಾಕ್ಷಿಗೆ ಗೋಚರನಾಗು ಬಾರಯ್ಯ.

ಬಾಹ್ಯೇಂದ್ರಿಯವಾದ ಮನಸ್ಸು ಪ್ರಾಕೃತವಾದದ್ದು. ಅದು ಅಪ್ರಾಕೃತನಾದ ಭಗವಂತನನ್ನು ಕಾಣಲಾರದು. ಧ್ಯಾನದಲ್ಲಿ ಕಾಣುವ ಮೂರ್ತಿ ಕೂಡ ಮನಸ್ಸು

ನಿರ್ಮಿಸಿದ ಮೂರ್ತಿಯೆ ಹೊರತು ಭಗವಂತನ ಸಹಜರೂಪ ಅಲ್ಲ. ಹೊರಗೆ ಕಾಣುವ ರೂಪ ಶಿಲಾಮಯ. ಒಳಗೆ ಕಾಣುವ ರೂಪ ಮನೋಮಯ. ನಮ್ಮ ಸ್ವರೂಪವೆ ಆದ ಅಪ್ರಾಕೃತ ಮನಸ್ಸು ಮಾತ್ರವೆ ಭಗವಂತನನ್ನು ಸಾಕ್ಷಾತ್ಕರಿಸಬಲ್ಲುದು – ಹೀಗೆ ಧ್ಯಾನದ ಮಜಲಿನಲ್ಲಿ ಮನವೆಂಬ ಮಂಟಪ ಎಂದರೆ ಅಂತಃಕರಣವೆಂಬ ಮಂಟಪ. ಸಾಕ್ಷಾತ್ಕಾರದ ಮಜಲಿನಲ್ಲಿ ಮನವೆಂಬ ಮಂಟಪ ಎಂದರೆ ಸ್ವರೂಪಮನವೆಂಬ, ಸಾಕ್ಷೀಂದ್ರಿಯವೆಂಬ ಮಂಟಪ. ಈ ಕೊನೆಯ ಮಜಲಿನಲ್ಲಿ ನಿಂತು ದಾಸರು ಈ ಹಾಡನ್ನು ಹಾಡಿದರು ಎನ್ನುವುದಕ್ಕೆ ಸಾಕ್ಷಿ:– 'ಲಿಂಗದೇಹವೆಂಬ ಪವಳಿ ಶೃಂಗರಿಸಿ' ಎನ್ನುವ ಮಾತು.

ನಮ್ಮ ಕಣ್ಣಿಗೆ ಕಾಣಿಸುವ ಈ ದೇಹ ಸ್ಥೂಲದೇಹ. ಇದರೊಳಗೆ ಇನ್ನೊಂದು ಸೂಕ್ಷ್ಮದೇಹ ಉಂಟು. ಇದನ್ನು ಯಾತನಾಶರೀರ ಎನ್ನುತ್ತಾರೆ; ಅನಿರುದ್ಧ ಶರೀರ ಎನ್ನುತ್ತಾರೆ. ಮೃತನಾದಾಗ ಸ್ಥೂಲದೇಹ ಬಿದ್ದುಹೋಗುತ್ತದೆ. ಯಾತನಾ ದೇಹದಿಂದ ಆತ ಉಳಿಯುತ್ತಾನೆ. ಸ್ವರ್ಗ-ನರಕಗಳ ಸಂಚಾರ, ಪುಣ್ಯ-ಪಾಪಗಳ ಭೋಗ – ಈ ಯಾತನಾ ಶರೀರದಿಂದಲೇ. ಇದರೊಳಗೆ ಇನ್ನೂ ಸೂಕ್ಷ್ಮವಾದ ಜೀವನಿಗೆ ಅಂಟಿಕೊಂಡಿರುವ ಮೂರನೆಯ ಒಳಅಂಗಿ ಒಂದಿದೆ. ಇದೇ ಲಿಂಗಶರೀರ. ಯಾತನೆಯ ಶರೀರವನ್ನು ಕಳಚಿಕೊಂಡು ಜೀವನ್ಮುಕ್ತನಾದ ಆತ್ಮ ಸತ್ಯಲೋಕದಲ್ಲಿ ಮೋಕ್ಷದ ಸರದಿ ಕಾಯುವಾಗಲೂ ಈ ಲಿಂಗದೇಹ ಅವನನ್ನು ಸುತ್ತಿಕೊಂಡೇ ಇರುತ್ತದೆ. ಇದರೊಳಗೆ ಇರುವಂಥದು ಜೀವನ ಸ್ವರೂಪದೇಹ. ಮೋಕ್ಷದಲ್ಲಿ ಉಳಿಯುವಂಥದು ಇದು ಮಾತ್ರ. ಈ ಸ್ವರೂಪದೇಹವೆ ಇಂದ್ರಿಯವಾಗಿ ಮನಸ್ಸಾಗಿ ಎಲ್ಲ ಕ್ರಿಯೆಗಳನ್ನು ಮಾಡಬಲ್ಲ ಅನುಭವಿಸಬಲ್ಲ ಸಾಕ್ಷಿ. ಅದನ್ನೆ ಇಲ್ಲಿ "ಮನವೆಂಬ ಮಂಟಪ" ಎಂದರು.

ಸ್ವರೂಪ ಮನಸ್ಸಿಗೆ ಮಾತ್ರವೆ ಭಗವಂತ ಗೋಚರಿಸುತ್ತಾನೆ ಎನ್ನುವ ಮಾತು ಉಪನಿಷತ್ತಿನಲ್ಲಿ ಬಂದಿದೆ –

> ಆತ್ಮೇಂದ್ರಿಯಮನೋಯುಕ್ತಂ
> ಭೋಕ್ತೇತ್ಯಾಹುರ್ಮನೀಷಿಣಃ ॥ (ಕಾಠಕ 1. 3. 4.)

(ಸ್ವರೂಪಭೂತವಾದ ಇಂದ್ರಿಯ ಮನಸ್ಸುಗಳಿಂದ ಕೂಡಿದ ಜೀವನೆ ಭಗವತ್ ಸಾಕ್ಷಾತ್ಕಾರದ ಆನಂದವನ್ನು ಅನುಭವಿಸಬಲ್ಲ ಎಂದು ಜ್ಞಾನಿಗಳು ಹೇಳುತ್ತಾರೆ.)

ಉಪನಿಷತ್ತಿನ ಈ ವಾಕ್ಯಕ್ಕೆ ಉಪಾಸನೆಯ ಮುಖದಲ್ಲಿ ಈ ಅಪೂರ್ವ ಅರ್ಥ ವನ್ನು ತೋರಿಸಿಕೊಟ್ಟವರು ವಾಮನ ಪಂಡಿತಾಚಾರ್ಯರು. ಇನ್ನೂ ಪ್ರಕಟ ವಾಗದ ಅವರ ಅಪೂರ್ವ ವ್ಯಾಖ್ಯಾನದಲ್ಲಿ ಬಂದಿರುವ ಒಕ್ಕಣೆ ಇದು:– "ಸ್ವರೂಪ ಭೂತೈರಿಂದ್ರಿಯೈರ್ಮನಸಾ ಚ ಧ್ಯಾನಯೋಗೇ ಸಂಸ್ಥಿತಂ ನಿತ್ಯ ಸುಖ ಭೋಕ್ತೇತ್ಯಾಹುಃ".

ಲಿಂಗಶರೀರದ ಸ್ವರೂಪವನ್ನು ಭಾಗವತ ಹೀಗೆ ವಿವರಿಸುತ್ತದೆ:-

ಏಕಂ ಪಂಚವಿಧಂ ಲಿಂಗಂ
ತ್ರಿವೃತ್ ಷೋಡಶವಿಸ್ತರಮ್ ।
ಏಷ ಚೇತನಯಾ ಯುಕ್ತೋ
ಜೀವ ಇತ್ಯಭಿಧೀಯತೇ" ॥ (ಭಾಗ 4. 28. 76)

(ಒಂದೇ ಆದ ಲಿಂಗಶರೀರ ಪಂಚಜ್ಞಾನೇಂದ್ರಿಯಗಳ, ಪಂಚಕರ್ಮೇಂದ್ರಿಯಗಳ ಪಂಚಪ್ರಾಣಗಳ ಕ್ರಿಯೆಯನ್ನು ಮಾಡುವುದರಿಂದ, ಪಂಚವಿಧ ಎನ್ನಿಸಿಕೊಂಡಿದೆ. ತ್ರಿಗುಣಮಯವಾದ ಈ ಲಿಂಗಶರೀರದಲ್ಲಿ ಸೂಕ್ಷ್ಮರೂಪದ ಪಂಚಪ್ರಾಣಗಳು, ದಶೇಂದ್ರಿಯಗಳು ಮತ್ತು ಮೂಲ ಮನಸ್ಸು ಹೀಗೆ ಹದಿನಾರು ಅಂಶಗಳು ಸೇರಿಕೊಂಡಿವೆ. ಇದರಿಂದ ಆವೃತವಾದ ಚೇತನವನ್ನೆ ಜೀವ ಎನ್ನುತ್ತಾರೆ)

ಹೀಗೆ ಆತ್ಮಸ್ವರೂಪದಲ್ಲಿ ನೆಲಸಿದ ಬಿಂಬರೂಪಿಗೆ ಈ ಸ್ಥೂಲದೇಹದ ಅಂಗಾಂಗಗಳೆಲ್ಲ ಅರ್ಪಿತ ಎನ್ನುತ್ತದೆ ಮುಂದಿನ ಸಾಲು: ಅಂಗವ ನಿನಗೆ ಕಾಣಿಕೆಯ ನೀಡುವೆ.

ಶರೀರವೂ ಅಂಗ; ಕಣ್ಣು ಕಿವಿ ಮುಂತಾದ ಅವಯವಗಳೂ ಅಂಗ: "ಅಂಗಂ ಶರೀರೇಽವಯವೇ". ಈ ಅಂಗವನ್ನು ನಿನ್ನ ಪಟ್ಟಣವಾಗಿ, ನಿನ್ನ ಅರಮನೆಯಾಗಿ, ನಿನ್ನ ರಥವಾಗಿ ನಿನಗೆ ಅರ್ಪಿಸಿದ್ದಾಯಿತು. ಅಷ್ಟೇ ಅಲ್ಲ ಒಂದೊಂದು ಅಂಗವನ್ನೂ ಅದರ ಪರಿಕರವಾಗಿ ನಿನಗೆ ಕಾಣಿಕೆ ಒಪ್ಪಿಸುತ್ತೇನೆ. ಏಕೆಂದರೆ ನೀನೆ ಇದರ ಧನಿ. ನಾನು ಒಕ್ಕಲು. ಇಲ್ಲಿಯ ಬೆಳೆಯೆಲ್ಲ ನಿನಗೇ ಅರ್ಪಿತ.

ಈ ಅಂಗಗಳನ್ನು ಯಾವ ರೀತಿಯಲ್ಲಿ ಭಗವಂತನ ಪರಿಕರವಾಗಿ ಉಪಾಸನೆ ಮಾಡಬೇಕು ಎನ್ನುವುದನ್ನು ಹರಿಕಥಾಮೃತಸಾರದ ಹಿನ್ನಲೆಯಲ್ಲಿ ನಾವು ಹಿಂದೆ ವಿಸ್ತಾರವಾಗಿ ಕಂಡಿದ್ದೇವೆ. ಅದೆಲ್ಲವನ್ನೂ ಸಂಗ್ರಹಿಸಿ ದಾಸರು ಒಂದು ಮಾತಿನಲ್ಲಿ ಮರುನುಡಿದರು: "ಅಂಗವ ನಿನಗೆ ಕಾಣಿಕೆಯ ನೀಡುವೆ".

ಈ ಅರಮನೆಗೆ ಭಗವಂತ ಬಂದಾಗ ಅವನೊಬ್ಬನೆ ಬರುವುದಲ್ಲ; ಅರಸ ಬಂದಾಗ ಅರಸಿಯರು ಜತೆಗಿರಬೇಡವೆ ಎನ್ನುತ್ತಾರೆ ದಾಸರು:-

ಮಂಗಳ ಮೂರುತಿ ಅಂಗನೆ ಸಹಿತ ಭು-
ಜಂಗಶಯನ ಎನ್ನ ಕಂಗಳಿಗುತ್ಸವವೀಯೋ ॥

ಕುಂಡಲಿನಿಯ ಶೇಷ ಸುಷುಮ್ನಾದ ಮೂಲಕ ಹರಿದು ಸಹಸ್ರಾರದಲ್ಲಿ ಹೆಡೆಬಿಚ್ಚಿ ನಿಂತಾಗ ಭಗವಂತನ ಸಾಕ್ಷಾತ್ಕಾರ ಸನ್ನಿಹಿತ. ಆದಕೆಂದೆ ಅವನು ಭುಜಂಗಶಯನ. ಅಂಥ ರೂಪ ಒಳಗಣ್ಣುಗಳಿಗೆ ಗೋಚರವಾಗುವುದೇ ಒಂದು ಮಹೋತ್ಸವ. ಆನಂದ

ರೂಪನಾದ ಆ ಮಂಗಳ ಮೂರುತಿಯನ್ನು ಕಾಣುವುದೇ ಒಂದು ಅಪೂರ್ವ ಆನಂದದ ಕ್ಷಣ. ನಡುವೆ ಮಂಗಳ ಮೂರುತಿ ನಾರಾಯಣ; ಇಕ್ಕೆಲಗಳಲ್ಲಿ ಅಂಗನೆಯರಾದ ಶ್ರೀದೇವಿ–ಭೂದೇವಿಯರು ಅವನನ್ನು ಆಲಿಂಗಿಸಿ ನಿಂತಿದ್ದಾರೆ ಇದು ಸಾಧಕ ಕಾಣ ಬಯಸುವ ಭಗವಂತನ ರೂಪ

ಇನ್ನೊಂದು ಬಗೆಯ ಧ್ಯಾನ ಮಾಡುವವರುಂಟು; ತೊಡೆಯಲ್ಲಿ ಶ್ರೀದೇವಿ; ಎದೆಯಲ್ಲಿ ಶ್ರೀವತ್ಸ ಚಿಹ್ನೆಯಾಗಿ ಲಕ್ಷ್ಮೀದೇವಿ ಇವು ರಮಾದೇವಿಯದೇ ಇನ್ನೆರಡು ರೂಪಗಳು. ತತ್ತ್ವದೀಪಿಕಾದಲ್ಲಿ ತ್ರಿವಿಕ್ರಮ ಪಂಡಿತಾಚಾರ್ಯರು ಇದನ್ನು ಸ್ಫುಟಪಡಿಸಿದ್ದಾರೆ: "ಅಂಕಂ ಶ್ರಿತಾ ಶ್ರೀಃ। ವಕ್ಷಸಿ ಲಕ್ಷಣಭೂತಾ ಲಕ್ಷ್ಮೀಃ"

ಶ್ರೀರೂಪದ್ದೇ ಇನ್ನೊಂದು ಹೆಸರು ಹ್ರೀ. ನಾರಾಯಣೋಪನಿಷತ್ತು ಈ ರೂಪಗಳನ್ನು ಹ್ರೀ ಮತ್ತು ಲಕ್ಷ್ಮೀ ಎಂದೇ ಕರೆದಿದೆ: "ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ".

ಶ್ರೀ–ಭೂ ಎಂದರೇನು? ಶ್ರೀ–ಲಕ್ಷ್ಮೀ ಎಂದರೇನು? ಹ್ರೀ–ಲಕ್ಷ್ಮೀ ಎಂದರೇನು? ರೂಪ ಹಲವಾದರೂ ಮಂಗಳರೂಪಿಣಿಯಾದ ಅಂಗನೆ ಒಬ್ಬಳೆ ಅಲ್ಲವೆ? ಆದರಿಂದ, ಅಂಗನೆ ಸಹಿತ ಬಾರಯ್ಯ, ಬಂದು ಕಂಗಳಿಗುತ್ಸವವೀಯಯ್ಯ, ಎಂದರೆ ಎಲ್ಲವನ್ನೂ ಹೇಳಿದಂತಾಯಿತು.

ಶ್ರೀ ಮತ್ತು ಭೂರೂಪಗಳ ಧ್ಯಾನವನ್ನು ನಾರಾಯಣ ಪಂಡಿತರು 'ಮಾನಸ ಪೂಜಾಪದ್ಧತಿ' ಯಲ್ಲಿ ನಿರೂಪಿಸಿದ್ದಾರೆ:

ಪಯೋಽಬ್ಧಿಕನ್ಯಕಾಧರಾ–
ಕರಾವಗೂಢಮಧ್ಯಮಮ್ ॥

(ಕಡಲ ಕನ್ಯೆಯಾದ ಶ್ರೀದೇವಿ ಮತ್ತು ಭೂದೇವಿ ಕೈಯಿಂದಪ್ಪಿ ಹಿಡಿದ ಸೆಳು ನಡುವಿನ ನಾರಾಯಣನನ್ನು, ಓ ನನ್ನ ಮನವೆ, ನೆನೆಯುತ್ತಿರು.)

ಕೈಯಲ್ಲಿ ಕಮಲ ಹಿಡಿದು ನಿಂತಿರುವ ಶ್ರೀ–ಭೂರೂಪಗಳ ಇನ್ನೊಂದು ಬಗೆಯ ಧ್ಯಾನವನ್ನೂ ಅವರು ನಿರೂಪಿಸಿದ್ದಾರೆ:–

ಶ್ರಿಯೋದಯದ್ದಿವಾಕರ–
ವ್ರಜಶ್ರಿಯಾ ನಿಷೇವಿತಮ್ ।
ತಥೈವ ಚಾರುಲೀಲಯಾ
ಹರಿನ್ಮಣಿಶ್ರಿಯಾ ಭುವಾ ॥

(ಸೂರ್ಯರುಗಳ ಮೊತ್ತವೇ ಉದಿಸಿಬಂದಂತೆ ಬೆಳಗುವ ಶ್ರೀ ದೇವಿ ಒಂದೆಡೆ. ನೀಲಮಣಿಯಂಥ ಚೆಲುಕಾಂತಿಯ ಲೀಲಾಮಯಿಯಾದ ಭೂದೇವಿ ಒಂದೆಡೆ. ಓ

ನನ್ನ ಮನವೆ, ಕಮಲಪಾಣಿಯರಾದ (ಪ್ರವೇಷ್ಟಶೋಭಿಪದ್ಮಯಾ) ಇವರ ನಡುವೆ ನಿಂತ ನಾರಾಯಣನನ್ನು ಸ್ಮರಿಸು.)

ಆಚಾರ್ಯ ಮಧ್ವರೂ ತಂತ್ರಸಾರ ಸಂಗ್ರಹದಲ್ಲಿ ಶ್ರೀ-ಭೂರೂಪಗಳ ಧ್ಯಾನವನ್ನು ಇದೇ ರೀತಿಯಲ್ಲಿ ನಿರ್ದೇಶಿಸಿದ್ದಾರೆ. ಶ್ರೀ ಮತ್ತು ಲಕ್ಷ್ಮೀರೂಪಗಳ ಧ್ಯಾನದ ಬಗೆಯನ್ನು ಆಚಾರ್ಯರೇ ದ್ವಾದಶ ಸ್ತೋತ್ರದಲ್ಲಿ ತಿಳಿಸಿದ್ದಾರೆ:-

ಜಾಂಬೂನದಾಂಬರಾಧಾರಂ
ನಿತಂಬಂ ಚಿಂತ್ಯಮೀಶಿತು: ।
ಸ್ವರ್ಣಮಂಜೀ ರಸಂವೀತಂ
ಆರೂಢಂ ಜಗದಂಬಯಾ ॥

....
ಸ್ಮರಣೀಯಮುರೋ ವಿಷ್ಣೋ:
ಇಂದಿರಾವಾಸ ಮುತ್ತಮೈ: ॥

(ಹಸನಾಗಿ ತೊಟ್ಟಿರುವ ಮಿಸುನಿ ಬಣ್ಣದ ಪಟ್ಟೆ
ಮೇಲೆ ಬಿಗಿದಿರುವಂಥ ಹೊನ್ನ ನಡುದಾರ
ಜಗದ ತಾಯಿ ಶ್ರೀದೇವಿಯಾಸನಂ ಜಗದೊಡೆಯ
ನಾರಾಯಣನ ತೊಡೆಯ ನೆನೆಯಬೇಕು.
ತಾಯಿ ಲಕ್ಷ್ಮೀದೇವಿ ನೆಲೆನಿಂತ ಶ್ರೀಹರಿಯ
ಎದೆಯನ್ನು ಉತ್ತಮರು ನೆನೆಯಬೇಕು.)

ಹೀಗೆ ನಾರಾಯಣನ ಜತೆಗೆಯೆ ಶ್ರೀತತ್ತ್ವದ ಉಪಾಸನೆಯೂ ನಡೆಯಬೇಕು. ಏಕೆಂದರೆ ಅದೂ ಮೋಕ್ಷಸಾಧನೆಗಳಲ್ಲಿ ಒಂದು: "ಶ್ರಿಯಂ ವಸಾನಾ ಅಮೃತತ್ತ್ವಮಾಯನ್". ಆದರೆ ಪ್ರತ್ಯೇಕವಾಗಿ ಅಲ್ಲ. ಭಗವಂತನನ್ನು ಶ್ರೀಪತಿ ಎಂದು ಉಪಾಸನೆ ಮಾಡಿದರೆ ಇಬ್ಬರ ಉಪಾಸನೆಯೂ ಆಯಿತು. ಅದನ್ನೆ "ಅಂಗನೆ ಸಹಿತ"-ಅಂಗನೆಯಿಂದ ಸಹಿತವಾಗಿ-ಎಂದು ದಾಸರು ಸೂಚಿಸಿದ್ದಾರೆ.

ಆಚಾರ್ಯ ಮಧ್ವರ ಶ್ರೀಸ್ತುತಿ ಈ ವಿಷಯದಲ್ಲಿ ಸ್ಪಷ್ಟವಾದ ಬೆಳಕು ಚೆಲ್ಲುತ್ತದೆ:-

ವಿಶ್ವ-ಸ್ಥಿತಿ-ಪ್ರಳಯ-ಸರ್ಗ-ಮಹಾವಿಭೂತಿ-
ವೃತ್ತಿ ಪ್ರಕಾಶ-ನಿಯಮಾವೃತಿ-ಬಂಧ-ಮೋಕ್ಷಾ: ।

ಯಸ್ಯಾ ಅಪಾಂಗಲವಮಾತ್ರತ ಊರ್ಜಿತಾ ಸಾ
ಶ್ರೀರ್ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ ||

(ಜಗದ ಇರುವು–ಮೇಣಳಿವು–ಹುಟ್ಟು ಐಸಿರಿಯು ಯೋಗ
ಬಾಳು–ತಿಳಿವು–ನಿಯಮನವು ಅಂಕೆ–ಅಜ್ಞಾನ–ಬಂಧ ಮೋಕ್ಷ |
ಯಾವ ರಮೆಯು ಕಡೆಗಣ್ಣ ನೋಟಕೀಯೆಲ್ಲ ನಡೆಯುತಿಹುದೋ
ಅಂಥವಳಿಗೂ ತನ್ನ ಮೆಲು ನೋಟದಿಂದ ಬಲವೀವ ಹರಿಗೆ
ನಮನಂ ||)

ಲಕ್ಷ್ಮಿಯ ಕೃಪಾದೃಷ್ಟಿಯಿಂದಲೇ ಮೋಕ್ಷ ಲಭ್ಯವಾಗುತ್ತದೆ ಎಂಬ ಮಾತನ್ನು ಈ ಸ್ತುತಿ ಸ್ಪಷ್ಟವಾಗಿ ಸಾರುತ್ತದೆ. ಇಲ್ಲಿ ಒಂದು ವಿಶೇಷವಿದೆ: ಇದರ ಹೆಸರು ಶ್ರೀ ಸ್ತುತಿ. ಆದರೆ ಇಲ್ಲಿರುವುದು ಶ್ರೀದೇವಿಗೂ ಬಲನೀಡುವ ಹರಿಯ ಸ್ತುತಿ. ಇದು ಶ್ರೀಸ್ತುತಿಯೂ ಹೌದಾದರೂ ಕೇವಲ ಶ್ರೀತತ್ತ್ವದ ಸ್ತುತಿಯಲ್ಲ; ಅಂತತಃ ಶ್ರೀಪತಿ ಯಾದ ಹರಿಯ ಸ್ತುತಿ. ಹೀಗೆ ಇದನ್ನು 'ಶ್ರೀಸ್ತುತಿ' ಎಂದು ಕರೆದು, ಸ್ತುತಿಯ ಉದ್ದಕ್ಕೂ ಶ್ರೀಪತಿಯಾದ ಹರಿಯ ನಮನವನ್ನು ಸಂಯೋಜಿಸಿ ಉಪಸಂಹಾರ ಮಾಡುವ ಮೂಲಕ ಆಚಾರ್ಯರು ಶ್ರೀತತ್ತ್ವದ ಉಪಾಸನೆಯ ಸರಿಯಾದ ವಿಧಾನ ವನ್ನು ನಮಗೆ ತೋರಿಸಿಕೊಟ್ಟಿದ್ದಾರೆ.

ಆಚಾರ್ಯರೇ ಗೀತಾಭಾಷ್ಯ–ತಾತ್ಪರ್ಯಗಳಲ್ಲಿ ಉದಾಹರಿಸಿದ ಅನೇಕ ಶ್ರುತಿ ಪುರಾಣಗಳೂ ಈ ಮಾತನ್ನು ಸ್ಫುಟಪಡಿಸುತ್ತವೆ :–

ಉಪಾಸ್ಯ ತಾಂ ಶ್ರಿಯಮವ್ಯಕ್ತಸಂಜ್ಞಾಂ
ಭಕ್ತ್ಯಾ ಮರ್ತ್ಯೋ ಮುಚ್ಯತೇ ಸರ್ವಬಂಧೈಃ |
(ಸಾಮವೇದ, ಅಗ್ನಿವೇಶ್ಯಶಾಖೆ)

(ಅವ್ಯಕ್ತನಾಮಕಳಾದ ಶ್ರೀದೇವಿಯನ್ನು ಭಕ್ತಿಯಿಂದ ಉಪಾಸನೆ ಮಾಡುವ ನರನು ಎಲ್ಲ ಸಂಸಾರ ಬಂಧನಗಳಿಂದ ಬಿಡುಗಡೆಗೊಳ್ಳುತ್ತಾನೆ)

ಉಪಾಸಿತಾ ಮುಕ್ತಿದಾ ಸದ್ಯ ಏವ
ಹ್ಯಸ್ಯೇಶಾನಾ ಜಗತೋ ವಿಷ್ಣುಪತ್ನೀ

(ಜಗತ್ತಿನ ಒಡತಿಯಾದ ಲಕ್ಷ್ಮಿಯನ್ನು ವಿಷ್ಣುಪತ್ನಿ ಎಂದು ಉಪಾಸನೆ ಮಾಡಿ ದರೆ ಆಕೆ ಸಂತುಷ್ಟಳಾಗಿ ಕ್ಷಿಪ್ರದಲ್ಲೆ ಮುಕ್ತಿಯನ್ನು ಕರುಣಿಸುತ್ತಾಳೆ.)

ಜ್ಞಾತ್ವಾ ಶ್ರಿಯಂ ತತ್ಪರಮಂ
ತತ್ಪತಿಂ ಪುರುಷೋತ್ತಮಮ್ |

ವಿಜ್ಞಾಯೋಪಾಸತೇ ನಿತ್ಯಂ
ತೇ ಹಿ ಯುಕ್ತತಮಾ ಮತಾಃ ॥ (ಪರಮ ಶ್ರುತಿ)

ಶ್ರೀ ತತ್ತ್ವವನ್ನೂ ಅವಳಿಗೂ ಹಿರಿಯ ತತ್ವವಾದ ನಾರಾಯಣನನ್ನೂ ಅರಿತು ಶ್ರೀದೇವಿಯನ್ನೂ ಅವಳಿಗೂ ಪತಿಯೆಂದು ನಾರಾಯಣನನ್ನೂ ಜತೆಯಾಗಿ ನಿರಂತರ ಉಪಾಸನೆ ಮಾಡುವವರು ಶ್ರೇಷ್ಠ ಯೋಗಸಾಧಕರು. —ಏಕೆಂದರೆ

ವಿಷ್ಣುನಾ ಸಹಿತಾ ಧ್ಯಾತಾ
ಸಾऽಪಿ ತುಷ್ಟಿಂ ಪರಾಂ ವ್ರಜೇತ್ ।
ಅನ್ಯಥಾ ತು ಪುನರ್ವಿಷ್ಣೋಃ
ಶ್ರೀಪತಿತ್ವೇನ ಚಿಂತನಮ್ ॥

ಅಚ್ಛಿದ್ರಮೇವ ಕರ್ತವ್ಯಂ
ಇತಿ ಮುಕ್ತಿಶ್ಚಿರಾದ್ ಭವೇತ್ ॥ (ಪರಮ ಶ್ರುತಿ)

(ವಿಷ್ಣುವಿನ ಜತೆಗೆಯೆ, ವಿಷ್ಣುಪತ್ನಿಯೆಂದೆ ಆಕೆಯನ್ನು ಧ್ಯಾನಿಸುವುದು ಆಕೆ ಮೆಚ್ಚುವ ಉಪಾಸನೆಯ ದಾರಿ. ಆಕೆಯನ್ನು ಸ್ವತಂತ್ರವಾಗಿ ಉಪಾಸನೆ ಮಾಡಿದವರೂ ಅಷ್ಟರಿಂದಲೆ ಮುಕ್ತಿ ಪಡೆಯುವಂತಿಲ್ಲ. ಅವರು ಕೂಡ ಕೊನೆಗಾದರೂ ಅಂಥ ಮಹಾಮಹಿಮಳಾದ ಶ್ರೀದೇವಿಗೂ ಪತಿಯೆಂದು ನಾರಾಯಣನನ್ನು ಅಖಂಡವಾಗಿ ಆರಾಧಿಸಿಯೇ ಮುಕ್ತಿ ಪಡೆಯಬೇಕು. ಆದರಿಂದ ಸ್ವತಂತ್ರವಾಗಿ ಕೇವಲ ಶ್ರೀತತ್ತ್ವದ ಉಪಾಸನೆ ಕೈವಲ್ಯಸಿದ್ಧಿಯ ವಿಲಂಬಕ್ಕಷ್ಟೆ ಕಾರಣವಾದೀತು.)

ಪುರಾಣವೂ ಇದಕ್ಕೆ ಸಂವಾದ ನುಡಿಯುತ್ತದೆ:

ಶ್ರೀಃ ಸುತುಷ್ಟಾ ಹರೇಸ್ತೋಷಂ
ಗಮಯೇತ್ ಕ್ಷಿಪ್ರಮೇವ ತು ।
ಅತುಷ್ಟಾ ತದತುಷ್ಟಿಂ ಚ
ತಸ್ಮಾತ್ ಧ್ಯೇಯೈವ ಸಾ ಸದಾ ॥

(ಶ್ರೀದೇವಿ ಒಲಿದರೆ ಹರಿಯೂ ಬೇಗ ಒಲಿಯುವಂತೆ ಮಾಡುತ್ತಾಳೆ. ಅವಳು ಮುನಿದರೆ ಹರಿಯೂ ಮುನಿವಂತೆ ಮಾಡುತ್ತಾಳೆ. ಆದರಿಂದ ಅವಳನ್ನು ಭಗವಂತನ ಜತೆಗೆ ಉಪಾಸಿಸಿ ಒಲಿಸಿಕೊಳ್ಳಬೇಕು.)

ಒಟ್ಟು ತಾತ್ಪರ್ಯ ಇಷ್ಟು:— ಕೇವಲ ಶ್ರೀತತ್ತ್ವದ ಉಪಾಸನೆಯಿಂದ ಶ್ರೀದೇವಿಯೂ ತುಷ್ಟಳಾಗುವುದಿಲ್ಲ; ಹರಿಯೂ ತುಷ್ಟನಾಗುವುದಿಲ್ಲ. ಅವಳನ್ನು ಜಗದ ತಾಯಿ ಎಂದು ತಿಳಿದರೆ ಸಾಲದು; ಶ್ರೀಹರಿಯನ್ನು ಜಗದ ತಂದೆ ಎಂದು

ತಿಳಿದಾಗ ಮಾತ್ರವೆ ಅವಳಿಗೆ ಮೆಚ್ಚು. ಅದಕ್ಕಾಗಿ ಅವಳು ವಿಷ್ಣುಪತ್ನಿ–ವಿಷ್ಣು ಲಕ್ಷ್ಮೀಪತಿ ಎನ್ನುವ ಉಪಾಸನೆಯೆ ಸರಿಯಾದ ದಾರಿ. ಅದನ್ನೆ ದಾಸರು ಹೀಗೆ ಹೇಳಿದರು : "ಅಂಗನೆ ಸಹಿತ ಭುಜಂಗಶಯನ ಎನ್ನ ಕಂಗಳಿಗುತ್ಸವವೀಯೋ".

ಇಲ್ಲಿ ಒಂದು ರಹಸ್ಯ ಉಂಟು :– ಈ ಇಡಿಯ ವಿಶ್ವ ಹದಿನಾರು ಕಲೆಗಳ ಸಮಷ್ಟಿ. ಹದಿನಾರನೆಯ ಕಲೆಯೆ ಜೀವ. ಅವನಿಗೆ ಸುತ್ತು ಬೇಲಿಯಾಗಿ ಹದಿನೈದು ಜಡಕಲೆಗಳು :- ಶ್ರದ್ಧೆ (ನಂಬಿಕೆಗಳು) ಆಕಾಶ ವಾಯು ಅಗ್ನಿ ಜಲ ಭೂಮಿ (ಎಂಬ ಪಂಚಭೂತಗಳು); ಇಂದ್ರಿಯಗಳು, (ಐದು ಜ್ಞಾನೇಂದ್ರಿಯ ಮತ್ತು ಐದು ಕರ್ಮೇಂದ್ರಿಯ) ಮನಸ್ಸು ಅನ್ನ (ಆಹಾರ) ವೀರ್ಯ (ದೈಹಿಕ ಶಕ್ತಿ ಇತ್ಯಾದಿ); ತಪಸ್ಸು (ಆಲೋಚನೆ); ಮಂತ್ರ (ಮಾತು); ಕರ್ಮ (ಕೃತಿ); ಲೋಕ (ಆಸ್ತಿ-ಒಡೆತನ); ನಾಮ (ಹೆಸರು–ಕೀರ್ತಿ).

ಈ ಹದಿನೈದು ಬೇಲಿಗಳ ಆವರಣದೊಳಗೆಯೇ ಹದಿನಾರನೆಯ ಕಲೆಯಾದ ಜೀವದ ಸಂಚಾರ ನಡೆದಿದೆ. ಹದಿನೈದು ಜಡಗಳು-ಹದಿನಾರನೆಯ ಚೇತನ ಸೇರಿ– ಈ ಹದಿನಾರರ ಮೊತ್ತವೆ ಚೇತನಾಚೇತನಾತ್ಮಕವಾದ ಜಗತ್ತು. ಇದರಾಚೆಗೆ ಜಗತ್ತಿನ ತಾಯಿ ಶ್ರೀದೇವಿ ಹದಿನೇಳನೆಯ ತತ್ತ್ವ. ತಂದೆ ನಾರಾಯಣ ಹದಿನೆಂಟನೆಯ ತತ್ತ್ವ.

ಹದಿನೈದು ಜಡ ಬೇಲಿಗಳನ್ನು ಕಿತ್ತೆಸೆದ ಜೀವ ಹದಿನೇಳು-ಹದಿನೆಂಟರತ್ತ ಮುಖ ತಿರುಗಿಸಬೇಕು. ಹದಿನೇಳರ ಜತೆಗೆ ಹದಿನೆಂಟನ್ನು ಧ್ಯಾನಮಾಡಿ ಸಾಕ್ಷಾತ್ಕರಿಸಿಕೊಳ್ಳಬೇಕು. ಹೊರತು ಹದಿನೇಳನ್ನು ಪೂರ್ತಿಯಾಗಿ ಬಿಟ್ಟು ಹದಿನೆಂಟಕ್ಕೆ ಹಾರುವುದು, ಸಾರುವುದು ಸಾಧ್ಯವಿಲ್ಲ. ಹಾಗೆಯೆ ಹದಿನೆಂಟನ್ನು ಮರೆತು ಹದಿನೇಳರ ಉಪಾಸನೆಯಲ್ಲಿಯೇ ಚರಮಸಿದ್ಧಿಯನ್ನು ಪಡೆಯುವುದೂ ಸಾಧ್ಯವಿಲ್ಲ. ಅದಕ್ಕಾಗಿ ಹದಿನಾರನೆಯವನು ಮಾಡಬೇಕಾದ ಹದಿನೇಳು – ಹದಿನೆಂಟರ ಸಂಯುಕ್ತ ಉಪಾಸನೆಯನ್ನು ದಾಸರು ಸಾರಿದರು :– "ಅಂಗನೆ ಸಹಿತ ಬಾರಯ್ಯ" . ಬಂದು ನಿನ್ನ ಮಂಗಳ ಮೂರುತಿ ತೋರಯ್ಯ. ತೋರಿ ಕಂಗಳಿಗುತ್ಸವವೀಯಯ್ಯ.

ಇಲ್ಲಿ 'ಕಂಗಳಿಗುತ್ಸವವೀಯೋ' ಎನ್ನುವ ಮಾತು ಮೂರು ಮಜಲಿನಲ್ಲಿ ಭಗವದ್‌ದರ್ಶನದ ಬಯಕೆಯನ್ನು ವ್ಯಕ್ತಪಡಿಸುತ್ತದೆ :– ಹೊರಗಣ್ಣಿನ ದರ್ಶನ, ಒಳಗಣ್ಣಿನ ದರ್ಶನ ಮತ್ತು ಸ್ವರೂಪದ ಕಣ್ಣಿನ ಸಾಕ್ಷಿದರ್ಶನ.

ತಿರುಮಲೆಯ ಶ್ರೀನಿವಾಸನ ಮುಂದೆ ನಿಂತು ದಾಸರು ಹೇಳುತ್ತಾರೆ:– "ಎನ್ನ ಕಂಗಳಿಗಾನಂದವೀಯೋ", ನೀನು ಎಲ್ಲ ಯಾತ್ರಿಕರಿಗೆ ಹೇಗೆ ಹಾಗೆ ನನಗೂ ಬರಿಯ ಶ್ರೀಮೂರ್ತಿಯಾಗಿ ಗೋಚರಿಸಿದರೆ ಸಾಲದು. ಚಿನ್ಮಯ ಮೂರುತಿಯಾಗಿ

ಮಂಗಳ ಮೂರುತಿಯಾಗಿ ನನ್ನೆದುರು ಬಂದು ನನ್ನ ಈ ಹೊರಗಣ್ಣಿಗೆ ಉತ್ಸವ ನೀಡು.

ಇಷ್ಟೇ ಸಾಲದು: ನಾನು ಇಲ್ಲಿಂದ ತೆರಳಿದ ಮೇಲೂ ನನ್ನ ಮನದ ಗುಡಿಯಲ್ಲಿ ಮಂಗಳಮೂರ್ತಿಯಾಗಿ ಬಂದು ನನ್ನ ಒಳಗಣ್ಣಿಗೆ ಗೋಚರನಾಗಿ ಉತ್ಸವ ನೀಡು.

ಕೊನೆಯದಾಗಿ–ನನ್ನ ಸ್ವರೂಪೇಂದ್ರಿಯಕ್ಕೆ, ಸಾಕ್ಷಿಯ ಅಕ್ಷಿಗೆ ನಿನ್ನ ಕಲ್ಯಾಣತಮ ರೂಪದಿಂದ ಗೋಚರನಾಗಿ ಅಪರೋಕ್ಷನಾಗು. ಅದರಿಂದ ಸ್ವರೂಪಾನಂದಾನುಭವದ ನಿತ್ಯೋತ್ಸವವನ್ನು ಕರುಣಿಸು. ಅದಕ್ಕಾಗಿ ಓ ಶ್ರೀನಿವಾಸ, ಶ್ರೀಸಹಿತನಾಗಿ ಬಾರಯ್ಯ ವೆಂಕಟರಮಣ: "ಯತ್ ತೇ ರೂಪಂ ಕಲ್ಯಾಣತಮಂ ತತ್ ತೇ ಪಶ್ಯಾಮಿ".

'ಕಂಗಳಿಗುತ್ಸವವೀಯೋ' ಎಂಬ ಮಾತಿನಲ್ಲಿ ಸೂಚಿತವಾದ ಒಳಗಣ್ಣಿನ ದರ್ಶನವನ್ನು ಮುಂದಿನ ಪದ್ಯದಲ್ಲಿ ಸ್ಪಷ್ಟವಾಗಿ ಹೇಳುತ್ತಾರೆ:–

ಕಡಗ ಕಿರುಗೆಜ್ಜೆ ಪೆಂಡೆಗಳಿಂದಲೊಪ್ಪುವ
ಉಡುಗೆ ಪೀತಾಂಬರ ತರಳ ಕೌಸ್ತುಭ।
ಪಿಡಿದ ಶಂಖ–ಚಕ್ರ ಕರ್ಣಕುಂಡಲದಿಂದ
ಕಡಲ ಶಯನ ಎನ್ನ ಹೃದಯದೊಳಗೆ ನಿಲ್ಲೋ॥

ಕೈಯಲ್ಲಿ ಕಡಗ (ಬಳೆ), ಕಾಲಲ್ಲಿ ಕಿರುಗೆಜ್ಜೆಯ ಸರಪಣಿ ಅಥವಾ ಗಗ್ಗರ ಮತ್ತು ಪೆಂಡೆ (ಅಂದುಗೆ) ಇವುಗಳಿಂದೊಪ್ಪುವ ರೂಪ. ಪೀತಾಂಬರದ ಉಡುಗೆ ಉಟ್ಟರೂಪ. ಕೊರಳಲ್ಲಿ ತರಳಕಾಂತಿಯ ಕೌಸ್ತುಭಮಣಿಯ ಹಾರ ತೊಟ್ಟ ರೂಪ. ಮೇಲಿನೆರಡು ಕೈಗಳಲ್ಲಿ ಶಂಖ–ಚಕ್ರ ಹಿಡಿದ ರೂಪ. ಕಿವಿಯಲ್ಲಿ ಮಕರ ಕುಂಡಲದಿಂದ ಬೆಳಗುವ ರೂಪ. ಇಂಥ ಚೆಲುವ ರೂಪದಿಂದ, ಓ ಕಡಲ ಶಯನ ಕೃಷ್ಣ, ಎನ್ನ ಹೃದಯದ ಕಡಲೊಳಗು ನಿಲ್ಲೋ.

ವಾಸ್ತವವಾಗಿ ಕಿರುಗೆಜ್ಜೆ ಎನ್ನುವುದು ಹಲವು ಆಭರಣಗಳನ್ನು ಹೇಳುವ ಶಬ್ದ. ಕೊರಳಲ್ಲಿ ಗೆಜ್ಜೆಸರ, ಸೊಂಟದಲ್ಲಿ ಗೆಜ್ಜೆಯ ಡಾಬು. ಕಾಲಲ್ಲಿ ಕಿಂಕಿಣಿಸುವ ಕಾಲ್ಗೆಜ್ಜೆ. ಇವೆಲ್ಲವೂ ಕಿರುಗೆಜ್ಜೆ. ಇದನ್ನೆ ಸಂಸ್ಕೃತದಲ್ಲಿ 'ಕ್ಷುದ್ರಘಂಟಿಕಾ' ಎಂದು ಕರೆಯುತ್ತಾರೆ.

ಕೌಸ್ತುಭಕ್ಕೆ ವಿಶೇಷಣವಾಗಿ ಬಂದ ತರಳ ಎಂಬ ಪದವೂ ತುಂಬ ಔಚಿತ್ಯಪೂರ್ಣವಾದದ್ದು. ತರಳ ಎಂದರೆ ತಳತಳಿಸುವಂಥದು; ಪ್ರಕಾಶಮಾನವಾದದ್ದು ಎನ್ನುವುದು ಒಂದು ಅರ್ಥ. ಮುತ್ತಿನ ಸರದ ನಡುವಿನ ನಾಯಕಮಣಿ ಎನ್ನು

ವುದು ಇನ್ನೊಂದು ಅರ್ಥ: "ಹಾರಮಧ್ಯೇ ಸ್ಥಿತಂ ರತ್ನಂ ನಾಯಕಂ ತರಳಂ ವಿದು:" (ಅಭಿಧಾನರತ್ನಮಾಲೆ, ಭೂಮಿಕಾಂಡ-410)

ಎರಡು ಅರ್ಥಗಳೂ ಇಲ್ಲಿ ವಿವಕ್ಷಿತ. ಈ ಕೌಸ್ತುಭಮಣಿಯು ಹಾರದ ಇತರ ಮಣಿಗಳನ್ನು ಮೀರಿಸಿ ತಳ ತಳಿಸುವ ಮಹಾಕಾಂತಿಮಯವೂ ಹೌದು. ಹಾರದ ಮಧ್ಯದಲ್ಲಿ ಎದ್ದುಕಾಣುವ ನಾಯಕಮಣಿಯೂ ಹೌದು ಭಗವಂತನ ಎದೆಯ ಮಣಿ ಎನ್ನುವ ಕೀರ್ತಿ ಈ ಕೌಸ್ತುಭಕ್ಕೆ ಮೊಸಲು: "ಕೌಸ್ತುಭೋ ವಕ್ಷಸಿ ಮಣಿ:"

ಕೊರಳ ಹಾರದ ಉಳಿದ ಮಣಿಗಳಿಗೆ ಯಾರೂ ಹೆಸರಿಟ್ಟವರಿಲ್ಲ. ಕೌಸ್ತುಭಕ್ಕೆ ಮಾತ್ರವೆ ಆ ಪಟ್ಟ. ಇದಕ್ಕೆ ಕಾರಣ ಉಂಟು. ತಾಯಿ ಲಕ್ಷ್ಮೀ ದೇವಿ ಭಗವಂತನ ಎದೆಯಲ್ಲಿ ಶ್ರೀವತ್ಸವಾಗಿ ನೆಲಸಿದಂತೆ ಬ್ರಹ್ಮದೇವ ಕೌಸ್ತುಭಮಣಿಯಾಗಿ ನೆಲಸಿದನಂತೆ: "ತತ್ ಕಂಠಗಂ ಕೌಸ್ತುಭಮಾನ ಧಾತಾ"

ಭಾಗವತದಲ್ಲೂ ಈ ಮಾತು ಬರುತ್ತದೆ:–

ಚೈತ್ತ್ಯಸ್ಯ ತತ್ತ್ವಮಮಲಂ ಮಣಿಮಸ್ಯ ಕಂಠೇ (3:29 27)

(ಅವನ ಕೊರಳಲ್ಲಿ ಚಿತ್ತಾಭಿಮಾನಿಯಾದ ಚತುರ್ಮುಖನದೇ ರೂಪಾಂತರವಾದ ಕೌಸ್ತುಭವನ್ನು ಸ್ಮರಿಸಬೇಕು)

ಆಚಾರ್ಯರು ಉದಾಹರಿಸಿದ ಭಾಗವತತಂತ್ರದ ವಚನ ಇದನ್ನು ಇನ್ನಷ್ಟು ಸ್ಫುಟವಾಗಿ ವಿವರಿಸುತ್ತದೆ:–

ಸ ಚ ಬ್ರಹ್ಮಾ ಹರೇಃ ಕಂಠೇ
ಕೌಸ್ತುಭತ್ವೇನ ಭಾಸತೇ ||

(ಚಿತ್ತದ ಅಭಿಮಾನಿಯಾಗಿ ಚೈತ್ತ್ಯ ಎನಿಸಿದ ಆ ಚತುರ್ಮುಖಬ್ರಹ್ಮನೆ ಹರಿಯ ಕೊರಳಲ್ಲಿ ಕೌಸ್ತುಭವಾಗಿ ಬೆಳಗುತ್ತಿದ್ದಾನೆ).

ಇಂಥ ದಿವ್ಯಾಲಂಕಾರಭೂಷಿತನಾದ ಭಗವಂತನನ್ನು ದಾಸರು ತನ್ನ ಹೃದಯದೊಳಗೆ ಕಾಣಬಯಸುತ್ತಾರೆ. ನಾರಾಯಣೋಪನಿಷತ್ತು ಹೀಗೆ ಹೇಳುತ್ತದೆ:– ಆ ಭಗವಂತನನ್ನು ಒಳಗಿನ ಸಮುದ್ರದಲ್ಲಿ, ಹೃದಯ ಸಮುದ್ರದಲ್ಲಿ ಕವಿಗಳು ಕಾಣುತ್ತಾರೆ: "ಯಮಂತಃ ಸಮುದ್ರೇ ಕವಯೋಽವಯಂತಿ". ಅದಕೆಂದೆ ದಾಸರೂ ಹಾಡಿದರು: "ಕಡಲ ಶಯನ, ಹೃದಯದೊಳಗೆ ನಿಲ್ಲೊ" ನೀನು ಹೊರಗಿನ ಹಾಲುಗಡಲಲ್ಲಿ ಶಯನಮಾಡಿದರೆ ಸಾಲದು. ನನ್ನೊಳಗೆ ಬಾ. ನನ್ನ ಹೃದಯವೆಂಬ ಕಡಲೊಳಗೆ ಬಂದು ನೆಲಸು. ನನ್ನ ಒಳಗಣ್ಣಿಗೆ ಅಂಥ ದರ್ಶನವನ್ನು ನೀಡಯ್ಯ; ಬಾರಯ್ಯ ವೆಂಕಟರಮಣ.

ದಾಸರ ಈ ವರ್ಣನೆ ಕಂಡಾಗ ದೇವಕಿಯ ಪ್ರಸೂತಿಗೃಹದಲ್ಲಿ ವಸುದೇವ ಕಂಡ ಕೃಷ್ಣನ ಮುದ್ದುರೂಪದ ವರ್ಣನೆ ನೆನಪಾಗುತ್ತದೆ. ದಾಸರು ಕಾಣಬಯಸಿ ದಂಥದೇ ರೂಪವನ್ನು ಆಗ ವಸುದೇವ ಕಂಡಿದ್ದ. ಭಾಗವತ ಅದನ್ನು ಹೀಗೆ ವರ್ಣಿಸುತ್ತದೆ:–

ತಮದ್ಭುತಂ ಬಾಲಕಮಂಬುಜೇಕ್ಷಣಂ
ಚತುರ್ಭುಜಂ ಶಂಖಗದಾದ್ಯುದಾಯುಧಮ್ ।
ಶ್ರೀವತ್ಸಲಕ್ಷ್ಮಂ ಗಳಶೋಭಿಕೌಸ್ತುಭಂ
ಪೀತಾಂಬರಂ ಸಾಂದ್ರಪಯೋದಸೌಭಗಮ್ ॥

ಮಹಾರ್ಹವೈಡೂರ್ಯಕಿರೀಟಕುಂಡಲ
ತ್ವಿಷಾ ಪರಿಷ್ವಕ್ತಸಹಸ್ರಕುಂತಳಮ್ ।
ಉದ್ದಾಮಕಾಂಚ್ಯಂಗದಕಂಕಣಾದಿಭಿಃ
ವಿರೋಚಮಾನಂ ವಸುದೇವ ಐಕ್ಷತ ॥ (ಭಾಗ. 10. 4. 9-10)

(ತಾವರೆಗಣ್ಣಿನ, ನಾಲ್ಕು ಕೈಗಳ ಅಚ್ಚರಿಯ ಮಗು. ಕೈಗಳಲ್ಲಿ ಶಂಖ–ಗದೆಯಂಥ ಹಿರಿಯ ಆಯುಧಗಳು. ಎದೆಯಲ್ಲಿ ಶ್ರೀವತ್ಸಚಿಹ್ನೆ. ಕೊರಳಲ್ಲಿ ಕಂಗೊಳಿಸುವ ಕೌಸ್ತುಭಮಣಿ. ಪೀತಾಂಬರದ ಉಡುಗೆ. ಗಿಡಿದ ಮೋಡದ ಚೆಲುನೀಲಿ ಬಣ್ಣ. ಬೆಲೆ ಬಾಳುವ, ವೈಡೂರ್ಯ ಖಚಿತವಾದ ಕಿರೀಟ–ಕುಂಡಲಗಳ ಪ್ರಭೆಯಿಂದ ಆವೃತವಾದ ಕೇಶರಾಶಿ. ಅಮೂಲ್ಯವಾದ ಡಾಬು, ತೋಳುಬಂದಿ, ಕೈಬಳೆ ಮುಂತಾದ ಆಭರಣಗಳಿಂದ ಶೋಭಿಸುವ ಸುಂದರ ಮೂರ್ತಿ. ಇಂಥ ಬಾಲಮೂರ್ತಿ ಕೃಷ್ಣನನ್ನು ವಸುದೇವ ಕಂಡ.)

ಈ ಎರಡು ಪದ್ಯಗಳ ಸಮಗ್ರ ಭಾವವನ್ನೆ ಇಲ್ಲ ನಾಲ್ಕು ಸಾಲಿನ ಸೊಲ್ಲಿನಲ್ಲಿ ದಾಸರು ಕನ್ನಡಕ್ಕಿಳಿಸಿದ್ದಾರೆ. ಅಲ್ಲಿ ಶಂಖದ ಜತೆ ಗದೆಯನ್ನು ಹೇಳಿದ್ದರೆ ಇವರು ಶಂಖ ಚಕ್ರ ಎಂದರು. ಇದಕ್ಕೂ ಕಾರಣ ಉಂಟು. ದಾಸರು ನಿಂತು ಹಾಡುತ್ತಿರುವುದು ಶ್ರೀನಿವಾಸನ ಮುಂದೆ. ಅವನ ಕೈಗೆ ತೊಡಿಸಿರುವುದು ಶಂಖ ಚಕ್ರಗಳನ್ನು ಹೊರತು ಶಂಖ–ಗದೆಗಳನ್ನೆಲ್ಲ. ಅದರಿಂದ "ಪಿಡಿದ ಶಂಖ–ಚಕ್ರ" ಎಂದರು.

ಸೂಕ್ಷ್ಮವಾಗಿ ಗಮನಿಸುವವರಿಗೆ ಈ ಸೊಲ್ಲಿನಲ್ಲಿ ಇನ್ನೊಂದು ಮಹತ್ವದ ಸಂಗತಿ ಗೋಚರಿಸುತ್ತದೆ :– ಶ್ರೀನಿವಾಸನ ಮೂಲ ಮೂರ್ತಿಯ ಶಿಲ್ಪದಲ್ಲಿ ಗೋಚರಿಸುವ ಆಭರಣಗಳನ್ನೆ ದಾಸರು ಇಲ್ಲಿ ಉಲ್ಲೇಖಿಸಿದ್ದಾರೆ.

ತೋಳಲ್ಲಿ ಕೈಬಳೆ–ಕಡಗಗಳು, ಕಾಲಲ್ಲಿ ಕಿರುಗೆಜ್ಜೆಯ ಅಂದುಗೆಗಳು (ಪೆಂಡೆ), ಸೊಂಟದಲ್ಲಿ ಪೀತಾಂಬರ, ಕೊರಳಲ್ಲಿ ಕೌಸ್ತುಭ ಮಣಿಯ ಮುತ್ತಿನ ಹಾರಗಳು,

ಕೈಯಲ್ಲಿ ಚಕ್ರ-ಶಂಖಗಳು ಮತ್ತು ಕಿವಿಯಲ್ಲಿ ಕುಂಡಲ-ಮುಖ್ಯವಾಗಿ ಇವು ಮೂಲ ಶಿಲ್ಪದಲ್ಲೆ ಬರುವ ಆಭರಣಗಳು. ಆಚಾರ್ಯ ರಾಮಾನುಜರ ಮೊದಲು ವಿಗ್ರಹದಲ್ಲಿ ಶಂಖ-ಚಕ್ರಗಳಿರಲಿಲ್ಲ ಎಂಬ ಪ್ರಥೆಯಿದ್ದರೂ ಪೂರ್ವದ ಆಳ್ವಾರರ ವಚನಗಳಲ್ಲೂ ಈ ಶಂಖ-ಚಕ್ರಗಳ ಉಲ್ಲೇಖ ಬರುವುದರಿಂದ ಬಹಳ ಪ್ರಾಚೀನದಿಂದಲೂ ಈ ಆಯುಧಗಳನ್ನು ಮೂಲ ಮೂರ್ತಿಯ ಒಟ್ಟಂದದ ಭಾಗವಾಗಿಯೆ ಪರಿಗಣಿಸಲಾಗಿತ್ತು ಎಂದು ತಿಳಿದು ಬರುತ್ತದೆ.

ಹೀಗೆ ಇವೆಲ್ಲ ಚಿನ್ನದ-ವಜ್ರದ ಕವಚಗಳಿಂದ ಶ್ರೀನಿವಾಸನನ್ನು ಮುಚ್ಚುವ ಮುನ್ನ ನಾವು ಕಾಣಬಹುದಾದ ಮೂಲ ಮೂರ್ತಿಯ ಆಭರಣಗಳು. ಆದರಿಂದಲೇ ಇಲ್ಲಿ ಆಭರಣಗಳ ಜತೆಗೆ ಕಿರೀಟದ ಉಲ್ಲೇಖವನ್ನು ದಾಸರು ಮಾಡಿಲ್ಲ. ಏಕೆಂದರೆ ಶ್ರೀನಿವಾಸ ಮೂಲತಃ ಜಟಾಮುಕುಟನೇ ಹೊರತು ವೈಡೂರ್ಯ ಕಿರೀಟನಲ್ಲ ಎಂದು ನಂಬಲಾಗಿದೆ. ಹಳೆಯ ಸಂಸ್ಕೃತದ ಉಲ್ಲೇಖಗಳೂ, 'ತಾಳ್ ಜಡೈಯುಂ ನೀಳ್ ಮುಡಿಯುಂ' ಎಂಬ ಪೇಯಾಳ್ವಾರರ ಪಾಶುರವೂ ಈ ಮಾತನ್ನೇ ಸಮರ್ಥಿಸುತ್ತವೆ.

ಈ ಎಲ್ಲ ವಿವರಗಳಿಂದ ನಮಗೆ ತಿಳಿಯುವ ಅಂಶ ಇದು: ಶ್ರೀನಿವಾಸನಿಗೆ ಅಲಂಕಾರ ಪೂಜೆಯಾಗುವ ಮುನ್ನ, ನಿರ್ಮಾಲ್ಯವಿಸರ್ಜನೆಯಾಗಿ ಮೂಲಬಿಂಬದ ಪೂರ್ಣ ದರ್ಶನವಾಗುವ ಮುಂಜಾವದ ಕ್ಷಣದಲ್ಲಿ ದಾಸರು ವಿಗ್ರಹದ ಮುಂದೆ ನಿಂತು ಈ ಹಾಡನ್ನು ಹಾಡಿದ್ದಾರೆ. ದಾಸರು ಕಂಡ ಈ ಮೂಲರೂಪ ವಸುದೇವ ಕಂಡ ಬಾಲರೂಪವೆ ಹೊರತು ಇನ್ನೇನೂ ಅಲ್ಲ. ಅದರಿಂದಲೇ ಶ್ರೀನಿವಾಸ ಉತ್ತರದವರಿಗೆ ಇಂದಿಗೂ ಬಾಲಾಜಿಯೆಂದೇ ಪರಿಚಿತನಾಗಿದ್ದಾನೆ.

ಇಲ್ಲಿ ಇನ್ನೂ ಒಂದು ಗಮನಿಸಬೇಕಾದ ಅಂಶ ಉಂಟು: ಶ್ರೀನಿವಾಸನ ಮೂರ್ತಿಯಲ್ಲಿ ಮೇಲಿನ ಬಲಗೈಯಲ್ಲಿ ಚಕ್ರವಿದೆ; ಎಡಗೈಯಲ್ಲಿ ಶಂಖವಿದೆ ದಾಸರೂ ಇದೇ ಕ್ರಮದಲ್ಲಿ "ಪಿಡಿದ ಚಕ್ರ-ಶಂಖ" ಎನ್ನಬೇಕಿತ್ತು. ಬದಲಾಗಿ ಕ್ರಮ ಬದಲಿಸಿ "ಪಿಡಿದ ಶಂಖ-ಚಕ್ರ" ಎಂದು ಏಕೆ ಹೇಳಿದರು?

ಇದರಲ್ಲಿ ಉಪಾಸನೆಯ ರಹಸ್ಯವೊಂದುಂಟು. ಉಪಾಸನೆಯ ಬಗೆಯನ್ನು ನಿರ್ದೇಶಿಸುವ ಅನೇಕ ವಚನಗಳಲ್ಲಿ ಇದೇ ಕ್ರಮದ ಆಯುಧ ನಿರ್ದೇಶವನ್ನು ನಾವು ಕಾಣಬಹುದು.

ನೀಲೋತ್ಪಲದಳಶ್ಯಾಮಂ
ಶಂಖಚಕ್ರ ಗದಾಧರಮ್ || (ಭಾಗ. 3. 29 13)

(ನೀಲನೈದಿಲೆಯಂತೆ ಕಪ್ಪು ಬಣ್ಣದ ಮೈಯ, ಕೈಗಳಲ್ಲಿ ಶಂಖ-ಚಕ್ರ-ಗದೆಗಳನ್ನು ಧರಿಸಿದ ಭಗವಂತನ ರೂಪವನ್ನು ಧ್ಯಾನಿಸಬೇಕು.)

ಶಂಖಚಕ್ರ ಗದಾಪದ್ಮ-
ಧರಾಶ್ಚಿಂತ್ಯಾ ಹರೇರ್ಭುಜಾಃ ॥ (ದ್ವಾದಶಸ್ತೋತ್ರ)

(ಶಂಖ-ಚಕ್ರ-ಗದಾ-ಪದ್ಮಗಳನ್ನು ಧರಿಸಿದ ಹರಿಯ ತೋಳುಗಳನ್ನು ಚಿಂತಿಸಬೇಕು.)

ಪೃಥುದೀರ್ಘಚತುರ್ಬಾಹುಂ
ಶಂಖಚಕ್ರ ಗದಾಂಬುಜೈಃ ।
ಯುಕ್ತಮುನ್ನಿದ್ರ ಪದ್ಮಾಕ್ಷಂ
ಸ್ಫುರನ್ಮಕರಕುಂಡಲಮ್ ॥ (ಓಂತತ್ಸತ್ ಪ್ರಣವ ಕಲ್ಪ)

(ಪುಷ್ಟವಾದ ನೀಳಾದ ನಾಲ್ಕು ತೋಳುಗಳು. ಅವುಗಳಲ್ಲಿ ಶಂಖ ಚಕ್ರ ಗದಾ ಪದ್ಮಗಳು. ಬಿರಿದ ತಾವರೆಯಂಥ ಅರಳುಗಣ್ಣು. ಕಿವಿಯಲ್ಲಿ ಬೆಳಗುವ ಮಕರಕುಂಡಲ. ಇಂಥ ಭಗವಂತನ ರೂಪವನ್ನು ನೆನೆಯಬೇಕು.)

ಇಲ್ಲಿ ಎಲ್ಲೆಡೆಯೂ ಶಂಖದ ನಿರ್ದೇಶ ಮೊದಲು ಬರುತ್ತದೆ. ಅನಂತರ ಚಕ್ರ. ಇವೆಲ್ಲವೂ ಹೃದಯದಲ್ಲಿ ಭಗವಂತನ ಉಪಾಸನೆಯ ಕ್ರಮವನ್ನು ಹೇಳಲು ಹೊರಟವುಗಳು. ಹೀಗೆ ಧ್ಯಾನಪ್ರಕರಣದಲ್ಲಿ ಬರುವ ಈ ಶಂಖದ ನಿರ್ದೇಶ ಕ್ರಮದ ಏಕರೂಪತೆ ಬರಿಯ ಆಕಸ್ಮಿಕ ಅಲ್ಲ. ಇದಕ್ಕೆ ಒಂದು ಉದ್ದೇಶ ಉಂಟು.

ಚಕ್ರ ದುಷ್ಟಶಕ್ತಿಯ ನಾಶದ ಸಂಕೇತ. ಶಂಖ ಶಾಂತಿಯ ಸಂಕೇತ. ಚಕ್ರ ಅಮಂಗಳದ ನಾಶದ ಸಂಕೇತ. ಶಂಖ ಮಂಗಳದ ಸಮೃದ್ಧಿಯ ಸಂಕೇತ. ಚಕ್ರ ತಮೋಮಾನಿನಿಯಾದ ದುರ್ಗೆಯ ರೂಪ. ಶಂಖ ಸತ್ವಮಾನಿನಿಯಾದ ಲಕ್ಷ್ಮಿಯ ರೂಪ. ಮೂಲತಃ ಎರಡೂ ಶಕ್ತಿಗಳು ಒಂದೇ ಆದರೂ ಅನುಸಂಧಾನದ ಮುಖ ಬೇರೆ ಬೇರೆ. ಉಪಾಸನೆಯಲ್ಲಿ ಯಾವುದಕ್ಕೆ ಒತ್ತು ಹೆಚ್ಚೋ ಅದು ಮೊದಲು ಬರುತ್ತದೆ. ದುಷ್ಟನಿಗ್ರಹ ಮುಂತಾದ ನಿಷೇಧಮುಖದ ಉಪಾಸನೆಯಲ್ಲಿ ಚಕ್ರ ಮುಂದೆ. ವಿಧಿಮುಖವಾದ ಶಾಂತ ಉಪಾಸನೆಯಲ್ಲಿ ಶಂಖ ಮುಂದೆ. ಕರಿರಾಜ ಕರೆದಾಗ ಚಕ್ರ ಹಿಡಿದು ಬಂದ; ಧ್ರುವ ಕರೆದಾಗ ಬಂದು ಶಂಖದಿಂದ ಅವನ ಕೆನ್ನೆ ಸವರಿದ-ಅಲ್ಲವೆ?

ಇಲ್ಲೂ ಅಷ್ಟೇ; 'ನನ್ನ ಅನಿಷ್ಟಗಳು ದೂರಾಗಲಿ' ಎನ್ನುವುದಕ್ಕಿಂತಲು 'ಭಗವಂತನನ್ನು ಕಾಣುವ ನನ್ನ ಅಭೀಷ್ಟ ಈಡೇರಲಿ' ಎನ್ನುವುದು ದಾಸರ ಪ್ರಾರ್ಥನೆಯ ಮುಖವಾದಾಗ ಶಂಖದ ನಿರ್ದೇಶ ಮೊದಲು ಬಂತು. ಶಂಖ ಪರಮ ಮಾಂಗಲಿಕ. ಇಂಥ ಉಪಾಸನೆಯೂ ಮಾಂಗಲಿಕ. ಶಂಖದ ಪೂರ್ವನಿರ್ದೇಶವೆ ಉಪಾಸನೆಯ ಮಂಗಲಾಚರಣೆ.

ಉಪಾಸನೆಯ ಮುಖದಲ್ಲಿ ಶಂಖ ಮೊದಲಾದರೂ ಫಲದ ಮುಖದಲ್ಲಿ ಯಾವಾಗಲೂ ಚಕ್ರವೇ ಮೊದಲು. ಅನಂತರ ಶಂಖ. ಏಕೆಂದರೆ ಅನಿಷ್ಟನಾಶ ಮೊದಲು; ಇಷ್ಟಲಾಭ ಅನಂತರ. ಮೃತ್ಯುರೂಪವಾದ ಸಂಸಾರದ ನಾಶ ಮೊದಲು; ಅಮೃತತ್ವರೂಪವಾದ ಮೋಕ್ಷಸುಖದ ಲಾಭ ಅನಂತರ: "ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ". ಇವು ಮೋಕ್ಷದ ಎರಡು ದಲಗಳು. ಶ್ರೀ ಪಾದವನ್ನು ಶರಣಾದವರಿಗೆ ಈ ಎರಡು ವರಗಳು ಅನುಕ್ರಮವಾಗಿ ಲಭಿಸುತ್ತವೆ ಎಂದು ಸೂಚಿಸುವುದಕ್ಕಾಗಿಯೆ ಶ್ರೀನಿವಾಸನ ಕೈಯಲ್ಲಿ ಚಕ್ರ ಮೊದಲು, ಶಂಖ ಅನಂತರ ಬಂದಿವೆ. ಅದರಿಂದಲೇ ಮೋಕ್ಷಪ್ರದನಾದ ಚತುರ್ವ್ಯೂಹದ ಪರವಾಸು ದೇವನ ಕೈಗಳಲ್ಲಿ ಇದೇ ಕ್ರಮದಲ್ಲಿ ಆಯುಧ ನಿರ್ದೇಶವಿದೆ: ಚಕ್ರ–ಶಂಖ–ಗದಾ–ಪದ್ಮ.

ಇಲ್ಲಿ ನೆನಪಿಸಿಕೊಳ್ಳಬೇಕಾದ ಇನ್ನೊಂದು ಸ್ವಾರಸ್ಯದ ಮಾತು: ಇದು ಮುಂಜಾವದಲ್ಲಿ ಹಾಡಿದ ಹಾಡು ಎನ್ನುವುದನ್ನು ನಾವು ಗುರುತಿಸಿದ್ದೇವೆ. ಮುಂಜಾವದ ದೇವತೆ ಕೇಶವ ಎನ್ನುವುದೂ ನಮಗೆ ಗೊತ್ತು. ಮೇಲ್ಬದಿಯ ಬಲಗೈಯಿಂದ ಪ್ರದಕ್ಷಿಣೆಯಾಗಿ ಶಂಖ – ಚಕ್ರ – ಗದಾ – ಪದ್ಮಗಳು ಕೇಶವನ ಆಯುಧ ಕ್ರಮ. ಆ ಕೇಶವನೆ ಈ ಶ್ರೀನಿವಾಸನಲ್ಲವೆ? ಅದರಿಂದ, ದಾಸರು ಶ್ರೀನಿವಾಸನನ್ನು ಮುಂಜಾವದಲ್ಲಿ ಕೇಶವನ ರೂಪದಿಂದ ಕಂಡು ಹಾಡಿದರು. ಹೀಗೆ ಈ ಕ್ರಮ ವ್ಯತ್ಯಯದಲ್ಲಿ ಅನೇಕ ಉದ್ದೇಶಗಳು ಅಡಗಿವೆ. ಕಾಣುವ ಕಣ್ಣಿದ್ದವರಿಗೆ ಇಲ್ಲಿ ಉಪಾಸನೆಯ ರಹಸ್ಯದ ನಿಧಿಯೇ ಉಂಟು.

ಭಕ್ತಿಯ ಉಪಾಸನೆಯಲ್ಲಿ ಹಲವು ಬಗೆ: ಕೆಲವರದು ಕಾಮಭಕ್ತಿ; ಗೋಪಿಕಾ ಸ್ತ್ರೀಯರಂತೆ. ಕೆಲವರು ಬಾಂಧವ್ಯಭಕ್ತಿ; ಅಕ್ರೂರ–ಉದ್ಧವ ಮುಂತಾದ ಯಾದವರಂತೆ. ಕೆಲವರದು ಸಖ್ಯಭಕ್ತಿ; ಪಾಂಡವರಂತೆ. ಇನ್ನು ಕೆಲವರದು ದಾಸ್ಯಭಕ್ತಿ; ನಾರದಾದಿ ಋಷಿಗಳಂತೆ. 'ನೀನು ಸ್ವಾಮಿ, ನಾನು ದಾಸ' ಎನ್ನುವ ಆರಾಧನೆಯೆ ಈ ಪಂಥದ ಮೂಲಸ್ಫೂರ್ತಿ. ಎಲ್ಲ ಭಕ್ತಿಯಲ್ಲು ಇದು ಅಡಕವಾಗಿದ್ದರೂ ದಾಸ್ಯಭಕ್ತಿಯಲ್ಲಿ ಇದು ಎದ್ದು ತೋರುವ ಅಂಶ.

ನಾರದರಂತೆ ಪುರಂದರದಾಸರೂ ಈ ದಾಸ್ಯಭಕ್ತಿಗೆ ಮನಸೋತವರು. "ಸೋಽಹಂ" ಎಂಬ ಅಹಂಕಾರವನ್ನು ತೊರೆದು "ದಾಸೋಽಹಂ" ಎಂದು ತಾಳ ಹಿಡಿದವರು. ಅದಕೆಂದೇ ಅಂಥ ದಾಸತ್ವದ ದೀಕ್ಷೆಯನ್ನು ಮುಂದಿನ ಸೊಲ್ಲಿನಲ್ಲಿ ಪ್ರಾರ್ಥಿಸುತ್ತಾರೆ:–

ಒಡೆಯ ನೀನೆನಗೆ ಅನಾದಿ ಕಾಲದಿಂದ
ಬಡವ ನಾ ನಿನ್ನ ದಾಸನಯ್ಯ ।

ಕಡುಕರುಣದಿಂದ ದಾಸತ್ವ ನೀಡು ಗ-
ರುಡಗಮನನೆ ವೆಂಕಟೇಶ ಎನ್ನ ಮನಕೆ ||

ಒಡೆಯ ಎನ್ನುವ ಪದಕ್ಕೆ ಎರಡು ಅರ್ಥ: ಸಿರಿವಂತ ಮತ್ತು ಯಜಮಾನ. ಎರಡೂ ಅರ್ಥಗಳನ್ನು ದಾಸರು ಇಲ್ಲಿ ಚಮತ್ಕಾರವಾಗಿ ಬಳಸಿದ್ದಾರೆ. ನೀನು ಒಡೆಯ; ಸಿರಿಯ ಒಡೆಯ; ಶ್ರೀನಿವಾಸ. ನಾನೋ ಬಡವ. ನೀನು ಒಡೆಯ; ಯಜಮಾನ; ಪ್ರಭು. ನಾನು ದಾಸನಯ್ಯ. ನೀನು ಇಡಿಯ ವಿಶ್ವದ ಒಡೆಯ. ವಿಶ್ವದ ಒಂದು ಕಣವಾದ ಎನಗೆ ಕೂಡ. ಬ್ರಹ್ಮಾದಿಗಳೂ ನಿನ್ನ ದಾಸರು. ಅಂಥ ಹಿರಿಯ ದಾಸರ ಮುಂದೆ ಯಾವ ಲೆಕ್ಕಕ್ಕೂ ಸಿಗದ ನಾನೊಬ್ಬ ನಿನ್ನ ನಗಣ್ಯ ಬಡವ ದಾಸನಯ್ಯ. ಈ ಬಡದಾಸನ ಮೇಲೂ ನಿನ್ನ ಕಡುಕರುಣೆ ಹರಿಯಬೇಕು. ಈ ಬಡದಾಸನನ್ನು ಉದ್ಧರಿಸಲು ಸಾಮಾನ್ಯಕರುಣೆ ಸಾಲದು. ಕಡುಕರುಣೆಯೇ ಬೇಕು. ನಿನ್ನ ಲೋಕೋತ್ತರವಾದ ಮಹಾಕರುಣೆ ಮಾತ್ರವೆ, ನಿನ್ನನ್ನು ಮರೆತು ಬಹುಕಾಲ ಮಲೆತು ಬಾಳಿದ ನಮ್ಮಂಥವರನ್ನು, ಉದ್ಧರಿಸಬಲ್ಲುದು.

ನೀನು ಒಡೆಯ; ನಾನು ಬಡವ. ಇದು ಅನಾದಿ ಕಾಲದಿಂದ ನಡೆದು ಬಂದ ಸತ್ಯ. ನಾನು ನವಕೋಟಿನಾರಾಯಣ ಎನಿಸಿದಾಗಲೂ ಅಂತರಂಗದಲ್ಲಿ ಬಡವ ನಾಗಿಯೆ ಇದ್ದೆ. ಹಾಗೆಯೆ, ನೀನು ನನ್ನ ಒಡೆಯ; ನನ್ನ ಪ್ರಭು, ಸ್ವಾಮಿ. ನಾನು ನಿನ್ನ ಬಡದಾಸ. ಈ ಸ್ವಾಮಿ–ದಾಸಭಾವ ಯಾವುದೋ ಒಂದು ಕ್ಷಣಿಕ ಆವೇಶದ ತಾತ್ಕಾಲಿಕ ಸತ್ಯ ಅಲ್ಲ. ಅನಾದಿಕಾಲದಿಂದ ನಡೆದು ಬಂದ ಮೂಲಸತ್ಯ; ನಿತ್ಯ ಸತ್ಯ: "ಸ್ವಾಮಿನ್ ದಾಸೋಽಸ್ಮಿತೇ ನಿತ್ಯಮ್".

ಈ ಸಂಬಂಧದ ಇರವು ಅನಾದಿಯಾದರೂ ಅರಿವು ಅನಾದಿಯಲ್ಲ. ಸಂಬಂಧ ಇದ್ದರೂ ಅದರ ಅರಿವು ಇದ್ದಿರಲಿಲ್ಲ. "ನಾನೇ ಒಡೆಯ; ನಾನೇ ನವಕೋಟಿ ನಾರಾಯಣ. ನನ್ನಂಥ ಸಿರಿವಂತ ಯಾರು? ನಾನೇ ಪ್ರಭು. ನಾನು ಯಾರ ದಾಸನೂ ಅಲ್ಲ" ಎಂದು ಅಹಂಕಾರದಿಂದಲೆ ಬದುಕಿದೆ. ಇದ್ದುದರ ಅರಿವಿಲ್ಲದೆ ಇದ್ದದ್ದೂ ವ್ಯರ್ಥವಾಯಿತು. ಅದಕ್ಕಾಗಿ "ಕಡುಕರುಣದಿಂದ ದಾಸತ್ವ ನೀಡು". ಈ ದಾಸನಿಗೆ ದಾಸತ್ವದ ಅರಿವಿನ ಎಚ್ಚರ ನೀಡು. ಈ ಜನ್ಮದಲ್ಲಿ ನಿನ್ನ ಕಡುಕರುಣ ದಿಂದ ಅಂಥ ಅವಕಾಶ ದೊರಕಿತು. ಮುಂದೆ ಎಂದೂ ಯಾವಜನ್ಮದಲ್ಲೂ ಈ ಎಚ್ಚರ ಮಾಸದಿರಲಿ. ಎಲ್ಲ ಜನ್ಮಗಳಲ್ಲು ದಾಸತ್ವ ನೀಡು. ಯಾವ ಜನ್ಮದಲ್ಲಿ ಬಂದರೂ ನಿನ್ನ ದಾಸನಾಗಿಯೆ ಬರುವಂತೆ ಮಾಡು.

ಓ ಗರುಡಗಮನನೆ, ಓ ವೆಂಕಟೇಶನೆ, ಎನ್ನ ಮನಕೆ ನಿತ್ಯ ನಿರಂತರ ದಾಸತ್ವದ ಎಚ್ಚರ ನೀಡು; ದಾಸತ್ವದ ದೀಕ್ಷೆ ನೀಡು. ಎನ್ನ ಮನದಲ್ಲಿ ಸ್ವಾಮಿಯಾಗಿ, ಅಂತರ್ಯಾಮಿಯಾಗಿ ಕೂಡು. "ನಾ ನಿನ್ನ ದಾಸನಯ್ಯ" ಎಂಬ ಉಪಾಸನೆ ಯನ್ನು ಅನುದಿನ, ಅನುಕ್ಷಣ ಮನದಲ್ಲಿ ಕೂತು ಮಾಡಿಸು.

ಗರುಡ ಎಲ್ಲ ವೇದಗಳ ದ್ರಷ್ಟಾರನಾದ ಮುನಿ. ವೇದಗಳ ಅರಿವನ್ನು ನಮಗೆ ನೀಡುವ ಮನೋದೇವತೆ: "ಸುಪರ್ಣೋಽಖಿಲವೇದಾನಾಮ್". ಅದರಿಂದಲೇ ಅವನನ್ನು ವೇದಮಯ, ಛಂದೋಮಯ ಎಂದು ಕರೆಯುತ್ತಾರೆ. ಅದರಿಂದ ಗರುಡ ಇಡಿಯ ವೇದ ವಾಙ್ಮಯದ ಸಂಕೇತ. ಗರುಡಗಮನ ಎಂದರೆ ಎಲ್ಲ ವೇದಗಳಲ್ಲಿ ಪ್ರತಿಪಾದ್ಯನಾಗಿ ಸಂಚರಿಸುವವನು: "ಛಂದೋಮಯೇನ ಗರುಡೇನ ಸಮುಹ್ಯಮಾನಃ". ನೀನು ಸಮಸ್ತ ಚರಾಚರಗಳಿಗೆ ಒಡೆಯ ಎಂದು ಎಲ್ಲ ವೇದಗಳೂ ಪ್ರತಿಪಾದಿಸುತ್ತಿವೆ. ಓ ವೇದೈಕವೇದ್ಯನಾದ ಹರಿಯೆ, ನನಗೂ ಆ ಎಚ್ಚರವನ್ನು ನೀಡು.

ನೀನು ಗಜೇಂದ್ರನ ಭಕ್ತಿಗೆ ಮೆಚ್ಚಿ, ಅವನು ಕರೆದಾಗ ಗರುಡಗಮನವಾಗಿ ಬಂದು ಉದ್ಧರಿಸಿದವನಲ್ಲವೇ? ಹೀಗೆ ಹೀನಯೋನಿಯಲ್ಲಿ ಬಂದ ಭಕ್ತನನ್ನೂ ಅಲಕ್ಷಿಸದ ಕಡುಕರುಣೆ ನಿನ್ನದು. ಈ ಬಡದಾಸನ ಮೇಲೂ ನಿನ್ನ ಆ ಕಡುಕರುಣೆಯನ್ನು ಹರಿಸು. ಗರುಡ ಗಮನನಾದ, ವೇದವೇದ್ಯನಾದ ಜಗನ್ನಾಥನೇ ಈ ವೇಂಗಡದ ವೆಂಕಟೇಶನಾಗಿ ನಿಂತಿರುವೆ. ನಿನ್ನ ಈ ವೆಂಕಟೇಶ ಮೂರ್ತಿಯ ಮುಂದೆ ಬಡದಾಸ ನಾನು ನಿಂತಿರುವೆ. ನಿಂತು ಬೇಡುತ್ತಿರುವೆ: "ಕಡುಕರುಣದಿಂದ ದಾಸತ್ವದ ದೀಕ್ಷೆ ನೀಡು ಎನ್ನ ಮನಕೆ".

ಭಗವಂತನ ನೆಲೆಮನೆಯಾದ ಈ ದೇಹದಲ್ಲಿ ಭಗವಂತನೊಬ್ಬನೆ ಇರುವುದಲ್ಲ. ಸಮಸ್ತ ತತ್ತ್ವಾಭಿಮಾನಿಗಳು ಇಲ್ಲಿ ನೆಲಸಿದ್ದಾರೆ; ಈ ಪಿಂಡಾಂಡದೊಳಗೆ ಇಡಿಯ ಬ್ರಹ್ಮಾಂಡವೆ ಅಡಗಿದೆ ಎನ್ನುತ್ತದೆ ಮುಂದಿನ ಉಪಸಂಹಾರದ ಸೊಲ್ಲು:

ಬರಿಯ ಮನೆಯಲ್ಲವೋ ಪರಿವಾರ ಉಂಟು
ಪರಮ ಪುರುಷ ನಿನ್ನ ರೂಪಗಳುಂಟು ।
ಸಿರಿದೇವಿ ಸಹಿತದಿ ಪುರಂದರ ವಿಠಲನೆ
ಕರುಣದಿಂದಲಿ ಮನಮಂದಿರದೊಳಗೆ ॥

ಇದು ಬರಿಯ ಬೋಳು ಮನೆಯಲ್ಲ; ಜನಸಂಚಾರವಿಲ್ಲದ ಹಾಳು ಮನೆಯಲ್ಲ. ಇಲ್ಲಿ ಹೆಜ್ಜೆ ಹೆಜ್ಜೆಗೆ ನಿನ್ನ ಸೇವೆಗೆ ಸಿದ್ಧವಾದ ಪರಿವಾರ ಉಂಟು.

ಈ ಅನ್ನಮಯಕೋಶದಲ್ಲಿ ಪೃಥಿವೀ–ಜಲಗಳ ಅಭಿಮಾನಿಗಳಾದ ಶನಿ–ಬುಧರಿದ್ದಾರೆ. ಪ್ರಾಣಮಯ ಕೋಶದಲ್ಲಿ ಅಗ್ನಿ–ವಾಯು–ಆಕಾಶಗಳ ಅಭಿಮಾನಿಗಳಾದ ಪಾವಕ–ಮರುತ್ ಮತ್ತು ಗಣೇಶರಿದ್ದಾರೆ, ಮನೋಮಯಕೋಶದಲ್ಲಿ ಮನಸ್ಸು–ಬುದ್ಧಿ–ಅಹಂಕಾರಗಳ ಅಭಿಮಾನಿಗಳಾದ ಗರುಡ–ಶೇಷ–ರುದ್ರರಿದ್ದಾರೆ. ವಿಜ್ಞಾನಮಯಕೋಶದಲ್ಲಿ ಚಿತ್ತ–ಚೇತನಗಳ, ಮಹತ್ತತ್ತ್ವದ ಅಭಿಮಾನಿಗಳಾದ ಬ್ರಹ್ಮ

ವಾಯುಗಳಿದ್ದಾರೆ. ಆನಂದಮಯಕೋಶದಲ್ಲಿ ಅವ್ಯಕ್ತ ತತ್ತ್ವದ ಅಭಿಮಾನಿನಿಯಾದ ರಮೆಯೇ ನಿನ್ನ ಸೇವೆಗಾಗಿ ನೆಲೆಸಿದ್ದಾಳೆ.

ಹಾಗೆಯೇ ಷೋಡಶ ಕಲಾಸ್ವಾಮಿಯಾದ ನಿನ್ನ ಸೇವೆಗಾಗಿ, ಷೋಡಶ ಕಲೆಗಳಲ್ಲಿ ಕಲಾಭಿಮಾನಿಗಳು ನೆಲಸಿದ್ದಾರೆ: ಜೀವಕಲೆಯಲ್ಲಿ ಪ್ರಾಣದೇವರಿದ್ದಾರೆ. ಶ್ರದ್ಧಾಕಲೆಯಲ್ಲಿ ಭಾರತೀದೇವಿಯಿದ್ದಾಳೆ. ಮನಃಕಲೆಯಲ್ಲಿ ರುದ್ರದೇವರಿದ್ದಾರೆ. ಇಂದ್ರಿಯಕಲೆಯಲ್ಲಿ ಇಂದ್ರನಿದ್ದಾನೆ. ಅನ್ನಕಲೆಯಲ್ಲಿ ಚಂದ್ರನಿದ್ದಾನೆ. ವೀರ್ಯಕಲೆಯಲ್ಲಿ ವರುಣನಿದ್ದಾನೆ. ತಪಃಕಲೆ (ಆಲೋಚನಶಕ್ತಿ)ಯಲ್ಲಿ ವಹ್ನಿಯಿದ್ದಾನೆ. ಆಕಾಶಕಲೆಯಲ್ಲಿ ಗಣಪತಿಯಿದ್ದಾನೆ. ವಾಯುಕಲೆಯಲ್ಲಿ ಮುಖ್ಯ ವಾಯುಪುತ್ರನಾದ ಮರುತ ಇದ್ದಾನೆ. ಅಗ್ನಿಕಲೆಯಲ್ಲಿ ವಹ್ನಿಪುತ್ರನಾದ ಪಾವಕನಿದ್ದಾನೆ. ಲೋಕ (ಸ್ಥಿರಚರಸೊತ್ತು) ಕಲೆಯಲ್ಲಿ ಪರ್ಜನ್ಯನಿದ್ದಾನೆ. ಮಂತ್ರಕಲೆ (ಮಾತುಗಾರಿಕೆ) ಯಲ್ಲಿ ಅಗ್ನಿಪತ್ನಿಯಾದ ಸ್ವಾಹಾದೇವಿ ಇದ್ದಾಳೆ. ಜಲಕಲೆಯಲ್ಲಿ ಬುಧನಿದ್ದಾನೆ. ನಾಮಕಲೆ (ಹೆಸರು–ಕೀರ್ತಿ) ಯಲ್ಲಿ ಅಶ್ವಿನೀದೇವತೆಗಳ ಪತ್ನಿಯಾದ ಉಷಾದೇವಿಯಿದ್ದಾಳೆ. ಪೃಥಿವೀಕಲೆಯಲ್ಲಿ ಶನಿಯಿದ್ದಾನೆ. ಕರ್ಮಕಲೆಯಲ್ಲಿ ವರುಣಪುತ್ರನಾದ ಪುಷ್ಕರನಿದ್ದಾನೆ.

ಇಂದ್ರಿಯಾಭಿಮಾನಿಗಳು ಇಂದ್ರಿಯಗಳಲ್ಲಿ ನೆಲಸಿ ಸೇವೆಗೆ ಅಣಿಯಾಗಿದ್ದಾರೆ. ಮನಸ್ಸಿನಲ್ಲಿ ಬ್ರಹ್ಮ, ವಾಯು, ಗರುಡ, ಶೇಷ, ರುದ್ರ, ಇಂದ್ರ, ಕಾಮ, ಅನಿರುದ್ಧ, ಬೃಹಸ್ಪತಿ, ಚಂದ್ರ, ವರುಣ ಮತ್ತು ಪರ್ಜನ್ಯ ಹೀಗೆ ಹನ್ನೆರಡು ದೇವತೆಗಳು ನಿನ್ನ ಸೇವೆಗಾಗಿ ನೆಲಸಿದ್ದಾರೆ. ಶ್ರೋತ್ರದಲ್ಲಿ ಚಂದ್ರ, ಯಮ, ವರುಣ, ಮಿತ್ರ ಮತ್ತು ಕುಬೇರರಿದ್ದಾರೆ. ನೇತ್ರದಲ್ಲಿ ಸೂರ್ಯಚಂದ್ರರು ಮತ್ತು ಅಗ್ನಿ–ಈ ಮೂವರಿದ್ದಾರೆ. ನಾಸಿಕೆಯಲ್ಲಿ ಕೋಣಾಧಿಪನಾದ ನಾಸಿಕ್ಯವಾಯು (ಪ್ರವಹ) ಇದ್ದಾನೆ, ನಾಸತ್ಯ–ದಸ್ರರಿದ್ದಾರೆ. ಜಿಹ್ವೆಯಲ್ಲಿ ರಸಮಾನಿ ವರುಣನಿದ್ದಾನೆ. ತ್ವಗಿಂದ್ರಿಯದಲ್ಲಿ ಸ್ಪರ್ಶವಾಯು (ಪ್ರವಹ) ಇದ್ದಾನೆ, ಕುಬೇರನಿದ್ದಾನೆ, ಮುಖ್ಯವಾಯುಪುತ್ರನಾದ ಪ್ರಾಣನಿದ್ದಾನೆ. ವಾಗಿಂದ್ರಿಯದಲ್ಲಿ ಸರಸ್ವತಿ–ಭಾರತಿಯರಿದ್ದಾರೆ, ಪಾರ್ವತಿಯಿದ್ದಾಳೆ. (ಇವರೇ ಬುದ್ಧಿಯಲ್ಲೂ ಇದ್ದು ಪ್ರೇರಣೆ ನೀಡುತ್ತಾರೆ ಮತ್ತು ನಾಲಗೆಯಿಂದ ನುಡಿಸುತ್ತಾರೆ.) ಇವರ ಜತೆಗೆ ಅಗ್ನಿ ಇದ್ದಾನೆ. ಅಗ್ನಿಪತ್ನಿ ಸ್ವಾಹಾದೇವಿ ಇದ್ದಾಳೆ. ಹಸ್ತಗಳಲ್ಲಿ ಕುಶಲಕರ್ಮಕಾರಕನಾದ ಇಂದ್ರನಿದ್ದಾನೆ; ದಕ್ಷಪ್ರಜಾಪತಿಯಿದ್ದಾನೆ. ಪಾದಗಳಲ್ಲಿ ಗತಿಕಾರಕನಾದ ಇಂದ್ರಪುತ್ರ ಜಯಂತನಿದ್ದಾನೆ. ಶಂಭುನಾಮಕನಾದ ಇನ್ನೊಬ್ಬ ದೇವತೆಯೂ ಇದ್ದಾನೆ. ಪಾಯುವಿನಲ್ಲಿ ವಿಸರ್ಗಕಾರಕನಾದ ಯಮನಿದ್ದಾನೆ; ಮಿತ್ರನಾಮಕ ಆದಿತ್ಯನಿದ್ದಾನೆ. ಉಪಸ್ಥದಲ್ಲಿ ಭೋಗಕಾರಕನಾಗಿ ದಕ್ಷಪ್ರಜಾಪತಿಯಿದ್ದಾನೆ; ಸ್ವಾಯಂಭುವ ಮನು ಇದ್ದಾನೆ.

ಹೀಗೆಯೇ, ನಿನ್ನ ಸೇವೆಗೆಂದೆ, ಈ ದೇಹದಲ್ಲಿ 25 ತತ್ತ್ವಗಳ ಅಭಿಮಾನಿಗಳಾಗಿಯೂ ಈ ದೇಹದ ಎಲ್ಲೆಡೆ ನೆಲೆಸಿದ್ದಾರೆ: ಪುರುಷ (ಜೀವ) ತತ್ತ್ವದಲ್ಲಿ ಬ್ರಹ್ಮ–

ವಾಯುಗಳು. ಅವ್ಯಕ್ತ ತತ್ತ್ವದಲ್ಲಿ ಸರಸ್ವತಿ ಭಾರತಿಯರು. ಮಹತ್ತತ್ತ್ವದಲ್ಲಿ ಪುನಃ ಬ್ರಹ್ಮ-ವಾಯುಗಳು. ಅಹಂಕಾರತತ್ತ್ವದಲ್ಲಿ ಗರುಡ, ಶೇಷ-ರುದ್ರರು. ಮನಸ್ತತ್ತ್ವದಲ್ಲಿ ಇಂದ್ರ, ಸ್ಕಂದ (ಕಾಮ) ಇಂದ್ರಿಯ ತತ್ತ್ವದಲ್ಲಿ ಹಿಂದೆ ಹೇಳಿದ ಇಂದ್ರಿಯಾಭಿಮಾನಿ ದೇವತೆಗಳು. ಶಬ್ದದಲ್ಲಿ ಬೃಹಸ್ಪತಿ ಮತ್ತು ಪ್ರಾಣ. ಸ್ಪರ್ಶದಲ್ಲಿ ಅಪಾನ. ರೂಪದಲ್ಲಿ ವ್ಯಾನ. ರಸದಲ್ಲಿ ಉದಾನ. ಗಂಧದಲ್ಲಿ ಸಮಾನ. ಆಕಾಶದಲ್ಲಿ ವಿನಾಯಕ. ವಾಯುವಿನಲ್ಲಿ ಪ್ರವಹವಾಯು. ಅಗ್ನಿಯಲ್ಲಿ ವಹ್ನಿ. ಜಲದಲ್ಲಿ ವರುಣ. ಪೃಥಿವಿಯಲ್ಲಿ ಧರಾದೇವಿ.

ಹಾಗೆಯೇ ಶಬ್ದ-ಸ್ಪರ್ಶಗಳಲ್ಲಿ ಗರುಡ ಪತ್ನಿಯಾದ ಸುಪರ್ಣಿ ಇದ್ದಾಳೆ. ರೂಪ ರಸಗಳಲ್ಲಿ ಶೇಷಪತ್ನಿಯಾದ ವಾರುಣಿಯಿದ್ದಾಳೆ. ಗಂಧದಲ್ಲಿ ಪಾರ್ವತಿಯಿದ್ದಾಳೆ. ಪಂಚಪ್ರಾಣಪುತ್ರರು ಮತ್ತು ರುದ್ರಪುತ್ರರ ಜತೆಗೆ ಇವರೂ ನಿನ್ನ ಸೇವೆಗೆ ನಿಂತಿದ್ದಾರೆ. ಈ ತ್ರಿಮೂರ್ತಿಗಳೇ ಕರ್ಮೇಂದ್ರಿಯಗಳ ವಿಷಯಗಳಲ್ಲು ನೆಲಸಿದ್ದಾರೆ. ಮಾತು ಮತ್ತು ಕರಕೌಶಲದಲ್ಲಿ ಸುಪರ್ಣಿ, ಗತಿ ಮತ್ತು ವಿಸರ್ಜನಕ್ರಿಯೆಯಲ್ಲಿ ವಾರುಣಿ, ಭೋಗಕ್ರಿಯೆಯಲ್ಲಿ ಪಾರ್ವತಿ.

ಎಲ್ಲಕ್ಕಿಂತ ಮಿಗಿಲಾಗಿ ಮುಖ್ಯಪ್ರಾಣನೇ ಬಲಗಣ್ಣಿನಲ್ಲಿದ್ದು ನಿನ್ನ ವಾಮನ ರೂಪದ ಉಪಾಸನೆ ಮಾಡುತ್ತಿದ್ದಾನೆ. ಅವನ ಜತೆಗೆ ಏಳು ದೇವತೆಗಳು ಅಲ್ಲಿ ನೆರೆದಿದ್ದಾರೆ; ರುದ್ರ, ಪರ್ಜನ್ಯ, ಆದಿತ್ಯ, ಅಗ್ನಿ, ಇಂದ್ರ, ಪೃಥಿವಿ ಮತ್ತು ಭಾರತಿ.

ಹಾಗೆಯೆ ಮೂಗಿನಲ್ಲಿ ಪ್ರಾಣ-ಭಾರತಿಯರು ಜತೆಯಾಗಿ ನಿನ್ನ ಹಂಸರೂಪದ ಉಪಾಸನೆ ಮಾಡುತ್ತಿದ್ದಾರೆ. ಬಲಗಾಲ ಅಂಗುಷ್ಠದಲ್ಲಿ ಭಾರಭೃತ್ ನಾಮಕನಾದ ಪ್ರಾಣ ನಿನ್ನ ಸೇವೆಗೆ ನಿಂತಿದ್ದಾನೆ.

ಪ್ರಾಣನ ಸೇವೆಯ ಪರಿ ಇಲ್ಲಿಗೇ ಮುಗಿಯಲಿಲ್ಲ. ಪ್ರಾಣ-ಅಪಾನ-ವ್ಯಾನ ಉದಾನ-ಸಮಾನ ಎಂಬ ಐದು ರೂಪಗಳಿಂದ ಪಂಚಪ್ರಾಣಗಳಲ್ಲಿ ನೆಲಸಿದ್ದಾನೆ, ಜತೆಗೆ ಇದೇ ಹೆಸರಿನ ಐವರು ಪ್ರಾಣಪುತ್ರರು ಮತ್ತು ಐವರು ರುದ್ರಪುತ್ರರು ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳ ಅಭಿಮಾನಿಗಳಾಗಿ ಇಲ್ಲಿ ನೆಲಸಿದ್ದಾರೆ. ಇವರಲ್ಲದೆ ನಾಗ-ಕೂರ್ಮ-ಕೃಕಲ-ದೇವದತ್ತ-ಧನಂಜಯರೆಂಬ ಐವರು ಅಮುಖ್ಯವಾಯುಗಳೂ ನಿನ್ನ ಸೇವೆಗಾಗಿ ಅತ್ತಿಂದಿತ್ತ ಓಡಾಡುತ್ತಿದ್ದಾರೆ.

ಜೀವಾಭಿಮಾನಿಯಾಗಿ ಚತುರ್ಮುಖನಿದ್ದಾನೆ; ಮುಖ್ಯಪ್ರಾಣನಿದ್ದಾನೆ. ದೇಹಾಭಿಮಾನಿಯಾಗಿ ಆಹಂಕಾರಿಕಪ್ರಾಣನಿದ್ದಾನೆ; ಸ್ವಾಯಂಭುವ ಮನುವಿದ್ದಾನೆ. ದೇಹದ ಕಣಕಣಗಳಲ್ಲಿ, ಮೂಲೆ ಮೂಲೆಗಳಲ್ಲಿ ದೇವತೆಗಳು ಸೇವೆಗಾಗಿ ಕಾದು ನಿಂತಿದ್ದಾರೆ.

ಕಣ್ಣಿನ ನಡುವಿನ ಬೆಳಕಿನ ಕುಡಿಯಲ್ಲಿ ಅಷ್ಟದಿಕ್ಪಾಲಕರಿದ್ದಾರೆ. ಬಲಗಿವಿಯಲ್ಲಿ ಸಕಲ ತೀರ್ಥದೇವತೆಗಳಿದ್ದಾರೆ. ನಾಡಿಯಲ್ಲಿ 72,000 ನದೀದೇವತೆಗಳು ಹರಿದಾ

ಡುತ್ತಿದ್ದಾರೆ. ಅಷ್ಟೇ ಮುಖ್ಯಪ್ರಾಣನ ರೂಪಗಳೂ ಇಲ್ಲಿ ತುಂಬಿವೆ. ರೋಮರೋಮಗಳಲ್ಲಿ ಪಾರಿಜಾತಾದಿ ವನದೇವತೆಗಳಿದ್ದಾರೆ; ವಸಂತ ದೇವತೆಯಿದ್ದಾನೆ. ಶಿರದಲ್ಲಿ ಬ್ರಹ್ಮನಿದ್ದಾನೆ. ಹಣೆಯಲ್ಲಿ ಶಿವನಿದ್ದಾನೆ. ಕಪೋಲದಲ್ಲಿ ಕಾಮನಿದ್ದಾನೆ. ಹೀಗೆ ಈ ದೇಹ "ಬರಿಯ ಮನೆಯಲ್ಲವೋ". ಇಲ್ಲಿ ನಿನ್ನ ಸೇವೆಗೆ ಅಣಿಯಾಗಿ ನಿಂತ ಹಿರಿಯ "ಪರಿವಾರ ಉಂಟು".

ಹೀಗೆ ಈ ಮನೆ ಅನೇಕ ದಾಸ-ದಾಸಿಯರಿಂದ ಸಜ್ಜಾಗಿದೆ. ಇವರಿಂದ ಸೇವೆ ಕೊಳ್ಳುವುದಕ್ಕಾಗಿ ಭಗವಂತನೂ ಬಹುರೂಪಗಳಿಂದ ಲೀಲೆಯಾಡುತ್ತಿದ್ದಾನೆ ಎನ್ನುತ್ತಾರೆ ದಾಸರು ;

ಪರಮಪುರುಷ ನಿನ್ನ ರೂಪಗಳುಂಟು

ಅನ್ನಮಯ ಕೋಶದಲ್ಲಿ ಅನಿರುದ್ಧ. ಪ್ರಾಣಮಯ ಕೋಶದಲ್ಲಿ ಪ್ರದ್ಯುಮ್ನ. ಮನೋಮಯ ಕೋಶದಲ್ಲಿ ಸಂಕರ್ಷಣ. ವಿಜ್ಞಾನಮಯ ಕೋಶದಲ್ಲಿ ವಾಸುದೇವ. ಆನಂದಮಯ ಕೋಶದಲ್ಲಿ ನಾರಾಯಣ. ಹೀಗೆ ಈ ದೇಹವೆಂಬ ಮನೆಯ ಪಂಚ ಕೋಶಗಳಲ್ಲಿ ನಿನ್ನ ಪಂಚ ರೂಪಗಳುಂಟು.

ನಾಗದಲ್ಲಿ ಕ್ರುದ್ಧೋಲ್ಕ. ಕೂರ್ಮದಲ್ಲಿ ಮಹೋಲ್ಕ. ಕೃಕಲದಲ್ಲಿ ವೀರೋಲ್ಕ. ದೇವದತ್ತದಲ್ಲಿ ದ್ಯುಲ್ಕ. ಧನಂಜಯದಲ್ಲಿ ಸಹಸ್ರೋಲ್ಕ. ಹೀಗೆ ಪಂಚ ಉಪಪ್ರಾಣಗಳಲ್ಲಿ ನಿನ್ನ ಪಂಚರೂಪಗಳುಂಟು.

ಶಿರಸ್ಸಿನಲ್ಲಿ ನಾರಾಯಣ. ಮಧ್ಯದೇಹದಲ್ಲಿ ವಾಸುದೇವ. ಪಾದಗಳಲ್ಲಿ ಸಂಕರ್ಷಣ. ಬಲಬದಿಯ ತೋಳಿನಲ್ಲಿ ಪ್ರದ್ಯುಮ್ನ. ಎಡಬದಿಯಲ್ಲಿ ಅನಿರುದ್ಧ. ಹೀಗೆ ಈ ಮನೆಯ ಐದು ವಿಭಾಗಗಳಲ್ಲಿ ನಿನ್ನ ಐದು ರೂಪಗಳುಂಟು.

ಹೃದಯದಲ್ಲಿ ಪುರುಷ. ಆತ್ಮ ಮತ್ತು ಅಂತರಾತ್ಮ. ಸುಷುಮ್ನಾ ನಾಡಿಯಲ್ಲಿ ಏಕಾತ್ಮ. ಹೀಗೆ ಒಳಮನೆಯಲ್ಲಿ ನಿನ್ನ ರೂಪಗಳುಂಟು.

ಭೂಮಿಯಲ್ಲಿ ವಿಶ್ವ. ನೀರಿನಲ್ಲಿ ತೈಜಸ, ಬೆಂಕಿಯಲ್ಲಿ ಪ್ರಾಜ್ಞ; ವಾಯುವಿನಲ್ಲಿ ತುರೀಯ, ಆಕಾಶದಲ್ಲಿ ಆತ್ಮ. ಮನಸ್ಸಿನಲ್ಲಿ ಅಂತರಾತ್ಮ, ಬುದ್ಧಿಯಲ್ಲಿ ಪರಮಾತ್ಮ, ಅಹಂಕಾರದಲ್ಲಿ ಜ್ಞಾನಾತ್ಮ. ಹೀಗೆ ಈ ದೇಹದ ಅಷ್ಟವಿಧ ಪ್ರಕೃತಿಗಳಲ್ಲಿ ನಿನ್ನ ಅಷ್ಟರೂಪಗಳುಂಟು.

ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಮತ್ತು ಅಂತಃಕರಣದಲ್ಲಿ ಶಕ್ತಿ, ಪ್ರತಿಷ್ಠಾ, ಸಂವಿತ್, ಸ್ಫೂರ್ತಿ, ಪ್ರವೃತ್ತಿ, ಕಲಾ, ವಿದ್ಯಾ, ಮತಿ, ನಿಯತಿ, ಮಾಯಾ, ಕಾಲ ಎಂದು ನಿನ್ನ ಹನ್ನೊಂದು ರೂಪಗಳುಂಟು. ಹಾಗೆಯೇ ಈ ಹನ್ನೊಂದು ಇಂದ್ರಿಯಗಳಲ್ಲಿ-ಮನಸ್ಸಿನಲ್ಲಿ ನಾರಾಯಣ, ಜ್ಞಾನ-ಕರ್ಮೇಂದ್ರಿಯಗಳಲ್ಲಿ ಮತ್ಸ್ಯಾದಿ ದಶರೂಪಗಳು-ಹೀಗೆ ನಿನ್ನ ಹನ್ನೊಂದು ರೂಪಗಳುಂಟು.

ಹಾಗೆಯೆ ಚತುರ್ವಿಂಶತಿ (24) ತತ್ತ್ವಗಳಲ್ಲಿ ನೀನು ತುಂಬಿರುವೆ :– ಅವ್ಯಕ್ತ ತತ್ತ್ವದಲ್ಲಿ ಕೇಶವ, ಮಹತ್ತತ್ತ್ವದಲ್ಲಿ ನಾರಾಯಣ, ಅಹಂಕಾರ ತತ್ತ್ವದಲ್ಲಿ ಮಾಧವ, ಮನಸ್ತತ್ವದಲ್ಲಿ ಗೋವಿಂದ, ಶ್ರೋತ್ರದಲ್ಲಿ ವಿಷ್ಣು, ತ್ವಕ್ಕಿನಲ್ಲಿ ಮಧುಸೂದನ, ಚಕ್ಷುಸ್ಸಿನಲ್ಲಿ ತ್ರಿವಿಕ್ರಮ, ಜಿಹ್ವೆಯಲ್ಲಿ ವಾಮನ, ನಾಸಿಕೆಯಲ್ಲಿ ಶ್ರೀಧರ, ವಾಕ್ಕಿನಲ್ಲಿ ಹೃಷೀಕೇಶ, ಪಾಣಿಯಲ್ಲಿ ಪದ್ಮನಾಭ, ಪಾದದಲ್ಲಿ ದಾಮೋದರ, ಪಾಯುವಿನಲ್ಲಿ ಸಂಕರ್ಷಣ, ಉಪಸ್ಥದಲ್ಲಿ ವಾಸುದೇವ, ಶಬ್ದದಲ್ಲಿ ಪ್ರದ್ಯುಮ್ನ, ಸ್ಪರ್ಶದಲ್ಲಿ ಅನಿರುದ್ಧ, ರೂಪದಲ್ಲಿ ಪುರುಷೋತ್ತಮ, ರಸದಲ್ಲಿ ಅಧೋಕ್ಷಜ, ಗಂಧದಲ್ಲಿ ನರಸಿಂಹ, ಆಕಾಶದಲ್ಲಿ ಅಚ್ಯುತ, ವಾಯುವಿನಲ್ಲಿ ಜನಾರ್ದನ, ಅಗ್ನಿಯಲ್ಲಿ ಉಪೇಂದ್ರ, ಜಲದಲ್ಲಿ ಹರಿ, ನೆಲದಲ್ಲಿ ಕೃಷ್ಣ. ಹೀಗೆ ತತ್ತ್ವಗಳಲ್ಲಿ, ತತ್ತ್ವಾಭಿಮಾನಿಗಳಲ್ಲಿ ನಿನ್ನ ಚತುರ್ವಿಂಶತಿ ರೂಪಗಳುಂಟು.

ಷೋಡಶ ಕಲೆಗಳಲ್ಲಿ ಮತ್ತು ಲಿಂಗಶರೀರದಲ್ಲಿ ವಿಶ್ವ, ಪಂಚಜ್ಞಾನೇಂದ್ರಿಯಗಳಲ್ಲಿ ಪಂಚರೂಪನಾದ ತೈಜಸ; ಪಂಚಕರ್ಮೇಂದ್ರಿಯಗಳಲ್ಲಿ ಪಂಚರೂಪನಾದ ಪ್ರಾಜ್ಞ. ಶಬ್ದ–ಸ್ಪರ್ಶಾದಿ ಪಂಚ ತನ್ಮಾತ್ರಗಳಲ್ಲಿ ಪಂಚರೂಪನಾದ ತುರೀಯ. ಆಕಾಶಾದಿ ಪಂಚಭೂತಗಳಲ್ಲಿ ಪಂಚರೂಪನಾದ ಆತ್ಮ. ಮನಸ್ಸು–ಅಹಂಕಾರಗಳಲ್ಲಿ ದ್ವಿರೂಪನಾದ ಅಂತರಾತ್ಮ. ಮಹತ್ತತ್ತ್ವದಲ್ಲಿ ಪರಮಾತ್ಮ. ಅವ್ಯಕ್ತ ತತ್ತ್ವದಲ್ಲಿ ಜ್ಞಾನಾತ್ಮ. ಹೀಗೆ 16 ಕಲೆಗಳನ್ನು ಮತ್ತು 24 ತತ್ತ್ವಗಳನ್ನು ವ್ಯಾಪಿಸಿ ನಿನ್ನ ವಿಶ್ವಾದಿ ಎಂಟು ರೂಪಗಳುಂಟು.

ಸ್ಥೂಲ ಶರೀರದಲ್ಲಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಎಂಬ ನಿನ್ನ ರೂಪಗಳುಂಟು. ಸೂಕ್ಷ್ಮವಾದ ಅನಿರುದ್ಧ ಶರೀರದಲ್ಲಿ ಅಚ್ಯುತ, ಅನಂತ, ಗೋವಿಂದ ಎಂಬ ರೂಪಗಳುಂಟು. ಲಿಂಗದೇಹದಲ್ಲಿ ಮೂಲೇಶ, ಅಗ್ರೇಶ, ಪ್ರಾದೇಶ ಎಂಬ ರೂಪಗಳುಂಟು. ಸ್ವರೂಪದೇಹದಲ್ಲಿ ವಿಶ್ವ, ತೈಜಸ, ಪ್ರಾಜ್ಞ, ತುರೀಯ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ ಎಂಬ ಓಂಕಾರ ವಾಚ್ಯಗಳಾದ ಎಂಟು ರೂಪಗಳುಂಟು. ಜತೆಗೆ ಹಯಗ್ರೀವ ಮತ್ತು ನರಸಿಂಹ ರೂಪಗಳುಂಟು.

ಹತ್ತು ಇಂದ್ರಿಯಗಳಲ್ಲಿ ಹೃಷೀಕೇಶ. ಹತ್ತು ಪ್ರಾಣಗಳಲ್ಲಿ ವಾಮನ, ರೋಮಗಳಲ್ಲಿ ತ್ರಿಕಕುಭ್‌ಧಾಮ. ಪಾದದಲ್ಲಿ ಯಜ್ಞ. ಹೃದಯದಲ್ಲಿ ಪ್ರಾಜ್ಞ. ಮುಖದಲ್ಲಿ ಪರಶುರಾಮ, ಕಣ್ಣಲ್ಲಿ ಕಪಿಲ, ಲಕ್ಷ್ಮೀಶ ಮತ್ತು ದಧಿವಾಮನ. ಬಲಗಣ್ಣಲ್ಲಿ ಪ್ರದ್ಯುಮ್ನ. ಕಣ್ಣಾಲಿಯಲ್ಲಿ ವಾಮನ ಮತ್ತು ಭಾಮನ. ನಾಸಿಕೆಯಲ್ಲಿ ನರಸಿಂಹ, ಹಂಸ ಮತ್ತು ಧನ್ವಂತರಿ. ನಾಲಗೆಯಲ್ಲಿ ಮತ್ಸ್ಯ, ಕಿರುನಾಲಗೆಯಲ್ಲಿ ಉಪೇಂದ್ರ. ತಾಲುವಿನಲ್ಲಿ ಅರ್ಧಗರ್ಭ. ಹಲ್ಲುಗಳಲ್ಲಿ ಹಂಸ. ಕೆನ್ನೆಯಲ್ಲಿ ಪ್ರದ್ಯುಮ್ನ. ಹಣೆಯಲ್ಲಿ ಕೇಶವ. ಶಿಖೆಯಲ್ಲಿ ನರಸಿಂಹ. ನೆತ್ತಿಯಲ್ಲಿ ವಾಸುದೇವ. ಹೀಗೆ ದೇಹದ ಅಂಗಾಂಗಗಳಲ್ಲಿ ನಿನ್ನ ಹಲವು ಲೀಲಾರೂಪಗಳುಂಟು.

"ಶತಂ ಚೈಕಾ ಚ ಹೃದಯಸ್ಯ ನಾಡ್ಯಃ" ಎಂಬ ಶ್ರುತಿಯಂತೆ ಹೃದಯದ 101 ಪ್ರಧಾನ ನಾಡಿಗಳಲ್ಲಿ ಭಗವಂತನ 101 ರೂಪಗಳು : ಅಜ, ಆನಂದ, ಇಂದ್ರ, ಈಶ, ಉಗ್ರ, ಊರ್ಜ, ಋತಂಭರ, ಋಘ, ೡಶ, ೡಜಿ, ಏಕಾತ್ಮ, ಐರ, ಓಜೋಭೃತ್, ಔರಸ, ಅಂತ, ಅರ್ಧಗರ್ಭ, ಕಪಿಲ, ಖಪತಿ, ಗರುಡಾಸನ, ಘರ್ಮ, ಙಸಾರ, ಚಾರ್ವಂಗ, ಛಂದೋಗಮ್ಯ, ಜನಾರ್ದನ, ಝಟಿಕಾರಿ, ಞಮ, ಟಂಕಿ, ಠಕಲ, ಡರಕ, ಢರಿ, ಣಾತ್ಮ, ತಾರ, ಥಭ, ದಂಡಿ, ಧನ್ವಿ, ನಮ್ಯ, ಪರ, ಫಲಿ, ಬಲಿ, ಭಗ, ಮನು, ಯಜ್ಞ, ರಾಮ, ಲಕ್ಷ್ಮೀಪತಿ, ವರ, ಶಾಂತಸಂವಿತ್, ಷಡ್ಗುಣ, ಸಾರಾತ್ಮ, ಹಂಸ, ಳಾಳುಕ, ಕ್ಷಕಾರವಾಚ್ಯನಾದ ನೃಸಿಂಹ, ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ, ದಾಮೋದರ, ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಪುರುಷೋತ್ತಮ, ಅಧೋಕ್ಷಜ, ನರಸಿಂಹ, ಅಚ್ಯುತ, ಜನಾರ್ದನ, ಉಪೇಂದ್ರ, ಹರಿ, ಕೃಷ್ಣ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ವಿಶ್ವ, ತೈಜಸ, ಪ್ರಾಜ್ಞ, ತುರೀಯ, ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ರಾಮ, ವೇದವ್ಯಾಸ, ಕೃಷ್ಣ, ದತ್ತಾತ್ರೇಯ, ಬುದ್ಧ, ಕಲ್ಕಿ, ಶಿಂಶುಮಾರ ಮತ್ತು ಸುಷುಮ್ನಾ ನಾಡಿನಲ್ಲಿ ಏಕಾತ್ಮನಾದ ನಾರಾಯಣ. ಹೀಗೆ ಪ್ರಧಾನ ನಾಡಿಗಳಲ್ಲಿ ನಿನ್ನ ನೂರ ಒಂದು ರೂಪಗಳುಂಟು.

ಈ ನೂರ ಒಂದು ನಾಡಿಗಳಿಗೆ ಮತ್ತೆ 72 ಸಾವಿರ ಶಾಖಾನಾಡಿಗಳಿವೆ. ಪುರುಷಾಯುಷ್ಯದ 100 ವರ್ಷಗಳ ಹಗಲಿರುಳುಗಳೂ 72 ಸಾವಿರ. ಈ ಹಗಲು ರಾತ್ರಿಗಳಲ್ಲಿ ಮತ್ತು ಈ ನಾಡಿಗಳಲ್ಲಿ ಬೃಹತೀ ಸಹಸ್ರದ ಅಕ್ಷರಗಳಿಂದ ವಾಚ್ಯವಾದ ನಿನ್ನ 72 ಸಾವಿರ ರೂಪಗಳುಂಟು.

ಹಾಗೆಯೇ ದೇಹದ ಅಸ್ಥಿಗಳಲ್ಲಿ 360 ರೂಪಗಳುಂಟು. ಮಜ್ಜೆಯಲ್ಲಿ 360 ರೂಪಗಳುಂಟು. ಪರ್ವ (ಸಂಧಿ) ಗಳಲ್ಲಿ 360 ರೂಪಗಳುಂಟು. ಹೀಗೆ ಈ ಮನೆಯೊಳಗೆ ಈ ಮೂರು ಕಡೆ ಒಟ್ಟು ನಿನ್ನ 1080 ರೂಪಗಳುಂಟು. ಇಷ್ಟೇ ಏನು? ಲಕ್ಷೋಪಲಕ್ಷ ಉಪನಾಡಿಗಳು, ರೋಮಕೂಪಗಳು—ಎಲ್ಲೆಡೆಯು, ಎಲ್ಲದರಲ್ಲು ನೀನು ತುಂಬಿರುವೆ. ಹೀಗೆ ದೇಹದ ಮೂಲೆ ಮೂಲೆಯಲ್ಲು, ಕಣಕಣದಲ್ಲೂ ನಿನ್ನ ಅನಂತ ರೂಪಗಳುಂಟು.

ನೀನು ಏನು ರೂಪ ತಾಳಿದೆಯೋ ಅಂಥದೇ ರೂಪಗಳಿಂದ ಲಕ್ಷ್ಮೀದೇವಿಯೂ ನಿನ್ನ ಸಂಗಾತಿಯಾಗಿ ನಿನ್ನ ಜತೆ ವಿಹರಿಸುತ್ತಿದ್ದಾಳೆ. ಅದರಿಂದ "ಸಿರಿದೇವಿ ಸಹಿತದಿ ನಿನ್ನ ರೂಪಗಳುಂಟು." ಶ್ರೀದೇವಿ ಸಹಿತನಾಗಿಯೆ ನೀನು ಲೀಲಾ

ರೂಪಗಳನ್ನು ತೊಟ್ಟು ಈ ದೇಹವೆಂಬ ನಿನ್ನ ಪುರದೊಳಗೆ, ಅರಮನೆಯೊಳಗೆ, ಅಥವಾ ರಥದೊಳಗೆ ವಿಹರಿಸುತ್ತಿರುವೆ.

ಆದರಿಂದಲೇ ನೀನು ಪರಮ ಪುರುಷ. ನಿನ್ನ ಹಿರಿಮೆಗೆ ಎಣೆಯಿಲ್ಲ. ನಿನ್ನ ಹಿರಿಮೆಯ ತುದಿಯನ್ನು ಕಂಡವರೂ ಇಲ್ಲ. ತಾಯಿ ರಮೆಗೆ ಕೂಡ ಎಟುಕದ ಎತ್ತರದ ಪರಮ ಪುರುಷ ನೀನು : "ನ ತೇ ವಿಷೋ ಜಾಯಮಾನೋ ನ ಜಾತೋ ದೇವ ಮಹಿಮ್ನಃ ಪರಮಂತಮಾಪ".

ಈ ಪುರದಲ್ಲಿ ನಾನಿದ್ದರೂ ನಾನು ಬರಿಯ ಪುರುಷ. ನೀನೊಬ್ಬನೆ ಪರಮ ಪುರುಷ. ಏಕೆಂದರೆ ಇಲ್ಲಿರುವ ಪರಿವಾರವೆಲ್ಲ ನಿನಗಾಗಿ ಹೊರತು ನನಗಾಗಿ ಅಲ್ಲ. ನೀನಿದ್ದರೆ ನಾನಿರುವೆ. ನೀನು ಹೊರಟೆಯೆಂದರೆ ನಾನೂ ಹೊರಡಬೇಕಾಗುತ್ತದೆ. ಅದರಿಂದ ನಾನು ನಿಜವಾದ ಅರ್ಥದಲ್ಲಿ ಪುರುಷನೂ ಅಲ್ಲ. ಏಕೆಂದರೆ ನಾನು ಈ ಪುರದೊಡೆಯನಲ್ಲ. ನೀನೇ ನಿಜವಾದ ಪುರುಷ. ಅದರಿಂದ ನೀನೇ ಪರಮಪುರುಷ.

ಇಂಥ ಪರದೈವವಾದ ನೀನು ನಿನ್ನ ಇರವಿನ ಅರಿವನ್ನು ನನ್ನ ಬಗೆಯಲ್ಲಿ ಮೂಡಿಸು ;

> ಸಿರಿದೇವಿ ಸಹಿತದಿ ಪುರಂದರ ವಿಠಲನೆ
> ಕರುಣದಿಂದಲಿ ಮನ್ಮಂದಿರದೊಳಗೆ
> ಬಾರಯ್ಯ ವೆಂಕಟರಮಣ ||

ಓ ಪುರಂದರ ವಿಠಲನೆ, ಶ್ರೀತತ್ತ್ವ ಸಹಿತನಾಗಿ, ಶ್ರೀನಿವಾಸನಾಗಿ ನೀನು ನನ್ನ ಮನೋಮಂದಿರದಲ್ಲಿ ಬಂದು ನೆಲಸಬೇಕು. ಚಿತ್ತದಲ್ಲಿ ನಿನ್ನ ಸ್ಮರಣೆ, ನಿನ್ನ ಧ್ಯಾನ ನಿರಂತರ ನಡೆಯುವಂತೆ ಕರುಣಿಸು. ಇದು ನನ್ನ ಸಾಧನೆಯ ಅಹಂಕಾರದ ಬೇಡಿಕೆಯಲ್ಲ. ನಿನ್ನ ಕರುಣೆಯಿಂದಲೆ ಇದು ಸಾಧ್ಯ ಎನ್ನುವ ಅರಿವಿನಿಂದ ಮಾಡುವ ದೀನ ಪ್ರಾರ್ಥನೆ. ಈ ದೀನನನ್ನು ಉದ್ಧರಿಸುವ ಕರುಣಾಳುವಾಗಿ ನೀನು ಬರುವೆ ಎನ್ನುವ ಭರವಸೆಯ ಪ್ರಾರ್ಥನೆ.

ಶ್ರೀ ಕೃಷ್ಣ — ಶ್ರೀನಿವಾಸ

ವೇಣುನಾದ ಬಾರೋ ವೆಂಕಟರಮಣನೆ ಬಾರೋ
ಬಾಣನ ಭಂಜಿಸಿದಂಥ ಭಾವಜನಯ್ಯನೆ ಬಾರೋ || ಪಲ್ಲವಿ ||

ಪೂತನೆಯ ಮೊಲೆಯುಂಡ ನವ–
ನೀತ ಚೋರನೆ ಬಾರೋ ।
ದೈತ್ಯ ರಾವಣನ ಸಂಹರಿಸಿದ
ಸೀತಾನಾಯಕ ಬಾರೋ ॥ || 1 ||

ಬಿಲ್ಲು ಮುರಿದು ಮಲ್ಲರ ಗೆದ್ದ
ಫುಲ್ಲನಾಭನೆ ಬಾರೋ ।
ಗೊಲ್ಲತಿಯರೊಡನೆ ನಲಿವ
ಚೆಲ್ವ ಮೂರುತಿ ಬಾರೋ ॥ || 2 ||

ಮಂದರಗಿರಿ ಎತ್ತಿದಂಥ
ಇಂದಿರಾರಮಣನೆ ಬಾರೋ ।
ಕುಂದದೆ ಗೋವುಗಳ ಕಾಯ್ದ
ನಂದನಂದನನೆ ಬಾರೋ ॥ || 3 ||

ನಾರಿಯರ ಮನೆಗೆ ಪೋಪ
ವಾರಿಜಾಕ್ಷನೆ ಬಾರೋ ।
ಈರೇಳು ಭುವನವ ಕಾಯ್ವ
ಮಾರನಯ್ಯನೆ ಬಾರೋ ॥ || 4 ||

ಶೇಷಶಯನ ಮೂರುತಿಯಾದ
ವಾಸುದೇವನೆ ಬಾರೋ ।
ದಾಸರೊಳು ವಾಸವಾದ
ಶ್ರೀಶ ಪುರಂದರವಿಠಲ ಬಾರೋ ॥ || 5 ||

ವೆಂಕಟರಮಣನೆಂದರೆ ವೆಂಗಡದಲ್ಲಿ ನೆಲಸಿದ ನಾರಾಯಣನದೇ ರೂಪ. ಇವನೇ ಪಾಲಗಡಲಲ್ಲಿ ಪಡಿಸಿದ ಶೇಷಶಯನ. ಇವನೇ ಹೊಕ್ಕುಳಲ್ಲಿ ಬ್ರಹ್ಮಾಂಡ ರೂಪವಾದ ಪದ್ಮವನ್ನು ಹೊತ್ತ ಪದ್ಮನಾಭ. ಇವನೇ ಮೋಕ್ಷಪ್ರದನಾಗಿ ತುರೀಯ

ನೆನ್ನಿಸಿದ ಪರವಾಸುದೇವ. ಇವನೇ ರಾಮನಾಗಿ ರಾವಣನನ್ನು ಕೊಂದ. ಇವನೇ ಕೃಷ್ಣನಾಗಿ ಕಂಸನನ್ನು ಕೊಂದ.

ಇದು ಎಲ್ಲ ಅನುಭಾವಿಗಳು ಶ್ರೀನಿವಾಸನನ್ನು ಕಂಡ ಬಗೆ. ಆಳ್ವಾರರು ತಮ್ಮ ಪಾಶುರಗಳಲ್ಲಿ ಶ್ರೀನಿವಾಸನನ್ನು ಹೀಗೆಯೇ ಹಾಡಿದ್ದಾರೆ. ದಾಸಪಂಥದವರು ಕೂಡ. ಅದೇ ಧಾಟಿಯಲ್ಲಿ ಸಾಗಿದ ಪುರಂದರದಾಸರೂ ಶ್ರೀನಿವಾಸನನ್ನು ಈ ಪದ್ಯದಲ್ಲಿ ಸ್ತುತಿಸುತ್ತಾರೆ. ಮೂಲರೂಪದ ಸ್ತುತಿಯೂ ಇಲ್ಲಿ ಬಂದಿದೆ. ಹಲವು ಅವತಾರ ರೂಪಗಳ ಉಲ್ಲೇಖವೂ ಬಂದಿದೆ. ವಿಶೇಷತಃ ಶ್ರೀ ಕೃಷ್ಣಾಷ್ಟೋತ್ತರ ಶತನಾಮಸ್ತೋತ್ರದಲ್ಲಿ ಬಂದ ಕೃಷ್ಣನ ಸ್ತುತಿನಾಮಗಳಿಂದಲೇ ಈ ಪದ್ಯವನ್ನು ರಚಿಸಿದ್ದಾರೆ. ಇದರ ಹಿನ್ನೆಲೆಯಲ್ಲಿರುವ ದಾಸರ ಉದ್ದೇಶ ಇದು ; ವೆಂಕಟೇಶ ಅಥವಾ ಶ್ರೀನಿವಾಸ ಎನ್ನುವುದು ಭಗವಂತನ ಒಂದು ವಿಶಿಷ್ಟವಾದ ಅವತಾರವಲ್ಲ. ಯಾರು ಕೃಷ್ಣನೋ ಅವನೇ ಶ್ರೀನಿವಾಸ. ಅವನೇ ಪುರಂದರ ವಿಠಲ. ಕೃಷ್ಣಾವತಾರದ ಲೀಲೆಯದೇ ಇವು ಎರಡು ಮುಖಗಳು. ಅದಕೆಂದೇ ಕೃಷ್ಣನ ಕೊಳಲ ಇಂಚರದ ನೆನಪಿನ ಜತೆಗೆಯೇ ಪದ್ಯದ ಪಲ್ಲವಿ ತೊಡಗುತ್ತದೆ;

ವೇಣುನಾದ ಬಾರೋ ವೆಂಕಟರಮಣನೆ ಬಾರೋ

ಗೋಕುಲದಲ್ಲಿ ಕೊಳಲನ್ನೂದಿ ಗೋಪಿಯರನ್ನು ಮರಳು ಮಾಡಿದ ಶ್ರೀ ಕೃಷ್ಣನೇ ವೆಂಕಟಗಿರಿಯಲ್ಲಿ ವೆಂಕಟರಮಣನಾಗಿ ನೆಲಸಿದ. ಇದನ್ನೇ ಕೃಷ್ಣಾಷ್ಟೋತ್ತರ ಶತನಾಮದಲ್ಲಿ 'ವೇಣುನಾದ ವಿಶಾರದಃ' ಎಂದು ಸ್ತುತಿಸಿದ್ದಾರೆ.

ಇದು ದ್ವಾಪರದ ಗೋಪಿಯರ ಕಥೆಯಾಗಿ ಮಾತ್ರ ಉಳಿಯ ಬಾರದು. ಈಗಲೂ ಈ ಭಕ್ತನ ಮೇಲೆ ಕರುಣೆಯಿಂದ ವೇಣುವನ್ನು ನುಡಿಸುತ್ತ, ವೇಣುನಾದನಾಗಿ ಬಾರೋ. ನಿನ್ನ ಆ ಕೊಳಲನ ಇಂಚರವನ್ನು ನಾನೂ ಕೇಳುವಂತೆ ಮಾಡಯ್ಯ. ಶಂಖ-ಚಕ್ರ ತೊಟ್ಟ ವೆಂಕಟರಮಣನೇ ಕೈಯಲ್ಲಿ ಕೊಳಲು ತೊಟ್ಟ ಕೃಷ್ಣನಾಗಿ ನನಗೆ ದರ್ಶನ ನೀಡಲು ಬಾರೋ, ನಿನ್ನ ಹಾಲುನಿದ್ದೆಯಿಂದ ಎದ್ದು ಬಾರಯ್ಯ.

ಕೃಷ್ಣಾವತಾರದ ಇನ್ನೊಂದು ಲೀಲಾನಾಟಕವನ್ನು ಪಲ್ಲವಿಯ ಮುಂದಿನ ಸಾಲು ಉಲ್ಲೇಖಿಸುತ್ತದೆ.

ಬಾಣನ ಭಂಜಿಸಿದಂಥ ಭಾವಜನಯ್ಯನೇ ಬಾರೋ.

ಬಾಣನನ್ನು ಭಂಜಿಸಿದ ಕಥೆ ಭಾಗವತದಲ್ಲಿ ಬಂದಿದೆ :

ಬಲಿಚಕ್ರವರ್ತಿಯ ಮಗ ಬಾಣಾಸುರ ಸಾವಿರ ತೋಳುಗಳ ಮಹಾವೀರ. ಅವನ ದರ್ಪಕ್ಕೆ ದೇವತೆಗಳೂ ಮಣಿದರು. ಅವನ ತಪಸ್ಸಿಗೆ ಒಲಿದ ಶಿವನೂ

ಅವನ ರಾಜಧಾನಿಯಾದ ಶೋಣಿತಪುರದಲ್ಲಿ ರಕ್ಷೆಗೆ ನಿಂತ. ಅನುಪಮ ಸುಂದರಿಯಾದ ಉಷೆ ಅವನ ಮಗಳು. ಕೃಷ್ಣನ ಮೊಮ್ಮಗ, ಪ್ರದ್ಯುಮ್ನನ ಮಗ, ಅನಿರುದ್ಧನನ್ನು ಅವಳು ಕನಸಿನಲ್ಲಿ ಕಂಡು ಮೋಹಿಸಿದಳು. ಅವಳ ಗೆಳತಿ ಚಿತ್ರಲೇಖೆ ಎನ್ನುವ ಅಪ್ಸರೆ ಅವಳ ಬಯಕೆಯನ್ನರಿತಳು. ದ್ವಾರಕೆಗೆ ತೆರಳಿ ಮಲಗಿದ್ದ ಅನಿರುದ್ಧನನ್ನು ಅಪಹರಿಸಿ ಮಂತ್ರಬಲದಿಂದ ಅಂತರಿಕ್ಷಮಾರ್ಗವಾಗಿ ಬಂದು ಉಷೆಗೆ ಒಪ್ಪಿಸಿದಳು. ಅಂತಃಪುರದಲ್ಲಿ ನಡೆದ ಈ ಪ್ರಣಯಪ್ರಸಂಗ ತಿಳಿದಾಗ ಬಾಣಾಸುರ ಕೋಪಗೊಂಡ. ಅನಿರುದ್ಧನನ್ನು ಬಂಧನದಲ್ಲಿಟ್ಟ.

ನಾಲ್ಕು ತಿಂಗಳು ಸಂದರೂ ಅನಿರುದ್ಧ ಮರಳಲಿಲ್ಲ. ಯಾದವರು ಕಂಗೆಟ್ಟರು. ಅನಿರುದ್ಧ ಬಾಣನ ಸೆರೆಮನೆಯಲ್ಲಿರುವ ಸುದ್ದಿ ನಾರದರಿಂದ ಅವರಿಗೆ ತಿಳಿಯಿತು. ಕೃಷ್ಣನ ನೇತೃತ್ವದಲ್ಲಿ ಯಾದವರು ಬಾಣನ ಶೋಣಿತಪುರಕ್ಕೆ ಧಾಳಿಯಿಟ್ಟರು. ಕೃಷ್ಣ ಬಾಣಾಸುರನ ತೋಳುಗಳನ್ನು ಕತ್ತರಿಸಿದ. ಶಿವನ ಪ್ರಾರ್ಥನೆಯ ಮೇರೆಗೆ ಅವನನ್ನು ಕೊಲ್ಲದೇ ಬಿಟ್ಟ. ಬಾಣನ ಸೆರೆಯಿಂದ ಉಷಾ ಅನಿರುದ್ಧರನ್ನು ಬಿಡುಗಡೆಗೊಳಿಸಿ ದ್ವಾರಕೆಗೆ ಕರೆದು ತಂದ.

ಕೃಷ್ಣಾಷ್ಟೋತ್ತರ ಶತನಾಮದಲ್ಲೂ ಈ ಕಥೆಯನ್ನು ಬಣ್ಣಿಸುವ ಹೆಸರು ಬಂದಿದೆ: "ಬಾಣಾಸುರ ಕರಾಂತಕಃ" ಅದನ್ನೆ ದಾಸರು ಹಾಡಿದರು; ಬಾಣನ ಭಂಜಿಸಿದೆ ಅಯ್ಯನೆ ಬಾರೋ, ಅನಿರುದ್ಧನ ಅಜ್ಜನೆ ಬಾರೋ.

ನೀನು ಬಾಣನ ಗರ್ವವನ್ನು, ಬಲಮದವನ್ನು ಭಂಜಿಸದೆ. ಬಾಣನ ತೋಳುಗಳನ್ನು ಭಂಜಿಸಿದೆ. ನನ್ನೊಳಗೂ ಲೋಕಾಭಿಮಾನಿನಿಯಾದ ಉಷೆ ಉದ್ದಾಳೆ. ನನ್ನ ಸೊತ್ತು, ನನ್ನ ಆಸ್ತಿಪಾಸ್ತಿ, ನನ್ನ ಸಂಪತ್ತು, ನನ್ನ ಹೆಂಡತಿ ಮಕ್ಕಳು, ನನ್ನ ಲೋಕ ಎನ್ನುವ ಮೋಹ ಬಾಣಾಸುರನಂತೆ ಸಾವಿರ ತೋಳುಗಳಿಂದ ನನ್ನನ್ನು ಕಬಳಿಸುತ್ತಿದೆ. ನೀನು ಚಕ್ರಪಾಣಿಯಾಗಿ ಬಂದು ನನ್ನೊಳಗಿರುವ ಬಾಣನ ತೋಳುಗಳನ್ನೂ ಭಂಜಿಸಬೇಕು. ಅದಕ್ಕಾಗಿ ಬಾಣನ ಭಂಜಿಸಿದಂಥ ಅಯ್ಯನೆ ಬಾರೋ.

ಮುಂದಿನ ಮಾತು: "ಭಾವಜನಯ್ಯನೆ ಬಾರೋ," ಭಾವ ಎಂದರೆ ಮನಸ್ಸು ಅಲ್ಲಿ ಹುಟ್ಟಿದವ, ನೆಲಸಿದವ ಭಾವಜ; ಕಾಮ–ನೀನು ಭಾವಜನಯ್ಯ: ಕಾಮನ ತಂದೆ. ಈ ಕಾಮನೇ ರುಕ್ಮಿಣಿಯಲ್ಲಿ ಪ್ರದ್ಯುಮ್ನನಾಗಿ ಜನಿಸಿದ. ಅವನ ಮಗನಾಗಿ ರುಕ್ಮಿಯ ಮಗಳು ರುಗ್ಮವತಿಯಲ್ಲಿ ಅನಿರುದ್ಧ ಜನಿಸಿದ. ಅದರಿಂದ ನೀನು ಅನಿರುದ್ಧನ ಅಜ್ಜ; ಕಾಮನ ತಂದೆ; ಭಾವಜನಯ್ಯ. ಇದನ್ನೆ ಅಷ್ಟೋತ್ತರ ಶತನಾಮದಲ್ಲಿ "ಕಾಮಜನಕಃ" ಎಂದು ಉಲ್ಲೇಖಿಸಿದ್ದಾರೆ.

ನೀನು ಕಾಮನ ತಂದೆಯೆಂದೇ ಅವನ ಮಗನ–ನಿನ್ನ ಮೊಮ್ಮಗನ ವಿವಾಹಕ್ಕೆ ಅಡ್ಡಿಯಾಗಿ ನಿಂತ ಬಾಣನ ಅಹಂಕಾರವನ್ನು ಅಡಗಿಸಿ ಅವನನ್ನು ಭಂಗಿಸಿದೆ.

ಈ ಭಾವಜನಾದ ಕಾಮದೇವನೆ ರಾಮಾವತಾರದಲ್ಲಿ ಭರತನಾಗಿ ನಿನ್ನ ಸೇವೆ ಮಾಡಿದ. ನೀನು ಭಾವಜನಯ್ಯನಾಗಿ ಭರತನ ಪ್ರೀತಿಯ ಅಣ್ಣನಾಗಿ ಅವನಿಗೆ ಯುವರಾಜ ಪದವನ್ನಿತ್ತು ಸಲಹಿದೆ.

ಈ ಭಾವಜನಾದ ಕಾಮದೇವನೆ ರುಕ್ಮಿಣಿಯಲ್ಲಿ ಪ್ರದ್ಯುಮ್ನನಾಗಿ ಜನಿಸಿದಂತೆ ಜಾಂಬವತಿಯಲ್ಲಿ ಸಾಂಬನಾಗಿ ಜನಿಸಿದ. ನೀನು ಭಾವಜನಯ್ಯನಾಗಿ ಸಾಂಬನ ಪ್ರೀತಿಯ ತಂದೆಯಾಗಿ ಅವನ ಯಶಸ್ಸನ್ನು ಮೆರೆಸಿದೆ.

ಈ ಭಾವಜನಾದ ಕಾಮದೇವನೆ ಸನಕಾದಿಗಳ ಜತೆಗೆ ಸನತ್ಕುಮಾರನಾಗಿ ಜನಿಸಿದ. ನೀನು ಸ್ವತಃ ಸನತ್ಕುಮಾರರೂಪದಿಂದ ಅವತರಿಸಿ ಬ್ರಹ್ಮಪುತ್ರನಾದ ಆ ಸನತ್ಕುಮಾರನಿಗೆ ಬ್ರಹ್ಮಚರ್ಯವನ್ನು ಉಪದೇಶಿಸಿ ಉದ್ಧರಿಸಿದೆ. ಹೀಗೆ ನೀನು ಭಾವಜನಯ್ಯನಾದೆ: ಭಾವಜನಾದ ಸನತ್ಕುಮಾರನ ಗುರುವಾದೆ.

ಈ ಭಾವಜನಾದ ಕಾಮದೇವನೆ ರುದ್ರಪುತ್ರನಾಗಿ ಸ್ಕಂದನಾಗಿ ಜನಿಸಿದ. ಶಿವಭಕ್ತನಾದ ಬಾಣಾಸುರನ ಜತೆ ನೀನು ಯುದ್ಧಹೂಡಿದಾಗ ಭಕ್ತವತ್ಸಲನಾದ ಸ್ಕಂದನೂ ಬಾಣನ ಪರವಾಗಿ ಯಾದವರ ವಿರುದ್ಧ ಯುದ್ಧದ ನಾಟಕವಾಡಿದ್ದ. ಹೀಗೆ ಇಲ್ಲಿ ಪ್ರದ್ಯುಮ್ನನಾಗಿ, ಅಲ್ಲಿ ಸ್ಕಂದನಾಗಿ, ಒಂದೇ ತತ್ತ್ವದ ಎರಡು ರೂಪಗಳು ಎದುರು ಬದುರಾಗಿ ಹೋರಾಡುವ ನಾಟಕವನ್ನು ನೀನಾಡಿಸಿದೆ. ಭಾವಜನಯ್ಯನಾದ – ಸ್ಕಂದ, ಕಾಮ ಇಬ್ಬರಿಗೂ ನಿಯಾಮಕನಾದ ನಿನ್ನ-ಇಚ್ಛೆಗೆ ಅನುಗುಣವಾಗಿ ಅವರೂ ಆಟವಾಡಿದರು.

ಹೀಗೆ ಕಾಮನ ಎಲ್ಲ ರೂಪಗಳಲ್ಲೂ ಅವನನ್ನು ಉದ್ಧರಿಸಿದ ಭಾವಜನಯ್ಯನೆ, ನನ್ನೆಡೆಗೆ ಬಾರೋ. ನಾನೂ ಕಾಮಕ್ಕೆ ಬಲಿಯಾಗದಂತೆ, ಬಲಿಯಾಗಿ ನನ್ನ ಭಾವ ಕೆಡದಂತೆ ಮಾಡೋ.

ತಿರುಪತಿ ಬೆಟ್ಟದಲ್ಲಿ ಒಂದು ಬೆಳಗಿನಜಾವದಲ್ಲಿ ಈ ಹಾಡನ್ನು ಹಾಡಿದ ದಾಸರು ಆ ಸಂದರ್ಭದಲ್ಲಿ ಬಾಣಾಸುರ ವಿಜಯದ ಕಥೆಯನ್ನು ನೆನಪಿಸಿಕೊಳ್ಳುವುದರಲ್ಲಿ ಒಂದು ವಿಶೇಷ ಕಾರಣವೂ ಉಂಟು. ಶಿವಭಕ್ತನಾದ ಬಾಣಾಸುರನನ್ನು ಸೋಲಿಸಿದ ಈ ಕೃಷ್ಣವಿಜಯದ ಕಥೆಯನ್ನು ಬೆಳಗ್ಗೆ ಎದ್ದು ನೆನೆಸಿಕೊಂಡವರಿಗೆ ಬಾಳಿನಲ್ಲಿ ಸೋಲೆಂಬುದಿಲ್ಲ ಎಂದು ಭಾಗವತ ಹೇಳುತ್ತದೆ:

ಯ ಏವಂ ಕೃಷ್ಣವಿಜಯಂ ಶಂಕರೇಣ ಚ ಸಂಯುಗಮ್ ।
ಸಂಸ್ಮರೇತ್ ಪ್ರಾತರುತ್ಥಾಯ ನ ತಸ್ಯ ಸ್ಯಾತ್ ಪರಾಜಯಃ ॥

(ಬಾಣನಿಗಾಗಿ ನಡೆದ ಈ ಶಿವ–ಕೇಶವರ ಯುದ್ಧವನ್ನು, ಯುದ್ಧದಲ್ಲಿ ಶ್ರೀಕೃಷ್ಣನ ವಿಜಯುವನ್ನು ಬೆಳಗ್ಗೆ ಎದ್ದು ಸ್ಮರಿಸಿದವನು ಎಂದೂ ಜೀವನದಲ್ಲಿ ಸೋಲು ವುದಿಲ್ಲ).

ಆದಕೆಂದೆ ದಾಸರು ಸುಪ್ರಭಾತದಲ್ಲಿ ಶ್ರೀನಿವಾಸನನ್ನು ಹೀಗೆ ಹಾಡಿ ಕರೆದರು : "ಬಾಣನ ಭಂಜಿಸಿದಂಥ ಭಾವಜನಯ್ಯನೆ ಬಾರೋ"

ಮುಂದಿನ ಸೊಲ್ಲಿನ ಪೂರ್ವಾರ್ಧ ಕೃಷ್ಣನ ಬಾಲಚರಿತೆಯನ್ನೂ ಉತ್ತರಾರ್ಧ ರಾಮಾವತಾರದ ಕಥೆಯನ್ನೂ ಜತೆಯಾಗಿ ಬಣ್ಣಿಸುತ್ತವೆ :

ಪೂತನೆಯ ಮೊಲೆಯುಂಡ ನವ–
ನೀತ ಚೋರನೆ ಬಾರೋ ।
ದೈತ್ಯ ರಾವಣನ ಸಂಹರಿಸಿದ
ಸೀತಾನಾಯಕನೆ ಬಾರೋ ॥

ಪೂತನೆಯ ವಿಷದ ಮೊಲೆ ಹಾಲನ್ನುಂಡು, ಗೊಲ್ಲ ಹುಡುಗೆಯರ ಮನೆಯ ಬೆಣ್ಣೆ ಕದ್ದುತಿಂದು ಬೆಳೆದ ಹುಡುಗನಲ್ಲವೆ ನೀನು ? ನನ್ನ ಒಳಬಗೆಯ ಮೋಹದ ವಿಷ ವನ್ನು ಹೀರಯ್ಯ. ನನ್ನ ಹೃದಯದಾಳದ ಭಕ್ತಿಯ ಬೆಣ್ಣೆಯನ್ನು ಕದ್ದು ತಿನ್ನಲು ಬಾರೋ:

ಅಷ್ಟೋತ್ತರಶತನಾಮದಲ್ಲೂ ಇದೇ ವಿಶೇಷಣಗಳು ಬಂದಿವೆ. ಕೃಷ್ಣನನ್ನು "ಪೂತನಾಜೀವಿತಹರಃ" ಎಂದು ಕರೆದ ಈ ಸ್ತೋತ್ರ ಅವನ ಬೆಣ್ಣೆಯ ವ್ಯಾಮೋಹ ವನ್ನು ಹಲವು ವಿಶೇಷಣಗಳಿಂದ ಕೊಂಡಾಡುತ್ತದೆ. "ನವನೀತವಿಲಿಪ್ತಾಂಗೋ ನವನೀತನಟೋಽನಘಃ । ನವನೀತನವಾಹಾರಃ"

ಬೆಣ್ಣೆ ಕದ್ದಾಗ ಮೊಸರ ಕುಡಿಕೆಯೊಡೆದು ಮೈಯೆಲ್ಲ ಬೆಣ್ಣೆ ಚೆಲ್ಲಿಕೊಂಡವ; ತನ್ನನ್ನು ಪ್ರೀತಿಸಿದವರ ಬೆಣ್ಣೆಯಂದರೆ ಇವನಿಗೊಂದು ಹೊಸ ಆಹಾರ; ಇವನು ಇಂಥ ಬೆಣ್ಣೆ ಕದಿಯುವ ನಾಟಕದ ಮಹಾನಟ; ಅವನು ಕದ್ದರೂ ಕಳ್ಳನಲ್ಲ. ಏಕೆಂದರೆ ಅವನು ಅನಘ; ದೋಷದೂರ. ಅವನು ನಮ್ಮ ಪಾಪವನ್ನು ಕದಿಯುತ್ತಾನೆ; ನಮ್ಮ ಭಕ್ತಿಯ ಬೆಣ್ಣೆಯನ್ನು ಕದಿಯುತ್ತಾನೆ. ಅವನು ಕದಿಯಬೇಕು ಎಂದು ನಾವು ಕಾದುಕೂತಿದ್ದೇವೆ. ಅವನು ಇಂಥ ಕಳ್ಳನೆಂದೇ ನಾವು ಅವನನ್ನು ಹೃದಯದಲ್ಲಿ ಹೊತ್ತು ಪೂಜಿಸುತ್ತೇವೆ.

ಕೃಷ್ಣನೊಬ್ಬನೆ ಇಂಥ ಚಿತ್ತಚೋರನಲ್ಲ ; ಭಗವಂತನ ಎಲ್ಲ ರೂಪಗಳೂ ಒಂದೆ. ಈ ಶ್ರೀನಿವಾಸನೆ ದ್ವಾಪರದ ಕೃಷ್ಣ ; ಇವನೆ ತ್ರೇತೆಯ ರಾಮ. ಭಗವಂತನ ರೂಪಗಳಲ್ಲಿ ಭೇದ ಚಿಂತನೆ ನರಕದ ದಾರಿ. ಕೃಷ್ಣನಂತೆ ರಾಮನೂ ಅಧ್ಯಾತ್ಮದ

ನವನೀತಚೋರ. ಆದಕೆಂದೆ ಮುಂದಿನ ಸಾಲಿನಲ್ಲಿ ದಾಸರು ಶ್ರೀನಿವಾಸನನ್ನು ರಾಮ ರೂಪದಿಂದ ಕಂಡು ಕೊಂಡಾಡುತ್ತಾರೆ :

ದೈತ್ಯರಾವಣನ ಸಂಹರಿಸಿದ
ಸೀತಾನಾಯಕ ಬಾರೋ

ಸೀತೆಗಾಗಿ ಲಂಕೆಗೆ ಲಗ್ಗೆಯಿಟ್ಟೆ, ಸೀತೆಯನ್ನು ಕದ್ದ ರಾವಣನನ್ನು ಸಂಹರಿಸಿದೆ. ಪರಸ್ತ್ರೀಯನ್ನು ಕಾಮಿಸುವ ಅವನ ದೈತ್ಯಸ್ವಭಾವಕ್ಕೆ ತಕ್ಕ ಶಾಸ್ತಿ ನೀಡಿದೆ. ಆ ಸೀತಾನಾಯಕನೆ ಈ ವೇಂಗಡಕ್ಕೆ ಬಂದು ನಿಂತೆಯಲ್ಲ. ನನ್ನ ಹೃದಯ ಮಂದಿರ ದೊಳಗೂ ಬಾರೋ ;

ಕೃಷ್ಣಾಷ್ಟೋತ್ತರ ಶತನಾಮ ಕೃಷ್ಣನನ್ನು "ದಾನವೇಂದ್ರವಿನಾಶನಃ" ಎಂದು ಕರೆಯುತ್ತದೆ. ಇದು ಭಗವಂತನ ಎಲ್ಲ ಅವತಾರಗಳಲ್ಲೂ ನಡೆಯುವ ದಾನವ ಸಂಹಾರದ ಸಮಷ್ಟಿ ಅರ್ಥವನ್ನು ಒಳಗೊಂಡ ಸರ್ವಗ್ರಾಹಿಯಾದ ವಿಶೇಷಣ. ರಾಮಾವತಾರದಲ್ಲಿ ರಾವಣನೆಂಬ ದಾನವೇಂದ್ರನನ್ನು ಕೊಂದ. ಕೃಷ್ಣಾವತಾರದಲ್ಲಿ ಶಿಶುಪಾಲನೆಂಬ ದಾನವೇಂದ್ರನನ್ನು ಕೊಂದ. ಅಂತೆಯೇ ಮಾರೀಚ–ಕುಂಭಕರ್ಣಾದಿ ಗಳನ್ನು, ಅಂತೆಯೆ ಕಂಸದಂತವಕ್ರಾದಿಗಳನ್ನು. ವೆಂಕಟೇಶ ಸ್ತೋತ್ರವಂತು ಶ್ರೀನಿವಾಸನನ್ನು ಸ್ಫುಟವಾಗಿ ರಾಮಸ್ವರೂಪದಿಂದ ಸ್ತುತಿಸುತ್ತದೆ : "ಶ್ರೀರಾಮೋ ರಾಮಭದ್ರಶ್ಚ ಭವಬಂಧೈಕ ಮೋಚಕಃ". ಆದಕೆಂದೆ ದಾಸರು ಹಾಡಿದರು : "ದೈತ್ಯ ರಾವಣನ ಸಂಹರಿಸಿದ ಸೀತಾನಾಯಕ ಬಾರೋ".

ರಾಮಾವತಾರ–ಕೃಷ್ಣಾವತಾರ ಎರಡಕ್ಕೂ ಅನ್ವಯವಾಗುವ ವಿಶೇಷಣದಿಂದ ತೊಡಗಿ ಕೃಷ್ಣಾವತಾರದ ಚರಿತೆಯನ್ನೇ ಮುಂದುವರಿಸುತ್ತದೆ ಮುಂದಿನ ಸೊಲ್ಲು :

ಬಿಲ್ಲು ಮುರಿದು ಮಲ್ಲರ ಗೆದ್ದ
ಫುಲ್ಲನಾಭನೆ ಬಾರೋ |
ಗೊಲ್ಲತಿಯರೊಡನೆ ನಲಿವ
ಚೆಲ್ವಮೂರುತಿ ಬಾರೋ

ರಾಮಾವತಾರದಲ್ಲಿ ಸೀತೆಯ ಸ್ವಯಂವರದಲ್ಲಿ ಶಿವನ ಬಿಲ್ಲು ಮುರಿದವನು. ಕೃಷ್ಣಾವತಾರದಲ್ಲಿ ಬಿಲ್ಲು ಹಬ್ಬಕ್ಕೆಂದು ಮಥುರೆಗೆ ಬಂದು ಅಲ್ಲೂ ಶಿವಪ್ರದತ್ತವಾದ ಕಂಸನ ಬಿಲ್ಲು ಮುರಿದವನು. ಮುಂದೆ ಕಂಸನ ಆಸ್ಥಾನದಲ್ಲಿ ಎದುರಿಸಿದ ಮಲ್ಲರನ್ನು ಗೆದ್ದವನು.

ಚಾಣೂರ, ಛಲ, ಕೋಸಲರೆಂಬ ಮೂವರು ಮಲ್ಲರನ್ನು ತಾನು ಸ್ವತಃ ಕೊಂದವನು. ಮುಷ್ಟಿಕ, ಕೂಟ ಎಂಬ ಇನ್ನಿಬ್ಬರು ಮಲ್ಲರನ್ನು ಬಲರಾಮನೊಳಗಿದ್ದು ಬಲರಾಮನಿಂದ ಗೆಲಿಸಿದವನು; ಕೊಲಿಸಿದವನು. ಈ ಘಟನೆಯೇ ಕೃಷ್ಣಾಷ್ಟೋತ್ತರ ಶತನಾಮದಲ್ಲಿ ಒಂದು ನಾಮವಾಗಿ ಬಂದಿದೆ: "ಮುಷ್ಟಿಕಾಸುರ ಚಾಣೂರಮಲ್ಲಯುದ್ಧ ವಿಶಾರದಃ".

ಹೀಗೆ ರಾಮನಾಗಿ ರಾವಣನನ್ನು ಸಂಹರಿಸಿದವನು, ಕೃಷ್ಣನಾಗಿ ಕಂಸನ ಬಿಲ್ಲು ಮುರಿದು ಮಲ್ಲರ ಗೆದ್ದವನು ಯಾರು? ಫುಲ್ಲನಾಭನಾದ ಮೂಲರೂಪಿ ನಾರಾಯಣನೆ ಅಲ್ಲವೆ? "ಪೂರ್ಣಮದಃ ಪೂರ್ಣಮಿದಮ್". ಮೂಲರೂಪದಷ್ಟೆ ಅವತಾರರೂಪ ಕೂಡ ಪರಿಪೂರ್ಣ. ಆ ಮೂಲರೂಪಕ್ಕಾಗಲಿ ಈ ಅವತಾರರೂಪಗಳಿಗಾಗಲಿ ಅಣುಮಾತ್ರವೂ ಅಂತರವಿಲ್ಲ. ಅದರಿಂದ ಈ ಎಲ್ಲ ಅವತಾರ ಲೀಲೆಗಳನ್ನಾಡಿದ ನಾರಾಯಣನೆ ಬಾರೋ.

'ಫುಲ್ಲ' ಎನ್ನುವುದು ಸಂಸ್ಕೃತದಲ್ಲಿ 'ಅರಳಿದ' ಎಂಬ ಅರ್ಥದ ವಿಶೇಷಣ ವಾಚಕ ಪದ. ಕನ್ನಡದಲ್ಲಿ ಈ ಪದಕ್ಕೆ ಆ ಅರ್ಥದ ಜತೆಗೆಯೆ 'ಅರಳಿದ ಹೂವು' ಎಂಬ ವಿಶಿಷ್ಟವಾದ ಅರ್ಥವೂ ಉಂಟು. ಅದರಿಂದ ಫುಲ್ಲನಾಭ ಎಂದರೆ ಅರಳಿದ ಹೂವನ್ನು ನಾಭಿಯಲ್ಲಿ ಹೊತ್ತವನು. ಚತುರ್ದಶಭುವನಗಳ ಪಕಳೆಗಳನ್ನು ಅರಳಿಸಿದ ಲೋಕಾತ್ಮಕವಾದ ಕಮಲವೆ ಆ ಅರಳಿದ ಹೂವು. ಅದರಿಂದ ಫುಲ್ಲನಾಭ ಎಂದರೆ ಪದ್ಮನಾಭ.

ಸೃಷ್ಟ್ಯುನ್ಮುಖವಾಗಿ ಕ್ಷೀರಸಾಗರದಲ್ಲಿ ಪವಡಿಸಿರುವ ಭಗವಂತನ ರೂಪ ಪದ್ಮನಾಭ, ಇದನ್ನೆ ಪುರುಷರೂಪ ಎಂದೂ ಕರೆಯುತ್ತಾರೆ. ಇದೇ ಭಗವಂತನ ಮೊದಲ ಆವಿಷ್ಕಾರ; ಮೊದಲ ಅವತಾರ. ಮುಂದಿನ ಎಲ್ಲ ಅವತಾರಗಳಿಗೂ ಈ ರೂಪವೆ ಮೂಲ:

> ಏತನ್ನಾನಾವತಾರಾಣಾಂ
> ನಿಧಾನಂ ಬೀಜಮವ್ಯಯಮ್ (ಭಾಗ 1.3.5)
>
> ಆದೌ ಗೃಹೀತಮವತಾರಶತೈಕಬೀಜಂ
> ಯನ್ನಾಭಿಪದ್ಮಭವನಾದಹಮಾವಿರಾಸಮ್ (ಭಾಗ 3.10.2)

ಶ್ರೀನಿವಾಸನನ್ನು ಪದ್ಮನಾಭನೆಂಬ ಹೆಸರಿನಿಂದ ವೆಂಕಟೇಶ ಸ್ತೋತ್ರವೂ ಕರೆದಿದೆ:

> ಜನಾರ್ದನಃ ಪದ್ಮನಾಭೋ
> ವೇಂಕಟಾಚಲ ವಾಸಿನಃ

9

ಇವನು ಮಲ್ಲರನ್ನು ಗೆದ್ದ; ಅಷ್ಟೇ ಅಲ್ಲ, ಗೊಲ್ಲರ ಹುಡುಗೆಯರನ್ನೂ ಗೆದ್ದ ಎನ್ನುತ್ತಾರೆ ಮುಂದಿನ ಸಾಲಿನಲ್ಲಿ:

ಗೊಲ್ಲತಿಯರೊಡನೆ ನಲಿವ ಚೆಲ್ವ ಮೂರುತಿ ಬಾರೊ

ನೀನು ಜಗಜಟ್ಟಿಗಳ ಎದೆಯನ್ನು ನಡುಗಿಸಿದ ಮಹಾವೀರನೂ ಹೌದು. ಗೊಲ್ಲತಿಯರೊಡನೆ ವೃಂದಾವನದಲ್ಲಿ ನಲಿದಾಡಿ ಅವರೆದೆಯಲ್ಲಿ ಕಚಗುಳಿ ಬರಿಸಿದ ಮಹಾಪೋರನೂ ಹೌದು. ನಿನ್ನಂಥ ಚೆಲುವ ಮೂರುತಿಯನ್ನಲ್ಲದೆ ಇನ್ನಾರನ್ನು ಕಂಡು ಗೋಪಿಯರು ಮರುಳಾಗಬೇಕು ?

ಸ್ವರ್ಗಲೋಕದ ಅಪ್ಸರೆಯರೇ ಕೃಷ್ಣಸೇವೆಗಾಗಿ ಗೋಕುಲದಲ್ಲಿ ಗೊಲ್ಲಬಾಲೆಯರಾಗಿ ಜನಿಸಿದರು ಎಂದು ಶಾಸ್ತ್ರಗಳು ಸಾರುತ್ತವೆ. ಕಾಮ–ಭಕ್ತಿ ಅವರ ಸಹಜ ಧರ್ಮ. ಈ ಗೋಪೀಜನ್ಮದಲ್ಲು ಅವರು ಕೃಷ್ಣನನ್ನು ಭಕ್ತಿಯಿಂದ ಕಾಮಿಸಿದರು. ಕಾಮದ ಹಿಂದೆ ಇರುವ ಸ್ಥಾಯಿಭಾವ ಭಕ್ತಿ, ಅದರಿಂದಲೇ ಅವರ ಕಾಮದ ಭಕ್ತಿಗೆ ಭಕ್ತಿಕಾಮನಾದ ಕೃಷ್ಣ ಒಲಿದ. ಒಲಿದು ಅವರೊಡನೆ ನಲಿದ. ಅದಕೆಂದೆ ಕೃಷ್ಣಾಷ್ಟೋತ್ತರತ ಶತನಾಮ ಅವನನ್ನು "ಗೋಪಗೋಪೀಶ್ವರಃ" ಎಂದು ಕರೆಯುತ್ತದೆ. "ಜಲಕ್ರೀಡಾಸಮಾಸಕ್ತಗೋಪೀವಸ್ತ್ರಾಪಹಾರಕಃ" ಎಂದು ಗೋಪಿಯರೊಡನೆ ಅವನು ನಲಿದ ಚೆಲ್ಲಾಟದ ವಿಶಿಷ್ಟ ಘಟನೆಯನ್ನು ಉಲ್ಲೇಖಿಸುತ್ತದೆ.

ಗೋಪಿಯರು ಮೀಯಲೆಂದು ನೀರಿಗಿಳಿದಾಗ ಅವರ ಬಟ್ಟೆಯನ್ನು ಕದ್ದು, ಅವರ ಆ ಪೇಚನ್ನು ಕಂಡು ನಲಿದವನಲ್ಲವೆ ನೀನು ? ನಾನೂ ನಿನ್ನ ಮುಂದೆ ಬತ್ತಲಾಗಬೇಕು. ಈ ಪಂಚಕೋಶದ ಅಂಗಿಯನ್ನು ಕಳಚಿ, ಮೈಗಂಟಿದ ಲಿಂಗದೇಹದ ಒಳಚಡ್ಡಿಯನ್ನೂ ಕಳಚಿ ನಿರ್ವಾಣದ ಬಯಲಿನಲ್ಲಿ ನನ್ನನ್ನು ಬತ್ತಲುಗೊಳಿಸಲು ಬಾರೋ.

ನಿನ್ನಂಥ ಚೆಲ್ವ ಮೂರುತಿ ನೀನೊಬ್ಬನೆ. ಗೋಪಿಯರು ಮಾತ್ರವೆ ಅಲ್ಲ. ವೇದದ್ರಷ್ಟಾರರಾದ ಋಷಿಗಳು ಕೂಡ "ಯತ್ ತೇ ರೂಪಂ ಕಲ್ಯಾಣತಮಂ ತತ್ ತೇ ಪಶ್ಯಾಮಿ" ಎಂದು ಹಾಡುತ್ತಾ, ನಿನ್ನ ಚೆಲುವಿನ ಕಲ್ಯಾಣತಮಮೂರ್ತಿಯನ್ನು ಕಾಣಲು ಜೀವಮಾನವಿಡೀ ಹಂಬಲಿಸುತ್ತಾರೆ. ಅವರ ಜೀವನದ ಪರಮಪುರುಷಾರ್ಥವೆ ಅದು.

ಕೃಷ್ಣಾಷ್ಟೋತ್ತರ ಶತನಾಮದಲ್ಲಿ ಶ್ರೀಕೃಷ್ಣನ ಚೆಲುವ ಮೂರುತಿಯ ಬಗ್ಗೆಯೆ ಹಲವು ನಾಮಗಳು ಬಂದಿವೆ: "ಲೀಲಾಮಾನುಷವಿಗ್ರಹಃ", "ಸಚ್ಚಿದಾನಂದ ವಿಗ್ರಹಃ", "ತ್ರಿಭಂಗೀಮಧುರಾಕೃತಿಃ" "ತಮಾಲಶ್ಯಾಮಲಾಕೃತಿಃ".

ದ್ವಾತ್ರಿಂಶಲ್ಲಕ್ಷಣಗಳ ಪುರುಷ ಸೌಂದರ್ಯದ ಪರಾಕಾಷ್ಠೆಯಲ್ಲವೆ ಭಗವಂತನ ದಿವ್ಯಮೂರ್ತಿ! ಅದೇ ದಿವ್ಯಮಂಗಲವಿಗ್ರಹ ಲೋಕೋದ್ಧಾರದ ಲೀಲೆಗಾಗಿ, ಲೀಲೆಯಿಂದ ಮಾನುಷವಿಗ್ರಹ ತೊಟ್ಟು ನಂದಗೋಕುಲದಲ್ಲಿ ನಡೆದಾಡಿತಲ್ಲವೆ!

ಅದೇನು ನಮ್ಮಂತೆ ಪಂಚಭೂತಗಳಿಂದ ಮಾಡಿದ ಪ್ರಾಕೃತ ವಿಗ್ರಹವೆ? ಅವನು ಸಚ್ಚಿದಾನಂದ ವಿಗ್ರಹ. ಪರಿಶುದ್ಧವಾದ ಜ್ಞಾನ–ಆನಂದಗಳೇ ಮೈವೆತ್ತು ಬಂದ ಚೆಲ್ವ ಮೂರುತಿ. ಆ ಚೆಲುವಿಗೆ ಬೇರೆ ಎಣೆಯುಂಟೆ!

ವೃಂದಾವನದಲ್ಲಿ ಶರತ್‌ಕಾಲದ ಬೆಳುದಿಂಗಳ ಇರುಳುಗಳಲ್ಲಿ ಕೊಳಲನೂದುತ್ತ, "ತ್ರಿಭಂಗಿ"ಯಲ್ಲಿ ಬಳುಕಿ ನಿಂತ ಮಧುರಾಕೃತಿಯಾಗಿ, ಮೂರುಲೋಕದ ಮನಸೆಳೆದ ಆ ಚೆಲ್ವಮೂರುತಿಯನ್ನು ಕಂಡು ಮರುಳಾಗದ ಕಣ್ಣೂ ಉಂಟೆ? ಆಚಾರ್ಯ ಮಧ್ವರೂ ಅವನ ಚೆಲುವನ್ನು "ಗೋಕುಲಚಂದ್ರ" ಎಂದು, "ಸುಂದರರೂಪಾ" ಎಂದೂ ಬಗೆತುಂಬಿ ಹಾಡಿದರು. ತಮಾಲದ ಎಸಳಿನಂತೆ ಶ್ಯಾಮಲವಾದ ಆ ಸೌಂದರ್ಯರಾಶಿಯನ್ನು, ಆ ಚೆಲುವಿನ ಮೂರ್ತಿಯನ್ನು ನನಗೂ ತೋರಲು ಬಾರೋ.

ಅವತಾರ ರೂಪಗಳನ್ನು ಮತ್ತು ಮೂಲರೂಪವನ್ನು ಅಭೇದದಿಂದ ಸ್ತುತಿಸುವ ಪದ್ಧತಿಯನ್ನೇ ಮುಂದಿನ ಸೊಲ್ಲು ಮುಂದುವರಿಸುತ್ತದೆ :–

ಮಂದರಗಿರಿ ಎತ್ತಿದಂಥ
ಇಂದಿರಾ ರಮಣನೆ ಬಾರೋ ।
ಕುಂದದೆ ಗೋವುಗಳ ಕಾಯ್ದ
ನಂದನಂದನನೆ ಬಾರೋ ॥

ಮಂದರಗಿರಿಯನ್ನು ಎತ್ತಿದವನು ಎನ್ನುವ ಮಾತು ಎರಡು ಅವತಾರಗಳ ಕಥೆಯನ್ನು ಒಳಗೊಂಡಿದೆ. ಸಮುದ್ರ ಮಥನಕಾಲದಲ್ಲಿ ಕೂರ್ಮರೂಪದಿಂದ ಮಂದರಗಿರಿ ಎತ್ತಿದವನು–ಎನ್ನುವುದು ಒಂದು ಅರ್ಥ. ಹಾಗೆಯೆ ಮಂದರಗಿರಿ ಎಂದರೆ ಗೋವರ್ಧನ ಪರ್ವತವೂ ಹೌದು. ಮಂದರಗಿರಿಯನೆತ್ತಿದ ಕೂರ್ಮನೆ ಕೃಷ್ಣನಾಗಿ ಗೋವರ್ಧನಗಿರಿಯನ್ನೆತ್ತಿದ. ಆದಕೆಂದೆ ಕೃಷ್ಣಾಷ್ಟೋತ್ತರಶತನಾಮ ಅವನನ್ನು "ಗೋವರ್ಧನಾಚಲೋದ್ಧರ್ತಾ" ಎಂದು ಕೊಂಡಾಡಿತು.

ಗೋವರ್ಧನವನ್ನೂ ಮಂದರವನ್ನೂ ಏಕೀಕರಿಸಿ ಉಲ್ಲೇಖಿಸುವುದು ಪ್ರಾಚೀನರಲ್ಲೂ ಕಂಡುಬರುವ ಸಂಪ್ರದಾಯ. ಮಂದರಗಿರಿ ಎಂದರೆ ಭಾರವಾದ, ದೃಢವಾದ, ಹಿರಿಯ ಬೆಟ್ಟ. ಆದರಿಂದ ಗೋವರ್ಧನವೂ ಮಂದರಗಿರಿ ಹೌದು. ಜತೆಗೆ ಹೀಗೆ ಹೇಳುವುದರಿಂದ ಕೂರ್ಮಾವತಾರ ಮತ್ತು ಕೃಷ್ಣಾವತಾರ ರೂಪಗಳಿಗೆ ಪರಸ್ಪರ ಅಭೇದವನ್ನೂ ಸಾರಿದಂತಾಗುತ್ತದೆ. ಆದಕೆಂದೆ ಆಚಾರ್ಯರೂ ಕೃಷ್ಣನನ್ನು ಸ್ತುತಿಸುವಾಗ "ಮಂದರಧರೋ ಗೋವಿಂದ ವಂದೇ" ಎಂದು ಹೇಳುತ್ತಾರೆ. ಪುರಂದರದಾಸರ ಈ ಉದ್ಗಾರಕ್ಕೆ ಹಿನ್ನೆಲೆಯ ಸ್ಫೂರ್ತಿ ಆಚಾರ್ಯ ಮಧ್ವರ ಈ ಸ್ತೋತ್ರವೇ ಆಗಿದೆ.

ಮಂದರಗಿರಿ ಎತ್ತಿದ ಈ ಕೂರ್ಮನೇ ಗೋವರ್ಧನಗಿರಿ ಎತ್ತಿದ ಈ ಕೃಷ್ಣನೇ ಲಕ್ಷ್ಮೀಪತಿಯಾದ ನಾರಾಯಣ ಎನ್ನುತ್ತದೆ ಮುಂದಿನ ಸಾಲು: "ಇಂದಿರಾ ರಮಣನೆ ಬಾರೋ".

ನೀನು ಇಂದಿರೆಯ ರಮಣ. ಸಿರಿಯ ಅರಸ. ಶ್ರೀಶೈಲದಲ್ಲಿ ನಿಂತ ಶ್ರೀನಿವಾಸ. ಕೃಷ್ಣರೂಪದಲ್ಲಿ ಈ ಇಂದಿರೆಯೇ ರುಕ್ಮಿಣಿಯಾಗಿ ಸತ್ಯಭಾಮೆಯಾಗಿ ನಿನ್ನ ಸೇವೆಗೈದಳು. ನೀನು ದ್ವಾರಕೆಯಲ್ಲಿ ಅವರ ಜತೆ ರಮಿಸಿದೆ. ರಾಮರೂಪದಲ್ಲಿ ಈ ಇಂದಿರೆಯೇ ಸೀತೆಯಾದಳು. ನೀನು ಸೀತಾನಾಯಕನಾದೆ. ಹೀಗೆ ಮೂಲರೂಪದಂತೆ ಎಲ್ಲ ಅವತಾರಗಳಲ್ಲು ನೀನು ಇಂದಿರಾರಮಣನೆ. ಏಕೆಂದರೆ ಅವಳು ನಿನ್ನ ನಿತ್ಯಾವಿಯೋಗಿನಿಯಾದ ಸಂಗಾತಿ. ಇಂಥ ತಾಯಿ ಇಂದಿರೆಯಿಂದೊಡಗೂಡಿದ ನಿನ್ನ ಚೆಲ್ವ ಮೂರುತಿಯನ್ನು ನನಗೂ ತೋರಲು ಬಾರೋ.

ಆಚಾರ್ಯ ಮಧ್ವರು ಇದನ್ನೆ "ಸುಂದರೀನಾಥ" ಎಂದು, "ರುಕ್ಮಿಣೀವಲ್ಲಭ" ಎಂದು ಹಾಡಿದರೆ ಕೃಷ್ಣಾಷ್ಟೋತ್ತರಶತನಾಮ "ಕಮಲಾನಾಥಃ" ಎಂದು, "ಸತ್ಯಭಾಮಾರತೋ ಜಯೀ" ಎಂದು ಕೊಂಡಾಡುತ್ತದೆ. ವೆಂಕಟೇಶಸ್ತೋತ್ರ ಇದನ್ನೆ "ಮಾಧವ" ಎಂಬ ಪದದಿಂದ ನುಡಿದು ಮುಂದಿನ ಎರಡು ಸಾಲುಗಳಿಂದ ಅದನ್ನೆ ವಿವರಿಸುತ್ತದೆ: "ರಮಾನಾಥೋ ಮಹೀಭರ್ತಾ". ಎರಡೂ ನಿಟ್ಟಿನಲ್ಲು ಇದು ಸಮಾನ. ಶ್ರೀಭೂ ಸಹಿತನಾದ ನಾರಾಯಣನೆ ಬಾರೋ. ರುಕ್ಮಿಣೀ ಸತ್ಯಭಾಮಾ ಸಮೇತನಾದ ಶ್ರೀಕೃಷ್ಣನೆ ಬಾರೋ. ಪದ್ಯದ ಉತ್ತರಾರ್ಧ :–

ಕುಂದದೆ ಗೋವುಗಳ ಕಾಯ್ದ
ನಂದನಂದನನೆ ಬಾರೋ।

ಮೂರು ಲೋಕಗಳನ್ನು ಕಾಯುವ ನೀನು – ಗೊಲ್ಲನಾಗಿ ಗೋವುಗಳನ್ನು ಕಾಯುವುದು ಎಂಥ ಕೀಳು ಕೆಲಸ ಎಂದು ಕುಂದೆಣಿಸದೆ ನಂದಗೋಕುಲದಲ್ಲಿ ಗೋವುಗಳನ್ನು ಕಾಯ್ದೆ. ಅದರಿಂದ ಗೋಪಾಲಕರಲ್ಲಿಯೂ ಕೀಳರಿಮೆ ಕಳೆದು ಆತ್ಮವಿಶ್ವಾಸ ಬೆಳಸಿದೆ. ದೊಡ್ಡವರು ಪುಟ್ಟ ಕೆಲಸ ಮಾಡಿದರೆ ಅದರಿಂದ ಅವರು ಸಣ್ಣವರಾಗುವುದಿಲ್ಲ; ಬದಲಾಗಿ ಆ ಕೆಲಸದ ಹಿರಿಮೆಯೇ ಹೆಚ್ಚುತ್ತದೆ. ರಾಜಸೂಯದಲ್ಲಿ ಅಗ್ರಪೂಜೆಗೊಂಡ ನೀನೆ ಮೊದಲು ಹೆಬ್ಬಾಗಿಲಲ್ಲಿ ನಿಂತು ಬಂದ ಬ್ರಾಹ್ಮಣರ ಕಾಲು ತೊಳೆಯಲಿಲ್ಲವೆ? ನೀನೆ ಅರ್ಜುನನ ಬೋವಿಯಾಗಲಿಲ್ಲವೆ?

ಈ ತೆರ ಗೋಪಾಲನಾಗಿ, ಗೊಲ್ಲರ ಒಡೆಯನಾದ ನಂದಗೋಪನಿಗೆ ಆನಂದ ಬರಿಸಿದ ನಂದಕುಮಾರನಾದೆ. ನನಗೂ ಆ ಆನಂದದ ನೆಲೆಯನ್ನು ತೋರೋ. ನನ್ನೆಡೆಗೆ ಬಾರೋ.

ಸರ್ವಪಾಲಕನಾದವನೆ ಕುಂದದೆ ಗೋಪಾಲನಾದ ಈ ಘಟನೆಯನ್ನೆ ಕೃಷ್ಣಾಷ್ಟೋತ್ತರಶತನಾಮ ಸುಂದರವಾಗಿ ನಿರೂಪಿಸುತ್ತದೆ: "ಗೋಪಾಲಃ ಸರ್ವಪಾಲಕಃ". ನಂದನಂದನ ಎನ್ನುವ ಮಾತು ಅಲ್ಲಿ "ನಂದಗೋಪ ಪ್ರಿಯಾತ್ಮಜಃ" ಎಂದು ಬಂದಿದೆ. ವೆಂಕಟೇಶ ಸ್ತೋತ್ರವೂ "ಗೋವಿಂದೋ ಗೋಪತಿಃ ಕೃಷ್ಣಃ" ಎನ್ನುತ್ತದೆ. ದಾಸರ ಈ ಎರಡು ಸಾಲಿನಲ್ಲಿ ಬಂದ ಭಾವನೆ ಆಚಾರ್ಯ ಮಧ್ವರ ಕೃಷ್ಣಸ್ತೋತ್ರದಲ್ಲು ರೂಪಗೊಂಡಿದೆ: "ದೇವಕಿನಂದನ ನಂದಕುಮಾರಾ", "ನಂದಿತಗೋಕುಲ ವಂದಿತಪಾದ". ಈ ಇಂಥ ಅನುಭಾವದ ಮಾತುಗಳೆಲ್ಲ ದಾಸರ ಈ ಹಾಡಿನ ಹಿನ್ನೆಲೆಯಾಗಿ ನಿಂತಿವೆ.

ಮುಂದಿನ ನುಡಿ:–

ನಾರಿಯರ ಮನೆಗೆ ಪೋಪ
ವಾರಿಜಾಕ್ಷನೆ ಬಾರೋ ।
ಈರೇಳು ಭುವನವ ಕಾಯ್ವ
ಮಾರನಯ್ಯನೆ ಬಾರೋ ॥

ಬೆಣ್ಣೆ ಕದಿಯಲೆಂದು ನಾರಿಯರ ಮನೆಗೆ ಹೋದವನು, ಹೋಗಿ ಬೆಣ್ಣೆ ಕದ್ದವನು. ಬೆಣ್ಣೆಯ ಜೊತೆಗೆ ನಾರಿಯರ ಬಗೆಯನ್ನೂ ಕದ್ದವನು; ಸಹಜವೆ. (ಲೋಹ ಚುಂಬಕದತ್ತ ಕಬ್ಬಿಣದ ತುಂಡು ಹರಿದರೆ ಅದರಲ್ಲಿ ಆಚ್ಚರಿಪಡುವಂಥದೇನೂ ಇಲ್ಲ.) ಚಂದ್ರ ಮೂಡಿಬಂದಾಗ ಚಂದ್ರಕಾಂತ ಶಿಲೆ ಕರಗಿದರೆ ಅದು ಪ್ರಕೃತಿ ನಿಯಮವಷ್ಟೆ ಹೊರತು ಇನ್ನೇನೂ ಅಲ್ಲ.

ನೀನು ಕಣ್ಣು ಹೊಡೆದೆ. ನಿನ್ನ ಕಣ್ಣಿನ ಸೆಳೆತಕ್ಕೆ ಅವರು ಶರಣು ಹೊಡೆದರು. ಏಕೆಂದರೆ ನೀನು ವಾರಿಜಾಕ್ಷನಲ್ಲವೆ? ತಾವರೆ ಎಸಳಿನಂಥ ನಿನ್ನ ಅರಳುಗಣ್ಣನ್ನು ಕಂಡೂ ಮರುಳಾಗದ ನಾರಿ ಯಾರವಳು? ನಿನ್ನ ಕಣ್ಣಿನ ಚೆಲುವಿನ ಮಾಟವನ್ನು ಕಂಡಮೇಲೆ ಆ ಹೆಂಗೆಳೆಯರಿಗೆ ತಮ್ಮ ಕಣ್ಣಿನ ಶಕ್ತಿಯ ಬಗ್ಗೆ ಇದ್ದ ಅಭಿಮಾನವೂ ಕರಗಿ ಹೋಗಿರಬೇಕು. ನಿನ್ನ ಆ ತಾವರೆಗಣ್ಣಿನ ಕೃಪಾದೃಷ್ಟಿಯ ಅನುಗ್ರಹವೃಷ್ಟಿಯನ್ನು ನನ್ನೆಡೆಗೂ ಹರಿಸಯ್ಯ. "ನಾರಿಯರ ಮನೆಗೆ ಪೋಪ ವಾರಿಜಾಕ್ಷನೆ", ನನ್ನ ಮನದೊಳಗೂ ಬಂದು ನೆಲಸೋ, ಬಾರೋ".

ಕೃಷ್ಣಾಷ್ಟೋತ್ತರಶತನಾಮ ಭಗವಂತನನ್ನು "ಕಂಜಲೋಚನಃ" ಎನ್ನುತ್ತದೆ. ವೆಂಕಟೇಶ ಸ್ತೋತ್ರ "ಪುಂಡರೀಕಾಕ್ಷಃ" ಎಂದು ಕೊಂಡಾಡುತ್ತದೆ. ಆಚಾರ್ಯ ಮಧ್ವರಂತು ಈ ತಾವರೆಗಣ್ಣಿನ ಪುರುಷಸೌಂದರ್ಯದ ಪರಾಕಾಷ್ಠೆಯನ್ನು "ಇಂದಿವರೋದರದಳನಯನಾ" ಎಂಬ ಬಗೆ ತುಂಬಿ ಹಾಡಿದ್ದಾರೆ.

ಈ ನಾರಿಯರ ಚಿತ್ತಚೋರ ಚತುರ್ದಶ ಭುವನಗಳ ಸೂತ್ರಧಾರನೂ ಹೌದು ಎನ್ನುತ್ತದೆ ಮುಂದಿನ ನುಡಿ :–

ಈರೇಳು ಭುವನವ ಕಾಯ್ವ
ಮಾರನಯ್ಯನೆ ಬಾರೋ ||

ಹದಿನಾಲ್ಕು ಲೋಕಗಳಾಗಿ ವಿಭಾಗಗೊಂಡ ಈ ವಿಶ್ವವನ್ನು ವಿಷ್ಣುರೂಪ ದಿಂದ ನೀನು ಕಾಯುವೆ. ನಾನಾ ಅವತಾರಗಳಲ್ಲಿ ದೈತ್ಯರನ್ನು ಸಂಹರಿಸಿ ಭುವನದ ಭಾರವಿಳಿಸಿ ಕಾಯುವೆ. ಕೊನೆಗೆ ಮಾರಕ ಶಕ್ತಿಯಾದ ಶಿವನಿಗೂ ಅಯ್ಯನಾಗಿ, ಸ್ವಾಮಿಯಾಗಿ, "ಶಿವರೂಪೀ ಶಿವೇ ಸ್ಥಿತಃ" ಎನ್ನುವ ಪುರಾಣವಚನದಂತೆ ಶಿವನೊಳಗೆ ಶಿವನಾಗಿದ್ದು ಸಂಹರಿಸುವೆ. ಹೀಗೆ ಸೃಷ್ಟಿ ಸ್ಥಿತಿ ಸಂಹಾರಗಳಿಂದ ಈರೇಳು ಭುವನಗಳನ್ನು ಕಾಯುತ್ತಿರುವ ಓ ಮಾರನಯ್ಯನೆ, ಚೆಲುವಿನಲ್ಲಿ ಮಾರನನ್ನೂ ಮೀರಿಸಿದ ಅಯ್ಯನೆ, "ಸಾಕ್ಷಾನ್ಮನ್ಮಥಮನ್ಮಥಃ" ಎಂದು ಭಾಗವತದಲ್ಲಿ ಕೊಂಡಾಡಿದ ತ್ರಿಲೋಕಸುಂದರನೆ, ಧ್ಯಾನದ ವೇಳೆ ನನ್ನ ಚಿತ್ತದಲ್ಲಿ ಅಂಥ ದಿವ್ಯಸುಂದರ ರೂಪ ಗೋಚರವಾಗುವಂತೆ ಮಾಡೋ, ಬಾರೋ. ಬಂದು ನನ್ನ ಚಿತ್ತದಲ್ಲಿ ನೆಲಸೋ.

ವ್ಯಾಸ, ಕಪಿಲ, ದತ್ತ, ಐತರೇಯ, ಹಂಸ, ಹಯಗ್ರೀವಾದಿರೂಪಗಳಿಂದ ಬ್ರಹ್ಮಾದಿಗಳಿಗೂ ಗುರುವಾಗಿ ಜ್ಞಾನವನ್ನುಪದೇಶಿಸಿ ಸನ್ಮಾರ್ಗದ ದಾರಿ ತೋರಿ ಈರೇಳು ಭುವನವ ಕಾಯುತ್ತಿರುವೆ. ಬುದ್ಧ, ವೃಷಭಾದಿರೂಪಗಳಿಂದ ದುರ್ಜನರಲ್ಲಿ ಅವಿದ್ಯೆಯ ಮೋಹವನ್ನು ಬಿತ್ತಿ ಸಜ್ಜನರನ್ನು ಕಾಯುತ್ತಿರುವೆ. ಮಾರನೇ ಕುಮಾರ ನಾಗಿ ಶಿವನಲ್ಲಿ ಜನಿಸಿದಾಗ ನೀನು ಮಾರನಯ್ಯನಾಗಿ ಸ್ಕಂದನ ತಂದೆಯಾಗಿ ಶಿವ ನಲ್ಲಿ ನೆಲಸಿ ತಾಮಸರನ್ನು ಮೋಹಗೊಳಿಸುತ್ತಿರುವೆ. ಹೀಗೆ ವಿಶ್ವದಲ್ಲಿ ಲೀಲಾ ನಾಟಕ ಸೂತ್ರಧಾರಿಯಾದ ಶ್ರೀಕೃಷ್ಣನೆ, ಶ್ರೀನಿವಾಸನೆ, ಬಾರೋ. ನನ್ನ ಅಜ್ಞಾ ನದ ಕತ್ತಲನ್ನೂ ಕಳೆದು ಜ್ಞಾನದ ಬೆಳಕನ್ನು ನೀಡಲು ಬಾರೋ.

ಕೃಷ್ಣಾಷ್ಟೋತ್ತರಶತನಾಮದ "ಸರ್ವಪಾಲಕಃ, ಜಗದ್ಗುರುಃ, ಜಗನ್ನಾಥಃ" ಎಂಬ ನಾಮಗಳಲ್ಲಿ ಈ ಎಲ್ಲ ಮಾತಿನ ಧ್ವನಿಯಿದೆ. ವೆಂಕಟೇಶಸ್ತೋತ್ರದ "ಸೃಷ್ಟಿ ಕರ್ತಾ ಜಗನ್ನಾಥಃ, ಬ್ರಹ್ಮಾದೀನಾಂ ವರಪ್ರದಃ'' ಎನ್ನುವ ನಾಮಗಳೂ ಇದನ್ನೆ ಧ್ವನಿಸುತ್ತವೆ. ಆಚಾರ್ಯ ಮಧ್ವರ "ಸ್ಕಂದಸನಂದನ ವಂದಿತಪಾದ'' ಎನ್ನುವ ನುಡಿ "ಸ್ಕಂದನನ್ನು ಮಗನಾಗಿ ಪಡೆದ ರುದ್ರನಿಂದಲೂ ವಂದಿತನಾದವ" ಎನ್ನುವ ಅರ್ಥದಲ್ಲೂ ಬಂದಿದ್ದು "ಮಾರನಯ್ಯನೆ'' ಎನ್ನುವ ನುಡಿಗಟ್ಟಿಗೆ ಹೊಸ ಅರ್ಥಧ್ವನಿಯ ಬೆಳಕನ್ನು ಚೆಲ್ಲುತ್ತದೆ.

ಹಾಡಿನ ಕೊನೆಯ ನೊಲ್ಲು :

ಶೇಷಶಯನ ಮೂರುತಿಯಾದ
ವಾಸುದೇವನೆ ಬಾರೋ ।
ದಾಸರೊಳು ವಾಸವಾದ
ಶ್ರೀಶ ಪುರಂದರ ವಿಠಲ ಬಾರೋ ॥

ಕ್ಷೀರಾಬ್ಧಿಯಲ್ಲಿ ಶೇಷನ ಮೇಲೆ ಪವಡಿಸಿದ ಪರಮಾತ್ಮನೆ, ಎದ್ದು ಬಾರೋ ನನ್ನೆಡೆಗೆ. ಇಲ್ಲಿ ಮೂರುತಿ ಎಂದರೆ ಶರೀರ. ಭಗವಂತನ ಶರೀರ ಬೇರೆ ಅಲ್ಲ; ಭಗವಂತ ಬೇರೆ ಅಲ್ಲ. ಏಕೆಂದರೆ ಅವನು ಜ್ಞಾನಾನಂದಮಯ ಶರೀರ. ನಮ್ಮಂತೆ ಹುಟ್ಟು ಸಾವುಗಳಿಗೆ ಬಲಿಯಾಗುವ ಭೌತಿಕ ಶರೀರವಲ್ಲ; ಅವನ ಅಪ್ರಾಕೃತ ಶರೀರವೆ ಅವನ ಸ್ವರೂಪ. ಈ ಪ್ರಮೇಯವನ್ನು ಸೂಚಿಸುವುದಕ್ಕಾಗಿಯೇ "ಶೇಷ ಶಯನ" ಎನ್ನುವ ಬದಲು "ಶೇಷಶಯನ ಮೂರುತಿ" ಎನ್ನುವ ಪದವನ್ನು ದಾಸರು ಬಳಸಿದ್ದಾರೆ.

ಇಲ್ಲಿ ಶೇಷಶಯನ ಎನ್ನುವ ವಿಶೇಷಣ ಈ ಪದ್ಯರಚನೆಯ ಸನ್ನಿವೇಶದ ಹಿನ್ನೆಲೆ ಯಲ್ಲಿ ಒಂದು ವಿಶೇಷ ಅರ್ಥವನ್ನು ಧ್ವನಿಸುತ್ತದೆ: ಶೇಷಾದ್ರಿಯ ಮೇಲೆ ಶಯನ ಮಾಡಿದ ಶ್ರೀನಿವಾಸನೆ ಶೇಷಶಯನ. ಶೇಷಾದ್ರಿಯಲ್ಲಿ ಪವಡಿಸಿದ್ದು ಸಾಕಯ್ಯ. ಬೆಳಗಾಯಿತು—ಎದ್ದು ಬಾರೋ ಎನ್ನುತ್ತಾರೆ ದಾಸರು.

ಈ ಶೇಷಶಯನನೆ ವಾಸುದೇವ ಎನ್ನುತ್ತದೆ ಮುಂದಿನ ಸೊಲ್ಲು: "ವಾಸು ದೇವನೆ ಬಾರೋ".

ಶೇಷಾದ್ರಿಯಲ್ಲಿ ನೆಲಸಿದ ವೆಂಕಟೇಶನೆ ವಾಸುದೇವ ಎಂದು ವೆಂಕಟೇಶ ಸ್ತೋತ್ರವೂ ಸ್ತುತಿಸುತ್ತದೆ:—

ವೇಂಕಟೇಶೋ ವಾಸುದೇವಃ
ಪ್ರದ್ಯುಮ್ನೋಽಮಿತವಿಕ್ರಮಃ ।
ಸಂಕರ್ಷಣೋಽನಿರುದ್ಧಶ್ಚ
ಶೇಷಾದ್ರಿಪತಿರೇವ ಚ ॥

ಕೃಷ್ಣಾಷ್ಟೋತ್ತರ ಶತನಾಮದಲ್ಲೂ ಈ ಹೆಸರು ಬಂದಿದೆ :—

ಶ್ರೀಕೃಷ್ಣಃ ಕಮಲಾನಾಥೋ
ವಾಸುದೇವಃ ಸನಾತನಃ ।
ವಸುದೇವಾತ್ಮಜಃ ಪುಣ್ಯೋ
ಲೀಲಾಮಾನುಷ ವಿಗ್ರಹಃ ॥

ವಾಸುದೇವ ನಾಮಕ ರೂಪಗಳು ನಾಲ್ಕು ಉಂಟು :–

1. ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಎಂಬ ಚತುರ್ವ್ಯೂಹದಲ್ಲಿ ಸೇರಿದ, ಪ್ರಣವದ ನಾದದಿಂದ ವಾಚ್ಯವಾದ, ಮೋಕ್ಷಪ್ರದವಾದ ತುರೀಯ ರೂಪ : ಪರವಾಸುದೇವ.

2. ಸ್ವಾಯಂಭುವಮನುಪುತ್ರಿಯಾದ ದೇವಹೂತಿ ಮತ್ತು ಕರ್ದಮ ಮುನಿಯ ದಾಂಪತ್ಯದ ಫಲವಾಗಿ ಅವತರಿಸಿದ ರೂಪ: ಕಪಿಲ ವಾಸುದೇವ. ಪಾದ್ಮ ಪುರಾಣದ ವಚನದಲ್ಲಿ ಇದು ಸ್ಫುಟವಾಗಿದೆ:–

ಕಪಿಲೋ ವಾಸುದೇವಾಖ್ಯ
ತಂತ್ರಸಾಂಖ್ಯಂ ಜಗಾದ ಹ । (ಭಾಗ. ತಾ. 1. 3. 10.)

3. ವಾಸುದೇವ ಮಂತ್ರವನ್ನು ಜಪಿಸಿದ ಬಾಲಕ ಧ್ರುವನಿಗೆ ಒಲಿದು ದರ್ಶನ ನೀಡಿದ ರೂಪ: ವರದವಾಸುದೇವ. ಪ್ರಕಾಶ ಸಂಹಿತೆಯಲ್ಲಿ ಈ ಮಾತು ಬಂದಿದೆ:–

ಅವತಾರೋ ಮಹಾವಿಷ್ಣೋಃ
ವಾಸುದೇವ ಇತೀರಿತಃ ।
ಯೋ ಧ್ರುವಾಯ ನಿಜಂ ಪ್ರಾದಾತ್
ಸ್ಥಾನಮನ್ಯಾನಧಿಷ್ಠಿತಮ್ ॥ (ಭಾಗ. ತಾ. 2. 7. 8.)

4. ವಸುದೇವಸುತನಾಗಿ ಜನಿಸಿದ ಶ್ರೀಕೃಷ್ಣನ ರೂಪ: ಯಾದವ ವಾಸುದೇವ.

ಈ ಎಲ್ಲ ಅರ್ಥಗಳೂ ಇಲ್ಲಿ ಸಂಗತವಾಗಿ ಬಂದಿವೆ: ಮೋಕ್ಷಪ್ರದನಾದ ಪರ ವಾಸುದೇವನೆ, ಬಾರೋ, ಈ ಭಕ್ತನನ್ನು ಭವಬಂಧನದಿಂದ ಬಿಡಿಸೋ. ಮುಕ್ತಿಯ ಪಥದಲ್ಲಿ ನಡೆಸೋ.

ವೇದಮೂಲವಾದ ಸಾಂಖ್ಯಶಾಸ್ತ್ರದ ರಹಸ್ಯವನ್ನು ಬ್ರಹ್ಮಾದಿಗಳಿಗೆ ಉಪದೇಶಿಸಿದ ಕಪಿಲ ವಾಸುದೇವನೆ ಬಾರೋ. ನನ್ನನ್ನು ಉದ್ಧರಿಸೋ. ನನ ಬಗೆಯೊಳಗೂ ಸಾಂಖ್ಯತತ್ತ್ವದ ಬೆಳಕನ್ನು ಹರಿಸೋ.

ಧ್ರುವವರದ ವಾಸುದೇವನೆ, ಬಾರೋ. ನನ್ನನ್ನೂ ಒಬ್ಬ ಏನೂ ಅರಿಯದ ಮುಗ್ಧ ಕಂದನೆಂದು ತಿಳಿದು ಒಲಿದು ಬಾರೋ. ನಿನ್ನೊಲುಮೆಯ ಪಥ ತೋರೋ.

ಓ ವಸುದೇವತನಯನಾದ ವಾಸುದೇವ ಶ್ರೀಕೃಷ್ಣನೆ, ಬಾರೋ. ನಿನ್ನ ವಿಶ್ವರೂಪ ತೋರೋ. ಗೀತೆಯ ಬೆಳಕು ಬೀರೋ. ಕಣ್ಬೊಗಸೆ ತುಂಬ ವಾತ್ಸಲ್ಯ ರಸವನ್ನು ತುಂಬಿ ತಾರೋ. ಬಾರೋ ಬಾರಯ್ಯ ವಾಸುದೇವನೆ.

ಹೀಗೆ ಹತ್ತು ಹಲವು ಅವತಾರಗಳಲ್ಲಿ ಭಕ್ತವಾತ್ಸಲ್ಯವನ್ನು ಮೆರೆದ ಭಗವಂತ ದಾಸನಾದ ತನ್ನನ್ನು ಮರೆಯುವುದು ಸಾಧ್ಯವಿಲ್ಲ ಎನ್ನುವ ಭರವಸೆಯೊಡನೆ ದಾಸರು ಮುಕ್ತಾಯದ ಸೊಲ್ಲು ಹಾಡುತ್ತಾರೆ:—

ದಾಸರೊಳು ವಾಸವಾದ

ಶ್ರೀಶ ಪುರಂದರವಿಠಲ ಬಾರೊ ||

ದಾಸರೊಳಗೆ ಮಾತ್ರವಲ್ಲ ; ಎಲ್ಲರೊಳಗೂ ವಾಸವಾಗಿದ್ದಾನೆ : "ಈಶಾವಾಸ್ಯ ಮಿದಂ ಸರ್ವಮ್". ಆದರೆ ಉಳಿದವರಿಗೆ ಅವನ ಇರವಿನ ಅರಿವು ಇಲ್ಲ. ಆದರಿಂದ ಅಂಥವರಲ್ಲಿ ಅವನು ಇದ್ದೂ ಇರದಂತೆ. ಏಕೆಂದರೆ ಆ ಭಕ್ತರು ಇರವಿನ ಫಲವಾದ ಭಗವತ್‌ರಕ್ಷೆಯಿಂದ ವಂಚಿತರಾದವರು. ದಾಸರಿಗೋ ಅವನ ಇರವಿನ ಅರಿವು ಮೂಡಿದೆ. ಆದಕೆಂದೆ ಅವರು ದಾಸರು : ತನ್ನ ಈ ದೇಹ 'ಈಶಾವಾಸ್ಯ' ಎಂದು ಅರಿತವರು. ಅರಿವಿನ ಫಲವಾಗಿಯೆ ದಾಸ್ಯಭಕ್ತಿಯಲ್ಲಿ ಮೈಮರೆತವರು ; ಭಗವಂತನಿಗೆ ತಮ್ಮನ್ನು ಅರ್ಪಿಸಿಕೊಂಡವರು. ಆದರಿಂದಲೇ ಸದಾ ಭಗವಂತನ ರಕ್ಷೆಗೆ ಒಳಗಾ ದವರು: "ನಮೇ ಭಕ್ತಃ ಪ್ರಣಶ್ಯತಿ" (ಭ. ಗೀ. 9–31)

ದಾಸರು ಅವನಲ್ಲಿ ವಾಸವಾದರು ; ಅದರ ಫಲವಾಗಿ ಅವನೂ 'ದಾಸರಲ್ಲಿ ವಾಸವಾದ'. "ಮಯಿ ತೇ ತೇಷು ಚಾಪ್ಯಹಮ್" (ಭ. ಗೀ. 9–29.) ಉಳಿದವರು ಭಗವಂತನಲ್ಲಿ ತಮ್ಮ ಮನಸ್ಸನ್ನು ನೆಲೆಗೊಳಿಸಲಿಲ್ಲ. ಭಗವಂತನೂ ಅವರ ಮನಸ್ಸಿ ನಲ್ಲಿ ಬಂದು ನೆಲಸಲಿಲ್ಲ.

ಶ್ರೀಕೃಷ್ಣ ಇದನ್ನು ಇನ್ನಷ್ಟು ಸ್ಪಷ್ಟವಾಗಿ ಗೀತೆಯ ಇನ್ನೊಂದೆಡೆ ಸಾರಿದ್ದುಂಟು :—

ತಸ್ಯಾಹಂ ನ ಪ್ರಣಶ್ಯಾಮಿ

ಸ ಚ ಮೇ ನ ಪ್ರಣಶ್ಯತಿ (ಭ.ಗೀ. 6.30.)

(ನಾನು ಎಂದೂ ಭಕ್ತನಿಗೆ ದೂರದ ವಸ್ತುವಲ್ಲ ; ಅವನ ಯೋಗಕ್ಷೇಮದ ಹೊಣೆ ಹೊತ್ತು ಅವನೊಳಗೆಯೇ ಇದ್ದೇನೆ. ಅವನೂ ನನ್ನನ್ನು ಮರೆತು ಎಂದೂ ನನ್ನಿಂದ ದೂರ ಸರಿಯಲಾರ. ಸದಾ ನನ್ನ ನೆನಪೇ ಅವನ ಜೀವದ ಜೀವಾಳ.)

ಇದಕ್ಕೆ ಪ್ರತಿಯಾಗಿ ಅಭಕ್ತರಾದವರು ಭಗವಂತನಿಂದ ದೂರವಾಗಿ ಬದು ಕುತ್ತಾರೆ. ಆದರಿಂದ ಭಗವಂತನೂ ಅವರಿಂದ ದೂರವಾಗಿಯೆ ಇರುತ್ತಾನೆ. ಇಬ್ಬ ರನ್ನು ಸಮೀಪಕ್ಕೆ ತಂದು ಜೋಡಿಸುವ ಭಕ್ತಿಯ ಸೂತ್ರ ಇಲ್ಲವಾದಾಗ ಈ ಅಂತರ ಬೆಳೆಯುತ್ತಲೇ ಹೋಗುತ್ತದೆ. ಅಂಥವರಿಗೆ ಭಗವಂತ 'ದೂರಾತ್ ದೂರ ತರಂ' ಆಗಿಬಿಡುತ್ತಾನೆ. ದಾಸರು ಮಾತ್ರವೆ ಈ ಅಂತರವನ್ನು ಕಳೆದುಕೊಂಡ ವರು. ಆದರಿಂದಲೇ ದಾಸರು ಹಾಡಿದರು : "ದಾಸರೊಳು ವಾಸವಾದ".

ಅನನ್ಯಾಶ್ಚಿಂತಯಂತೋ ಮಾಂ
ಯೇ ಜನಾಃ ಪರ್ಯುಪಾಸತೇ।
ತೇಷಾಂ ನಿತ್ಯಾಭಿಯುಕ್ತಾನಾಂ
ಯೋಗಕ್ಷೇಮಂ ವಹಾಮ್ಯಹಮ್॥ (ಭ.ಗೀ. 9.22.)

(ಯಾರು ಎಲ್ಲವನ್ನೂ ಮರೆತು ನನ್ನನ್ನೆ ಚಿಂತಿಸುವರೋ ಅಂಥ ಏಕಾಂತ ನಿಷ್ಠೆಯ ಭಕ್ತರ ಯೋಗಕ್ಷೇಮದ ಹೊಣೆಯನ್ನು ನಾನು ಹೊರುತ್ತೇನೆ.)

ಹೀಗೆ–"ನೀನೆ ನನ್ನ ಸರ್ವಸ್ವ" ಎಂದು ಭಗವಂತನಲ್ಲಿ ತನ್ನನ್ನು ಅರ್ಪಿಸಿಕೊಂಡ ದಾಸರು "ದಾಸರೊಳು" ಯೋಗಕ್ಷೇಮದ ಹೊಣೆ ಹೊತ್ತು "ವಾಸವಾದ" ಭಗವಂತನನ್ನು ಇಲ್ಲಿ ಸ್ಮರಿಸುತ್ತಾರೆ. ನಾನೂ ನಿನ್ನ ದಾಸ, ನನ್ನ ಯೋಗಕ್ಷೇಮದ ಹೊಣೆಯೂ ನಿನ್ನದು ಎಂದು ಭಗವಂತನಿಗೆ ನೆನಪಿಸುವಂತಿದೆ–ಈ ಪ್ರಾರ್ಥನೆಯ ಧಾಟಿ.

ವೆಂಕಟೇಶಸ್ತೋತ್ರವೂ ಈ ಮಾತನ್ನು ಉಲ್ಲೇಖಿಸುತ್ತದೆ: "ಮಾಧವೋ ಭಕ್ತವತ್ಸಲಃ".

ಕೃಷ್ಣಾಷ್ಟೋತ್ತರ ಶತನಾಮವಂತು ಅವನ ಭಕ್ತವತ್ಸಲತೆಗೆ ನಿದರ್ಶನವಾಗಿ ಅನೇಕ ಭಕ್ತರ ಯಾದಿಯನ್ನೆ ನಮ್ಮ ಮುಂದಿಡುತ್ತದೆ: "ಮುಚುಕುಂದ ಪ್ರಸಾದ ಕೃತ್", "ಕುಬ್ಜಾ ಗಂಧಾನುಲಿಪ್ತಾಂಗಃ", "ಕೃಷ್ಣಾವ್ಯಸನಕರ್ಷಕಃ" "ವಿದುರಾಕ್ರೂರವರದಃ" "ಯುಧಿಷ್ಠಿರ ಪ್ರತಿಷ್ಠಾತಾ'', ಪಾರ್ಥಸಾರಥಿಃ''.

ಇಂಥ ದಾಸರೊಳು ವಾಸವಾದ ಶ್ರೀಶನೆ ಬಾರೋ, ಪುರಂದರ ವಿಠಲನೆ, ಬಾರೋ. "ಶ್ರೀನಿವಾಸಃ ಶ್ರಿಯಃಪತಿಃ'' ಎನ್ನುತ್ತದೆ ವೆಂಕಟೇಶ ಸ್ತೋತ್ರ. "ದೇವಕೀನಂದನಃ ಶ್ರೀಶಃ'' ಎನ್ನುತ್ತದೆ ಕೃಷ್ಣಾಷ್ಟೋತ್ತರ ಶತನಾಮಸ್ತೋತ್ರ. ಆ ಹಿನ್ನೆಲೆಯಲ್ಲಿ ದಾಸರೂ 'ಶ್ರೀಶ' ಎಂದು ಸಂಬೋಧಿಸಿದರು. ಶ್ರೀಶನೆಂದರೆ ಲಕ್ಷ್ಮೀಪತಿಯೂ ಹೌದು; ಶ್ರೀಶೈಲದಲ್ಲಿ ನೆಲಸಿದ ಈಶನೂ ಹೌದು: "ಶ್ರೀಶೈಲಾದಿ ನಿವಾಸಾಯ ಶ್ರೀನಿವಾಸಾಯ ತೇ ನಮಃ".

ಮುದ್ದು ಕೊಡುವೆನು ಬಾರೋ

ವೆಂಕಟರಮಣನೆ ಬಾರೋ ಶೇಷಾಚಲವಾಸನೆ ಬಾರೋ || ಪಲ್ಲವಿ ||

ಪಂಕಜನಾಭನೆ ಪರಮಪವಿತ್ರನೆ ಶಂಕರಮಿತ್ರನೆ ಬಾರೋ || ಅನುಪಲ್ಲವಿ ||

ಮುದ್ದು ಮುಖದ ಮಗುವೆ ನಿನಗೆ
ಮುದ್ದು ಕೊಡುವೆನು ಬಾರೋ ।
ನಿರ್ದಯವೇಕೋ ನಿನ್ನೊಳು ನಾನು
ಪೊಂದಿದ್ದೇನೆ ಬಾರೋ || || 1 ||

ಮಂದರಗಿರಿಯನೆತ್ತಿದಾ-
ನಂದಮೂರ್ತಿಯೆ ಬಾರೋ ।
ನಂದನಕಂದ ಗೋವಿಂದ
ಇಂದಿರೆಯುರಸನೆ ಬಾರೋ || || 2 ||

ಕಾಮನಯ್ಯ ಕರುಣಾಳು
ಶ್ಯಾಮವರ್ಣನೆ ಬಾರೋ ।
ಕೋಮಲಾಂಗ ಶ್ರೀ ಪುರಂದರ ವಿಠಲನೆ
ಸ್ವಾಮಿರಾಯನೆ ಬಾರೋ || || 3 ||

ಪುರಂದರದಾಸರು ಒಂದು ದಿನ ತಿರುಪತಿಯ ಬೆಟ್ಟದ ಮೇಲೆ ಶ್ರೀನಿವಾಸನ ಮುಂದೆ ನಿಂತಿದ್ದರು. ಶ್ರೀನಿವಾಸನ ದಿವ್ಯಮೂರ್ತಿಯನ್ನು ಕಾಣುತ್ತ ಕಾಣುತ್ತ ಅವರ ಬಗೆ ಭಗವಂತನ ಲೀಲಾವಿಭೂತಿಗಳನ್ನು ಮೆಲುಕುಹಾಕತೊಡಗಿತು. ಶ್ರೀ ಕೃಷ್ಣನ ಬಾಲರೂಪದ ಲೀಲೆಗಳನ್ನು ನೆನೆದು ಅವರ ಬಗೆ ತುಂಬಿಬಂತು ಕಣ್ಣು ಆನಂದಾಶ್ರುವಿನಿಂದ ಮಸಕಾಯಿತು. ಧ್ಯಾನಪರವಶತೆಯಲ್ಲಿ ಅವರ ಬಗೆ ದ್ವಾಪರ ದತ್ತ ನೆಗೆಯಿತು. ನೆಗೆದು ಹೀಗೆ ಚಿಂತಿಸಿತು; ಇಲ್ಲಿ ಶ್ರೀನಿವಾಸನಾಗಿ ನಿಂತ ಶ್ರೀಕೃಷ್ಣನ ಆ ಬಾಲರೂಪವನ್ನು ಕಣ್ಣಾರೆ ಕಾಣಬೇಕು; ಕಣ್ಣುಣಿಯೆ ಕಂಡು ಮನದಣಿಯೆ ಎತ್ತಿ ಮುದ್ದಾಡಬೇಕು. ಇಂಥ ಭಾವೋತ್ಕಟತೆಯ ಕ್ಷಣದಲ್ಲಿ ಮೈಮರೆದು ನಿಂತ ದಾಸರು ಹೀಗೆ ಹಾಡ ತೊಡಗಿದರು: "ವೆಂಕಟರಮಣನೆ ಬಾರೋ, ಶೇಷಾಚಲವಾಸನೆ ಬಾರೋ"

ವೆಂಕಟಾಚಲವೆ ಶೇಷಾಚಲ. ಆದರಿಂದ ವೆಂಕಟರಮಣನೆ ಶೇಷಾಚಲವಾಸ. ಏಳು ಹೆಡೆಯ ಶೇಷನೆ ಈ ಸಪ್ತಾದ್ರಿ. ಇಂಥ ಬೆಟ್ಟದಮೇಲೆ ಶೇಷಶಾಯಿಯಾದ ನಾರಾಯಣನ ನೆಲೆ ಎನ್ನುವುದು ಭಾವುಕರ ನಂಬಿಕೆ.

ಹೀಗೆ ದೇವತಾತ್ಮಕವಾದ 'ತಿರುವೇಂಗಡ'ದ ಸ್ಮರಣೆಯಿಂದಲೇ ಪಾಪಗಳು ದೂರ ಸರಿಯುತ್ತವೆ. ವೇಂಗಡದ ದೊರೆಯನ್ನು ಸ್ಮರಿಸಿದರೆ ಬೇರೆ ಕೇಳಬೇಕೆ? ಆಳ್ವಾರರ ಪಾಶುರಗಳೂ ಈ ವೇಂಗಡದ ಮಹಿಮೆಯನ್ನು ಬಹಳವಾಗಿ ಕೊಂಡಾಡಿದ್ದುಂಟು. ವೇಂಗಡ ಎಂದರೆಯೆ ತಮಿಳಿನಲ್ಲಿ (ವಿನೈ—ಕಡಂ) ಪಾಪಗಳನ್ನು ಪರಿಹರಿಸುವಂಥದು ಎಂದು ಅರ್ಥ ಎನ್ನುವವರುಂಟು. ಅದೇ ಸ್ಫೂರ್ತಿಯಿಂದ ಸಂಸ್ಕೃತದಲ್ಲೂ ವೇಂಕಟಪದಕ್ಕೆ ಅಂಥದೇ ನಿರ್ವಚನ ಕಲ್ಪಿಸಿದವರುಂಟು:

ವೇಂ ಪಾಪಂ ಕಟತೇ ಯಸ್ಮಾತ್
ತಸ್ಮಾತ್ ವೇಂಕಟ ಉಚ್ಯತೇ ।

(ವೇಂ ಅಂದರೆ ಪಾಪವನ್ನು ಕಟ ಎಂದರೆ ಸುಡುವಂಥದು. ಆದರಿಂದ ಈ ಬೆಟ್ಟಕ್ಕೆ ವೇಂಕಟಗಿರಿ ಎಂದು ಹೆಸರಾಯಿತು.)

ಇನ್ನೊಂದು ನಂಬಿಕೆಯ ಪ್ರಕಾರ–ದ್ವಾಪರದಲ್ಲಿ ಈ ಗಿರಿ ಶೇಷಾಚಲ. ಕಲಿಯುಗದಲ್ಲಿ ವೆಂಕಟಾಚಲ. ಒಟ್ಟು ಈ ಗಿರಿ, ಈ ದೈವ, ಬಹು ಪುರಾತನ ಕಾಲದಿಂದ ಭಕ್ತರ–ಭಾವುಕರ ಬಗೆ ಸೆಳೆದು ಆರಾಧನೆ ಕೊಳ್ಳುತ್ತಿತ್ತು ಎನ್ನುವುದು ಮುಖ್ಯವಾದ ಮಾತು. ಅದರಿಂದಲೆ ದಾಸರು ಗಿರಿಯ ಪಾವನವಾದ ಎರಡು ನಾಮಗಳನ್ನು ಸ್ಮರಿಸಿ ಆ ಗಿರಿಯ ಅಧಿದೈವತವನ್ನು ಆಹ್ವಾನಿಸುತ್ತಾರೆ:

ವೆಂಕಟರಮಣನೆ ಬಾರೋ
ಶೇಷಾಚಲವಾಸನೆ ಬಾರೋ

ಸೃಷ್ಟಿಯ ಆರಂಭದಲ್ಲಿ ಶೇಷನಲ್ಲಿ ಪವಡಿಸಿದ ಮೂರ್ತಿಯೆ ಇಲ್ಲಿ ಶೇಷಾಚಲದಲ್ಲಿ ನೆಲೆಸಿದೆ ಎನ್ನುವುದನ್ನು ನೆನಪಿಸಿಕೊಳ್ಳುತ್ತದೆ ಮುಂದಿನ ಸೊಲ್ಲು:

ಪಂಕಜನಾಭನೆ ಪರಮಪವಿತ್ರನೆ
ಶಂಕರಮಿತ್ರನೆ ಬಾರೋ ।

ನೀನೇ ಅನಂತಶಯನನಾದ ಪದ್ಮನಾಭ. ನೀನೆ ತಿರುವನಂತಪುರದಲ್ಲಿ ಸನ್ನಿಹಿತವಾದ ಪದ್ಮನಾಭ. ನೀನೆ ಉಡುಪಿಯ ಅನಂತೇಶ್ವರನಲ್ಲಿ ಸನ್ನಿಹಿತನಾದ ಅನಂತಾಸನ. ನೀನೆ ಶ್ರೀರಂಗದಲ್ಲಿ ರಂಗನಾಥನೆನಿಸಿ ಶೇಷಶಾಯಿಯಾದ ಪದ್ಮನಾಭ. ಹೀಗೆ ತಿರುಪತಿಯಲ್ಲಿ ನಿಂತ ದಾಸರು ಎಲ್ಲ ದಿವ್ಯಕ್ಷೇತ್ರಗಳ ರೂಪವನ್ನು ನೆನೆದು ಕರೆಯುತ್ತಾರೆ: "ಪಂಕಜನಾಭನೆ ಬಾರೋ"

('ಪಂಕಜನಾಭನೆ' ಎನ್ನುವುದೇ ಬಳಕೆಯಲ್ಲಿರುವ ಪಾಠವಾದರೂ 'ಪರಮಪವಿತ್ರನೆ' 'ಶಂಕರಮಿತ್ರನೆ' ಎಂಬ ಮುಂದಿನ ವಿಶೇಷಣಗಳನ್ನು ಗಮನಿಸಿದಾಗ

'ಪಂಕಜನಾಭನೆ' ಎನ್ನುವ ಬದಲು 'ಪಂಕಜನೇತ್ರನೆ' ಎಂಬ ಪಾಠ ಇದ್ದಿರಬಹುದೇನೋ ಎನ್ನಿಸುತ್ತದೆ. ಪುಂಡರೀಕಾಕ್ಷನ ಸ್ಮರಣೆ ಪಾವಿತ್ರ್ಯ ಹೇತು ಎಂದು ಶಾಸ್ತ್ರಗಳು ಹೇಳುತ್ತವೆ. ಅದರಿಂದ ಪುಂಡರೀಕಾಕ್ಷ ಪದಕ್ಕೆ ಸಮಾನಾರ್ಥಕವಾದ ಪಂಕಜನೇತ್ರ ಎಂಬ ಪದವು ಅರ್ಥದ ದೃಷ್ಟಿಯಿಂದಲೂ ಔಚಿತ್ಯಪೂರ್ಣವಾಗಿದೆ.)

ನೀನೆ ಸ್ಮರಣಮಾತ್ರದಿಂದ ನಮ್ಮನ್ನು ಪಾವನಗೊಳಿಸುವ ಪರಮ ಪವಿತ್ರ ತತ್ತ್ವ. ಭೀಷ್ಮರು ವಿಷ್ಣು ಸಹಸ್ರನಾಮದ ಪ್ರಾರಂಭದಲ್ಲಿ ಇದೇ ಮಾತನ್ನು ಹೇಳಿದರು :

ಪವಿತ್ರಾಣಾಂ ಪವಿತ್ರಂ ಯೋ
ಮಂಗಲಾನಾಂ ಚ ಮಂಗಲಮ್ |

(ಆ ನಾರಾಯಣನು ಪವಿತ್ರಗಳಿಗೂ ಪವಿತ್ರ; ಪರಮಪವಿತ್ರ; ಮಂಗಲಗಳಿಗೂ ಮಂಗಲ; ಪರಮಮಂಗಲ.)

'ಪರಂ ಪವಿತ್ರಂ' ಎನ್ನುವುದು ವಿಷ್ಣುವಿನ ಸಾವಿರ ನಾಮಗಳಲ್ಲಿ ಒಂದು ನಾಮವೂ ಹೌದು : "ಪವಿತ್ರಂ ಮಂಗಲಂ ಪರಮ್"

ಗಂಗಾದಿತೀರ್ಥಗಳು ಸ್ನಾನದಿಂದ, ಸೇವನೆಯಿಂದ ಪವಿತ್ರಗೊಳಿಸುವಂಥವು: ಅಗ್ನಿ ಸ್ಪರ್ಶದಿಂದ ಪವಿತ್ರಗೊಳಿಸುವಂಥದು. ಭಗವಂತನೊಬ್ಬನೆ ನೆನೆದ ಮಾತ್ರಕ್ಕೇ ಪಾವನಗೊಳಿಸುವವನು. ಅದರಿಂದ ಅವನು ಪವಿತ್ರಗಳಿಗೂ ಪವಿತ್ರ ; ಪರಮ ಪವಿತ್ರ; ಗಂಗಾದಿಗಳಲ್ಲಿರುವ ಪವಿತ್ರೀಕರಣಶಕ್ತಿಯು ಇವನ ಸನ್ನಿಧಾನ ವಿಶೇಷದಿಂದಲೇ ಬಂದಂಥದು. ಅದರಿಂದ ನಿಜವಾದ ಪವಿತ್ರತತ್ತ್ವ ಭಗವಂತನೊಬ್ಬನೆ. ಅದಕೆಂದೆ ಶಾಸ್ತ್ರಗಳು ಸಾರುತ್ತವೆ:

ಅಪವಿತ್ರಃ ಪವಿತ್ರೋ ವಾ
ಸರ್ವಾವಸ್ಥಾಂ ಗತೋऽಪಿ ವಾ |
ಯಃ ಸ್ಮರೇತ್ ಪುಂಡರೀಕಾಕ್ಷಂ
ಸ ಬಾಹ್ಯಾಭ್ಯಂತರಃ ಶುಚಿಃ ||

ಪವಿತ್ರನಿರಲಿ, ಅಪವಿತ್ರನಿರಲಿ, ಯಾವ ಸ್ಥಿತಿಯಲ್ಲೆ ಇರಲಿ, ತಾವರೆಗಣ್ಣಿನ ಭಗವಂತನನ್ನು ಸ್ಮರಿಸುವವನು ಒಳಗೂ ಹೊರಗೂ ಸದಾ ಪವಿತ್ರನೆ ಆಗಿರುತ್ತಾನೆ.

ನೀರಿನಲ್ಲಿ ಮೈತೊಳೆದು ಮಿಂದರೂ ಹೊರಗೆ ಮಾತ್ರ ಶುಚಿಯಾದೀತು. ಒಳಗೂ ಹೊರಗೂ ಶುಚಿಯಾಗಬೇಕಾದರೆ ಭಗವಂತನ ಸ್ಮರಣೆಯೆಂಬ ಸ್ನಾನ ವೊಂದೇ ದಾರಿ:

ಅತಿನೀಲ ಘನಶ್ಯಾಮಂ
ನಳಿನಾಯತಲೋಚನಮ್ ।
ಸ್ಮರಾಮಿ ಪುಂಡರೀಕಾಕ್ಷಂ
ತೇನ ಸ್ನಾತೋ ಭವಾಮ್ಯಹಮ್ ॥

ಕಪ್ಪು ಮೋಡದಂತೆ ನೀಲ ಮೈಯ, ತಾವರೆಯಂತೆ ಅರಳುಗಣ್ಣಿನ ಪುಂಡ ರೀಕಾಕ್ಷನನ್ನು ನಾನು ಸ್ಮರಿಸುತ್ತೇನೆ. ಈ ಹರಿಸ್ಮರಣೆಯೆಂಬ ಸ್ನಾನದಿಂದ ನಾನು ಸದಾ ಪವಿತ್ರನಾಗುತ್ತೇನೆ.

ಇಂಥ ಸ್ನಾನದಿಂದ ಮೈಮನಗಳನ್ನು ಶುದ್ಧಗೊಳಿಸಿಕೊಂಡು ನಿಂತ ದಾಸರು ಆ ಪಾವನ ಶಕ್ತಿ ಸದಾ ತನ್ನಲ್ಲಿ ಜಾಗೃತವಾಗಿರುವಂತೆ ಪ್ರಾರ್ಥಿಸುತ್ತಾರೆ: "ಪರಮ ಪವಿತ್ರನೆ ಬಾರೋ"

ಶೈವವೈಷ್ಣವರ ಮತಾವೇಶದಿಂದ ವಿಕೃತಗೊಂಡ ಆಚರಣೆಯನ್ನು ಸಮಾಜದಲ್ಲಿ ಕಂಡು ನೊಂದ ದಾಸರು ಇನ್ನೊಂದು ಮಹತ್ವದ ನಾಮದಿಂದ ಭಗವಂತನನ್ನು ಕರೆಯುತ್ತಾರೆ: "ಶಂಕರಮಿತ್ರನೆ ಬಾರೊ"

ಶೈವರು ಮತ್ತು ವೈಷ್ಣವರು ತಮ್ಮತಮ್ಮ ದೇವರ ಹೆಸರಿನಲ್ಲಿ ಜಗಳಾಡಿಕೊಳ್ಳು ತ್ತಾರೆ. ಆದರೆ ಶಿವ ಮತ್ತು ವಿಷ್ಣು ಪರಸ್ಪರ ಆತ್ಮೀಯರು. ಶಿವನ ಜತೆಗೆ ಅರ್ಧಾಂಗ ನಾಗಿ ನಿಂತ ನಾರಾಯಣನೆಂದರೆ ಶಿವನಿಗೆ ಅತಿಪ್ರಿಯತಮವಾದ ತತ್ತ್ವ. ಹೀಗೆ ಅವ ರಿಬ್ಬರೂ ಒಂದು ದೇಹದಲ್ಲಿ ಸೇರಿಕೊಂಡು ಮೈತ್ರಿಯ ಸಂದೇಶ ಸಾರಿದರೂ ಅವರ ಭಕ್ತರು ಜಗಳಾಡಿಕೊಳ್ಳುತ್ತಾರಲ್ಲ! ಎಂಥ ವಿಪರ್ಯಾಸ ಇದು. ಈ ವೇದನೆಯನ್ನು ತೋಡಿಕೊಳ್ಳುವಂತೆ ದಾಸರೂ ಅರ್ಥಗರ್ಭಿತವಾಗಿ ಕರೆಯುತ್ತಾರೆ: ಶಂಕರನೊಡನೆ ಅರ್ಧದೇಹವನ್ನು ಹಂಚಿಕೊಂಡ ಶಂಕರನಾರಾಯಣನೆ, ಶಂಕರಮಿತ್ರನೆ ಬಾರೋ.

ದಾಸರು ಭಗವಂತನನ್ನು 'ಶಂಕರಮಿತ್ರನೆ ಬಾರೋ' ಎಂದು ಕರೆದಾಗ ನಾರಾಯಣ ಪಂಡಿತಾಚಾರ್ಯರ ಶಿವಸ್ತುತಿಯ ಮಾತು ಅವರ ಮನದಲ್ಲಿ ಸುಳಿದಿರ ಬೇಕು:

ತವ ಪ್ರಿಯತಮಾದತಿಪ್ರಿಯತಮಂ ಸದೈವಾಂತರಂ
ಪಯಸ್ಯುಪಹಿತಂ ಘೃತಂ ಸ್ವಯಮಿವ ಶ್ರಿಯೋವಲ್ಲಭಮ್ ।

ವಿಭಿದ್ಯ ಲಘುಬುದ್ಧಯಃ ಸ್ವಪರಪಕ್ಷಲಕ್ಷಾಯಿತಂ
ಪತಂತಿ ಹಿ ಲುಠಂತಿ ತೇ ಶಠಹೃದಃ ಶುಚಾ ಶುಂಠಿತಾಃ ||

(ಓ ಶಂಕರನೆ, ಶ್ರೀರಮಣನಾದ ನಾರಾಯಣ ನಿನಗೆ ಪರಮಪ್ರಿಯವಾದ ತತ್ತ್ವ, ನಿನ್ನ ಅಂತರಂಗದ ಬಂಧು. ಹಾಲಿನೊಳಗೆ ಬೆಣ್ಣೆ ಅವಿತಿರುವಂತೆ ನಿನ್ನೊಳಗೇ ಅವನಿದ್ದಾನೆ. ಇದನ್ನರಿಯದ ಹಗುರ ಬುದ್ಧಿಯ ಮಂದಿ ನಿಮ್ಮಿಬ್ಬರ ಹೆಸರಿನಲ್ಲಿ ಗುಂಪುಕಟ್ಟಿ ನಿಮ್ಮನ್ನೇ ಎದುರು ಬದುರು ನಿಲ್ಲಿಸಿ ವಾದ ಹೂಡುತ್ತಾರೆ; ಜಗಳಾಡುತ್ತಾರೆ. ಈ ದೌರ್ಜನ್ಯದ ಫಲವಾಗಿ ಅವರು ದುಃಖಭಾಜನರಾಗಿ ನರಕದಲ್ಲಿ ನವೆಯುತ್ತಾರೆ.)

ಮತಾಂಧರಾಗಿ ಪರತತ್ತ್ವವನ್ನು ದ್ವೇಷಿಸುವ ಇಂಥ ಜನರನ್ನು ವಿಷ್ಣುವೂ ರಕ್ಷಿಸಲಾರ. ಶಂಕರನೂ ರಕ್ಷಿಸಲಾರ. ಅದಕೆಂದೆ ದಾಸರು ಹಾಡಿದರು: ಶಂಕರಮಿತ್ರನೆ ಬಾರೋ.

ಶಂಕರ ಮನಸ್ಸಿನ ಅಭಿಮಾನಿ ದೇವತೆ. ನೀನು ಅವನ ಮಿತ್ರ. ಎಂದ ಮೇಲೆ ನೀನೂ ನನ್ನ ಮನಸ್ಸಿನಲ್ಲಿ ನೆಲಸಬಾರದೆ ಎಂದು ಪ್ರೀತಿಯ ಸಲುಗೆಯಿಂದ ಪ್ರಶ್ನಿಸುತ್ತಾರೆ ದಾಸರು: ಶಂಕರಮಿತ್ರನೆ ಬಾರೊ.

ಹೀಗೆ ಭಗವಂತನನ್ನು ಕರೆದ ದಾಸರು ತಾವು ಕರೆದ ಉದ್ದೇಶವನ್ನು, ತಮ್ಮ ಮನದಾಳದ ಬಯಕೆಯನ್ನು ಭಗವಂತನ ಮುಂದಿಡುತ್ತಾರೆ:

ಮುದ್ದುಮುಖದ ಮಗುವೆ ನಿನಗೆ
ಮುದ್ದು ಕೊಡುವೆನು ಬಾರೋ |
ನಿರ್ದಯವೇಕೋ ನಿನ್ನೊಳು ನಾನು
ಪೊಂದಿದ್ದೇನೆ ಬಾರೋ ||

ಭಕ್ತರ ಕರೆಗೆ ಕರಗದೆ, ಓಗೊಡದೆ, ಹೀಗೆ ಬೆಟ್ಟದಲ್ಲಿ ಬೆಟ್ಟವಾಗಿ, ನಿಶ್ಚಲ ಮೂರ್ತಿಯಾಗಿ ನಿಂತರೆ ಹೇಗೆ? ಬಾಲಕೃಷ್ಣನಾಗಿ ಗೊಲ್ಲತಿಯರ ಮನೆಗೆಲ್ಲ ಹೋಗಿಲ್ಲವೆ ನೀನು? ನಾನೇನು ತಪ್ಪು ಮಾಡಿದ್ದೇನೆ? ನನ್ನ ಮನೆಗೂ ಮುದ್ದು ಮುಖದ ಮಗುವಾಗಿ ಬರಲಾರೆಯಾ? ಒಮ್ಮೆ ಬಾಲರೂಪದಿಂದ ಬಂದೆಯಾದರೆ ಸಾಕು. ನಿನ್ನ ಮುದ್ದು ಮುಖವನ್ನು ಕಣ್ತುಂಬ ಕಾಣಬೇಕು, ಕಂಡು ಕೈತುಂಬ ಎತ್ತಿಕೊಳ್ಳಬೇಕು, ಎತ್ತಿಕೊಂಡು ಮುದ್ದಾಡಬೇಕು. ಮುದ್ದಾಡುತ್ತ ತುಟಿ ತುಂಬ ಮುದ್ದುಕೊಡಬೇಕು– ಎಂಬ ಆಸೆ ನನಗೆ. ನಿನ್ನ ಭಕ್ತನ ಈ ಪುಟ್ಟ ಆಸೆಯನ್ನು ಈಡೇರಿಸಲಾರೆಯಾ7

ಓ ಜಗದ ತಂದೆಯಾದ ಮಗುವೆ, ಬಾರೋ
ಒಮ್ಮೆ ನಿನ್ನ ಮುದ್ದು ಮುಖವ ತೋರೋ

ಹೀಗೆ ದಾಸರು ತಮ್ಮ ಭಾವದ ಉತ್ಕಟತೆಯನ್ನೆಲ್ಲ ಈ ಎರಡು ಸಾಲುಗಳಲ್ಲಿ ಗಿಡಿದು ನುಡಿಯುತ್ತಾರೆ: "ಓ ಮುದ್ದು ಮುಖದ ಮಗುವೆ, ಬಾರೋ; ಒಮ್ಮೆ ನಿನಗೆ ಮುದ್ದು ಕೊಡುವೆನು ಬಾರೋ"

ಇಲ್ಲಿ, ಶ್ರೀನಿವಾಸ ಬಾಲಕೃಷ್ಣನಾಗಿ ತನ್ನೆಡೆಗೆ ನಡೆದು ಬರುತ್ತಿಲ್ಲ. ಶ್ರೀನಿವಾಸನ ಮೂರ್ತಿ ಪಾಣಿಪೀಠದಲ್ಲಿ ಮರವಟ್ಟು ನಿಂತು ಬಿಟ್ಟಿದೆ. ಅಯ್ಯೋ ಶ್ರೀನಿವಾಸ, ಇಷ್ಟು ಉತ್ಕಟತೆಯಿಂದ ಕರೆದರೂ ನೀನು ಕೇಳಿಸದವನಂತೆ ಕಲ್ಲಾಗಿ ನಿಂತು ಬಿಟ್ಟೆಯಲ್ಲ! ಇಂಥ ನಿರ್ದಯತೆ ನಿನಗೆ ಏಕೆ ಬಂತೊ! ಭಕ್ತರ ಕರೆಗೆ ಕರಗುವ ಕರುಣಾಮಯನಲ್ಲವೆ ನೀನು? ನಾನೊಬ್ಬ ಮಾತ್ರ ಹೆಚ್ಚಾದೆನೆ? ಬೇಡವಾದೆನೆ? ನನ್ನ ಮಟ್ಟಿಗೆ ಮಾತ್ರ ಏಕೆ ಇಂಥ ನಿರ್ದಯೆ? "ನಿರ್ದಯವೇಕೊ, ಬಾರೋ"

ನನ್ನ ಸ್ಥಿತಿ-ಗತಿ ನಿನಗೇನೂ ತಿಳಿಯದ್ದಲ್ಲ. ಬದುಕಿನ ಎಲ್ಲ ಭೋಗಭಾಗ್ಯಗಳನ್ನು ತೊರೆದು, ಐಹಿಕದ ಸಿರಿಸಂಪದ ಸರ್ವಸ್ವವನ್ನೂ ತೊರೆದು ನಿನ್ನಲ್ಲಿ ನಾನು ಶರಣುಹೊಂದಿದ್ದೇನೆ. ಇದು ನಿನಗೂ ಗೊತ್ತಿದೆ. ನೀನೇ ಗತಿ ಎಂದು ಅನನ್ಯಭಾವದಿಂದ ನಿನ್ನ ಕಾಲ ಬುಡಕ್ಕೆ ಬಂದಿದ್ದೇನೆ. ನಿನ್ನೊಬ್ಬನನ್ನೆ ನಂಬಿ ಎಲ್ಲವನ್ನೂ ತೊರೆದು ಬಂದ ನನ್ನನ್ನು ನೀನೂ ಕೈಬಿಟ್ಟರೆ ನನ್ನ ಪಾಡೇನು ? ನನಗೆ ಇನ್ನಾರು ಆಸರೆ? ದಯವಿಟ್ಟು ಹಾಗೆ ಮಾಡಿದರು. ಅಷ್ಟು ನಿರ್ದಯನಾಗದಿರು. ನಂಬಿ ಬೆಂಬತ್ತಿ ಬಂದ ಭಕ್ತನ ಕೈಬಿಡದಿರು. ಓ ವೆಂಕಟರಮಣನೆ, ನಿನ್ನೊಳು ನಾನು ಶರಣು ಹೊಂದಿದ್ದೇನೆ; ಬಾರೋ, ಒಮ್ಮೆ ನಿನ್ನ ಮುದ್ದು ಮುಖವ ತೋರೋ,

ಕೃಷ್ಣನ ಬಾಲಲೀಲೆಗಳನ್ನು ಉಲ್ಲೇಖಿಸಿ, ಹೊಗಳಿ ರಮಿಸುವ ಧಾಟಿಯಲ್ಲಿ ಮುಂದಿನ ಸೊಲ್ಲು ಬಂದಿದೆ :

ಮಂದರಗಿರಿಯನೆತ್ತಿದಾ-
ನಂದಮೂರ್ತಿಯೆ ಬಾರೋ |
ನಂದನ ಕಂದ ಗೋವಿಂದ
ಇಂದಿರೆಯರಸನೆ ಬಾರೋ ||

ನಿನಗೆ ಶರಣುಬಂದವರನ್ನು ರಕ್ಷಿಸುವುದು ನಿನ್ನ ಪೂರ್ವಸಂಪ್ರದಾಯ. ದ್ವಾಪರದ ಘಟನೆ ನಮಗೆ ಗೊತ್ತಿಲ್ಲವೆ. ಇಂದ್ರೋತ್ಸವದ ಬದಲು ಗೋವರ್ಧ-

ನೋತ್ಸವ ಮಾಡಿ ಎಂದು ನೀನು ಗೋಪಾಲಕರಿಗೆ ಬೋಧಿಸಿದೆ. ಇದರಿಂದ ಇಂದ್ರ ಕೋಪಗೊಂಡ. ಗೋಕುಲದ ಮೇಲೆ ಅಖಂಡಮಳೆಯ ಮುಸಲಧಾರೆಯನ್ನೆ ಸುರಿಸಿದ. ಮಳೆಯ ಧಾಳಿಗೆ ಸಿಕ್ಕಿ ಕಂಗಾಲರಾದ ಗೋಪಾಲರು, ಗೋವುಗಳು ನಿನಗೆ ಶರಣಾದಾಗ ನೀನು ಗೋವರ್ಧನವನ್ನೇ ಎತ್ತಿ ಹಿಡಿದು ಒಂದು ವಾರಕಾಲ ಅವರನ್ನು ಮಳೆಯಿಂದ ಕಾಪಾಡಿದೆ. ನನ್ನ ಮೇಲೆ ಮಾತ್ರ ನಿನಗೆ ಕರುಣೆ ಯಿಲ್ಲವೇನೋ? ಬಾರೋ, ಗೋವರ್ಧನವೆಂಬ ಮಂದರಗಿರಿಯನೆತ್ತಿದ ಕರುಣಾ ಮೂರ್ತಿಯೆ.

ಅದೂ ಹೋಗಲಿ, ಸಮುದ್ರಮಥನದಲ್ಲಿ ಮಂದರವೆ ಮುಳುಗಿತಂತೆ. ಆಗ ನೀನು ಕೂರ್ಮನಾಗಿ ಆ ಗಿರಿಯನ್ನು ಬೆನ್ನಲ್ಲಿ ಎತ್ತಿಹಿಡಿದೆಯಂತೆ. ಯಾಕಾಗಿ? ನಿನಗೇನು ಕಡೆದು ಬಂದ ಅಮೃತ ಕುಡಿದು ಅಮರನಾಗಬೇಕಿತ್ತೆ? ಶರಣು ಬಂದ ದೇವತೆಗಳ ರಕ್ಷೆಯಲ್ಲದೆ ನಿನ್ನ ಈ ಲೀಲೆಗಳಿಗೆ ಬೇರೇನು ಕಾರಣ ಉಂಟು? ಇದೊಂದೇ ಅಲ್ಲ. ನಿನ್ನ ಯಾವ ಕ್ರಿಯೆಯೂ ಸ್ವಂತಕ್ಕಾಗಿ ಅಲ್ಲ. ಏಕೆಂದರೆ ನೀನು ಸ್ವಯಂ ಆನಂದ ಮೂರ್ತಿ. ನಿನ್ನ ಎಲ್ಲ ಅವತಾರಗಳೂ ಎಲ್ಲ ಲೀಲೆಗಳೂ ಭಕ್ತರ ಉದ್ಧಾರಕ್ಕಾಗಿಯೇ. ಭಕ್ತರ ಆನಂದವೃದ್ಧಿಗಾಗಿಯೇ. ಎಂದ ಮೇಲೆ ಈ ಭಕ್ತನ ಮೇಲೆ ಮಾತ್ರ ಯಾಕೆ ನಿರ್ದಯೆ? ಬೇಡ, ಹಾಗೆ ಮಾಡದಿರು, ಭಕ್ತವತ್ಸಲನೆಂಬ ಬಿರುದಿಗೆ ಕುಂದು ತಾರದಿರು. ಬಾರೋ, "ಮಂದರಗಿರಿಯನೆತ್ತಿದಾನಂದಮೂರ್ತಿಯೆ ಬಾರೋ".

ವಸುದೇವನ ಮಗನಾಗಿ ಜನಿಸಿ ನಂದಗೋಪನ ಮನೆಸೇರಿ 'ನಂದನ ಕಂದ' ನಾಗಿ ಬೆಳೆದೆ. ಎಲ್ಲರಿಗು ಆನಂದ ನೀಡುವ ಕಂದನಾಗಿ ನಲಿದೆ. ನಂದಗೋಕುಲದಲ್ಲಿ ಗೋವುಗಳ ಕಾಯ್ದು 'ಗೋವಿಂದ'ನಾದೆ. ಹೀಗೆ ಅಂದು ಆ ವೃಂದಾವನದಲ್ಲಿ ಎಲ್ಲ ರೊಡನೆ–ಮಕ್ಕಳೊಡನೆ, ಪಶುಪಕ್ಷಿಗಳೊಡನೆ, ಮರಬಳ್ಳಿಗಳೊಡನೆ ಕೂಡ–ಬೆರೆತು ಮಕ್ಕಳಾಟವಾಡಿ ನಕ್ಕು ನಲಿದ, ನಗಿಸಿ ನಲಿಸಿದ ಓ ಇಂದಿರೆಯರಸನೆ, ಓ ರುಕ್ಮಿಣೀ ನಾಯಕನೆ, ಓ ಶ್ರೀನಿವಾಸನೆ, ನಾನು ಬಂದಾಗ ಮಾತ್ರ ಏಕೆ ನಿಶ್ಚಲ ಪ್ರತಿಮೆಯಾಗಿ ನಿಂತು ಬಿಟ್ಟೆ? ಬಾರೋ, "ನಂದನಕಂದ ಗೋವಿಂದ ಇಂದಿರೆಯರಸನೆ ಬಾರೋ". ರುಕ್ಮಿಣಿ ಕೂಡ ಕಂಡು ಮರುಳಾದ, ಆಚಾರ್ಯ ಮಧ್ವರಿಗೊಲಿದ ನಿನ್ನ ಬಾಲರೂಪದ ಮುದ್ದುಮುಖವನ್ನು ತೋರೋ.

ಭಗವಂತ ಕರುಣಾಮೂರ್ತಿ ; ಎಂದ ಮೇಲೆ ತನ್ನ ಬಗೆಗೆ ಅವನು ನಿರ್ದಯ ನಾಗಲಾರ ಎನ್ನುವ ನಿರ್ಧಾರದೊಡನೆ ಪದ್ಯ ಉಪಸಂಹಾರಗೊಳ್ಳುತ್ತದೆ :

> ಕಾಮನಯ್ಯ ಕರುಣಾಳು
> ಶ್ಯಾಮವರ್ಣನೆ ಬಾರೋ ।
> ಕೋಮಲಾಂಗ ಶ್ರೀಪುರಂದರವಿಠಲನೆ
> ಸ್ವಾಮಿರಾಯನೆ ಬಾರೋ ॥

ನೀನು ಕಾಮನಯ್ಯ; ಕಾಮನ ತಂದೆ. ನನ್ನ ಬಗೆಯಲ್ಲಿ ಕಾಮ ಬಂದು ಕೂತಿದ್ದಾನೆ. ಅಂಥಿಂಥ ಕಾಮ ಅಲ್ಲ; ನಿನ್ನನ್ನು ಕಾಣಬೇಕೆಂಬ ಕಾಮ. ಅವನಯ್ಯನಾದ ನೀನೇಕೆ ಬಂದು ಕೂಡುವುದಿಲ್ಲ ?

ನಿನ್ನನ್ನು ಕಾಣಲೇಬೇಕೆಂಬ ಅದಮ್ಯವಾದ ಕಾಮವನ್ನು ನನ್ನಲ್ಲಿ ಹುಟ್ಟಿಸಿದವನು ನೀನೆ, ಎಂದ ಮೇಲೆ ಆ ಕಾಮನೆಯನ್ನು ಈಡೇರಿಸುವುದೂ ಕಾಮನಯ್ಯನಾದ ನಿನ್ನ ಹೊಣೆಯಲ್ಲವೆ ? ನಿನ್ನ ಈ ಹೊಣೆಗಾರಿಕೆಯಿಂದ ನುಣುಚಿಕೊಳ್ಳದೆ ಬಾರೋ, "ಕಾಮನಯ್ಯ ಬಾರೋ"

ನೀನು ಮಹಾಕರುಣಾಳು; ನಿನ್ನಂಥ ಕರುಣಾಳು ನೀನೊಬ್ಬನೆ ಎಂದು ಕೇಳಿದ್ದೇನೆ. ನಿನ್ನ ಅಷ್ಟೋತ್ತರ ಶತನಾಮಗಳಲ್ಲಿ ನಿನ್ನನ್ನು "ದಯಾನಿಧಿ" ಎಂದು, "ಕರುಣಾಕಾರ'' ಎಂದು ಕರೆದಿದ್ದಾರೆ:

ಪುಣ್ಯಶ್ಲೋಕಸ್ತೀರ್ಥಪಾದೋ
ವೇದವೇದ್ಯೋ ದಯಾನಿಧಿಃ (ಕೃಷ್ಣಾಷ್ಟೋತ್ತರ ಶತನಾಮ)

ತ್ರಿವಿಕ್ರಮಸ್ತ್ರಿಕಾಲಜ್ಞಃ
ತ್ರಿಧಾಮಾ ಕರುಣಾಕರಃ (ನಾರಾಯಣಾಷ್ಟೋತ್ತರ ಶತನಾಮ)

ನಿನ್ನ ಕರುಣಾಳುತನಕ್ಕೆ ಸಾಕ್ಷಿಯಾಗಿ ನಿನ್ನನ್ನು "ಅಕ್ರೂರವರದ, ಅಜಾಮಿಳವರದ, ಅಂಬರೀಷವರದ, ಅಹಲ್ಯಾವರದ, ಗಜೇಂದ್ರವರದ, ಧ್ರುವವರದ, ಪ್ರಹ್ಲಾದವರದ, ಪಾಂಚಾಲೀವರದ, ಮುಚುಕುಂದವರದ, ರುಕ್ಮಾಂಗದ ವರದ" ಎಂದೆಲ್ಲ ಕೊಂಡಾಡುತ್ತಾರೆ. ನಂಬಿದವರ ಬೆಂಬಿಡದೆ ಇಂಬು ನೀಡುವ ಕರುಣಾಳು ಎಂಬ ನಿನ್ನ ಆ ಖ್ಯಾತಿ ಈ ಭಕ್ತನ ಬಗೆಗೂ ಸಾರ್ಥಕವಾಗಬೇಡವೆ ? ಹಾಗಾದರೆ ನನ್ನ ಮೇಲೂ ಕರುಣೆ ತೋರೋ. ಬಾರೋ, "ಕರುಣಾಳು ಬಾರೋ". ಕಾರ್ಗಾಲದ ಮೋಡದಂತೆ "ಶ್ಯಾಮಲವರ್ಣನೆ ಬಾರೋ" ಶ್ಯಾಮಲವರ್ಣದ ನಿನ್ನ ಆ ದಿವ್ಯ ರೂಪವನ್ನು ನನಗೆ ತೋರೋ.

ನಿನ್ನನ್ನು ಭಕ್ತರು ಹೀಗೆ ಸ್ತುತಿಸುತ್ತಾರೆ:

ಕಲ್ಯಾಣಾದ್ಭುತಗಾತ್ರಾಯ
ಕಾಮಿತಾರ್ಥಪ್ರದಾಯಿನೇ ।
ಶ್ರೀಮದ್‌ವೇಂಕಟನಾಥಾಯ
ಶ್ರೀನಿವಾಸಾಯ ತೇ ನಮಃ ॥

ನಿನ್ನದು ಕಲ್ಯಾಣ ಗಾತ್ರ : ದಿವ್ಯ ಮಂಗಳ ವಿಗ್ರಹ. ನಿನ್ನದು ಅಪ್ರಾಕೃತವಾದ ಅದ್ಭುತ ಗಾತ್ರ. ಅದು ಅವರ್ಣ್ಯ; ಆದರೂ ಶ್ಯಾಮಲವರ್ಣ. ಅದು ಪ್ರಾಕೃತವರ್ಣ

ಗಳಿಂದ ಮೀರಿದ್ದು; ವರ್ಣಾತೀತ; ವರ್ಣನಾತೀತ. ಆದರೂ ಅಪ್ರಾಕೃತವಾದ ಶ್ಯಾಮಲವರ್ಣದಿಂದ ಜೀವಸ್ವರೂಪದ ಸಾಕ್ಷೀಂದ್ರಿಯಕ್ಕೆ ಗೋಚರವಾಗುವಂಥದು.

ನೀನು ಚಾಣೂರಾದಿ ಮಲ್ಲರನ್ನು, ಕಂಸಜರಾಸಂಧಾದಿ ಜಗದೇಕಮಲ್ಲರನ್ನೂ ಸದೆಬಡಿದ ವಜ್ರಾಂಗ. ಆದರೆ ಗೊಲ್ಲರ ಹೆಣ್ಣುಗಳೂ ನಾಚುವಂಥ ನಸೆವ್ಯೆಯ ಚೆಲುವಿನ ಖನಿಯಾದ 'ಕೋಮಲಾಂಗ' ಇಂಥ ಅದ್ಭುತ ಇನ್ನೆಲ್ಲಿ ಕಾಣಲಿ ?

ಚಿಗುರೆಲೆಯಂತೆ ಮುಟ್ಟಿದರೆ ಮಾಸುವ ನಿನ್ನ ಆ ನಸೆವ್ಯೆಯನ್ನು, ಗೋಪಿಯರ ನಿದ್ದೆಗೆಡಿಸಿದ ನಿನ್ನ ಆ ಕೋಮಲಾಂಗವನ್ನು ನಾನೂ ಕಾಣಬೇಕು, ಮುದ್ದುಮುಖದ ಮುದ್ದು ಮಗುವಾಗಿ "ಕೋಮಲಾಂಗ"ನಾಗಿ ಬಾರೋ.

ಪುಂಡರೀಕನಿಗಾಗಿ ಇಟ್ಟಿಗೆಯಲ್ಲಿ ಕಾದು ನಿಂತ ವಿಠಲನಲ್ಲವೆ ನೀನು. ನಾನು ನಿನಗಾಗಿ, ನಿನ್ನ ಬಾಲರೂಪದ ಕೋಮಲಾಂಗವನ್ನು ಕಾಣಲಿಕ್ಕಾಗಿ ಕಾದು ನಿಂತಿದ್ದೇನೆ. ನೀನೇಕೆ ಇನ್ನೂ ನನ್ನನ್ನು ಕಾಯಿಸುತ್ತ ಸುಮ್ಮನೆ ನಿಂತಿರುವೆ ?

ಓ ಶ್ರೀಪುರಂದರ ವಿಠಲನೆ, ಓ ನನ್ನ ಸ್ವಾಮಿರಾಯನೆ, ಜಗತ್ತಿಗೆಲ್ಲ ಸ್ವಾಮಿರಾಯನೆ, ಒಮ್ಮೆ ನನ್ನೆಡೆಗೆ ಬಾರೋ.

ಭಗವಂತನನ್ನು ಇಷ್ಟೊಂದು ಸಲುಗೆಯಿಂದ ಹಂಗಿಸಿ ಭಂಗಿಸಿ ಮಾತನಾಡಿದ ದಾಸರು ಕೊನೆಯಲ್ಲಿ ಅವನನ್ನು "ಸ್ವಾಮಿರಾಯನೆ ಬಾರೋ"ಎಂದು ಕರೆಯುತ್ತಾರೆ. ಇದು ಬಹಳ ಮಹತ್ತ್ವದ ಮಾತು. ಇದು ಹುಡುಗಾಟದ ಸಲುಗೆಯಲ್ಲ. ಭಗವಂತ ನನ್ನ ಅಂತರಂಗದ ಸ್ವಾಮಿ ಎಂಬ ಎಚ್ಚರದಿಂದ ಮೂಡಿದ ಸಲುಗೆ. ಇದು ಸಾಧನೆಯಲ್ಲಿ ಮುಖ್ಯವಾದ ಮಾತು :

ಸ್ವಾಮೀ ಮೇ ವಿಷ್ಣುರಿತ್ಯೇವ
ನಿತ್ಯದೋಪಾಸ್ಯಮಂಜಸಾ (ಅನುವ್ಯಾಖ್ಯಾನ: 4—1—3)

(ಎಲ್ಲ ಉಪಾಸನೆಯಲ್ಲೂ ವಿಷ್ಣು ನನ್ನ ಸ್ವಾಮಿ ಎಂಬ ಭಾವ ನಿರಂತರವಾಗಿರಬೇಕು.)

ಸತ್, ಚಿತ್, ಆನಂದ, ಆತ್ಮ—ಎಂಬ ಚತುರ್ಗುಣೋಪಾಸನೆಯಲ್ಲಿ ಬಂದಿರುವ ಆತ್ಮಪದದ ಅರ್ಥವೂ ಇದೇ ಆಗಿದೆ. ಯಾರು ಅಂತರ್ಯಾಮಿಯೋ, ಯಾರು ಸ್ವಾಮಿಯೋ ಅವನೇ ಆತ್ಮ. ಈ ಉಪಾಸನೆಯ ರಹಸ್ಯವನ್ನು ಸೂಚಿಸುವುದಕ್ಕಾಗಿಯೆ ಪದ್ಯದ ಕೊನೆಯಲ್ಲಿ "ಸ್ವಾಮಿರಾಯನೆ'' ಎಂಬ ವಿಶೇಷಣ ಬಂದಿದೆ.

ದೊಡ್ಡವರನ್ನು 'ರಾಯರು' ಎನ್ನುವುದು ಆಡುಮಾತಿನಲ್ಲಿ ಬಂದ ಬಳಕೆ. ರಾಯ ಎಂದರೆ ಮೂಲತಃ ರಾಜ, ದೊರೆ. ಅವನು ರಾಜ; ನಾವು ಅವನ ನಿಯತಿಗೊಳಪಟ್ಟ ಪ್ರಜೆಗಳು ಎಂಬ ಧ್ವನಿಯನ್ನೂ ಈ ಬಳಕೆಯ ನುಡಿಗಟ್ಟು ಒಳಗೊಂಡಿದೆ.

ಅಭಯ - ರಕ್ಷೆ

ವೆಂಕಟೇಶ ದಯಮಾಡೊ ವೇದವೇದ್ಯನೆ || ಪಲ್ಲವಿ ||

ಪಂಕಜಾಕ್ಷ ಅಭಯವಿತ್ತು ಬೇಗೆನ್ನ ರಕ್ಷಿಸಯ್ಯ || ಅ. ಪ. ||

ಚಿತ್ತ ಚಂಚಲವ ಬಿಡಿಸೊ
ಮತ್ತೆ ಕ್ರೋಧವ ಓಡಿಸೊ
ಭ್ರಾಂತಿ ವಿಷಯಂಗಳು ಬೇಡ
ಕಂತುಪಿತ ನಾರಾಯಣ || ೧ ||

ಸೃಷ್ಟಿ ಮೂರರೊಳಗು ನೀನೆ
ಕಷ್ಟ ಪಡಿಸುವರೇನೊ
ನಷ್ಟ–ತನವ ನೋಡಬೇಡೋ
ದೃಷ್ಟಿಸಿ ನೋಡೋ ದಯಾಳೋ || ೨ ||

ಬಾಳ ಅಪರಾಧಿ ನಿನ್ನ
ಬಳಿಗೆ ಬಂದೆ ನಾನು
ಒಲಿದು ಎನ್ನ ರಕ್ಷಿಸಯ್ಯ
ಮೇಲುಗಿರಿ ಪುರಂದರ ವಿಠಲ || ೩ ||

ಭವದ ಭಯದಿಂದ ಬಿಡುಗಡೆ ಬೇಕು. ಅದಕ್ಕಾಗಿ ಭಗವಂತನ ಪಾದದ ಅಭಯರಕ್ಷೆ ಬೇಕು. ಹೀಗೆ ಭಗವಂತನ ಅಭಯ ರಕ್ಷೆಯನ್ನು ಪ್ರಾರ್ಥಿಸುತ್ತ ದಾಸರು ಕ್ಷೇತ್ರದಿಂದ ಕ್ಷೇತ್ರಕ್ಕೆ ಅಲೆದರು. ಅಲೆಯುತ್ತ ತಿರುಪತಿಗೂ ಬಂದರು. ಬಂದು ವೆಂಕಟೇಶನ ಮುಂದೆ ನಿಂತು ಹೀಗೆ ಪ್ರಾರ್ಥಿಸಿದರು :

ವೆಂಕಟೇಶ ದಯಮಾಡೋ ವೇದವೇದ್ಯನೆ

ವೆಂಕಟಗಿರಿಯ ಈಶನನ್ನು ಹೆಸರೆತ್ತಿ ಕೂಗಿ ಕರೆದು ದಾಸರು ಅವನನ್ನು 'ದಯಮಾಡೋ' ಎಂದು ಪ್ರಾರ್ಥಿಸುತ್ತಾರೆ. "ಭಕ್ತಿಯಿಂದ ನಡೆದುಕೊಳ್ಳುವುದು ನನ್ನ ಕರ್ತವ್ಯ. ಹಾಗೆಯೆ ಭಕ್ತರ ಮೇಲೆ ದಯೆದೋರುವುದು ನಿನ್ನ ಕರ್ತವ್ಯವಲ್ಲವೇನೊ?" ಎಂದು ಕೇಳುತ್ತಾರೆ.

'ದಯಮಾಡೋ' ಎನ್ನುವುದಕ್ಕೆ ಎರಡು ಅರ್ಥ; ನನ್ನ ಮೇಲೆ ದಯಾದೃಷ್ಟಿ ಬೀರು' ಎನ್ನುವುದು ಒಂದು ಅರ್ಥ ; 'ನನ್ನ ಬಳಿಗೆ ಬಾ' ಎನ್ನುವುದು ಇನ್ನೊಂದು

ಅರ್ಥ. ಎರಡೂ ಇಲ್ಲಿ ವಿವಕ್ಷಿತವೇ. ಎರಡನೆಯದು ಹೆಚ್ಚು ಬಳಕೆಯ ಅರ್ಥ. ದೊಡ್ಡವರನ್ನು 'ಬನ್ನಿ' ಎನ್ನುವುದಿಲ್ಲ; 'ದಯಮಾಡಿಸಿ' ಎನ್ನುತ್ತೇವೆ. ಎರಡಕ್ಕೂ ಅರ್ಥ ಒಂದೆ; ಭಾವ ಬೇರೆ. ಬಾ ಎನ್ನುವುದರಲ್ಲಿ ಅಗೌರವದ ಭಾವವೇನೂ ಇಲ್ಲ. ಆದರೆ ಗೌರವ ಭಾವವೂ ಇಲ್ಲ. ಬದಲಾಗಿ ಸಲುಗೆಯ ಭಾವವಿದೆ. ದಯಮಾಡು ಎನ್ನುವಲ್ಲಿ ನಾನು ಕರೆಯುತ್ತಿರುವ ವಸ್ತುವಿನ ಮುಂದೆ ನಾನು ತುಂಬ ಸಣ್ಣವ ಎಂಬ ಎಚ್ಚರದ, ಗೌರವದ ಭಾವ ನಿಚ್ಚಳವಾಗಿದೆ. ಅದರ ಜತೆಗೆಯೇ ದಯಮಾಡೋ ಎಂಬ 'ಓ'ಕಾರದ ಏಕವಚನದಲ್ಲಿ ಭಕ್ತಿಯ ಸಲುಗೆಯೂ ಸ್ಫುಟವಾಗಿ ತುಂಬಿದೆ.

ಹೀಗೆ ದಾಸರು ಒಮ್ಮೊಮ್ಮೆ ಸಖ್ಯದ ಸಲುಗೆಯಿಂದ ಗೆಳೆಯನನ್ನು ಕರೆದಂತೆ ಬಾರಯ್ಯ ಬಾರೋ ಎನ್ನುತ್ತಾರೆ, ಒಮ್ಮೊಮ್ಮೆ ಭಕ್ತಿಯ ಸಲುಗೆಯಿಂದ ಒಡೆಯನನ್ನು ಆಹ್ವಾನಿಸುವಂತೆ ದಯಮಾಡೋ ಎನ್ನುತ್ತಾರೆ. ಎರಡೂ ನಿಟ್ಟಿನಲ್ಲಿ ಸಲುಗೆ ಮಾತ್ರ ಅಖಂಡವಾಗಿ ತುಂಬಿಕೊಂಡಿದೆ.

ಮೊದಲು ನೀನು ನನ್ನ ಮೇಲೆ ದಯೆ ಮಾಡಬೇಕು. ಅದು ಆಯಿತು ಎಂದರೆ– ಅನಂತರ ನೀನು ನನ್ನ ಬಳಿಗೆ, ನನ್ನ ಒಳಗೆ ದಯಮಾಡಿಸಬೇಕು. ಇದು ಒಟ್ಟು ಪ್ರಾರ್ಥನೆಯ ಭಾವ.

ಯಾಕೆ ಬರಬೇಕು ಎನ್ನುವುದನ್ನು ಅರ್ಥಗರ್ಭಿತವಾಗಿ ಸೂಚಿಸುವ ಸಂಬೋಧನೆ ಮುಂದೆ ಬಂದಿದೆ: "ವೇದವೇದ್ಯನೆ ದಯಮಾಡೋ".

ಅವನು ಎಲ್ಲ ವೇದಗಳಿಂದ ವೇದ್ಯ. ವೇದಗಳಿಂದ ಮಾತ್ರ ವೇದ್ಯ. ಪ್ರತ್ಯಕ್ಷದಿಂದ ಅವನನ್ನು ಕಾಣುವಂತಿಲ್ಲ. ತರ್ಕಗಳು ಅವನ ಮುಂದೆ ಸೋಲುತ್ತವೆ. ಆದರಿಂದ ಅವನ ಅರಿವು ನೀಡುವ ಶಕ್ತಿ ವೇದಗಳಿಗೆ ಮಾತ್ರ ಇದೆ. ಈ ಮಾತುಗಳನ್ನು ವೇದಗಳೇ ಹೇಳುತ್ತವೆ. "ನೇಂದ್ರಿಯಾಣಿ ನಾನುಮಾನಂ ವೇದಾ ಹ್ಯೇವೈನಂ ವೇದಯಂತಿ ತಸ್ಮಾದಾಹುರ್ವೇದಾ ಇತಿ" (ಇಂದ್ರಿಯಗಳು ಅವನನ್ನು ಗ್ರಹಿಸಲಾರವು. ತರ್ಕ ಅವನನ್ನು ಮುಟ್ಟಲಾರದು. ವೇದಗಳು ಮಾತ್ರವೆ ಅವನನ್ನು ತಿಳಿಸಬಲ್ಲವು. ಅದರಿಂದಲೆ ಅವುಗಳನ್ನು ವೇದಗಳು ಅರ್ಥಾತ್ 'ತಿಳಿಸುವಂಥವುಗಳು' ಎಂದು ಕರೆಯುತ್ತಾರೆ.)

ಹಾಗಾದರೆ ಮತ್ತೇಕೆ ದಾಸರು ನನ್ನ ಬಳಿಗೆ ದಯಮಾಡೋ ಎಂದು ಪ್ರಾರ್ಥಿಸುತ್ತಾರೆ? ಕಣ್ಣಿಗೆ ಕಾಣದವನು ಎಂದು ವೇದಗಳಿಂದ ನಿರೂಪಿತನಾದ ಅವನನ್ನು ಕಣ್ಣಿಂದ ಕಾಣಬೇಕೆಂಬ ಈ ಬಯಕೆ ದಾಸರಿಗೇಕೆ ಬಂತು ? ಈ ಪ್ರಶ್ನೆಗೂ ಈ ಮಾತಿನಲ್ಲೆ ಉತ್ತರ ಅಡಗಿದೆ: "ವೇದವೇದ್ಯನೆ ದಯ ಮಾಡೋ"

ದಾಸರು ಹೇಳುತ್ತಾರೆ: ನೀನು ಕಣ್ಣಿಗೆ ಅಗೋಚರ ಎಂದು ವೇದಗಳು ಹೇಳುತ್ತವೆ. ನನಗೆ ಗೊತ್ತು. ಆದರೆ ನೀನು ಒಲಿದವರಿಗೆ ಒಳಗಣ್ಣಿಗೆ ಗೋಚರನಾಗಬಲ್ಲೆ ಎಂದೂ ಅದೇ ವೇದ ಹೇಳುತ್ತದೆ:

ಯಮೇವೈಷ ವೃಣುತೇ ತೇನ ಲಭ್ಯಃ

(ಅವನು ಯಾರನ್ನು ತನ್ನವರೆಂದು ಸ್ವೀಕರಿಸುವನೋ ಅಂಥವರ ಭಕ್ತಿಗೆ ಒಲಿದು ಲಭ್ಯನಾಗುತ್ತಾನೆ.)

ಅದರಿಂದ ಒಲಿದವರ ಮುಂದೆ ನಲಿದು ನಿಲುವವನೆಂದು ವೇದಗಳಿಂದ ಸ್ತುತನಾದ ಓ ವೇದ ವೇದ್ಯನೆ. ನಿನ್ನ ಮುಂದೆ ಒಲಿದು ಹಾಡುವ ನನ್ನ ಮೇಲೂ ದಯಮಾಡೋ, ದಯಮಾಡಿ ಒಲಿದು ಬಾರೋ.

ಭಗವಂತನನ್ನು ಕಾಣುವ ಹಂಬಲ ಎಷ್ಟು ಆಳವಾದದ್ದು ಎನ್ನುವುದನ್ನು ಮುಂದಿನ ಸಾಲು ಸ್ಫುಟಪಡಿಸುತ್ತದೆ.

ಪಂಕಜಾಕ್ಷ ಅಭಯವಿತ್ತು ಬೇಗೆನ್ನ ರಕ್ಷಿಸಯ್ಯ

ಓ ಪಂಕಜಾಕ್ಷನೆ, ಓ ತಾವರೆಗಣ್ಣಿನ ಚೆಲುವಿನ ಮೂರ್ತಿಯೆ, ದಯಮಾಡೋ. "ಪಂಕಜಾಕ್ಷ" ಎಂಬ ವಿಶೇಷಣದಿಂದ ಇಲ್ಲಿ ದಾಸರು ಎರಡು ಅರ್ಥವನ್ನು ಧ್ವನಿಸುತ್ತಾರೆ: ಭಗವಂತನ ಅಸೀಮಸೌಂದರ್ಯ ಮತ್ತು ಪ್ರಸಾದೋನ್ಮುಖತೆ.

ಕಣ್ಣು ಸೌಂದರ್ಯದ ಕೇಂದ್ರಬಿಂದು. ಪಂಕಜಾಕ್ಷ – ತಾವರೆಗಣ್ಣಿನವ ಎನ್ನುವ ಮಾತು ಕಣ್ಣಿನ ಚೆಲುವನ್ನು ಮಾತ್ರ ಸೂಚಿಸುವುದಿಲ್ಲ. ಪ್ರಮಾಣಬದ್ಧವಾದ ಇಡಿಯ ದೇಹದ ಸೌಂದರ್ಯಸಾರವನ್ನೆಲ್ಲ ಈ ಶಬ್ದ ಸೆರೆಹಿಡಿಯುತ್ತದೆ.

ಕವಿಗಳು ಹೆಣ್ಣನ್ನು ವರ್ಣಿಸುವಾಗ 'ಚಿಗರೆಗಣ್ಣಿನವಳು' ಎನ್ನುತ್ತಾರೆ. ಈ ಮಾತಿನಿಂದ ನಾವು ಕಣ್ಣಿನ ಸೌಂದರ್ಯವನ್ನಷ್ಟೆ ಆಸ್ವಾದಿಸುವುದಿಲ್ಲ, ಬದಲಾಗಿ ಸರ್ವಾಂಗ ಸುಂದರವಾದ ಹೆಣ್ಣಿನ ಮೂರ್ತಿ ನಮ್ಮ ಕಣ್ಮುಂದೆ ಸುಳಿಯುತ್ತದೆ. ಎಲ್ಲ ಸೌಂದರ್ಯಗಳನ್ನು ಪ್ರತಿನಿಧಿಸುವ ಕೇಂದ್ರ ಬಿಂದು ಕಣ್ಣು–ಅಷ್ಟೆ. ಏಕೆಂದರೆ ಸೌಂದರ್ಯವನ್ನು ನಿಯಂತ್ರಿಸುವ ಭಗವಂತ ವಾಮನನಾಗಿ ಭಾಮನನಾಗಿ ಕಣ್ಣಿನಲ್ಲಿ ನೆಲಸಿದ್ದಾನೆ. ಅದರಿಂದಲೆ ಕಣ್ಣಿಗೆ ಅಡ್ಡಪಟ್ಟಿ ಕಟ್ಟಿಬಿಟ್ಟರೆ ಇಡಿಯ ಸೌಂದರ್ಯ ಅಂದಗೇಡಿಯಾಗಿ ಬಿಡುತ್ತದೆ. ಹೀಗೆ ದಾಸರು ಭಗವಂತನ ಅಸೀಮಸೌಂದರ್ಯವನ್ನು ಕಾಣುವ ಧನ್ಯತೆಯ ಕ್ಷಣಕ್ಕೆ ಕಾತರರಾಗಿ ಕರೆಯುತ್ತಾರೆ: "ಪಂಕಜಾಕ್ಷನೆ ದಯಮಾಡೋ"

ಇದು ಸೌಂದರ್ಯದ ಮುಖವಾದರೆ ಈ ಪದಧ್ವನಿಯ ಇನ್ನೊಂದು ಮುಖ ಪ್ರಸನ್ನತೆ: ಪಂಕಜಾಕ್ಷ–ತಾವರೆಯಂತೆ ಅರಳುಗಣ್ಣಿನವ. ಅರಳಿದ ಕಣ್ಣು ಪ್ರೀತಿಯ ವಾತ್ಸಲ್ಯದ ಸಂಕೇತ. ನಾವು ಪ್ರೀತಿಯಿಂದ ಕಣ್ಣರಳಿಸಿ ನೋಡುತ್ತೇವೆ. ವಾತ್ಸಲ್ಯದಿಂದ ಕಣ್ಣರಳಿಸಿ ನೋಡುತ್ತೇವೆ. ಭಗವಂತನೂ ತನ್ನ ಭಕ್ತಿಗೆ ಒಲಿದು ಪ್ರೀತಿ

ಯಿಂದ ವಾತ್ಸಲ್ಯದಿಂದ ತನ್ನೆಡೆಗೆ ಕಣ್ಣರಳಿಸಿ ನೋಡಬೇಕು ಎಂಬ ಹಂಬಲದಿಂದ ದಾಸರು ಕರೆಯುತ್ತಾರೆ. "ಪಂಕಜಾಕ್ಷ ದಯಮಾಡೊ"

ನೀನು ಬರಲೇಬೇಕಾಗಿದೆ. ಅಂಥ ಗರಜು ಈಗ ಬಂದಿದೆ. ಏನಂಥ ಗರಜು: "ಅಭಯವಿತ್ತು, ಬೇಗೆನ್ನ ರಕ್ಷಿಸಯ್ಯ".

ನೀನು ದಯಮಾಡಲೇ ಬೇಕು. ಏಕೆಂದರೆ ಈ ಸಂಸಾರದ ಆಪತ್ತುಗಳಿಂದ ಸುತ್ತುವರಿದು ನಾನು ಭಯಗೊಂಡಿದ್ದೇನೆ. ಪಾರಾಗುವ ದಾರಿ ಕಾಣದೆ ಕಂಗೆಟ್ಟಿದ್ದೇನೆ. ಅದಕ್ಕಾಗಿ ಈ ಆಪತ್ತುಗಳ ಕಡಲ ದಡಹಾಯಿಸುವ ಅಂಬಿಗನಾಗಿ ದಯಮಾಡೋ. ದಯಮಾಡಿ ನಿನ್ನ ಕೃಪಾದೃಷ್ಟಿಯ ಅಭಯವೀಯೋ. ಅಭಯ-ಹಸ್ತವನ್ನಿತ್ತು ನನ್ನನ್ನು ಈ ಆಪತ್ತಿನಿಂದ ಬೇಗ ರಕ್ಷಿಸಯ್ಯ.

ಇದು ಎಷ್ಟು ಸಾಧ್ಯ ಅಷ್ಟು ಬೇಗ ನಡೆಯಬೇಕು. ತಡಮಾಡಿದರೆ ಈ ಆಪತ್ತಿನ ದಾಳಿಯನ್ನು ತಡೆದುಕೊಳ್ಳುವುದು ನನಗೆ ಸಾಧ್ಯವಾಗಲಿಕ್ಕಿಲ್ಲ. ಅದರಿಂದ ಬೇಗನೆ, ಪೂರ್ತಿ ಮುಳುಗುವ ಮುನ್ನವೆ ದಡ ಹಾಯಿಸು. ಅದಕ್ಕಾಗಿ ಬೇಗನೆ ದಯಮಾಡು.

ಆಪತ್ತುಗಳ ಪಟ್ಟಿಯನೊಪ್ಪಿಸಿ ಅವುಗಳಿಂದ ರಕ್ಷೆಯನ್ನು ಪ್ರಾರ್ಥಿಸುವುದಕ್ಕಾಗಿ ಮುಂದಿನ ಸೊಲ್ಲು :

ಚಿತ್ತ-ಚಂಚಲವ ಬಿಡಿಸೊ ಮತ್ತೆ ಕ್ರೋಧವ ಓಡಿಸೋ |
ಭ್ರಾಂತಿ ವಿಷಯಂಗಳು ಬೇಡ ಕಂತು-ಪಿತ ನಾರಾಯಣ ||

ಮನಸ್ಸು-ಬುದ್ಧಿ-ಅಹಂಕಾರಗಳ ಅನಂತರದ ಪಾತಳಿ ಚಿತ್ತ. ಮನಸ್ಸು ಬಯಸುತ್ತದೆ. ಬುದ್ಧಿ ನಿರ್ಧರಿಸುತ್ತದೆ. ಅಹಂಕಾರ ತನ್ನ ತನದ ಮುದ್ರೆಯನೊತ್ತುತ್ತದೆ. ಚಿತ್ತ ಘಟನೆಗಳನ್ನು ನೆನಪಾಗಿ ದಾಖಲೆ ಮಾಡುತ್ತದೆ. ಸಾವಿರ-ಸಾವಿರ ಜನ್ಮಗಳ ಇತಿಹಾಸದ ದಾಖಲೆ ಈ ಚಿತ್ತದ ಪೆಟ್ಟಿಗೆಯೊಳಗೆ ಗುಪ್ತವಾಗಿದೆ. ಭಗವಂತನ ಸ್ಮರಣೆ-ಧ್ಯಾನಗಳು ಕೂಡ ಈ ಸುಪ್ತಪ್ರಜ್ಞೆಯ ಪಾತಳಿಯಲ್ಲಿ ನಡೆಯುತ್ತವೆ. ಚಿತ್ತದ ಪೆಟ್ಟಿಗೆ ತೆರೆಯದವನಿಗೆ ಧ್ಯಾನಯೋಗ ಸಾಧ್ಯವಿಲ್ಲ. ಸ್ಥಿರವಾದ ಚಿತ್ತಮಾತ್ರವೆ ಸ್ಥಿರವಾದ ಧ್ಯಾನಯೋಗಕ್ಕೆ ಅಧಿಷ್ಠಾನವಾಗಬಲ್ಲುದು.

ಮನಸ್ಸು ಸ್ವಭಾವತಃ ಇಮ್ಮುಖವಾದದ್ದು. ನಿರ್ಧಾರ ಅದರ ಜಾಯಮಾನವೇ ಅಲ್ಲ. ಅದು ಬೇಕು-ಬೇಡಗಳನ್ನು ನಮ್ಮ ಮುಂದಿಡುತ್ತದೆ. ಬೇಕೋ ಬೇಡವೋ ಎಂಬ ಪ್ರಶ್ನೆ ಹಾಕಿ ಉತ್ತರಕ್ಕಾಗಿ ನಮ್ಮ ಮೋರೆಯನ್ನೆ ದಿಟ್ಟಿಸುತ್ತದೆ. ಇಂಥ ಸಂದರ್ಭದಲ್ಲಿ ಇದು ಸರಿ-ಇದು ತಪ್ಪು ಎಂದು, ಇದು ಬೇಕು-ಇದು ಬೇಡ ಎಂದು ನಿರ್ಧಾರ ತಿಳಿಸಿ ನಮಗೆ ಮಾರ್ಗದರ್ಶನ ಮಾಡಬೇಕಾದ್ದು ಬುದ್ಧಿ ಅಥವಾ ವಿವೇಕ ಪ್ರಜ್ಞೆ. ಆದರೆ ದುರ್ಬಲವಾದ ಬುದ್ಧಿ ದೃಢವಾದ ನಿರ್ಧಾರ ತೆಗೆದುಕೊಳ್ಳಲಾರದೆ

ನಮ್ಮನ್ನು ಚಂಚಲತೆಯ ಅಸಹಾಯಕತೆಯಲ್ಲಿ ಉಳಿಸಿಬಿಡುತ್ತದೆ. ಈ ತಪ್ಪನ್ನು ತಿದ್ದಿಕೊಳ್ಳದಂತೆ ನಮ್ಮ ಅಹಂಕಾರ ತಡೆಯುತ್ತದೆ. ಹೀಗೆ ಮನಸ್ಸು–ಬುದ್ಧಿ–ಅಹಂಕಾರಗಳು ಕೈಕೊಟ್ಟಾಗ ಚಿತ್ತವೂ ಸ್ಥಿರವಾದ ಧ್ಯಾನಯೋಗದಲ್ಲಿ ನೆಲೆಗೊಳ್ಳದೆ ತಾನೂ ಚಂಚಲವಾಗಿ ಕಂಗೆಡುತ್ತದೆ. ಅದಕ್ಕಾಗಿ ದಾಸರು ಮೊದಲು ಭಗವಂತನಲ್ಲಿ ಬೇಡುವ ಮಾತು ಇದು: "ಚಿತ್ತ-ಚಂಚಲವ ಬಿಡಿಸೋ"

ಮೊದಲು ಮನೋ–ಬುದ್ಧಿಗಳು ವಶವಾಗಬೇಕು; ಅಹಂಕಾರವನ್ನು ಗೆಲಿಯಬೇಕು. ಆ ಮೂಲಕ ಚಿತ್ತ ತನ್ನ ಚಾಂಚಲ್ಯವನ್ನು ಕಳೆದು ಸ್ಥಿರವಾದ ಧ್ಯಾನಯೋಗದಲ್ಲಿ ನೆಲೆಗೊಳ್ಳಬೇಕು. ಈ ಹಂತವನ್ನು ನಾನೇ ಏರಬಲ್ಲೆ ಎನ್ನುವ ಅಹಂಕಾರವಂತು ನನಗಿಲ್ಲ. ನೀನೇ ಈ ಚಿತ್ತದ ಚಾಂಚಲ್ಯವನ್ನು ಬಿಡಿಸೋ. ಬಿಡಿಸಿ, ಸ್ಥಿರಗೊಂಡ ಚಿತ್ತದ ಮೂಲಕ ನಿನ್ನ ಅಖಂಡ ಸ್ಮರಣೆ–ಧ್ಯಾನ ಸಾಧ್ಯವಾಗುವಂತೆ ಅನುಗ್ರಹಿಸೊ. ಅದಕ್ಕಾಗಿ ನನ್ನ ಮನವನ್ನು ಶುದ್ಧಗೊಳಿಸಲು ನೀನೇ ನನ್ನ ಮನದೊಳಗೆ ಬಂದು ನೆಲಸೋ; ದಯಮಾಡೋ ವೆಂಕಟೇಶ.

ಚಿತ್ತ ಎನ್ನುವ ಪದದ ವಿಶಿಷ್ಟ ಅರ್ಥದಲಿ ಈ ಪದ್ಯದ ಹಿನ್ನೆಲೆಯನ್ನು ಗುರುತಿಸಿದ್ದಾಯಿತು. ಈಗ ಚಿತ್ತವನ್ನೂ ಮನಸ್ಸನ್ನೂ ಸಮೀಕರಿಸಿ ಸಾಮಾನ್ಯ ಅರ್ಥದಲ್ಲಿ ಈ ಪದ್ಯದ ಭಾವಧ್ವನಿಯನ್ನು ಗಮನಿಸೋಣ.

ಚಿತ್ತ ಅರ್ಥಾತ್ ಮನಸ್ಸು ಸ್ವಭಾವತಃ ಚಂಚಲ. ಅದು ನೀರಿನಂತೆ ಒಂದೆಡೆಯಿಂದ ಇನ್ನೊಂದೆಡೆಗೆ, ಪ್ರಪಾತದಿಂದ ಪ್ರಪಾತಕ್ಕೆ ಸದಾ ಹರಿಯುತ್ತಲೇ ಇರುತ್ತದೆ. ಮಂಗನಂತೆ ವಿಷಯದಿಂದ ವಿಷಯಕ್ಕೆ ನೆಗೆಯುತ್ತಲೆ ಇರುತ್ತದೆ: "ಚಂಚಲಂ ಹಿ ಮನಃ ಕೃಷ್ಣ" ಕಂಡದ್ದನ್ನು ಬಯಸುವುದು, ಬಯಸಿದ್ದನ್ನು ಪಡೆಯಲು ಹಾತೊರೆದು ಜೊಲ್ಲು ಸುರಿಸುವುದು ಅದರ ಜಾಯಮಾನ. ಸಾವಿರ ಬಯಕೆಗಳು; ಸಾವಿರ ಆಸೆ–ಆಕಾಂಕ್ಷೆಗಳು. ಹೀಗೆ ಈ ಚಿತ್ತ ಈ ಮನಸ್ಸು ಕಾಮದ ಆಗರವಾಗಿದೆ. ನಿನ್ನನ್ನು ಧ್ಯಾನಿಸುವ ಬದಲು ಸಾವಿರ ಪ್ರಾಪಂಚಿಕ ವಿಷಯಗಳನ್ನು ಧ್ಯಾನಿಸುತ್ತದೆ. ಅವುಗಳ ಬಗೆಗೆ ಸಾವಿರ ಕಾಮನೆಗಳನ್ನು ಹೊತ್ತು ಹಂಬಲಿಸುತ್ತದೆ. ಅದರಿಂದ ಮೊದಲು ಈ "ಚಿತ್ತ ಚಂಚಲವ ಬಿಡಿಸೋ".

ಸಾವಿರ ವಿಷಯಗಳ ಆಕರ್ಷಣೆಗೆ ಬಲಿಯಾಗಿ ಚಂಚಲಗೊಂಡ ಮನಸ್ಸು ಸಾವಿರ ಬಯಕೆಗಳ ನೆಲೆಯಾಗದಿರಲಿ. ಬದಲು ಈ ಮನಸ್ಸು ನಿನ್ನೊಬ್ಬನ ಆಕರ್ಷಣೆಗೇ ಬಲಿಯಾಗಿ ನಿನ್ನೊಬ್ಬನನ್ನೆ ಧ್ಯಾನಿಸುವಂತಾಗಲಿ. ಕಾಮನೆ ಮನಸ್ಸಿನ ಸಹಜ ಗುಣ. ಆದರೆ ಅದು ಚಂಚಲತೆಗೆ ಕಾರಣವಾದ ಪ್ರಾಪಂಚಿಕ ಕಾಮನೆಯಾಗದಿರಲಿ. ಸ್ಥಿರತೆಗೆ ಕಾರಣವಾದ ನಿನ್ನ ಕಾಮನೆಯಾಗಲಿ. ಅದಕ್ಕಾಗಿ ನನ್ನ ಮನದಲ್ಲಿ ಬಂದು ನೆಲಸೋ ; ದಯಮಾಡೋ ವೆಂಕಟರಮಣ.

ಮನಸ್ಸನ್ನು ಗೆಲ್ಲುವ ಹಂತಗಳಲ್ಲಿ ಮುಂದಿನ ಮೆಟ್ಟಲು: "ಮತ್ತೆ ಕ್ರೋಧವ ಓಡಿಸೊ" ಮೊದಲು ಚಿತ್ತ ಚಂಚಲವ ಬಿಡಿಸೋ; ಮತ್ತೆ ಕ್ರೋಧವ ಬಿಡಿಸೋ.

ಕಾಮ ಮೊದಲ ಮೆಟ್ಟಲು, ಕಾಮದಿಂದ ಕ್ರೋಧ ಹುಟ್ಟುತ್ತದೆ. "ಕಾಮಾತ್ ಕ್ರೋಧೋಭಿಜಾಯತೇ. ಇದು ಎರಡನೆಯ ಮೆಟ್ಟಲು. ಮೊದಲು ಬಯಕೆ ಚಿಗುರುತ್ತದೆ. ಬಯಕೆ ಈಡೇರದಾಗ ಕೋಪ ಕವಲೊಡೆಯುತ್ತದೆ. ಆದ್ದರಿಂದ ಕೋಪ ಕಾಮದ ಮರಿ. ಕಾಮ ಇಲ್ಲದಾಗ ಕೋಪವೂ ಇಲ್ಲ. ಈ ಕ್ರಮವನ್ನು ಸೂಚಿಸುವುದಕ್ಕಾಗಿಯೆ ಮೊದಲ ಸಾಲಿನಲ್ಲಿ ಕಾಮ ಜಯದ ಪ್ರಾರ್ಥನೆ; ಚಿತ್ತ ಚಂಚಲವ ಬಿಡಿಸೋ. ಎರಡನೆಯ ಸಾಲಿನಲ್ಲಿ ಕೋಪಜಯದ ಪ್ರಾರ್ಥನೆ: ಮತ್ತೆ ಕ್ರೋಧವ ಓಡಿಸೋ.

ಕಾಮ ಮನಸ್ಸಿನಲ್ಲಿ ಇರುವಂಥದು. ಕ್ರೋಧ ಇರುವಂಥದಲ್ಲ; ಬರುವಂಥದು. ಸಹಜವಾಗಿ ಇರುವ ಕಾಮನೆಯನ್ನು ಓಡಿಸುವ ಪ್ರಶ್ನೆಯಿಲ್ಲ. ಅದು ಇರಬೇಕಾದ್ದೆ. ಇದ್ದಂತೆಯೇ ಅದರ ಗತಿಯ ಮುಖವನ್ನು ತಿರುಗಿಸಿ ಬಿಟ್ಟರೆ ಸರಿ. ಪ್ರಪಂಚದ ಕಡೆ ಯಿಂದ ಭಗವಂತನತ್ತ ತಿರುಗಿಸಿಬಿಟ್ಟರೆ ಅದು ಸ್ಪೃಹಣೀಯವಾದ ಕಾಮನೆಯೆ ಆಗುತ್ತದೆ. ಆದರಿಂದ ಇರುವ ಕಾಮ ಒಳ್ಳೆಯ ತನ ತಳೆದು ಇರಲಿ. ಬರುವ ಕ್ರೋಧ ಮಾತ್ರ ಬರದಿರಲಿ. ಅದಕೆಂದೆ ದಾಸರು ಹೇಳುತ್ತಾರೆ: "ಕ್ರೋಧವ ಓಡಿಸೋ".

ದಾಸರಿಗೆ ಯಾರ ಮೇಲಾದರೂ ಕ್ರೋಧ ಇದ್ದರೆ ಅದು ಕ್ರೋಧದ ಮೇಲೆ ಮಾತ್ರ. ಅದಕೆಂದೇ ಅವರು ಹೇಳುತ್ತಾರೆ: ಇರುವ ಕಾಮವನ್ನು ನಿನ್ನೆಡೆಗೆ ತಿರುಗಿಸೋ. ಬಂದು ಕಾಡುವ ಕ್ರೋಧವನ್ನು ಬರದಂತೆ ದೂರ ಓಡಿಸೋ.

ಸಾಧಕರ ಮೊದಲ ಕರ್ತವ್ಯ ಕಾಮ – ಕ್ರೋಧಗಳ ಜಯ. ಏಕೆಂದರೆ ಈ ಕಾಮ – ಕ್ರೋಧಗಳೆ ಎಲ್ಲ ಅನರ್ಥಗಳ ಮೂಲ: "ಕಾಮ ಏಷ ಕ್ರೋಧ ಏಷ ರಜೋಗುಣ ಸಮುದ್ಭವಃ" (ಭ. ಗೀ. 3. 37.)

ಕಾಮಕ್ರೋಧಗಳು ರಜೋಗುಣದ ಪರಿಣಾಮ. ರಜೋಗುಣವನ್ನು ಗೆದ್ದಾಗ ಕಾಮ ಕ್ರೋಧಗಳು ಮಾಯವಾಗಿ ಮನಸ್ಸು ಸತ್ತ್ವಮಯವಾಗುತ್ತದೆ. ಅಂಥ ಚಿತ್ತದಲ್ಲಿ ಭಗವಂತ ಬಂದು ನೆಲಸುತ್ತಾನೆ. ಆದರಿಂದ ದಾಸರು ಪ್ರಾರ್ಥಿಸುತ್ತಾರೆ: ಚಿತ್ತ ಚಂಚಲ ಬಿಡಿಸಿ ಕಾಮವನ್ನು ಪರಿಶುದ್ಧಗೊಳಿಸು. ಕ್ರೋಧವನ್ನು ಓಡಿಸು. ಮತ್ತೆ ಪರಿಶುದ್ಧವಾದ ಮನದಲ್ಲಿ ಬಂದು ನೆಲಸು. ದಯಮಾಡೋ ವೆಂಕಟರಮಣ.

ಇದನ್ನೆ ಭಗವದ್‌ಗೀತೆ ಹೇಳುತ್ತದೆ.

"ಕಾಮ-ಕ್ರೋಧವಿಯುಕ್ತಾನಾಂ ಯತೀನಾಂ ಯತಚೇತಸಾಮ್।
ಅಭಿತೋ ಬ್ರಹ್ಮ ನಿರ್ವಾಣಂ ವರ್ತತೇ ವಿದಿತಾತ್ಮನಾಮ್॥
(ಭ. ಗೀ. 5. 26.)

(ಕಾಮಕ್ರೋಧಗಳನ್ನು ಗೆದ್ದು, ಚಿತ್ತವನ್ನು ಸ್ಥಿರಗೊಳಿಸಿ, ಸಾಧನೆ ಮಾರ್ಗದಲ್ಲಿ ಪ್ರಯತ್ನಶೀಲರಾದ ಜ್ಞಾನಿಗಳಿಗೆ ಎಲ್ಲೆಡೆಯು ಅಪ್ರಾಕೃತವಾದ ಬ್ರಹ್ಮಸ್ವರೂಪ ಗೋಚರವಾಗುತ್ತದೆ).

ಆರು ಅಂತಃಶತ್ರುಗಳಲ್ಲಿ ಕಾಮ-ಕ್ರೋಧಗಳೆ ಪ್ರಧಾನವಾದುವು. ಇವೆರಡನ್ನು ಗೆದ್ದರೆ ಒಳಗಿನ ಎಲ್ಲ ಶತ್ರುಗಳನ್ನೂ ಗೆದ್ದಂತೆ. ಆದರೆ ಇವನ್ನು ಗೆಲ್ಲುವ ಬಗೆಯೇನು? ಗೆಲ್ಲು ಕಡಿದರೆ ಗೆಲ್ಲ ಬರುವುದಿಲ್ಲ. ಬೇರನ್ನೆ ಕೀಳಬೇಕು. ಯಾವುದು ಕಾಮದ ಬೇರು? ಯಾವುದು ಕ್ರೋಧದ ಬೇರು?

ಭ್ರಾಂತಿ ವಿಷಯಂಗಳು ಬೇಡ
ಕಂತು ಪಿತ ನಾರಾಯಣ॥

ಈ ಪ್ರಾಪಂಚಿಕ ವಿಷಯಗಳೆ ಜೀವನದ ಪರಮೋಚ್ಚ ಪುರುಷಾರ್ಥ ಎನ್ನುವ ಭ್ರಾಂತಿ. ಭ್ರಾಂತಿಯಿಂದ ವಿಷಯಗಳ ಬಗೆಗೆಯೆ ನಿರಂತರ ಚಿಂತನೆ. ಚಿಂತನೆಯಿಂದ ಆಸಕ್ತಿ. ಆಸಕ್ತಿ ಬೆಳೆದಂತೆ ಅದನ್ನು ಪಡೆಯಬೇಕೆನ್ನುವ ಕಾಮ. ಕಾಮ ಕೈಗೂಡದಾಗ ಕ್ರೋಧ. ಇವು ಪತನದ ಮಜಲುಗಳು:

"ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ।
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಭಿ-
ಜಾಯತೇ॥
(ಭ. ಗೀ. 2. 62.)

(ವಿಷಯಗಳ ಚಿಂತನೆಯಿಂದ ಅವುಗಳಲ್ಲಿ ಆಸಕ್ತಿ ಮೂಡುತ್ತದೆ. ಆಸಕ್ತಿಯಿಂದ ಕಾಮನೆ ಹುಟ್ಟುತ್ತದೆ. ಕಾಮದಿಂದ ಕ್ರೋಧ ಹುಟ್ಟುತ್ತದೆ.)

ಆದಕ್ಕಾಗಿ ಈ ಇಂಥ ಭ್ರಾಂತಿ ನನ್ನ ಬಳಿಸುಳಿಯುವುದು ಬೇಡ. ಇಂಥ ಭ್ರಾಂತಿಯ ಸುಳಿಯಲ್ಲಿ ತಳ್ಳುವ ವಿಷಯಗಳು ನನ್ನನ್ನು ಕಾಡುವುದು ಬೇಡ. ಈ ವಿಷಯಭೋಗವೆ ಪರಮ ಪುರುಷಾರ್ಥ ಎನ್ನುವ ಭ್ರಾಂತಿ ಬೇಡ. ಕುರುಡಾದ ಕಣ್ಣಿಗೆ ಈ ಭ್ರಾಂತಿಯ ವಿಷಯಗಳು ಬಂದು ಮುತ್ತುವುದು ಬೇಡ ಎನ್ನುತ್ತಾರೆ ದಾಸರು: "ಭ್ರಾಂತಿ ವಿಷಯಂಗಳು ಬೇಡ ನಾರಾಯಣ". ಓ ನಾರಾಯಣನೆ, ಈ ವಿಷಯಭ್ರಾಂತಿಯನ್ನು ಬಿಡಿಸು.

ನೀನು ಬಿಡಿಸದೆ ಇನ್ನಾರು ಬಿಡಿಸಬೇಕು? ಏಕೆಂದರೆ ನೀನು ಕಂತುಪಿತ: ಕಾಮಜನಕ ಕಾಮವನ್ನು ಹುಟ್ಟಿಸಿದ ತಂದೆ ನೀನು. ನಮ್ಮಲ್ಲಿ ಕಾಮನೆಗಳ ಜನಕನೂ ನೀನೆ. ಅದರಿಂದ ಆ ಕಾಮವನ್ನು ಗೆಲ್ಲಬೇಕಾದರೆ "ಕಂತುಪಿತ"ನಾದ ಕಾಮಜನಕನಾದ ನೀನೆ ಕರುಣೆದೋರಬೇಕು. ಕಾಮನೆಗಳನ್ನು ಹುಟ್ಟಿಸಿದ ನೀನೆ ಈಗ ಕಾಮನೆಗಳನ್ನು ನಾಶಗೊಳಿಸಿ ನನ್ನ ಮನದಲ್ಲಿ ಬಂದು ಕೂಡಬೇಕು. ಇಷ್ಟು ದಿನ ಕಾಮ ಕೂತದ್ದು ಸಾಕು. ಇನ್ನು ಕಾಮಪಿತನಾದ ನೀನು ಬಂದು ಕೂಡು. ಕೂತು ನನ್ನನ್ನು ಜ್ಞಾನಪಥದಲ್ಲಿ ನಡೆಸು; ಸತ್ವಗುಣದ ಸತ್‌ಪಥದಲ್ಲಿ ನಡೆಸು.

ಅದರಿಂದಲೇ ನೀನು "ನಾರಾಯಣ". ಅರ ಅಂದರೆ ದೋಷ. 'ನಾರ'ರು ಅಂದರೆ ಕಾಮಕ್ರೋಧಾದಿ ದೋಷಗಳನ್ನು ಗೆದ್ದ ಧೀರರು; ಸಜ್ಜನರು. ಅವರಿಗೆ ನೀನು ಅಯನ: ಆಶ್ರಯ. ನನ್ನನ್ನೂ ಅಂಥ ಸಜ್ಜನಿಕೆಯ ದಾರಿಯಲ್ಲಿ ನಡೆಸು; ನನಗೂ ಆಶ್ರಯ ನೀಡು. 'ನಾರಾಯಣ'ನಾಗು.

ಸೃಷ್ಟಿಯ ಬಂಧನದಿಂದ ಪಾರುಮಾಡುವ ಭಗವಂತನ ದಯಾದೃಷ್ಟಿಯ ಪ್ರಾರ್ಥನೆ ಮುಂದಿನ ಸೊಲ್ಲಿನಲ್ಲಿ ಬಂದಿದೆ :

ಸೃಷ್ಟಿ ಮೂರರೊಳಗು ನೀನೆ
ಕಷ್ಟ ಪಡಿಸುವರೇನೋ ।
ನಷ್ಟತನವ ನೋಡಬೇಡೊ
ದೃಷ್ಟಿಸಿ ನೋಡೋ ದಯಾಳೋ ॥

ಜೀವಕೋಟಿಯ ಸೃಷ್ಟಿ ಮೂಲತ: ಮೂರು ತೆರನಾಗಿದೆ : ಸಾತ್ವಿಕ, ರಾಜಸ ಮತ್ತು ತಾಮಸ. ಜ್ಞಾನಪ್ರಚುರವಾದ ಜನ್ಮ ಸಾತ್ವಿಕ ಜನ್ಮ. ಅಜ್ಞಾನಗಳ ಬೆರಕೆಯಿಂದ ಅಹಂಕಾರ ಪ್ರಚುರವಾದ ಜನ್ಮ ರಾಜಸ ಜನ್ಮ. ಅಜ್ಞಾನ ಪ್ರಚುರ ವಾದ ಜನ್ಮ ತಾಮಸ ಜನ್ಮ. ಈ ಜೀವನನ್ನು ಗುಣತ್ರಯಗಳಿಂದ ಬಂಧಿಸಿ ಮೂರು ಬಗೆಯ ಸೃಷ್ಟಿಯೊಳಗು ನಿಯಾಮಕನಾಗಿ ನೀನೆ ಇರುವೆ.

ಸಾತ್ವಿಕ ಜನ್ಮದಲ್ಲಿ ಜ್ಞಾನದ ಬೆಳಕಿದೆ; ಸುಖದ ತಂಪಿದೆ. ಆದರೆ ಅದೂ ಒಂದು ಬಂಧನದ ಮುಖವೆ. ಏಕೆಂದರೆ ಈಜ್ಞಾನದ ಬೆಳಕಿನ ಜತೆಗೆಯೆ ಅಜ್ಞಾನದ ನೆರಳೂ ಹರಡಿಕೊಂಡಿದೆ; ಸುಖದ ತಂಪಿನ ಜತೆಗೆಯೇ ದುಃಖದ ಉರಿಯೂ ಸರದಿ ಕಾಯು ತ್ತಿದೆ. ಅದರಿಂದ ಸೃಷ್ಟಿಯ ಬಂಧನವನ್ನೆ ಕಳಚಬಯಸುವವನಿಗೆ ಸತ್ವದ ಬಂಧನವೂ ಅಪ್ರಿಯವೆ. ದುಃಖಕ್ಕೆ ಮೂಲವಾದ ಸೃಷ್ಟಿಯ ಮೂರು ಬಗೆಯ ಬಂಧನವನ್ನೂ ಮೀರಿ ನಿಲ್ಲಲು ಆತ ಬಯಸುತ್ತಾನೆ. ದಾಸರದು ಇಂಥ ಬಯಕೆ. ಆದಕೆಂದೇ ಅವರು ಕೇಳುತ್ತಾರೆ: "ಸೃಷ್ಟಿ ಮೂರರೊಳಗು ನೀನೆ" ತುಂದಿರುವಾಗ, ನಿನ್ನನ್ನು ನಂಬಿ

ಶರಣುಬಂದವರನ್ನು ಇದರಿಂದ ಪಾರು ಮಾಡುವುದು ಬಿಟ್ಟು, ಯಾರಾದರೂ ಮತ್ತೂ ಮತ್ತೂ ಈ ಸೃಷ್ಟಿಚಕ್ರದಲ್ಲಿ ತಳ್ಳಿ "ಕಷ್ಟಪಡಿಸುವರೇನೊ"?

ಸೃಷ್ಟಿಯ ಮೂರು ಬಗೆಯನ್ನು ಇನ್ನೊಂದು ರೀತಿಯಿಂದಲೂ ಪರಿಭಾವಿಸ ಬಹುದು: ಸ್ಥಾವರ ಜನ್ಮ, ಪ್ರಾಣಿಜನ್ಮ ಮತ್ತು ಮನುಷ್ಯ ಜನ್ಮ. ಇದನ್ನೆ ಶಾಸ್ತ್ರ ಗಳಲ್ಲಿ ಈ ಜನ್ಮದ ಸ್ವಭಾವವನ್ನು ಗುರುತಿಸುವ ಹೆಸರುಗಳಿಂದ ಹೀಗೆ ಕರೆದದ್ದುಂಟು.

ಊರ್ಧ್ವಸ್ರೋತದ ಜನ್ಮ: ಮರ–ಗಿಡ–ಬಳ್ಳಿಗಳು.

ತಿರ್ಯಕ್ ಸ್ರೋತದ ಜನ್ಮ: ಪಶು–ಪಕ್ಷಿಗಳು.

ಅವಾರ್ಕ್ ಸ್ರೋತದ ಜನ್ಮ: ಮನುಷ್ಯರು.

ಈ ಹೆಸರುಗಳಿಗೆ ಅನೇಕ ಶಾಸ್ತ್ರೀಯ ವಿವರಣೆಗಳಿದ್ದರೂ ಮೇಲು ನೋಟಕ್ಕೇ ಕಾಣುವ ಪ್ರಸಿದ್ಧವಾದ ಅರ್ಥವನ್ನು ಗಮನಿಸೋಣ.

ಕೆಳಗಿನಿಂದ, ಮೇಲೆ, ಕಾಲಿನಿಂದ ತಲೆಗೆ, ಬೇರಿನಿಂದ ಟೊಂಗೆಗೆ ಆಹಾರ ಸತ್ವ ಹರಿಯುವ ವೃಕ್ಷಗಳ ಸೃಷ್ಟಿ–ಊರ್ಧ್ವಸ್ರೋತಸ್ಸು (ಮೇಲಕ್ಕೆ ಹರಿಯುವ ಸೃಷ್ಟಿ). ಮುಖದಿಂದ ಶಿಕದ ತನಕ ಅಡ್ಡಕ್ಕೆ ಆಹಾರ ಸತ್ವ ಹರಿಯುವ ಪ್ರಾಣಿಗಳ ಸೃಷಿ–ತಿರ್ಯಕ್ ಸ್ರೋತಸ್ಸು (ಅಡ್ಡವಾಗಿ ಹರಿಯುವ ಸೃಷ್ಟಿ). ಮೇಲಿನಿಂದ ಕೆಳಕ್ಕೆ, ತಲೆಯಿಂದ ಕಾಲಿಗೆ ಆಹಾರ ಸತ್ವ ಹರಿಯುವ ಮನುಷ್ಯರ ಸೃಷ್ಟಿ–ಅವಾರ್ಕ್ ಸ್ರೋತಸ್ಸು (ಕೆಳಕ್ಕೆ ಹರಿಯುವ ಸೃಷ್ಟಿ).

ಹೀಗೆ ಮೂರು ಗುಣಗಳಿಂದ ಮೂರನ್ನು ಮೂರು ಬಗೆಯಲ್ಲಿ ನಿಯಂತ್ರಿಸುತ್ತಿರುವವನು ನೀನೆ. ಇದನ್ನೇ ದಾಸರು ಹೇಳಿದರು:

"ಸೃಷ್ಟಿ ಮೂರರೊಳಗು ನೀನೆ"

ಗೀತೆಯಲ್ಲೂ ಈ ಮಾತು ಬಂದಿದೆ:

"ನ ತದಸ್ತಿ ವಿನಾ ಯತ್ ಸ್ಯಾತ್ ಮಯಾ ಭೂತಂ
ಚರಾಚರಮ್" (ಭಗ.ಗೀ. 10. 39)

(ಚರಾಚರಾತ್ಮಕವಾದ ಸಮಸ್ತ ಸೃಷ್ಟಿಯಲ್ಲೂ ನಾನು ತುಂಬಿದ್ದೇನೆ. ನನ್ನ ಆಸರೆಯಿಲ್ಲದೆ, ರಕ್ಷೆಯಿಲ್ಲದೆ ಯಾವ ಜೀವಿಗೂ ಅಸ್ತಿತ್ವವಿಲ್ಲ.)

ಹೀಗೆ ನೀನೆ ನಮ್ಮೊಳಗಿದ್ದು ಹೀಗೆಲ್ಲ ನಾನಾ ಯೋನಿಗಳಲ್ಲಿ ನಮ್ಮನ್ನು ತಳ್ಳಿ ಒದ್ದಾಡಿಸಬಹುದೇನೋ ಎಂದು ದಾಸರು ಹಂಗಿಸುತ್ತಾರೆ:

"ಕಷ್ಟಪಡಿಸುವರೇನೋ?"

ದುಃಖದೂರನಾದ ನೀನೆ ಒಳಗಿದ್ದೂ ನಮ್ಮನ್ನು ಮಾತ್ರ ನಮ್ಮ ನಮ್ಮ ಪ್ರಾರಬ್ಧ ಕರ್ಮಕ್ಕೆ ತಕ್ಕಂತೆ ಸ್ವಷ್ಟಿಯ ದುಃಖದಲ್ಲಿ ತಳ್ಳುವೆ? ಇದು ಸರಿಯೇನೊ? ಯಾರಾದರೂ ಭಕ್ತರನ್ನು ಹೀಗೆ 'ಕಷ್ಟಪಡಿಸುವರೇನೋ'?

ನಾವು ಮಾಡಿದ್ದನ್ನು ಅನುಭವಿಸಬೇಕು. ಅದಕ್ಕಾಗಿ ಭಗವಂತನನ್ನು ದೂರಿ ಏನು ಫಲ? "ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೊ ದೇವ." ಇದೇನೋ ಸರಿ. ನೀನು ಮನಸ್ಸು ಮಾಡಿದರೆ ಈ ಸಮಸ್ಯೆಗೂ ಪರಿಹಾರ ಉಂಟು ಎನ್ನುತ್ತಾರೆ ದಾಸರು ಮುಂದಿನ ಸಾಲಿನಲ್ಲಿ: "ನಷ್ಟತನವ ನೋಡಬೇಡೋ"

ಬುದ್ಧಿನಾಶವೇ ಆತ್ಮದ ವಿನಾಶ: "ಬುದ್ಧಿನಾಶಾತ್ ವಿನಶ್ಯತಿ" ಬುದ್ಧಿಗೇಡಿತನವೇ ನಷ್ಟತನ. ಭಗವಂತನನ್ನು ಮರೆತು ಬಾಳುವುದೇ ಬಾಳಿನ ದೊಡ್ಡ ನಷ್ಟ. ನನ್ನಲ್ಲಿ ಇಂಥ ಪತನ ತುಂಬಿರಬಹುದು. ಎನಿತೋ ಜನ್ಮಗಳಲ್ಲಿ ನಾನು ನಿನ್ನನ್ನು ಮರೆತು, ಮರೆತು ಬದುಕಿರಬಹುದು. ಅದೇಕೆ? ಈ ಜನ್ಮದಲ್ಲೆ ನಾನು ರತ್ನಪಡಿ ವ್ಯಾಪಾರಿಯಾಗಿದ್ದಾಗ ದುಡ್ಡಿನ ಲಾಭವೆ ದೊಡ್ಡ ಲಾಭ ಎಂದು ಭ್ರಮಿಸಿ, ನಿನ್ನನ್ನು ಮರೆತು ದೊಡ್ಡ ನಷ್ಟಕ್ಕೆ ಗುರಿಯಾದೆ. ಆ ಹಿಂದಿನ ನಷ್ಟ ತನವನ್ನು ನೋಡ ಬೇಡವಯ್ಯ. ಅದನ್ನು ನೋಡಿ ನನ್ನನ್ನು ಅಳೆಯಬೇಡವಯ್ಯ. ಈಗ ಹೊಸ ಜನ್ಮ ಪಡೆದು ನಿನಗೆ ಶರಣು ಬಂದಿದ್ದೇನೆ. ಜೀವನದ ನಿಜವಾದ ಲಾಭ ಏನು ಎನ್ನುವುದನ್ನು ಈಗ ಗುರುತಿಸಿಕೊಂಡಿದ್ದೇನೆ.

(ವಾಸ್ತವವಾಗಿ ಈಗ ಹೆಚ್ಚು ಬಳಕೆಯಿರುವ ಪಾಠ "ನಷ್ಟ ತನ್ನ ನೋಡ ಬೇಡೊ" ಎಂದು ಈ ಪಾಠದಲ್ಲಿ ಅರ್ಥದ ಖಚಿತತೆಯಿಲ್ಲ. ಅದಕ್ಕಾಗಿ "ನಷ್ಟತನವ ನೋಡಬೇಡೋ" ಎಂಬ ಪಾಠವನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ದಾಸಸಾಹಿತ್ಯದ ಅಧಿಕೃತ ಪಾಠದ ಶೋಧ ನಡೆಯುವ ತನಕ ಇಂಥ ಊಹಾವಿಹಾರಗಳಲ್ಲಿ ನಾವು ತೃಪ್ತಿಪಡಬೇಕಾಗಿದೆ.)

ಎರಡನೆಯ ಪದ್ಯದ ಕೊನೆಯ ಸಾಲು:

"ದೃಷ್ಟಿಸಿ ನೋಡೋ ದಯಾಳೋ"

ನಾನೀಗ ಧನಲೋಭಿಯಾದ ನಾಯಕನಲ್ಲ; ಭಕ್ತಿಲೋಭಿಯಾದ ದಾಸ. ನನ್ನ ಈ ಬದಲಾವಣೆಯನ್ನು ನೀನು ದೃಷ್ಟಿಸಿ ನೋಡಬೇಡವೆ? ಅದರಿಂದ ಹಿಂದಿನ ದನ್ನೆಲ್ಲ ಮರೆತು ಬಿಡು. ದಾಸತ್ವದ ಹೊಸ ಜನ್ಮ ಪಡೆದು ಬಂದ ನನ್ನೆಡೆಗೆ ಒಮ್ಮೆ ಕರುಣೆಯಿಂದ "ದೃಷ್ಟಿಸಿ ನೋಡೋ ದಯಾಳೊ".

ಸುಮ್ಮನೆ ಅನಾಸ್ಥೆಯಿಂದ, ಬೇಕೋ ಬೇಡವೋ ಎನ್ನುವಂತೆ ಕಣ್ಣು ಹಾಯಿಸುವುದಲ್ಲ. ಹಂಬಲಿಸಿ ಹಂಬಲಿಸಿ ಕಾದು ನಿಂತ ಈ ಭಕ್ತನ ಕಡೆಗೆ ಪ್ರೀತಿ

ಯಿಂದ ಕಣ್ತೆರಳಿಸಿ, ದಿಟ್ಟಿಸಿ ನೋಡಬೇಕು. ಅದಕೆಂದೆ ದಾಸರು ಒತ್ತಿ ನೀಡಿ ಹೇಳುತ್ತಾರೆ: "ದೃಷ್ಟಿಸಿ ನೋಡೋ"

ಒಮ್ಮೆ ನೆನೆದರೆ ಸಾಕು – ಜನ್ಮ ಜನ್ಮಾಂತರಗಳ ಪಾಪಗಳನೆಲ್ಲ ಪರಿಹರಿಸುವ ಪರಮದಯಾಳು ನೀನು ಎಂದು ಕೇಳಿದ್ದುಂಟು. ಅಂಥ ದಯಾಳುವಾದ ನೀನು ನನ್ನನ್ನೂ ದಯಾ ದೃಷ್ಟಿಯಿಂದ ದಿಟ್ಟಿಸಿ ನೋಡಬೇಡವೆ ? ಇಲ್ಲವಾದರೆ "ದಯಾಳು" ಎಂಬ ನಿನ್ನ ಬಿರುದಿಗೆ ಏನು ಬೆಲೆ ಎಂದು ಸಾಕೂತವಾಗಿ, ಅರ್ಥಗರ್ಭಿತವಾಗಿ ಸಂಬೋಧಿಸಿ ದಾಸರು ಭಗವಂತನನ್ನು ಓಲಯಿಸುತ್ತಾರೆ: "ದಯಾಳೋ, ದೃಷ್ಟಿಸಿ ನೋಡೋ"

ಹಾಡಿನ ಕೊನೆಯ ನೊಲ್ಲು :

ಬಾಳ ಅಪರಾಧಿ ನಿನ್ನ
ಬಳಿಗೆ ಬಂದೆ ನಾನು ।
ಒಲಿದು ಎನ್ನ ರಕ್ಷಿಸಯ್ಯ
ಮೇಲುಗಿರಿ ಪುರಂದರ ವಿಠಲ ॥

ನನಗೆ ಗೊತ್ತು : ನಾನು "ಬಾಳ ಅಪರಾಧಿ" ಬಾಳಿನ ಉದ್ದಕ್ಕೂ ಅಪರಾಧಿ ಯಾಗಿಯೆ ಬದುಕಿದ್ದೇನೆ. ಅದೂ ಅಂಥಿಂಥ ಅಪರಾಧಿಯಲ್ಲ : "ಬಾಳ ಅಪರಾಧಿ ನಾನು". ಬಹಳ ಅಪರಾಧಗಳು ನನ್ನಿಂದ ನಡೆದಿವೆ – ಪ್ರಾಯಃ ಕ್ಷಮಿಸುವುದೂ ಅಸಾಧ್ಯ ಎನ್ನುವಷ್ಟು. ನಾನು ಅಲ್ಲ ಎನ್ನುವುದಿಲ್ಲ. ಒಪ್ಪಿಕೊಂಡು ಬಿಟ್ಟಿದ್ದೇನಲ್ಲ: "ಬಾಳ ಅಪರಾಧಿ ನಾನು."

ನನ್ನ ಅಪರಾಧ ಎಷ್ಟು ದೊಡ್ಡದು ಎನ್ನುವುದು ನನಗೆ ಚೆನ್ನಾಗಿ ಗೊತ್ತು. ನೀನಲ್ಲದೆ ಇನ್ನಾರೂ ನನ್ನನ್ನು ಈ ಅಪರಾಧದ ಸುಳಿಯಿಂದ ಪಾರುಮಾಡಲಾರರು– ಎನ್ನುವುದೂ ಗೊತ್ತು. ಅದಕೆಂದೆ ಯಾರ ಮುಂದೆಯೂ ಡೊಗ್ಗು ಹೊಡೆಯದೆ ನೇರ "ನಿನ್ನ ಬಳಿಗೆ ಬಂದೆ ನಾನು". ಕಾಕು ದೈವಗಳ ಕಾಲು ಕಟ್ಟುವುದು ಬಿಟ್ಟು ಪರದೈವವಾದ ನಿನಗೇ ಶರಣಾದೆ. ಇನ್ನು ಶರಣಾಗತವತ್ಸಲನಾಗಬೇಕಾದದ್ದು ನಿನ್ನ ಪಾಲಿಗೆ ಉಳಿದ ಕೆಲಸ :

" ಒಲಿದು ಎನ್ನ ರಕ್ಷಿಸಯ್ಯ
ಮೇಲುಗಿರಿ ಪುರಂದರವಿಠಲ "

ಮೇಲುಗಿರಿ – ಗಿರಿಗಳಲ್ಲೆಲ್ಲ ಹಿರಿದಾದ ಗಿರಿ – ವೆಂಕಟಾಚಲ. ಇಂಥ ಹಿರಿಯ ಗಿರಿಯಲ್ಲಿ ಬಂದು ನೆಲೆ ನಿಂತ ಪುರಂದರ ವಿಠಲನೆ, ನಿನಗೆ ಶರಣಾದ ಈ ಭಕ್ತನ ಬಳಿಗೆ ಒಲಿದು ಬಾರಯ್ಯ. ಬಂದು 'ಎನ್ನ ರಕ್ಷಿಸಯ್ಯ'. ★

ರಾಗ – ಶಂಕರಾಭರಣ ತಾಳ – ಛಾಪು.

ತೂಗಿರೆ ರಂಗನ ತೂಗಿರೆ ಕೃಷ್ಣನ
ತೂಗಿರೆ ಅಚ್ಯುತಾನಂತನ ॥ ಪ ॥

ತೂಗಿರೆ ವರಗಿರಿ ಅಪ್ಪತಿಮ್ಮಪ್ಪನ
ತೂಗಿರೆ ಕಾವೇರಿ ರಂಗಯ್ಯನ ॥ ಅ. ಪ. ॥

ಇಂದ್ರಲೋಕದೊಳುಪೇಂದ್ರ ಮಲಗ್ಯಾನೆ
ಇಂದು ಮುಖಿಯರೆಲ್ಲ ತೂಗಿರೆ ।
ಇಂದ್ರಕನ್ನಿಕೆಯರು ಛಂದದಿ ಪಾಡುತ
ನಂದನಕಂದನ ತೂಗಿರೇ ॥ ೧ ॥

ನಾಗಲೋಕದಲ್ಲಿ ನಾರಾಯಣ ಮಲಗ್ಯಾನ
ನಾಗಕನ್ನಿಕೆಯರು ತೂಗಿರೆ ।
ನಾಗವೇಣಿಯರು ನಾಲ್ಕುನೇಣನು ಪಿಡಿದು
ಭಾಗ್ಯವಂತನೆಂದು ತೂಗಿರೇ ॥ ೨ ॥

ಜಲಧಿಯೊಳಾಲದ ಎಲೆಯಲ್ಲಿ ಮಲಗಿದ
ಚಲುವನ ತೊಟ್ಟಿಲ ತೂಗಿರೆ ।
ಸುಲಭದೇವರದೇವ ಬಲಿಬಂಧಮೋಚಕ
ಎಳೆಯನ ತೊಟ್ಟಿಲ ತೂಗಿರೇ ॥ ೩ ॥

ಸೂಸುವ ಮಡುವಿನೊಳ್ ಕಾಳಿಯನ ತುಳಿದಿಟ್ಟ
ದೋಷ ವಿದೂರನ ತೂಗಿರೆ
ಸಾಸಿರನಾಮದ ಸರ್ವೋತ್ತಮನೆಂದು
ಲೇಸಾಗಿ ತೊಟ್ಟಿಲ ತೂಗಿರೇ ॥ ೪ ॥

ಅರಳೆಲೆ ಮಾಗಾಯಿ ಕೊರಳ ಪದಕ ಸರ
ತರಳನ ತೊಟ್ಟಿಲ ತೂಗಿರೆ
ಉರಗಾದ್ರಿವಾಸ ಶ್ರೀ ಪುರಂದರ ವಿಠಲನ
ಹರುಷದಿ ಪಾಡುತ ತೂಗಿರೇ ॥ ೫ ॥


ರಾಗ – ಸೌರಾಷ್ಟ್ರ ತಾಳ – ಆದಿ

ಮಂಗಳಂ ಜಯ ಮಂಗಳಂ
ಮಂಗಳಂ ಶುಭ ಮಂಗಳಂ ॥ ಪ ॥

ಅಕ್ರೂರಗೊಲಿದ ತ್ರಿವಿಕ್ರಮಗೆ
ನಕ್ರನಗೆಲಿದ ಪರಾಕ್ರಮಿಗೆ
ಶಕ್ರನ ಗರ್ವಾಪಹಾರವ ಮಾಡಿದ
ಶುಕ್ರನ ಶಿಷ್ಯನ ಗೆಲಿದವಗೆ ॥ ೧ ॥

ಗಂಗೆಯ ಪಡೆದ ಶ್ರೀರಂಗನಿಗೆ
ರಂಗುಮಾಣಿಕ್ಯದುಂಗುರದವಗೆ
ಭೃಂಗಕುಂತಳೆಯುರ ವ್ರತವನೆ ಕೆಡಿಸಿದ
ಅಂಗಜನಯ್ಯ ಶುಭಾಂಗನಿಗೆ ॥ ೨ ॥

ಧರೆಯೊಳಧಿಕ ವೆಂಕಟಾಚಲದಿ
ಸ್ಥಿರವಾಗಿ ಪುಷ್ಕರಿಣಿಯಲಿ ನೆಲಸಿಹಗೆ
ಪರತರ ಶ್ರೀ ಪುರಂದರ ವಿಠಲಗೆ
ವರವೆಂಕಟ ಶ್ರೀನಿವಾಸನಿಗೆ ॥ ೩ ॥



ತಿರುಮಲ – ತಿರುಪತಿ ದೇವಸ್ಥಾನಗಳ ಮುದ್ರಣಾಲಯ, ತಿರುಪತಿ.

T.T.D. Religious Publications Series No. 204

Subsidised Price : [illegible]

DĀSA SĀHITYA PROJECT

TIRUMALA TIRUPATI DEVASTHANAMS

Printed and published by G. Kumaraswami Reddi, I.A.S., Executive Officer and printed at T. T. D. Press, Tirupati.

C. 3.000—8-9-84.